ಹುಬ್ಬಳ್ಳಿ
ಗುರುವಾರ, 18 ಜೂನ್ 2026
ಸಂಪುಟ 16, ಸಂಚಿಕೆ 85, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು
■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/
2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಆಫ್ಘನ್ ವಿರುದ್ಧ ಏಕದಿನ ಸರಣಿ ಗೆದ್ದ ಭಾರತ | ೧೦ | ಇಯು ಜತೆ ಎಫ್‌ಟಿಎ ಶೀಘ್ರ | ೦೭ | ಫಿಫಾ ವಿಶ್ವಕಪ್: ಮೆಸ್ಸಿ ಮ್ಯಾಜಿಕ್ ಹ್ಯಾಟ್ರಿಕ್ | ೧೦

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಪುಷ್ಯ

ದಿನದ ಮಾತು

ದೇವರಲ್ಲಿನ ನಂಬಿಕೆ ಮತ್ತು ಆತ್ಮ ವಿಶ್ವಾಸಗಳೆರಡು ಒಂದೇ ನಾಣ್ಯದ ಎರಡು ಮುಖಗಳಂತೆ.

▲ ಭರ್ತೃಹರಿ

ನೋಂದಣಿ ಮಾಡಿಕೊಳ್ಳದಿರುವುದು ಅಪರಾಧವಲ್ಲ

ಲೇಖನ

• ಅನೂಪ್ ದೇಶಪಾಂಡೆ

• ಪುಟ ೬

ಕಿರುಸುದ್ದಿ

ನೌಕಾಪಡೆಗೆ ವಾರಾಂತ್ಯದಲ್ಲಿ ಮೂರು ಹಡಗು ಸೇರ್ಪಡೆ

• ಪುಟ ೭

ಉದ್ಯೋಗ ಸೃಷ್ಟಿಗೆ ₹2,400 ಕೋಟಿ ಪ್ರೋತ್ಸಾಹಧನ

• ಪುಟ ೭

ಟೆಲಿಗ್ರಾಂ ನಿರ್ಬಂಧ ತಡೆಗೆ ದಿಲ್ಲಿ ಹೈ ನಕಾರ

• ಪುಟ ೭

ಇಡಿಯಿಂದ ಪಿಣರಾಯಿ ಪುತ್ರಿ ವೀಣಾ ವಿಚಾರಣೆ

• ಪುಟ ೭

ಮೋದಿ–ಟ್ರಂಪ್ ಭೇಟಿ | ಇರಾನ್ ಶಾಂತಿ ಒಪ್ಪಂದ ಪ್ರಸ್ತಾಪ

ನಾವಿಕರ ಸುರಕ್ಷತೆಗೆ ಪಣ

• ಎವಿಯಾನ್-ಲೆ-ಬೈನ್ಸ್ (ಫ್ರಾನ್ಸ್): ಇರಾನ್‌ನೊಂದಿಗೆ ಅಮೆರಿಕ ಕೈಗೊಳ್ಳುತ್ತಿರುವ ಶಾಂತಿ ಒಪ್ಪಂದದಲ್ಲಿ ಭಾರತೀಯ ನಾವಿಕರ ಸುರಕ್ಷತೆಗೆ ವಿಶೇಷ ಆದ್ಯತೆ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಟ್ರಂಪ್, ಭಾರತಕ್ಕೆ ಯಾವುದೇ ಭದ್ರತಾ ಸವಾಲುಗಳು ಎದುರಾದರೆ ಅಮೆರಿಕ ಬೆಂಬಲ ನೀಡಲಿದೆ ಎಂದು ಪ್ರತಿಜ್ಞೆ ಮಾಡಿದರು.

ಜಿ7 ಶೃಂಗಸಭೆಯ ಅಂಗವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾದ ಪ್ರಧಾನಿ ಮೋದಿಯವರು, ಕಳೆದ ವರ್ಷ ಭಾರತ-ಅಮೆರಿಕ ಸಂಬಂಧಗಳಲ್ಲಿ ಉಂಟಾಗಿದ್ದ ಬಿಕ್ಕಟ್ಟಿನ ನಡುವೆಯೂ ಉಭಯ ನಾಯಕರು ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಒಪ್ಪಿಕೊಂಡರು. ಮೋದಿ ತಮ್ಮ ಭಾಷಣದಲ್ಲಿ ಪಶ್ಚಿಮ ಏಷ್ಯಾದ ಸಂಘರ್ಷ ಅಂತ್ಯಗೊಳಿಸಲು ಟ್ರಂಪ್ ಕೈಗೊಂಡಿರುವ ಪ್ರಯತ್ನಗಳನ್ನು ಶ್ಲಾಘಿಸಿದರು. ಜತೆಗೆ, ಜಾಗತಿಕ ಸಮುದ್ರ ಮಾರ್ಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲಕ್ಷಾಂತರ ಭಾರತೀಯ ನಾವಿಕರ ಸುರಕ್ಷತೆಯ ಪ್ರಶ್ನೆಯನ್ನು ಪ್ರಸ್ತಾಪಿಸಿದರು. ಒಮಾನ್ ಕರಾವಳಿಯ ಸಮೀಪ ಅಮೆರಿಕದ ಸೇನಾ ದಾಳಿಯಲ್ಲಿ ಮೂವರು ಭಾರತೀಯ ನಾವಿಕರು ಮೃತಪಟ್ಟ ಹಿನ್ನೆಲೆಯಲ್ಲಿ ಮೋದಿಯವರು, ನಾವಿಕರ ಸುರಕ್ಷತೆಯ ಬಗ್ಗೆ ಟ್ರಂಪ್ ಅವರನ್ನು ಪ್ರಶ್ನಿಸಿದರು.

ಹಾರ್ಮುಜ್ ಜಲಸಂಧಿ ಮುಕ್ತವಾಗಿ ಕಾರ್ಯನಿರ್ವಹಿಸುವುದು ಜಾಗತಿಕ ಆರ್ಥಿಕತೆಗೆ ಅತ್ಯಗತ್ಯ. ಸಮುದ್ರ ಮಾರ್ಗಗಳ ಸ್ವಾತಂತ್ರ್ಯ ಕಾಪಾಡಲು ಭಾರತ ಸದಾ ಒತ್ತು ನೀಡಿದೆ. ಈ ವಿಷಯದಲ್ಲಿ ನಾವು ಒಟ್ಟಾಗಿ ಕೆಲಸ ಮಾಡಬೇಕು ಎಂದು ಮೋದಿ ಹೇಳಿದರು.

ಶಾಂತಿ ಒಪ್ಪಂದದಲ್ಲಿ ಭದ್ರತಾ ಕ್ರಮಗಳ ನಿರೀಕ್ಷೆ: ಇರಾನ್‌ನೊಂದಿಗೆ ಶಾಂತಿ ಒಪ್ಪಂದ ಸಾಧಿಸಲು ಟ್ರಂಪ್ ಮಹತ್ವದ ಪಾತ್ರ ವಹಿಸಿರುವುದನ್ನು ಉಲ್ಲೇಖಿಸಿದ ಮೋದಿ, ಅದರ ಅನುಷ್ಠಾನದಲ್ಲಿ ನಾವಿಕರ ಸುರಕ್ಷತೆಗೆ ಅತ್ಯುನ್ನತ ಆದ್ಯತೆ ದೊರೆಯಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಜಾಗತಿಕ ವ್ಯಾಪಾರ ಮಾರ್ಗಗಳಲ್ಲಿ ಲಕ್ಷಾಂತರ ಭಾರತೀಯ ನಾವಿಕರು ಕೆಲಸ ಮಾಡುತ್ತಿದ್ದಾರೆ. ಅವರ ಸುರಕ್ಷತೆ ನಮಗೆ ಅತ್ಯಂತ ಮುಖ್ಯ. ➡ ಪುಟ ೪



ಮೋದಿ ಭೇಟಿ ಅದ್ಭುತ ಎಂದ ಟ್ರಂಪ್

ಮೋದಿಯವರೊಂದಿಗಿನ ಭೇಟಿಯನ್ನು ಅದ್ಭುತ ಎಂದು ಬಣ್ಣಿಸಿದ ಟ್ರಂಪ್, ಪ್ರಧಾನಿ ಮೋದಿಯವರನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಯಾವುದೇ ನಿರ್ದಿಷ್ಟ ದಿನಾಂಕವನ್ನು ನೀಡದೆಯೇ ಶೀಘ್ರದಲ್ಲೇ ತಾವು ಭಾರತಕ್ಕೆ ಭೇಟಿ ನೀಡುವುದಾಗಿ ಟ್ರಂಪ್ ತಿಳಿಸಿದರು. ➡ ಪುಟ ೪

ಭಾರತದ ಭದ್ರತಾ ಸವಾಲಿಗೆ ಅಮೆರಿಕ ಬೆಂಬಲ: ಟ್ರಂಪ್

ಭಾರತದ ಭದ್ರತೆ ಕುರಿತ ಪ್ರಶ್ನೆಗೆ ಉತ್ತರಿಸಿದ ಟ್ರಂಪ್, ಭಾರತ ಯಾವುದೇ ಭದ್ರತಾ ಸವಾಲು ಅಥವಾ ದಾಳಿಯನ್ನು ಎದುರಿಸಿದರೆ ಅಮೆರಿಕ ಬೆಂಬಲ ನೀಡುತ್ತದೆ ಎಂದು ಹೇಳಿದರು. ಮೂವರು ಭಾರತೀಯ ನಾವಿಕರ ಸಾವಿನ ಬಗ್ಗೆ ಕೇಳಿದಾಗ, ನನಗೆ ಆ ವಿಷಯ ಗೊತ್ತು. ಅದು ನಿಜಕ್ಕೂ ಕಠಿಣ ವೃತ್ತಿ, ಅದರಲ್ಲಿ ಯಾವುದೇ ಸಂಶಯವಿಲ್ಲ. ನಾವು ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದರು. ಭಾರತಕ್ಕೆ ಯಾವುದೇ ಭದ್ರತಾ ಸವಾಲುಗಳು ಎದುರಾದರೆ ಅಮೆರಿಕ ಬೆಂಬಲ ನೀಡಲಿದೆ ಎಂದೂ ಅವರು ಸ್ಪಷ್ಟಪಡಿಸಿದರು.

> **ಜನರು ಅವರನ್ನು ತುಂಬಾ ಒಳ್ಳೆಯ ಮನುಷ್ಯ ಎನ್ನುತ್ತಾರೆ. ಆದರೆ ಅವರು ತುಂಬಾ ಕಠಿಣ ವ್ಯಕ್ತಿ ಮತ್ತು ಕಠಿಣ ಸಮಾಲೋಚಕ. ಅವರು ಭಾರತೀಯರನ್ನು ಪ್ರೀತಿಸುತ್ತಾರೆ.**
> ■ ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ವ್ಯಾಪಾರ ಒಪ್ಪಂದದ ಆಶಾವಾದ

ಭಾರತ-ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಕುರಿತು ಕೇಳಿದ ಪ್ರಶ್ನೆಗೆ ಟ್ರಂಪ್ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದರು. ಉಭಯ ರಾಷ್ಟ್ರಗಳ ನಡುವಿನ ಮಾತುಕತೆಗಳು ಉತ್ತಮ ದಿಕ್ಕಿನಲ್ಲಿ ಸಾಗುತ್ತಿವೆ ಎಂದರು. ಅಮೆರಿಕ ಭಾರತಕ್ಕೆ ವಿಧಿಸಿದ್ದ ಹೆಚ್ಚುವರಿ ಸುಂಕಗಳು, ಎಚ್-1ಬಿ ವೀಸಾ ಶುಲ್ಕ ಹೆಚ್ಚಳ ಹಾಗೂ 2025ರ ಭಾರತ-ಪಾಕಿಸ್ತಾನ ಉದ್ವಿಗ್ನತೆ ಕುರಿತು ಟ್ರಂಪ್ ಮಾಡಿದ ಹೇಳಿಕೆಗಳಿಂದ ಉಭಯ ರಾಷ್ಟ್ರಗಳ ಸಂಬಂಧಗಳಲ್ಲಿ ಒತ್ತಡ ಉಂಟಾಗಿತ್ತು. ಆದರೆ, ಇತ್ತೀಚಿನ ತಿಂಗಳುಗಳಲ್ಲಿ ಎರಡೂ ದೇಶಗಳು ಸಂಬಂಧ ಸುಧಾರಣೆಗೆ ಕ್ರಮ ಕೈಗೊಂಡಿದ್ದು, ಪರಸ್ಪರ ವ್ಯಾಪಾರ ಒಪ್ಪಂದದತ್ತ ಮುನ್ನಡೆಯುತ್ತಿವೆ.

ಧರ್ಮಸ್ಥಳ ಪ್ರಕರಣ: ಚಕ್ರವರ್ತಿ ಸೂಲಿಬೆಲೆ, ವಸಂತ ಗಿಳಿಯಾರ್, ವಿಕಾಸ್ ಪುತ್ತೂರು ಆಗ್ರಹ

ಚಿನ್ನಯ್ಯ ಹೇಳಿದವರನ್ನೂ ಎಸ್‌ಐಟಿ ತನಿಖೆ ನಡೆಸಲಿ



• ಬೆಂಗಳೂರು: ಧರ್ಮಸ್ಥಳ ಪ್ರಕರಣದ ಮಾಸ್ಕ್ ಮ್ಯಾನ್ ಚಿನ್ನಯ್ಯ ತನ್ನ ರಿಟ್ ಅರ್ಜಿಯಲ್ಲಿ ಉಲ್ಲೇಖಿಸಿದ ವ್ಯಕ್ತಿಗಳು ವಿಶೇಷ ತನಿಖಾ ತಂಡ (ಎಸ್‌ಐಟಿ)ದ ತನಿಖೆಯ ವ್ಯಾಪ್ತಿಗೆ ಒಳಪಡಬೇಕು. ಎಸ್‌ಐಟಿ ಮಧ್ಯಂತರ ವರದಿ ಸಲ್ಲಿಸಬೇಕು ಎಂದು ಪುಣ್ಯಕ್ಷೇತ್ರ ಸಂರಕ್ಷಣಾ ಸಮಿತಿ ಆಗ್ರಹಿಸಿದೆ. ಬುಧವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಸಮಿತಿಯ ಚಕ್ರವರ್ತಿ ಸೂಲಿಬೆಲೆ, ವಸಂತ ಗಿಳಿಯಾರ್ ಮತ್ತು ವಿಕಾಸ್ ಪುತ್ತೂರು ಒತ್ತಾಯಿಸಿದ್ದಾರೆ.


ಚಿನ್ನಯ್ಯ

ಧರ್ಮಸ್ಥಳದ ವಿರುದ್ಧ ದೊಡ್ಡ ಮಟ್ಟದ ಷಡ್ಯಂತ್ರ ನಡೆದಿದೆ ಎಂದು ನಾವು ಮೊದಲಿನಿಂದಲೂ ಹೇಳುತ್ತಿದ್ದೆವು, ಅದೀಗ ನಿಜವಾಗಿದೆ. ದೂರುದಾರ ಚಿನ್ನಯ್ಯ ನ್ಯಾಯಾಲಯಕ್ಕೆ ಸಲ್ಲಿಸಿದ ರಿಟ್ ಅರ್ಜಿಯಲ್ಲಿ ಎಲ್ಲವೂ ಬಯಲಾಗಿದೆ. ನಟ ಪ್ರಕಾಶ್ ರಾಜ್ ಅವರ ಹೆಸರೂ ಅಲ್ಲಿ ಉಲ್ಲೇಖವಾಗಿತ್ತು. ಇಂದು ಖುದ್ದು ಪ್ರಕಾಶ್ ರಾಜ್ ಅವರೇ ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಜತೆ ಚರ್ಚಿಸಿರುವುದನ್ನು ಒಪ್ಪಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಪೊಲೀಸರು ತಕ್ಷಣ ಅವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕು ಎಂದು ಆಗ್ರಹಿಸಿದರು.

ನಿರ್ದೇಶನಕ್ಕಾಗಿ ಮಾಸ್ಕ್ ಹಾಕಿದ್ದು: ಧರ್ಮಸ್ಥಳದಲ್ಲಿ ಮಹಿಳೆಯರ ಶವ ಹೂತು ಹಾಕಿದ್ದೇನೆಂದು ಹೇಳಿದ ಚಿನ್ನಯ್ಯ ಎಸ್‌ಐಟಿ ಜತೆಯಲ್ಲಿದ್ದಾಗ ಮುಖಕ್ಕೆ ಮಾಸ್ಕ್ ಹಾಕಿದ್ದ. ಇದನ್ನು ಎಸ್‌ಐಟಿಯವರು ಹಾಕಿದ್ದಲ್ಲ. ➡ ಪುಟ ೪

ಅಲ್ಲಲ್ಲಿ ಜನಾಗ್ರಹ ಸಭೆಗಳ ಆಯೋಜನೆ

ಧರ್ಮಸ್ಥಳ ಹಾಗೂ ಕರ್ನಾಟಕ ವಲ್ಲದೆ ದೇಶದ ಬೇರೆ ಬೇರೆ ಹಿಂದು ಧಾರ್ಮಿಕ ಕ್ಷೇತ್ರಗಳ ವಿರುದ್ಧ ಷಡ್ಯಂತ್ರ ರೂಪಿಸಲಾಗಿತ್ತು. ಧರ್ಮಸ್ಥಳ ಪ್ರಕರಣದಲ್ಲಿ 200 ಕೋಟಿ ರೂ. ಡೀಲ್ ಬಗ್ಗೆಯೂ ರಿಟ್ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಇಷ್ಟೊಂದು ದೊಡ್ಡ ಮೊತ್ತದ ಹಣದ ಸಹಾಯ ಒದಗಿಸಿದವರು ಯಾರು? ಈ ಷಡ್ಯಂತ್ರದಲ್ಲಿ ಯಾರಿದ್ದಾರೆ ಎಂಬುದು ಬಹಿರಂಗವಾಗಬೇಕು. ಇದಕ್ಕಾಗಿ ಸಮಿತಿಯಿಂದ ಅಲ್ಲಲ್ಲಿ ಜನಾಗ್ರಹ ಸಭೆಗಳನ್ನು ನಡೆಸಲಾಗುತ್ತದೆ ಎಂದು ವಿವರಿಸಿದರು. ಸಿಎಂ ಡಿ.ಕೆ.ಶಿವಕುಮಾರ್ ಅವರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಪ್ರಕರಣದ ತನಿಖೆ ಮುಂದುವರಿಯುವಂತೆ ನೋಡಬೇಕು. ➡ ಪುಟ ೪

ಬೆಳವಣಿಗೆ ಮರೆಮಾಚಲು ಸುಳ್ಳು ಕಥನಗಳ ಸೃಷ್ಟಿ: ಭಾಗವತ್

ಭಾರತದ ಉನ್ನತಿ ತಡೆಗೆ ಹುನ್ನಾರ

• ಉದಯಪುರ: ವೇಗವಾಗಿ ಬೆಳವಣಿಗೆ ಸಾಧಿಸುತ್ತಿರುವ ಭಾರತದ ಶಕ್ತಿ ಮತ್ತು ಉನ್ನತಿಯನ್ನು ದುರ್ಬಲಗೊಳಿಸಲು ದೇಶದ ಒಳಗೆ ಮತ್ತು ಹೊರಗೆ ಸುಳ್ಳು ನಿರೂಪಣೆಗಳನ್ನು ಸೃಷ್ಟಿಸಲಾಗುತ್ತಿದೆ. ಸತತವಾಗಿ ನಡೆಯುತ್ತಿರುವ ಇಂತಹ ಸುಳ್ಳು ಪ್ರಚಾರ ಮತ್ತು ಇದರ ಹಿಂದಿರುವ ಹುನ್ನಾರಗಳ ಬಗ್ಗೆ ಎಚ್ಚೆತ್ತುಕೊಂಡು ಒಗ್ಗಟ್ಟಿನಿಂದ ಎದುರಿಸಿ ನಿಲ್ಲಬೇಕು ಎಂಬುದನ್ನು ಇತಿಹಾಸದ ಪಾಠದಿಂದ ನಾವು ಕಲಿತುಕೊಳ್ಳಬೇಕಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಸರಸಂಘಚಾಲಕ ಡಾ.ಮೋಹನ್ ಭಾಗವತ್ ಹೇಳಿದ್ದಾರೆ.

ಮಹಾರಾಣಾ ಪ್ರತಾಪ್‌ಸಿಂಹರ ಜಯಂತಿ ಅಂಗವಾಗಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಮಾತನಾಡಿದ ಭಾಗವತ್, ಇಂದು ಕೆಲವರು ಭಾರತದ ಬೆಳವಣಿಗೆಯನ್ನು ಮರೆಮಾಚಲು ಪ್ರಯತ್ನಿಸುತ್ತಿದ್ದಾರೆ. ಈ ಉದ್ದೇಶಕ್ಕಾಗಿ ಸುಳ್ಳು ನಿರೂಪಣೆಗಳನ್ನು, ತರ್ಕಗಳನ್ನು ಸೃಷ್ಟಿಸಲಾಗುತ್ತದೆ. ಸುಳ್ಳು ಸುದ್ದಿಗಳನ್ನು ಹರಡುವ ಮೂಲಕ ಜನರನ್ನು ದಾರಿ ತಪ್ಪಿಸಲು ವಿವಿಧ ತಂತ್ರಗಳನ್ನು ಬಳಸಲಾಗುತ್ತಿದೆ ಎಂದು ಎಚ್ಚರಿಸಿದರು.

ಸಂಚಿನ ಹಿಂದಿವೆ ದೊಡ್ಡ ಕೈಗಳು: ಸುಳ್ಳು ನಿರೂಪಣೆ ಮಾಡುತ್ತಿರುವವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ➡ ಪುಟ ೪



> **ಸುಳ್ಳು ನಿರೂಪಣೆ ಮಾಡುತ್ತಿರುವವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರು ಹಣ ಮತ್ತು ಸಂಘಟನಾ ಸಾಮರ್ಥ್ಯದಂತಹ ಬೆಂಬಲ ಕೂಡ ಹೊಂದಿದ್ದಾರೆ. ಆದರೆ ಇದೆಲ್ಲದರ ಹೊರತಾಗಿಯೂ, ಜನರು ಇದಕ್ಕೆ ಬಲಿಯಾಗದೆ ತಮ್ಮ ಮೌಲ್ಯಗಳ ಮೇಲೆ ದೃಢವಾಗಿ ನಿಲ್ಲಬೇಕು.**
> ■ ಡಾ.ಮೋಹನ್ ಭಾಗವತ್, ಆರೆಸ್ಸೆಸ್ ಸರಸಂಘಚಾಲಕ

ಪರಿಷತ್ 7 ಸ್ಥಾನಕ್ಕಿಂದು ಚುನಾವಣೆ

• ಬೆಂಗಳೂರು: ಮೇಲ್ಮನೆ ಚುನಾವಣೆಯಲ್ಲಿ ಮೇಲುಗೈ ಸಾಧಿಸಲು ಕಾಂಗ್ರೆಸ್ ಪಡೆ ಭರ್ಜರಿ ತಯಾರಿ ನಡೆಸಿದ್ದು, 5ನೇ ಅಭ್ಯರ್ಥಿಗೆ ಕೊರತೆ ಇರುವ ಅಲ್ಪ ಮತಗಳನ್ನು ತನ್ನತ್ತ ಸೆಳೆಯುವ ಮೂಲಕ ವಿಪಕ್ಷಗಳಿಗೆ ಮುಖಭಂಗ ಮಾಡಲು ರಣತಂತ್ರ ರೂಪಿಸಿದೆ. ಇದೇ ವೇಳೆ, ಬಿಜೆಪಿ ಹೆಚ್ಚುವರಿ ಮತಗಳ ಜತೆಗೆ ಅತೃಪ್ತ ಕೈ ಶಾಸಕರ ಮತ ಪಡೆಯುವ ಮೂಲಕ ಜೆಡಿಎಸ್ ತನ್ನ ಅಭ್ಯರ್ಥಿ ಗೆಲ್ಲಿಸಲು ಯೋಜನೆ ರೂಪಿಸಿದೆ. ➡ ಪುಟ ೪

ಕಿರುಸುದ್ದಿ

ಅಧಿಕಾರ ದುರ್ಬಳಕೆ: ಪಿಡಿಒ ವಜಾಕ್ಕೆ ಆಗ್ರಹ

ಧಾರವಾಡ: ಖೊಟ್ಟಿ ದಾಖಲೆ ಸೃಷ್ಟಿಸಿ ಅಧಿಕಾರ ದುರ್ಬಳಸಿಕೊಂಡ ಗರಗ ಗ್ರಾಪಂ ಪಿಡಿಒ ಅಮಾನತುಗೊಳಿಸಲು ಒತ್ತಾಯಿಸಿ, ದಲಿತ ಸಂಘರ್ಷ ಸಮಿತಿ (ಕೆಂಪು ಸೇನೆ) ಪದಾಧಿಕಾರಿಗಳು ಜಿಪಂ ಸಿಇಒಗೆ ಮನವಿ ಸಲ್ಲಿಸಿದರು. ಗರಗ ವ್ಯಾಪ್ತಿಯ ಆಸ್ತಿ ನಂ-80ಕ್ಕೆ ಸಂಬಂಧಿಸಿದಂತೆ ಆಸ್ತಿಯ ನಿಂಗಪ್ಪ ಪೀರಪ್ಪ ಕಳಸಗಾರ ಅವರು 1921ನೇ ಇಸ್ವಿಯಲ್ಲಿ ಮಹಬುಬಸಾಬ ಮೋದಿನಸಾ ಮುಲ್ಲಾ ಅವರಿಂದ ಖರೀದಿ ಮಾಡಿದ್ದು, ಇದು ಪಿತ್ರಾರ್ಜಿತ ಆಸ್ತಿಯಾಗಿದೆ ಎಂದು ಮಾಹಿತಿ ನೀಡಿದರು. ಗರಗ ಪಿಡಿಒ ಶಶಿಧರ ಗಂಧದ ಅವರು ಜವಾಬ್ದಾರಿಯುತ ಹುದ್ದೆಯಲ್ಲಿದ್ದು, ತಮ್ಮ ಅಧಿಕಾರ ದುರ್ಬಳಸಿಕೊಂಡು ತಮ್ಮ ಗಮನಕ್ಕೆ ತರದೆ ಖೊಟ್ಟಿ ದಾಖಲಾತಿ ಸೃಷ್ಟಿಸಿ ಬೇರೊಬ್ಬರ ಹೆಸರುಗಳು ಗ್ರಾಪಂ ದೃಢೀಕರಣ ಪತ್ರದಲ್ಲಿ ವರ್ಗಾವಣೆ ಮಾಡಿದ್ದಾಗಿ ದೂರಿದರು. ಗ್ರಾಪಂ ದೃಢೀಕರಣ ಪತ್ರದಲ್ಲಿ ಖಾದರಖಾ, ನಜೀಬಸಾಬ ಬಾಬಾಜಾನ ಹಾಗೂ ಮಹ್ಮದಸಾಬ್, ಹುಸೇನಸಾಬ ಪಾಟೀಲ ಅವರ ಹೆಸರು ಸೇರ್ಪಡೆ ಮಾಡಿರುವ ಕುರಿತು ಗರಗ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾಗಿ ತಿಳಿಸಿದರು.

ಖೊಟ್ಟಿ ದಾಖಲೆ ಸೃಷ್ಟಿಸಿ, ಅಧಿಕಾರ ದುರ್ಬಳಸಿಕೊಂಡು ಪಿತ್ರಾರ್ಜಿತ ಆಸ್ತಿಯಲ್ಲಿ ಬೇರೊಬ್ಬರ ಹೆಸರು ಸೇರಿಸಿದ ಪಿಡಿಒ ಶಶಿಧರ ಗಂಧದ ಅವರನ್ನು ಕರ್ತವ್ಯದಿಂದ ವಜಾಗೊಳಿಸುವಂತೆ ಒತ್ತಾಯಿಸಿ ಜಿಪ ಸಿಇಒ ಭುವನೇಶ ಪಾಟೀಲಗೆ ಮನವಿ ಸಲ್ಲಿಸಿದರು.

ವಿದ್ಯಾರಶ್ಮಿ ಪ್ರಶಸ್ತಿ ಪ್ರದಾನ ಇಂದು

ಧಾರವಾಡ: ಮಕ್ಕಳ ಭವಿಷ್ಯ ರೂಪಿಸುವಲ್ಲಿ ಸಂಸ್ಕೃತಿ-ಸಂಸ್ಕಾರಗಳ ಪಾತ್ರದ ಬಗ್ಗೆ ಉಪನ್ಯಾಸ, ವಿದ್ಯಾರಶ್ಮಿ ಪ್ರಶಸ್ತಿ ಪ್ರದಾನ ಹಾಗೂ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ ಕಾರ್ಯಕ್ರಮವು ಜೂ.18ರ ಸಂಜೆ 6ಕ್ಕೆ ದೇಶಪಾಂಡೆ ಸಭಾಭವನದಲ್ಲಿ ಜರುಗಲಿದೆ. ವಿಶ್ರಾಂತ ಅಧಿಕಾರಿ ಬಿ.ಎಂ.ಶರಭೇದ್ರಸ್ವಾಮಿ ಉಪನ್ಯಾಸ ನೀಡಲಿದ್ದು, ಕವಿಸಂನ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಅಧ್ಯಕ್ಷತೆ ವಹಿಸುವರು. ಯಕ್ಷಸಿರಿ ಪ್ರಶಸ್ತಿ ಪುರಸ್ಕೃತ ಅಡಿಗೋಣದ ಭಾಗವತ ಬೀರಣ್ಣ ನಾಯಕ ಹಾಗೂ ಕೆ.ಎಚ್.ನಾಯಕ ಪಾಲ್ಗೊಳ್ಳಲಿದ್ದಾರೆ. ನವಲಗುಂದ ತಾಲೂಕಿನ ತಿರ್ಲಾಪುರದ ಸರ್ಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿ ಐಶ್ವರ್ಯ ಮಂಜುನಾಥ ರಾಯ್ಕರ ಅವಳಿಗೆ ವಿದ್ಯಾರಶ್ಮಿ ಪ್ರಶಸ್ತಿ ನೀಡಲಿದೆ. ಸಾಹಿತಿಗಳು, ಚಿಂತಕರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಕವಿಸಂ ಪ್ರಕಟಣೆ ತಿಳಿಸಿದೆ.

ಜನಪದ ಕಲೆ ಉಳಿವು ಅಗತ್ಯ: ಕೊಳ್ಳಾನಟ್ಟಿ

ಧಾರವಾಡ: ಹಿರಿಯ ಕಲಾವಿದರು ಯಾವುದೇ ಫಲಾಪೇಕ್ಷೆ ಇಲ್ಲದೆ ನಿಸ್ವಾರ್ಥದಿಂದ ವೇದಿಕೆ ಸಿಕ್ಕಾಗ ಸಂತೋಷದಿಂದ ಹಾಡುತ್ತಿದ್ದರು. ಫಕ್ಕೀರವ್ವ ಗುಡಿಸಾಗ ಕಂಚಿನ ಕಠದ ಹಾಡುಗಾರ್ತಿ ಎಂದು ಎಪಿಎಂಸಿ ಮಾಜಿ ಅಧ್ಯಕ್ಷ ಕೃಷ್ಣಾ ಕೊಳ್ಳಾನಟ್ಟಿ ಹೆಮ್ಮೆ ವ್ಯಕ್ತಪಡಿಸಿದರು.

ರಾಜ್ಯ ಪ್ರಶಸ್ತಿ ಪುರಸ್ಕೃತೆ ಫಕ್ಕೀರವ್ವ ಗುಡಿಸಾಗರ ಜಾನಪದ ಕಲಾವಿದರ ಅಭಿವೃದ್ಧಿ ಸಂಘ ಹಾಗೂ ಕನ್ನಡ ಮತ್ತು ಸಾಂಸ್ಕೃತಿ ಇಲಾಖೆ ಸಂಯೋಗದಲ್ಲಿ ಇಲ್ಲಿಯ ಸಾಹಿತ್ಯ ಭವನದಲ್ಲಿ ಏರ್ಪಡಿಸಿದ ಜಾನಪದ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಕಲೆಯಾದ ಭಜನೆ ಹಾಡು ಗುಡಿ, ಗುಂಡಾರಗಳಲ್ಲಿ ಹಗಲೆಲ್ಲ ದುಡಿದು, ದಣಿವು ಕಳೆಯಲು ಸಂಜೆ ಹೊತ್ತು ಭಜನಾ ಪದಗಳನ್ನು ಹಾಡುತ್ತಿದ್ದರು. ಇಂದಿನ ಕಲಾವಿದರು 10-15 ಸಾವಿರ ಹಣ ಕಾರಾರು ಮಾಡುವುದು ಬೇಸರದ ಸಂಗತಿ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಈಶ್ವರ ಶಿವಳ್ಳಿ ಮಾತನಾಡಿದರು.ಅಧ್ಯಕ್ಷತೆ ವಹಿಸಿದ್ದ ಕಲಾವಿದ ಯಕ್ಕೇರಪ್ಪ ನಡುವಿನಮನಿ, ರಾಜ್ಯ ಪ್ರಶಸ್ತಿ ಪುರಸ್ಕೃತೆ ದಲಿತ ಹಿರಿಯ ಕಲಾವಿದೆ ದಿ. ಫಕ್ಕೀರವ್ವ ಗುಡಿಸಾಗರ ಅವರ ಜನ್ಮಶತಮಾನೋತ್ಸವ ಏರ್ಪಡಿಸಲು ಸರ್ಕಾರಕ್ಕೆ ಕೋರಿದರೂ, ತಾತ್ಸಾರ ಮನೋಭಾವ ತೋರಿಸಿರುವುದಾಗಿ ಬೇಸರಿಸಿದರು.

ಕಾರ್ಯಕ್ರಮದಲ್ಲಿ ಮಂಜುಳಾ ಕೌಲಗೇರಿ, ಪ್ರಭು ರಂಗಾಪುರ, ಗಂಗವ್ವ ಆಡಿನವರ, ಸೋಮಲಿಂಗ ಒಡಿಯರ, ಮಾದೇವಿ ವಾಲಿಕಾರ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಯಲ್ಲಪ್ಪ ಪರಸಪ್ಪನವರ ಸ್ವಾಗತಿಸಿ, ನಿರೂಪಿಸಿದರು.

ನಿಧನ ಸುದ್ದಿ

ದತ್ತಾತ್ರೇಯ ಕುಲಕರ್ಣಿ



ಹುಬ್ಬಳ್ಳಿ: ನಗರದ ಅಕ್ಷಯ ಕಾಲೋನಿ ನಿವಾಸಿ ದತ್ತಾತ್ರೇಯ ಕುಲಕರ್ಣಿ(55) ಇತ್ತೀಚೆಗೆ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಓರ್ವ ಪುತ್ರ ಹಾಗೂ ಅಪಾರವಾದ ಬಂಧು ಬಳಗ ಇದ್ದರು.



ಧಾರವಾಡ: ಖೊಟ್ಟಿ ದಾಖಲೆ ಸೃಷ್ಟಿಸಿ, ಅಧಿಕಾರ ದುರ್ಬಳಸಿಕೊಂಡು ಪಿತ್ರಾರ್ಜಿತ ಆಸ್ತಿಯಲ್ಲಿ ಬೇರೊಬ್ಬರ ಹೆಸರು ಸೇರಿಸಿದ ಪಿಡಿಒ ಶಶಿಧರ ಗಂಧದ ಅವರನ್ನು ಕರ್ತವ್ಯದಿಂದ ವಜಾ ಗೊಳಿಸುವಂತೆ ಒತ್ತಾಯಿಸಿ ಜಿಪ ಸಿಇಒ ಭುವನೇಶ ಪಾಟೀಲಗೆ ಮನವಿ ಸಲ್ಲಿಸಿದರು.

ಓಪನ್ ಹೌಸ್ ಕಾರ್ಯಕ್ರಮ ಜೂ.21ರಂದು

ಹುಬ್ಬಳ್ಳಿ: ಇಲ್ಲಿಯ ಗೋಕುಲ ರಸ್ತೆಯಲ್ಲಿರುವ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯ ದಲ್ಲಿ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಎರಡು ಹೊಸ ಕೋರ್ಸ್‌ಗಳ ಆರಂಭಿಸಲಾಗುತ್ತಿದ್ದು, ಜೂ.21ರಂದು ಓಪನ್ ಹೌಸ್ ಕಾರ್ಯಕ್ರಮ ನಡೆಯಲಿದೆ. ಅಂದು ಬೆಳಗ್ಗೆ 10ಕ್ಕೆ ವಿದ್ಯಾನಗರದ ಬಿ.ವಿ.ಭೂಮರಡ್ಡಿ ಕ್ಯಾಂಪಸ್‌ನಲ್ಲಿ ಆಯೋಜಿಸಿದೆ. ಕಾನೂನು ಅಧ್ಯಯನ ಶಾಲೆ (ಬಿಬಿಎ ಹಾಗೂ ಎಲ್‌ಎಲ್‌ಬಿ 3 ವರ್ಷ) ಹಾಗೂ ಹೋಟೆಲ್ ಮ್ಯಾನೇಜಮೆಂಟ್ ಹಾಗೂ ಕ್ಯಾಟರಿಂಗ್ ಟೆಕ್ನಾಲಜಿ ವಿಭಾಗ(ಬಿಎಸ್‌ಸಿ 3 ವರ್ಷ) ಪ್ರಾರಂಭಿಸುತ್ತಿದೆ. ಈ ಎರಡು ಕೋರ್ಸ್‌ಗಳ ಸ್ಥಾಪನೆಯೊಂದಿಗೆ ವಿಶ್ವವಿದ್ಯಾಲಯ ತನ್ನ ಶೈಕ್ಷಣಿಕ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿಕೊಳ್ಳುತ್ತಿದೆ. ಎಲ್‌ಎಸ್‌ಬಿ ಮೂರು ವರ್ಷ ಪದವಿ, ಬಿಬಿಎ ಎಲ್‌ಎಲ್‌ಬಿ ಐದು ವರ್ಷ ಸಮಗ್ರ ಪದವಿ ಹಾಗೂ ಎಲ್‌ಎಲ್‌ಎಂ ಎರಡು ವರ್ಷ ಸ್ನಾತಕೋತ್ತರ ಅಧ್ಯಯನವಾಗಿದೆ.

ಈ ಕಾರ್ಯಕ್ರಮದಲ್ಲಿ ಪಠ್ಯಕ್ರಮ, ಪ್ರವೇಶ ಪ್ರಕ್ರಿಯೆ, ಶುಲ್ಕ ರಚನೆ, ವಿದ್ಯಾರ್ಥಿವೇತನ ಸೌಲಭ್ಯಗಳು, ದ್ಯೋಗಾವಕಾಶಗಳು ಹಾಗೂ ಭವಿಷ್ಯದ ವೃತ್ತಿಜೀವನದ ಕುರಿತು ವಿವರವಾದ ಮಾಹಿತಿ ನೀಡಲಾಗುತ್ತದೆ.

ವಿದ್ಯಾರ್ಥಿಗಳು ಮತ್ತು ಪೋಷಕರು ವಿಷಯ ತಜ್ಞರೊಂದಿಗೆ ನೇರವಾಗಿ ಸಂವಾದ ನಡೆಸುವ ಅವಕಾಶವೂ ಕಲ್ಪಿಸಲಾಗಿದೆ. ಸ್ಕೂಲ್ ಆಫ್ ಲೀಗಲ್ ಸ್ಟಡೀಸ್ ಕುರಿತ ಓಪನ್ ಹೌಸ್ ಕಾರ್ಯಕ್ರಮಕ್ಕೆ ಕೆಎಲ್‌ಇ ಕಾನೂನು ಮಹಾವಿದ್ಯಾಲಯ ಪ್ರಾಧ್ಯಾಪಕ ಡಾ.ಮನೋಜಕುಮಾರ ಹಿರೇಮಠ ಆಗಮಿಸಲಿದ್ದಾರೆ. ಹೋಟೆಲ್ ಮ್ಯಾನೇಜ್‌ಮೆಂಟ್ ಬಗ್ಗೆ ಸಹಾಯಕ ಪ್ರಾಧ್ಯಾಪಕ ಅಮಲನ್ ಇ ಅವರು ನಡೆಸಿಕೊಡಲಿದ್ದಾರೆ. ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಸಂಸ್ಥೆ ವಿನಂತಿಸಿಕೊಂಡಿದೆ. ಪ್ರವೇಶ ಉಚಿತವಿದೆ.



ಹುಬ್ಬಳ್ಳಿ: ನಗರದ ಸರ್. ಸಿದ್ದಪ್ಪ ಕಂಬಳಿ ರಸ್ತೆಯಲ್ಲಿ ಟ್ರಾಫಿಕ್ ಪೊಲೀಸ್ ಸಿಬ್ಬಂದಿ ನಿಯೋಜಿಸಬೇಕು ಎಂದು ಆಗ್ರಹಿಸಿ ದಲಿತ ಕಾರ್ಮಿಕ ಅಸಂಘಟಿತ ಒಕ್ಕೂಟದ ಸದಸ್ಯರು ಸಂಚಾರಿ ಎಸಿಪಿ ವೀರೇಶ ಪಾಟೀಲಗೆ ಮನವಿ ಸಲ್ಲಿಸಿದರು. ಯಾವುದೇ ಅವಘಡಗಳು ನಡೆದಂತೆ ಮುಂಜಾಗ್ರತ ಕ್ರಮವಾಗಿ ಸಂಚಾರಿ ಸಿಬ್ಬಂದಿ ನಿಯೋಜಿಸಬೇಕು ಎಂದು ಒತ್ತಾಯಿಸಿದರು. ಒಕ್ಕೂಟ ಸದಸ್ಯ ವಿಜಯ ಕರಾ, ಸೋಮಶೇಖರ, ಎಸ್.ಎ. ಮುಲ್ಲಾ ಇದ್ದರು.

ಜಿಲ್ಲಾಮಟ್ಟದ ಅಧಿಕಾರಿಗಳ ಸಭೆ | ಜಿಲ್ಲಾಧಿಕಾರಿ ಸ್ನೇಹಲ್ ಸೂಚನೆ

ಜವಾಬ್ದಾರಿ ಅರಿತು ಕಾರ್ಯನಿರ್ವಹಿಸಿ

ಧಾರವಾಡ: ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಜವಾಬ್ದಾರಿ ಅರಿತು ಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿ ಸ್ನೇಹಲ್ ಸೂಚನೆ ನೀಡಿದರು.



ಸಾರ್ವಜನಿಕರ ಸಮಸ್ಯೆಗಳು ಹಾಗೂ ಕಡತಗಳ ವಿಲೇವಾರಿ ವಿಳಂಬ ಮಾಡದೆ, ಸ್ಥಳೀಯವಾಗಿ ಇತ್ಯರ್ಥಪಡಿಸಬೇಕು. ಜತೆಗೆ ಪಾರದರ್ಶಕ ಆಡಳಿತ ನೀಡಬೇಕು. ಇಲಾಖೆಗೆ ಬಂದಿರುವ ಅನುದಾನವನ್ನು ಸಂಪೂರ್ಣ ಬಳಸಬೇಕು ಎಂದು ಸಲಹೆ ನೀಡಿದರು.

ವಾಹನ ಪರಿಶೀಲಿಸಿ: ಸರ್ಕಾರದ ವಿವಿಧ ಯೋಜನೆಗಳಡಿ ಸಾರ್ವಜನಿಕರಿಗೆ ವಿತರಿಸಿದ ವಾಹನಗಳನ್ನು ಯಾವ ಉದ್ದೇಶಕ್ಕೆ ಬಳಸುತ್ತಿದೆ ಎಂಬುವ ಬಗ್ಗೆ ಪರಿಶೀಲಿಸಬೇಕು. ಬೇರೆ ಬೇರೆ ಉದ್ದೇಶಕ್ಕೆ ಬಳಸಿದಂತೆ ಕ್ರಮ ಕೈಗೊಳ್ಳುವಂತೆಯೂ ಅಧಿಕಾರಿ ವರ್ಗಕ್ಕೆ ಸೂಚನೆ ನೀಡಿದರು.

ಫಲಕ ಅಳವಡಿಸಿ: ಯುವಕರಿಗೆ ಕೌಶಲ್ಯ ತರಬೇತಿ ನೀಡಬೇಕು. ಕೈಗಾರಿಕಾ ಪಾರ್ಕ್ ನಿರ್ಮಾಣಕ್ಕೆ ಜಾಗ ಗುರುತಿಸಬೇಕು. ಸರ್ಕಾರಿ ಜಮೀನು, ಪಾಲಿಕೆ ಆಸ್ತಿ, ಹುಡಾ ಜಾಗಗಳನ್ನು ಗುರುತಿಸಿ, ಫಲಕಗಳನ್ನು ಅಳವಡಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕೆರೆಗಳ ತೆರವುಗೊಳಿಸಿ: ಜಿಲ್ಲೆಯಲ್ಲಿ ಕೆರೆಗಳ ಒತ್ತುವರಿ ಬಗ್ಗೆ ದೂರುಗಳು ಬಂದಿದ್ದು, ಅವುಗಳನ್ನು ತೆರವು ಮಾಡಲು ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು. ಸರ್ಕಾರದ ಮಾರ್ಗಸೂಚಿ ಮತ್ತು ನಿಮಯಗಳ ಅಡಿಯಲ್ಲಿ ಅಧಿಕಾರಿಗಳು ತಾಳ್ಮೆಯಿಂದ ಕೆಲಸ ಮಾಡಲು ತಿಳಿಸಿದರು.

ಜಿಲ್ಲೆಯಲ್ಲಿ ಯಾವುದೇ ಶಾಲೆಗಳು ಮುಚ್ಚುವುದಿಲ್ಲ, ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಸಿಎಸ್‌ಆರ್ ಅನುದಾನ ಬಳಕೆ ಕುರಿತು ಮಾಹಿತಿ ಒದಗಿಸಬೇಕು. ಸಕಾಲಕ್ಕೆ ಸಮವಸ್ತ್ರ ಮತ್ತು ಶೂಗಳ ವಿತರಣೆ ಮಾಡಬೇಕು ಎಂದರು.

ನಗರ ಪ್ರದೇಶದಲ್ಲಿ ರಿಂಗ್ ರೋಡ್ ಅಗತ್ಯವಿದೆ. ರಿಂಗ್ ನಿರ್ಮಾಣ ಮಾಡುವ ಪ್ರದೇಶದಲ್ಲಿ ಯಾವುದೇ ಕಾಮಗಾರಿಗಳು ನಡೆಯಬಾರದು. ಮುಖ್ಯಮಂತ್ರಿಗಳು ಜಿಲ್ಲೆಗೆ ಭೇಟಿ ನೀಡಿದಾಗ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆಗೆ ನಿರ್ದೇಶನ ನೀಡಿದರು.

ಜಿಪಂ ಸಿಇಒ ಭುವನೇಶ ಪಾಟೀಲ ಮಾತನಾಡಿ, ಅಧಿಕಾರಿಗಳು ಚುರುಕಾಗಿ ಕೆಲಸ ಮಾಡಬೇಕು. ಜಿಲ್ಲೆಯಲ್ಲಿ ಗುಣಮಟ್ಟದ ಕಾಮಗಾರಿ ನಡೆಯಲು ಆದ್ಯತೆ ನೀಡಬೇಕು. ಶಾಲಾ-ಕಾಲೇಜು ಕಟ್ಟಡಗಳು ಪರಿಶೀಲಿಸಬೇಕು ಎಂದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಪ್ರೊಬೇಷನರಿ ಐಎಎಸ್ ಅಧಿಕಾರಿ ಅನುಪ್ರಿಯಾ ಸಾಕ್ಯಾ, ಜಿಲ್ಲಾ ಪೊಲೀಸ್ ಅಧೀಕ್ಷಕ ಗುಂಜನ್ ಆರ್ಯ, ಜಿಪಂ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.

ಉಮೇಶಗೆ ಪರಿಸರ ಪಾಲಕ ಪ್ರಶಸ್ತಿ




ಕಲಘಟಗಿ: ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆ ವತಿಯಿಂದ ಧಾರವಾಡ ಜಿಲ್ಲೆ ಕಲಘಟಗಿ ತಾಲೂಕಿನ ದಾಸ್ತಿಕೊಪ್ಪ ಗ್ರಾಮದ ಯುವ ರೈತ ವಿನಾಯಕ ಉಮೇಶ ಕೊಪ್ಪದರವರಿಗೆ ಪರಿಸರ ಪಾಲಕ ಪ್ರಶಸ್ತಿ ನೀಡಲಾಯಿತು.

ರೈತ ವಿನಾಯಕ ಕೊಪ್ಪದರವರು ಸುಸ್ಥಿರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಪರಿಸರ ಸಂರಕ್ಷಣೆಗೆ ನೀಡಿದ ಅಮೂಲ್ಯ ಕೊಡುಗೆಯನ್ನು ಗೌರವಿಸಿ ಇವರಿಗೆ ರಾಜ್ಯಮಟ್ಟದ ಪರಿಸರ ಪಾಲಕ ಪ್ರಶಸ್ತಿಯನ್ನು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪ್ರದಾನ ಮಾಡಲಾಗಿದೆ.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಠರಾವು

ಅಣ್ಣಿಗೇರಿ: ಬಸಾಪೂರ ಹತ್ತಿರ ನಿರ್ಮಾಣವಾದ ಶಾಶ್ವತ ಕುಡಿಯುವ ನೀರಿನ ಕೆರೆಗೆ ಅಣ್ಣಿಗೇರಿ ಅಮೃತೇಶ್ವರ ಕುಡಿಯುವ ನೀರಿನ ಜಲಾಶಯ ಎಂದು ನಾಮಕರಣ ಮಾಡಲು ಶಾಸಕ ಎನ್.ಎಚ್.ಕೋನರಡ್ಡಿ ನೇತೃತ್ವದಲ್ಲಿ ಸದಸ್ಯರು ಒಪ್ಪಿಗೆ ಸೂಚಿದರು.



ನಗರದ ಪುರಸಭೆ ಸಭಾ ಭವನದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಸಾಮಾನ್ಯ ಸಭೆಯಲ್ಲಿ ಶಾಸಕ ಎನ್.ಎಚ್.ಕೋನರಡ್ಡಿ ಭಾಗವಹಿಸಿ ನಗರದ ಸಮಗ್ರ ಅಭಿವೃದ್ಧಿ ಕುರಿತು ಸರ್ವ ಸದಸ್ಯರನ್ನೊಳಗೊಂಡು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಒಪ್ಪಿಗೆ ಸೂಚಿಸಿ ಠರಾವ ಪಾಸ್ ಮಾಡಿದರು.

ಪೌರಕಾರ್ಮಿಕರಿಗೆ ವಿಶ್ರಾಂತಿ ಪಡೆಯಲು ಪುರಸಭೆ ಆವರಣದಲ್ಲಿ ಅಂದಾಜು 29 ಲಕ್ಷ ಅನುದಾನದಲ್ಲಿ ಪ್ರತ್ಯೇಕವಾಗಿ ಮಹಿಳೆಯರಿಗೆ ಮತ್ತು ಪುರುಷರಿಗೆ ವಿಶ್ರಾಂತಿ ಗೃಹ ಹಾಗೂ ಅಮೃತ ನಗರದಲ್ಲಿ ನೂತನ ಉದ್ಯಾನವನ್ನು ಶಾಸಕ ಎನ್.ಎಚ್.ಕೋನರಡ್ಡಿ ಲೋಕಾರ್ಪಣೆಗೊಳಿಸಿದರು.

ಗುತ್ತಿಗೆದಾರ ಪ್ರದೀಪ ಕೊಪ್ಪದ್ ಸನ್ಮಾನಿಸಿ ಗೌರವಿಸಲಾಯಿತು.

ಪಟ್ಟಣದಲ್ಲಿ ಹೈಟೆಕ್ ಲೈಬ್ರರಿ ಆರಂಭಿಸುವುದು, ಘನತ್ಯಾಜ್ಯ ವಸ್ತು ನಿರ್ವಹಣೆ 2026ರ ನಿಯಮಗಳನ್ನು ಅನುಷ್ಠಾನಗೊಳಿಸುವದು, ತ್ಯಾಜ್ಯ ನೀರು ನಿರ್ವಹಣಾ ಘಟಕ ಮತ್ತು 2.91 ಎಂಎಲ್ಡಿ ಸಾಮರ್ಥ್ಯದ ಘಟಕ ನಿರ್ಮಾಣ ಕಾಮಗಾರಿಗೆ ಪುರಸಭೆ ವಂತಿಗೆ ಪಾವತಿಸಲು ಸರ್ವ ಸದಸ್ಯರು ಅನುಮೋದನೆ ನೀಡಿದರು.

ನಗರದಲ್ಲಿ ಮಹರ್ಷಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣ ಮಾಡಲು ಸೂಕ್ತ ಜಾಗವನ್ನು ಗುರುತಿಸಲು ಅಧಿಕಾರಿಗಳಿಗೆ ಸೂಚಿಸಲಾಯಿತು.

ಈ ವೇಳೆ ಶಿವಾನಂದ ಬೆಳಹಾರ, ಉಪಾಧ್ಯಕ್ಷ ನಾಗರಾಜ ದಳವಾಯಿ, ಮುಖ್ಯಾಧಿಕಾರಿ ವೈ.ಜಿ.ಗದ್ದಿಗೌಡರ, ನೀಲವ್ವ ಕುರಹಟ್ಟಿ, ಮುದುಕಣ್ಣ ಭಜಂತ್ರಿ, ಇಮಾಮಸಾಬ ದರವಾನ, ಅಮೀನಾಬೇಗಂ ಬಾರಿಗಿಡದ, ಪುರಸಭೆಯ ಸರ್ವ ಸದಸ್ಯರು ಇದ್ದರು.

> ಪಟ್ಟಣಕ್ಕೆ ಬೇಕಾಗುವ ಎಲ್ಲ ಸೌಲಭ್ಯ ಒದಗಿಸಲು ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಅಷ್ಟೇ ಅಲ್ಲದೇ ಇಂದೂರ ಮಾದರಿಯಲ್ಲಿ ನಗರವನ್ನು ಕೂಡಾ ಮಾಡಲು ಸ್ಥಳೀಯ ಆಡಳಿತದ ಹಾಗೂ ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ. ಮುಂದಿನ 2 ತಿಂಗಳೊಳಗಾಗಿ 124 ಕೋಟಿ ರೂ.ವೆಚ್ಚದ ಒಳಚರಂಡಿ ಕಾಮಗಾರಿಗೆ ಚಾಲನೆ ನೀಡಲಾಗುವುದು.
> ■ ಎನ್.ಎಚ್.ಕೋನರಡ್ಡಿ, ಶಾಸಕ

ಕೌಶಲ್ಯಾಭಿವೃದ್ಧಿ ತರಬೇತಿ ಅಗತ್ಯ: ಪಾಟೀಲ



ಕುಂದಗೋಳ: ಗ್ರಾಮೀಣ ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿ ಕೊಳ್ಳಲು ಕೌಶಲ್ಯಾಭಿವೃದ್ಧಿ ತರಬೇತಿ ಅತ್ಯಂತ ಅಗತ್ಯವಾಗಿದ್ದು, ಉಚಿತ ಹೊಲಿಗೆ ಯಂತ್ರ ತರಬೇತಿ ಯೋಜನೆಯ ಸದುಪಯೋಗವನ್ನು ಮಹಿಳೆಯರು ಪಡೆದುಕೊಳ್ಳಬೇಕು ಎಂದು ಶಾಸಕ ಎಂ.ಆರ್. ಪಾಟೀಲ ಹೇಳಿದರು.

ಅವರು ಪಟ್ಟಣದ ಕಲ್ಯಾಣಪುರ ಮಠದ ಸಭಾಭವನದಲ್ಲಿ ಇತ್ತೀಚಿಗೆ ಗ್ರಾಮ ವಿಕಾಸ ಸೊಸೈಟಿ ವತಿಯಿಂದ ಸಿಎಸ್‌ಆರ್ ಯೋಜನೆಯಡಿ ಆಯೋಜಿಸಿದ್ದ ಉಚಿತ ವೃತ್ತಿಪರ ಟೆಲರಿಂಗ್ ಮತ್ತು ಫ್ಯಾಷನ್ ಡಿಸೈನಿಂಗ್ ತರಬೇತಿ ಹಾಗೂ ತರಬೇತಿ ನಂತರ ಉಚಿತವಾಗಿ ಹೊಲಿಗೆ ಯಂತ್ರ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರ ಸಹಕಾರದಿಂದ ಗ್ರಾಮೀಣ ಭಾಗದ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಈ ತರಬೇತಿ ಕಾರ್ಯಕ್ರಮ ಜಾರಿಗೊಳಿಸಲಾಗಿದೆ. ಮನೆ ನಿರ್ವಹಣೆಯ ಜತೆಗೆ ಸ್ವಂತ ಆದಾಯ ಗಳಿಸಲು ಮಹಿಳೆಯರಿಗೆ ಇದು ಉತ್ತಮ ಅವಕಾಶವಾಗಿದೆ ಎಂದರು.

ರಸ್ತೆ ಅಭಿವೃದ್ಧಿಗಾಗಿ 56 ಕೋಟಿ ರೂ. ಮಂಜೂರಾಗಿದ್ದು, ಶೀಘ್ರದಲ್ಲೇ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು ಎಂದರು.

ಬಿಜೆಪಿ ತಾಲೂಕು ಅಧ್ಯಕ್ಷ ನಾಗನಗೌಡ ಸಾತ್ಮಾರ ಹಾಗೂ ಮುಖಂಡ ದಾನಪ್ಪ ಗಂಗಾಯಿ ಮಾತನಾಡಿ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರ ಸಹಕಾರದಿಂದ ಶಾಸಕ ಎಂ.ಆರ್. ಪಾಟೀಲ ಅವರು ಕ್ಷೇತ್ರಕ್ಕೆ ಗಣನೀಯ ಅನುದಾನ ತಂದು ಅಭಿವೃದ್ಧಿಗೆ ವೇಗ ನೀಡಿದ್ದಾರೆ ಎಂದರು.

ಗ್ರಾಮ ವಿಕಾಸ ಸೊಸೈಟಿಯ ಮೇಲವಿಚಾರಕ ಸಚಿನ ಮಾತನಾಡಿ, ಶಾಸಕ ಎಂ.ಆರ್.ಪಾಟೀಲ ಅವರ ಆಸಕ್ತಿ ಸತತ ಪ್ರಯತ್ನ ದಿಂದಾಗಿ ಕುಂದಗೋಳ ಗ್ರಾಮೀಣ ಭಾದದಲ್ಲಿ ಇನ್ನು ಮೂರು ತರಬೇತಿ ಕೇಂದ್ರಗಳನ್ನು ತೆರೆಯಲಾಗುವುದು ಎಂದರು.

ಈ ವೇಳೆ ರವಿಗೌಡ ಪಾಟೀಲ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮಲ್ಲಪ್ಪ ತಡಸದ, ಕೆಸಿಸಿ ಬ್ಯಾಂಕ್ ನಿರ್ದೇಶಕ ಉಮೇಶ ಹೆಬಸೂರ, ಪಕ್ಕಜ್ಜ ಕೋರಿ, ಈರಪ್ಪ ಶೇರವಾಡ, ಕೆ.ಸಿ.ಪಾಟೀಲ, ಶಂಕ್ರಣ್ಣ ಹಕಾರಿ, ರಮೇಶ ಇಂಗಳ್ಳಿ, ಗಣೇಶ ಕೂಕಾಟೆ, ಪುಷ್ಪಾ ಕಲಿವಾಳ, ಸುನಿತಾ ನಲವಾಲ, ಸಂತೋಷ ಮಲ್ಲಿಗವಾಡ, ಸತೀಶ ಪಾಟೀಲ, ವಾಗೀಶ ಮಣಕಟ್ಟಿಮಠ, ಸಿದ್ದು ಧಾರವಾಡಶೆಟ್ಟರ, ಹರೀಶ ಕೊನೇರಿ, ಬಿಜೆಪಿ ಕಾರ್ಯಕರ್ತರು ತರಬೇತಿ ಕೇಂದ್ರದ ಸಿಬ್ಬಂದಿ ಉಪಸ್ಥಿತರಿದ್ದರು.

ಕೋನರಡ್ಡಿಗೆ ಸಚಿವ ಸ್ಥಾನ ನೀಡಿ

ನವಲಗುಂದ: ಶಾಸಕ ಎನ್.ಹೆಚ್. ಕೋನರಡ್ಡಿ ಅವರನ್ನು ರೈತರ ಕೋಟಾದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಸಚಿವ ಸಂಪುಟದಲ್ಲಿ ಮಂತ್ರಿ ಮಾಡಬೇಕೆಂದು ಕಾಂಗ್ರೆಸ್ ಪಕ್ಷದ ಎಲ್ಲ ನಾಯಕರಿಗೆ ಕ್ಷೇತ್ರದ ಜನತೆ ಹಕ್ಕೊತ್ತಾಯ ಮಂಡಿಸಿದ್ದಾರೆ ಎಂದು ನವಲಗುಂದ ಹಾಗೂ ಅಣ್ಣಿಗೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವರ್ಧಮಾನಗೌಡ ಹಿರೇಗೌಡ್ರ ಮತ್ತು ಮಂಜುನಾಥ ಮಾಯಣ್ಣವರ ಹೇಳಿದರು.

ಬುಧವಾರ ನವಲಗುಂದ ನಗರದ ಗಣಪತಿ ದೇವಸ್ಥಾನದಿಂದ ಎನ್.ಎಚ್. ಕೋನರಡ್ಡಿ ಅವರನ್ನು ಸಚಿವರನ್ನಾಗಿ ಮಾಡಲು ಬೃಹತ್ ಮೆರವಣಿಗೆ ಮೂಲಕ ಗಣಪತಿ ದೇವಸ್ಥಾನದಿಂದ ಪ್ರಾರಂಭಿಸಿ ಮಾರುಕಟ್ಟೆಯಿಂದ ಲಿಂಗರಾಜ ಸರ್ಕಲ್ ಮೂಲಕ ತಹಶೀಲ್ದಾರ ಕಚೇರಿಗೆ ತೆರಳಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿ ನಂತರ ಮಾತನಾಡಿ, ಕೋನರಡ್ಡಿಯವರು ಕೃಷ್ಣಾ ಹಾಗೂ ಕಾವೇರಿ ಈ ರಾಜ್ಯದ ಎರಡು ಕಣ್ಣುಗಳು ಇದ್ದಂತೆ ಅದರ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಕೃಷ್ಣಾ ಕಣಿವೆಯ ಮಹಾದಾಯಿ, ಕಳಸಾ-ಬಂಡೂರಿ ಹಾಗೂ ಕಾವೇರಿ ಕಣಿವೆಯ ಮೇಕೆದಾಟು ಯೋಜನೆ ಜಾರಿ ಆಗಲೇಬೇಕೆಂಬ ನಿರಂತರ ಹೋರಾಟ ಮಾಡುತ್ತಲೇ ಬಂದಿರುವ ಹಾಗೂ ರೈತರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಹೋರಾಡುತ್ತಿದ್ದಾರೆ ಎಂದರು.

ಈ ವೇಳೆ ಯುವ ಕಾಂಗ್ರೆಸ್ ಅಧ್ಯಕ್ಷ ವಿಕಾಸ ತದ್ದೇವಾಡಿ, ಎನ್.ಎಚ್.ಕೋನರಡ್ಡಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರಭಾಕರ ಮೋಹಿತೆ, ಅರುಣ ಸುಣಗಾರ, ಶಿವಾನಂದ ಭೂಮಣ್ಣವರ, ಚಂದ್ರಣ್ಣ ಅಣ್ಣಿಗೇರಿ, ಆರ್.ಎಚ್.ಕೋನರಡ್ಡಿ, ಮುರಗ್ಯಜ್ಜ ವೀರಕ್ತಮಠ, ಎ.ಡಿ.ಕುಲಕರ್ಣಿ, ಡಿ.ಎನ್.ಪಾಟೀಲ, ಚಂಬಣ್ಣ ಹಾಳದೋಟರ, ಎಂ.ಎಸ್.ರೋಣದ, ಮಲ್ಲಪ್ಪ ಕುರಹಟ್ಟಿ, ಹಸನಸಾಬ ಗೂಡುನಾಯ್ಕರ, ದೇವಪ್ಪ ರೋಣದ, ಅಲ್ಲಾಸಾಬ್ ಕಲಕುಟ್ರಿ, ಉಪಾಧ್ಯಕ್ಷ ಅನ್ವರ ಮೂಲಿಮನಿ, ಶಾಂತವ್ವ ಗುಜ್ಜಳ, ಆನಂದ ಹವಳಕೊಡ, ಮಹಾಂತೇಶ ಹಂಚಿನಾಳ, ಗಿರೀಶ ಮಾಸ್ತಿ, ಬಾಬಾಜಾನ ಮುಲ್ಲಾನವರ, ಪ್ರದೀಪ ಲೆಂಕನಗೌಡ್ರ, ಹನಮಂತ ಗಾಡದ, ಚಂಬಣ್ಣ ಹಾಳದೋಟರ, ಕಿರಣ ಉಳ್ಳಿಗೇರಿ, ಅರುಣ ಮಜ್ಜಗಿ, ಡಿ.ಕೆ.ಹಳ್ಳದ, ನಂದಿನಿ ಹಾದಿಮನಿ, ರೇಣುಕಾ ಹೊಂಗಲ, ಪ್ರೇಮಾ ನಾಯ್ಕರ, ಮಲ್ಲಿಕಾರ್ಜುನ ಕುರಟ್ಟಿ ಸೇರಿದಂತೆ ಅಭಿಮಾನಿಗಳು, ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದರು.



ಬಸ್ ಸೌಕರ್ಯಕ್ಕೆ ಆಗ್ರಹಿಸಿ ಪ್ರತಿಭಟನೆ



ಧಾರವಾಡ: ಹಳೇತೇಗೂರು ಗ್ರಾಮಕ್ಕೆ ಸಮರ್ಪಕ ಬಸ್ ಸೌಕರ್ಯ ಕಲ್ಪಿಸುವಂತೆ ಒತ್ತಾಯಿಸಿ ಅಖಿಲ ಭಾರತ ಪ್ರಜಾತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಒ) ಕಾರ್ಯಕರ್ತರು, ಹಳೆಯ ಬಸ್ ನಿಲ್ದಾಣದ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು.

ನೇತೃತ್ವ ವಹಿಸಿದ್ದ ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಶಶಿಕಲಾ ಮೇಟಿ, ದೇಶಕ್ಕೆ ಸ್ವಾತಂತ್ರ್ಯ ಬಂದು ಏಳು ದಶಕಗಳ ಗತಿಸಿದರೂ, ಇಂದಿಗೂ ದೇಶದ ಬಹುತೇಕ ಹಳ್ಳಿಗಳಿಗೆ ಗುಣಮಟ್ಟದ ರಸ್ತೆಗಳು ಹಾಗೂ ಸಾರಿಗೆ ಬಸ್ ಸೌಕರ್ಯವಿಲ್ಲ ಎಂದು ಬೇಸರಿಸಿದರು.

ಹೇಳೆತೇಗೂರು ಗ್ರಾಮದ ನೂರಾರು ವಿದ್ಯಾರ್ಥಿಗಳು ಶಿಕ್ಷಣ ಅರಿಸಿ, ಧಾರವಾಡಕ್ಕೆ ಆಗಮಿಸುತ್ತಿದ್ದು, ಸೂಕ್ತ ಸಾರಿಗೆ ವ್ಯವಸ್ಥೆ ಇಲ್ಲದೆ, ತೊಂದರೆ ಅನುಭವಿಸುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳ ಕಲಿಕೆ ಸ್ಥಗಿತದ ಜೊತೆ ಕುಂಠಿತಗೊಳ್ಳುವ ಆತಂಕವೂ ವ್ಯಕ್ತಪಡಿಸಿದರು.

ಕೃಷಿ-ಕಾರ್ಮಿಕರ ಸಂಘಟನೆ ಜಿಲ್ಲಾ ಕಾರ್ಯದರ್ಶಿ ಶರಣಬಸವ ಗೋನಾವರ, ಸೂಕ್ತ ಸಮಯಕ್ಕೆ ಬಸ್ ಬರದ ಕಾರಣ ವಿದ್ಯಾರ್ಥಿಗಳು ತರಗತಿಗಳಿಗೆ ತಡವಾಗಿ ಹೋಗುವ ಸ್ಥಿತಿ ಉಂಟು. ಸರ್ಕಾರ ಕನಿಷ್ಠ ಸಾರಿಗೆ ಸೌಲಭ್ಯ ಕಲ್ಪಿಸಬೇಕೆಂದು ಆಗ್ರಹಿಸಿದರು.

ಕೊನೆಗೆ ಹಳೇತೇಗೂರು ಗ್ರಾಮಕ್ಕೆ ಸಮರ್ಪಕ ಬಸ್ ಸೌಲಭ್ಯ ಕಲ್ಪಿಸಲು ಆಗ್ರಹಿಸಿ ಜಿಲ್ಲಾ ವಿಭಾಗೀಯ ಸಂಚಾರ ಅಧಿಕಾರಿ ಸಂತೋಷ ಕಮತ ಅವರಿಗೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿದ ಅಧಿಕಾರಿ ಬಸ್ ಸೌಕರ್ಯ ಒದಗಿಸುವ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಸಂಘಟನೆ ಕಾರ್ಯಕರ್ತರಾದ ದೀಪಾ ದಾರವಾಡ, ಶಶಿಕಲಾ, ಸಿಂಧೂ ಕೌದಿ, ಗ್ರಾಮಸ್ಥರಾದ ಕಲ್ಲವ್ವ ನವಲೂರು, ಸೋಮಲಿಂಗ ಇಂಚಲ್, ವಿದ್ಯಾರ್ಥಿಗಳಾದ ಜ್ಯೋತಿ ದಳವಾಯಿ, ಬಸವರಾಜ, ಗಂಗಾಧರ ಅನೇಕರು ಪಾಲ್ಗೊಂಡಿದ್ದರು.

ವಿದ್ಯಾರ್ಥಿಗೆ ಕಿರುಕುಳ ಆರೋಪ | ಎಬಿವಿಪಿ ಕಾರ್ಯಕರ್ತರ ಧರಣಿ

ಕವಿವಿ ಗೈಡ್ ಡಾ.ದೇವರಾಜ ಅಮಾನತು

ಧಾರವಾಡ: ಸಂಶೋಧನಾ ವಿದ್ಯಾರ್ಥಿನಿ ಜೊತೆಗೆ ಅನೈತಿಕ ಸಂಬಂಧ ಹಾಗೂ ಸಂಶೋಧನಾ ವಿದ್ಯಾರ್ಥಿಗೆ ಕಿರುಕುಳ ನೀಡಿದ ಆರೋಪದಡಿ ಪ್ರಾಧ್ಯಾಪಕ ಡಾ.ದೇವರಾಜ ತಂಗುದೊರೆ ಅಮಾನತುಗೊಳಿಸಿ ಕುಲಪತಿಗಳು ಬುಧವಾರ ಆದೇಶ ಹೊರಡಿಸಿದ್ದಾರೆ.

ಪ್ರೊ.ದೇವರಾಜ ಅವರ ಅಮಾನತಿಗೆ ಆಗ್ರಹಿಸಿ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಕರ್ನಾಟಕ ವಿಶ್ವವಿದ್ಯಾಲಯ ಕಚೇರಿ ಮುಂಭಾಗದಲ್ಲಿ ಬುಧವಾರ ಕೈಗೊಂಡ ಧರಣಿ ಸತ್ಯಾಗ್ರಹಕ್ಕೆ ಮಣಿದ ಕುಲಪತಿ, ಈ ಕಠಿಣ ಕ್ರಮ ಕೈಗೊಂಡಿದ್ದಾರೆ.

ಬುಧವಾರ ಬೆಳಿಗ್ಗೆ ಕವಿವಿಯ ಆಡಳಿತ ಕಚೇರಿ ಎದುರು ಜಮಾಯಿಸಿದ ಎಬಿವಿಪಿ ಕಾರ್ಯಕರ್ತರು ಮತ್ತು ವಿದ್ಯಾರ್ಥಿಗಳು, ಕವಿವಿ ಆಡಳಿತ ಮಂಡಳಿ, ಸಿಂಡಿಕೇಟ್ ಸದಸ್ಯರು ಆರೋಪಿ ಗೈಡ್ ದೇವರಾಜ ತಂಗುದೊರೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಶಿಕ್ಷಣ ನೀಡಬೇಕಾದ ಪವಿತ್ರ ಸ್ಥಾನದಲ್ಲಿದ್ದು, ಸಂಶೋಧನಾ ವಿದ್ಯಾರ್ಥಿನಿ ಜೊತೆ ಅನೈತಿಕ ಸಂಬಂಧ ಹೊಂದುವ ಮತ್ತು ಪ್ರಶ್ನಿಸಿದ



ಸಂಶೋಧನಾ ವಿದ್ಯಾರ್ಥಿಗೆ ಪಿಎಚ್‌ಡಿ ಮುಗಿಸಲು ಬಿಡದೆ ಜಾತೀಯತೆ ಜತೆ ಕಿರುಕುಳ ನೀಡುವುದು ಅಕ್ಷಮ್ಯ ಎಂದರು.

ಇಂತಹ ಭ್ರಷ್ಟ ಮತ್ತು ನೈತಿಕತೆ ಇಲ್ಲದ ಗೈಡ್‌ಗಳನ್ನು ತಕ್ಷಣವೇ ಸೇವೆಯಿಂದಲೇ ವಜಾಗೊಳಿಸುವಂತೆ ಪ್ರತಿಭಟನಾಕಾರರು ಉಗ್ರವಾಗಿ ಒತ್ತಾಯಿಸಿದರು. ಈ ಹಿಂದೆ ಧರಣಿ ಮಾಡಿದಾಗಲೂ ನಿರ್ಲಕ್ಷ್ಯ ವಹಿಸಿದ ಕವಿವಿ ಕುಲಪತಿ ಡಾ.ಖಾನ್ ವಿರುದ್ಧ ಕಿಡಿಕಾರಿದರು.

ಧರಣಿ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗುತ್ತಿದ್ದಂತೆ, ನೂರಾರು ವಿದ್ಯಾರ್ಥಿಗಳು ಕುಲಪತಿಗಳ ಕಚೇರಿಗೆ ಮುತ್ತಿಗೆ ಹಾಕಲು ಸಹ ಯತ್ನಿಸಿದರು. ತಕ್ಷಣವೇ ಪ್ರೊ.ದೇವರಾಜ ಅವರನ್ನು ಅಮಾನತುಗೊಳಿಸುವಂತೆ ಒತ್ತಾಯ ಮಾಡಿದರು.

ಅಮಾನತು ಆದೇಶ:

ವಿದ್ಯಾರ್ಥಿಗಳ ಆಕ್ರೋಶ ಮುಗಿಲು ಮುಟ್ಟಿದ ಬೆನ್ನಲ್ಲೇ, ಪ್ರತಿಭಟನಾ ನಿರತರ ಮನವೊಲಿಸಲು ಮುಂದಾದ ಕುಲಪತಿ ಡಾ.ಖಾನ್ ವಿದ್ಯಾರ್ಥಿ ಮುಖಂಡರ ಜೊತೆ ಸುದೀರ್ಘ ಚರ್ಚೆ ನಡೆಸಿದಾಗ ಮುಖಂಡರು ಡಾ.ದೇವರಾಜ ಅವರ ಅಮಾನತಿಗೆ ಪಟ್ಟುಹಿಡಿದರು.

ಪ್ರಾಥಮಿಕ ತನಿಖೆ ಹಾಗೂ ವಿದ್ಯಾರ್ಥಿಗಳು ಒದಗಿಸಿದ ಸಾಕ್ಷ್ಯಾಧಾರ ಪರಿಶೀಲಿಸಿದ ಕುಲಪತಿ, ಆರೋಪದ ಗಂಭೀರತೆ ಪರಿಗಣಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಡಾ.ದೇವರಾಜ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಅಧಿಕೃತ ಆದೇಶ ಹೊರಡಿಸಿದರು.

ಈ ಪ್ರಕರಣದ ಕುರಿತು ಉನ್ನತ ಮಟ್ಟದ ನಿಷ್ಪಕ್ಷಪಾತ ತನಿಖೆ ನಡೆಸಿ, ಶೀಘ್ರದಲ್ಲೇ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದಾಗಿ ಕುಲಪತಿ ವಿದ್ಯಾರ್ಥಿಗಳಿಗೆ ಭರವಸೆ ನೀಡಿದ ನಂತರ ಎಬಿವಿಪಿ ಕಾರ್ಯಕರ್ತರು ತಮ್ಮ ಧರಣಿ ಸತ್ಯಾಗ್ರಹ ಹಿಂದಕ್ಕೆ ಪಡೆದರು.

ಭಾರತ ಸೇವಾದಳ ಕಾರ್ಯಕ್ರಮ ಜೂ.25ರಂದು

ಕಲಘಟಗಿ: ಭಾರತ ಸೇವಾದಳ ತಾಲೂಕ ಸಮಿತಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ವತಿಯಿಂದ ಬುಧವಾರ ಬಿಇಒ ಕಚೇರಿಯಲ್ಲಿ ಹಮ್ಮಿಕೊಂಡ ಸಭೆಯಲ್ಲಿ 2026 -27ನೇ ಸಾಲಿನ ಭಾರತಸೇವಾದಳಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಯಿತು.

ಮೊದಲ ಕಾರ್ಯಕ್ರಮವಾದ ಪುನಶ್ಚೇತನ ಕಾರ್ಯಕ್ರಮವನ್ನು ಜೂ.25ರಂದು ಜಿ.ಜಿ.ಎಚ್.ಎಸ್ ಕಲಘಟಗಿಯಲ್ಲಿ ಕಾರ್ಯಕ್ರಮ ನಡೆಸಲು ತೀರ್ಮಾನಿಸಲಾಯಿತು.

ಕಲಘಟಗಿ ತಾಲೂಕು ದಾರವಾಡ ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ದ್ವಿತೀಯ ಸ್ಥಾನ ಗಳಿಸಿದ ಹಿನ್ನೆಲೆಯಲ್ಲಿ, ಕ್ಷೇತ್ರ ಶಿಕ್ಷಣಾಧಿಕಾರಿ ಗಾಯತ್ರಿದೇವಿ ಸಜ್ಜನರವರಿಗೆ ಭಾರತ ಸೇವಾದಳ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ತಾಲೂಕು ಸಮಿತಿ ಅಧ್ಯಕ್ಷ ಜಗದೀಶ್ ಕಮ್ಮಾರ್, ವಿಭಾಗ ಸಂಘಟಕ ಪ್ರಕಾಶ್ ಪಿ ಗೋಣಿ, ಕಾರ್ಯದರ್ಶಿ ಈಶ್ವರ ಜವಳಿ, ಎಸ್.ಎ.ಚಿಕ್ಕನರ್ತಿ, ಆರ್.ಎಂ.ಹೋಲ್ತಿಕೋಟಿ, ಬಸವರಾಜ ಹುಗ್ಗಿ, ಎಸ್.ಎಸ್.ಹಿರೇಮಠ, ಕಿರಣ ಮಿರ್ಜಿಯವರು ಉಪಸ್ಥಿತರಿದ್ದರು.



ಹುದ್ದೆಗಳ ನೇಮಕಾತಿಗೆ ಜೂ.23ಕ್ಕೆ ಹೋರಾಟ

ಧಾರವಾಡ: ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 56 ಸಾವಿರ ಹುದ್ದೆಗಳ ಭರ್ತಿಗೆ ಅಧಿಸೂಚನೆಗೆ ಒತ್ತಾಯಿಸಿ ಜೂ.23ಕ್ಕೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಎಐಡಿವೈಒನ ಅಖಿಲ ಭಾರತ ಕಾರ್ಯದರ್ಶಿ ಅಮರಜಿತ್ ಕುಮಾರ್ ಹೇಳಿದರು.



ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಖಾಲಿ ಇರುವ 56,432 ಹುದ್ದೆಗಳ ಭರ್ತಿಗೆ ಅನುಮೋದನೆ ನೀಡಿ, ಆರು ತಿಂಗಳು ಗತಿಸಿದರೂ, ಕೆಲವೇ ಇಲಾಖೆ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗಿದೆ ಎಂದು ಆರೋಪ ಮಾಡಿದರು.

ನಿರುದ್ಯೋಗ ಸಮಸ್ಯೆ, ನೇಮಕಾತಿ ಅಕ್ರಮ, ಪ್ರಶ್ನೆ ಪತ್ರಿಕೆ ಸೋರಿಕೆ, ದುಬಾರಿ ಶುಲ್ಕ ಹಾಗೂ ರಾಜ್ಯ ಸರ್ಕಾರದ ದಮನಕಾರಿ ನೀತಿಗಳಿಗೆ ರೋಸಿ ಹೋಗಿದ್ದಾರೆ. ಯುವಜನಾಂಗ ಆಂದೋಲನ ಕೈಗೊಳ್ಳುವ ಮುನ್ನವೇ ಎಚ್ಚೆತ್ತುಕೊಳ್ಳಲು ಸಲಹೆ ನೀಡಿದರು.

79 ಸಾವಿರ ಶಿಕ್ಷಕರ ಹುದ್ದೆಗಳ ಸೇರಿ ರಾಜ್ಯದಲ್ಲಿ 2.84 ಲಕ್ಷ ಹುದ್ದೆಗಳು ಖಾಲಿ ಇವೆ. ಹಲವು ವರ್ಷಗಳಿಂದ ನೇಮಕಾತಿ ನಡೆದಿಲ್ಲ. ಇದರಿಂದಾ ಯುವಜನತೆ ತೀವ್ರ ಆಕ್ರೋಶಗೊಂಡಿದೆ. ಸಹನೆ ಕಟ್ಟೆ ಒಡೆಯುವ ಮುನ್ನವೇ ಭರ್ತಿ ಮಾಡಲು ಆಗ್ರಹಿಸಿದರು.

ಜೂ.23ರೊಳಗೆ ರಾಜ್ಯ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಬೇಕು. ಇಲ್ಲವಾದಲ್ಲಿ ಎಐಡಿವೈಒ ಸಂಘಟನೆ ವತಯಿಂದ ರಾಜ್ಯಾದ್ಯಂತ ಉಗ್ರ ಹೋರಾಟ ರೂಪಿಸುವುದಾಗಿಯೂ ಅಮರಜಿತ್ ಎಚ್ಚರಿಕೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಸಿದ್ದಲಿಂಗ ಬಾಗೇವಾಡಿ, ಭವಾನಿಶಂಕರ್ ಗೌಡ ಇದ್ದರು.

3 ವರ್ಷಗಳಲ್ಲಿ 59.41 ಲಕ್ಷ ಮೌಲ್ಯದ ಗಾಂಜಾ ವಶಕ್ಕೆ ಪಡೆದ ಪೊಲೀಸರು

ಮಾದಕ ಜಾಲಕ್ಕೆ ಬಿಗಿ ಬಲೆ!

ರಾಚಪ್ಪಾ ಜಂಬಗಿ

ಕಲಬುರಗಿ: ಮಾದಕ ವಸ್ತುಗಳ ಅಕ್ರಮ ಸಾಗಾಟ ಮತ್ತು ಮಾರಾಟದ ವಿರುದ್ಧ ಕಲಬುರಗಿ ಜಿಲ್ಲೆಯ ಖಾಕಿ ಪಡೆಯೂ ಕಳೆದ ಮೂರು ವರ್ಷಗಳಿಂದ ನಿರಂತರ ಕಾರ್ಯಾಚರಣೆ ನಡೆಸಿ ಗಾಂಜಾ ಅಕ್ರಮದ ಜಾಲದ ವಿರುದ್ಧ ಸಮರ ಸಾರಿದ್ದು, ಕಳೆದ 2024ರಿಂದ 2026ರ ಜೂನ್ ತಿಂಗಳವರೆಗೆ 62 ಪ್ರಕರಣಗಳನ್ನು ಭೇದಿಸಿ 68 ಆರೋಪಿಗಳನ್ನು ಬಂಧಿಸುವ ಮೂಲಕ ಮಾದಕ ವಸ್ತು ಮಾರಾಟಗಾರರ ವಿರುದ್ಧ ಬಿಗಿಯಾದ ಬಲೆ ಬೀಸಿದೆ.

ಜಿಲ್ಲಾ ಪೊಲೀಸ್ ಇಲಾಖೆಯೂ ನೀಡಿದ ಅಂಕಿ ಅಂಶಗಳಂತೆ 2024ರಲ್ಲಿ 23 ಪ್ರಕರಣಗಳು ದಾಖಲಾಗಿದ್ದು, 22 ಆರೋಪಿಗಳನ್ನು ಬಂಧಿಸಿ ಈ ವೇಳೆ 14.406 ಕೆಜಿ ಗಾಂಜಾ ವಶಪಡಿಸಿಕೊಳ್ಳಲಾಗಿದ್ದು, ಅದರ ಅಂದಾಜು ಮೌಲ್ಯ 3.70 ಲಕ್ಷವಾಗಿದೆ. 2025ರಲ್ಲಿ ಗಾಂಜಾ ಜಾಲದ ವಿರುದ್ಧದ ಕಾರ್ಯಾಚರಣೆ ಮತ್ತಷ್ಟು ತೀವ್ರಗೊಂಡಿದ್ದು,

23 ಪ್ರಕರಣಗಳಲ್ಲಿ 28 ಆರೋಪಿಗಳನ್ನು ಬಂಧಿಸಲಾಗಿದೆ.

ಈ ಅವಧಿಯಲ್ಲಿ 55.969 ಕೆಜಿ ಗಾಂಜಾ ವಶಪಡಿಸಿಕೊಳ್ಳಲಾಗಿದ್ದು, ಅದರ ಮೌಲ್ಯ 53.47 ಲಕ್ಷ ಎಂದು ಅಂದಾಜಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲೇ 2025ರಲ್ಲಿ ಅತಿ ಹೆಚ್ಚು ಪ್ರಮಾಣದ ಗಾಂಜಾ ವಶಕ್ಕೆ ಪಡೆಯಲಾಗಿದೆ.

2026ರ ಜೂನ್ ತಿಂಗಳವರೆಗೆ 16 ಪ್ರಕರಣಗಳು ದಾಖಲಾಗಿದ್ದು, 18 ಆರೋಪಿಗಳನ್ನು ಬಂಧಿಸಲಾಗಿದೆ. ಈ ವೇಳೆ 2.23 ಲಕ್ಷ ಮೌಲ್ಯದ 3.780 ಕೆಜಿ ಗಾಂಜಾ ವಶಪಡಿಸಿಕೊಳ್ಳಲಾಗಿದೆ. ಒಟ್ಟಾರೆ ಮೂರು ವರ್ಷಗಳಲ್ಲಿ 62 ಪ್ರಕರಣಗಳನ್ನು ದಾಖಲಿಸಿರುವ ಪೊಲೀಸರು, 68 ಆರೋಪಿಗಳನ್ನು ಬಂಧಿಸಿ 74.155 ಕೆಜಿ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ವಶಪಡಿಸಿಕೊಂಡ ಮಾದಕ ವಸ್ತುಗಳ ಒಟ್ಟು ಮೌಲ್ಯ 59,41,591 ಆಗಿದೆ.

ಮಾದಕ ವಸ್ತುಗಳ ವಿರುದ್ಧದ ಕಾರ್ಯಾಚರಣೆಯನ್ನು ಇನ್ನಷ್ಟು ತೀವ್ರಗೊಳಿಸಿರುವ ಜಿಲ್ಲಾ ಪೊಲೀಸರು, ಯುವಜನರನ್ನು ಮಾದಕ ವ್ಯಸನದಿಂದ ರಕ್ಷಿಸುವ ನಿಟ್ಟಿನಲ್ಲಿ ಜಾಗೃತಿ ಕಾರ್ಯಕ್ರಮಗಳ ಜೊತೆಗೆ ನಿರಂತರ ದಾಳಿ ಮತ್ತು ತಪಾಸಣೆಗಳನ್ನು ಮುಂದುವರಿಸಿದ್ದಾರೆ. ಶಾಲೆ, ಕಾಲೇಜು ಹಾಗೂ ಸಾರ್ವಜನಿಕ ಪ್ರದೇಶಗಳಲ್ಲಿ ವಿಶೇಷ ನಿಗಾ ವಹಿಸಲಾಗುತ್ತಿದ್ದು, ಗಾಂಜಾ ಮತ್ತು ಇತರ ಮಾದಕ ವಸ್ತುಗಳ ಜಾಲವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮೂರು ವರ್ಷದ ಅಂಕಿ ಅಂಶ			
2024: 23 ಪ್ರಕರಣ	22 ಬಂಧನ	14.406 ಕೆಜಿ ಗಾಂಜಾ	3,70,631 ಮೌಲ್ಯ
2025: 23 ಪ್ರಕರಣ	28 ಬಂಧನ	55.969 ಕೆಜಿ ಗಾಂಜಾ	53,47,960 ಮೌಲ್ಯ
2026 (ಜೂನ್ ವರೆಗೆ): 16 ಪ್ರಕರಣ	18 ಬಂಧನ	3.780 ಕೆಜಿ ಗಾಂಜಾ	2,23,000 ಮೌಲ್ಯ



- 62 ಪ್ರಕರಣ ಭೇದಿಸಿದ ಪೊಲೀಸರು
- 68 ಆರೋಪಿಗಳು ಅಂದರ್

2025ರಲ್ಲಿ ಅತಿ ಹೆಚ್ಚಿನ ಜಾಲ ಪತ್ತೆ!

ಮೂರು ವರ್ಷಗಳ ಪೈಕಿ 2025 ಗಾಂಜಾ ಜಾಲದ ವಿರುದ್ಧದ ಕಾರ್ಯಾಚರಣೆಯಲ್ಲಿ ಮಹತ್ವದ ವರ್ಷವಾಗಿದೆ. ವರ್ಷವೊಂದರಲ್ಲೇ 55.969 ಕೆಜಿ ಗಾಂಜಾ ವಶಪಡಿಸಿಕೊಳ್ಳಲಾಗಿದ್ದು, ಮೌಲ್ಯ 53.47 ಲಕ್ಷದಷ್ಟಾಗಿದೆ. ಒಟ್ಟು ವಶಪಡಿಸಿಕೊಂಡ ಗಾಂಜಾದ ಶೇ.75ಕ್ಕಿಂತ ಹೆಚ್ಚು ಪ್ರಮಾಣ 2025ರಲ್ಲಿಯೇ ಪತ್ತೆಯಾಗಿದ್ದು ಗಮನಾರ್ಹವಾಗಿದೆ.

> ಮಾದಕ ವಸ್ತುಗಳ ಮಾರಾಟ ಮತ್ತು ಸಾಗಾಟದ ವಿರುದ್ಧ ಜಿಲ್ಲಾ ಪೊಲೀಸ್ ಇಲಾಖೆ ಶೂನ್ಯ ಸಹಿಷ್ಣುತೆ ನೀತಿ ಅನುಸರಿಸುತ್ತಿದೆ. ಸಾರ್ವಜನಿಕರು ಕೂಡ ಅನುಮಾನಾಸ್ಪದ ಚಟುವಟಿಕೆಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವ ಮೂಲಕ ಸಹಕರಿಸಬೇಕು. ಮಾದಕ ವಸ್ತು ಮುಕ್ತ ಸಮಾಜ ನಿರ್ಮಾಣಕ್ಕೆ ಪೊಲೀಸ್ ಇಲಾಖೆ ಬದ್ಧವಾಗಿದೆ.
>
> ■ ಅಡ್ಡೂರು ಶ್ರೀನಿವಾಸುಲು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಕಲಬುರಗಿ

ದಿಗಂತ ವಿಶೇಷ

ನಗರ ಪ್ರವೇಶಿಸುವ ನಾಲ್ಕು ದಿಕ್ಕಿನಲ್ಲಿ ಬೆಳಕಿನ ವ್ಯವಸ್ಥೆ ಇಲ್ಲ

ವಾಣಿಜ್ಯನಗರಿಗೆ ಕಗ್ಗತ್ತಲಿನ ಸ್ವಾಗತ !

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ರಾಜ್ಯದ ಎರಡನೇ ದೊಡ್ಡ ಮಹಾನಗರ ಎಂಬ ಹೆಗ್ಗಳಿಕೆ ಪಾತ್ರವಾಗಿರುವ ಹುಬ್ಬಳ್ಳಿಗೆ ರಾತ್ರಿ ಹೊತ್ತು ಹೊರ ಜಿಲ್ಲೆಗಳು ಹಾಗೂ ನೆರೆ ರಾಜ್ಯಗಳಿಂದ ಪ್ರವೇಶಿಸುವ ವಾಹನಗಳಿಗೆ ಕಗ್ಗತ್ತಲಿನ ಸ್ವಾಗತ ಸಿಗುತ್ತದೆ. ವಾಹನ ಸವಾರರಿಗೆ ನಗರ ಪ್ರವೇಶಿಸಿದ್ದೇವೋ ಅಥವಾ ಭಯಂಕರ ಅರಣ್ಯದ ಹಾದಿ ಹಿಡಿದಿದ್ದೇವೋ ಎಂಬ ಡವ ಡವ ಶುರುವಾಗುತ್ತದೆ.

ವಿಜಯಪುರ ರಸ್ತೆಯಿಂದ ನಗರಕ್ಕೆ ಪ್ರವೇಶಿಸುವ ರಸ್ತೆ, ಹಾವೇರಿಯಿಂದ ಹುಬ್ಬಳ್ಳಿಗೆ ಬರುವ ಗಬ್ಬೂರ ವೃತ್ತ, ಕಾರವಾರದಿಂದ ನಗರಕ್ಕೆ ಬರುವ ಕಾರವಾರ ರಸ್ತೆ ಹಾಗೂ ಗದಗನಿಂದ ಹುಬ್ಬಳ್ಳಿಗೆ ಬರುವ ಗದಗ ರಸ್ತೆಗಳು ಬೀದಿ ದೀಪಗಳನ್ನೇ ಕಂಡಿಲ್ಲ.

ಈ ನಾಲ್ಕು ಪ್ರವೇಶ ರಸ್ತೆಗಳಲ್ಲಿ ಸೂರ್ಯ ಮುಳುಗುತ್ತಿದ್ದಂತೆ ಕಗ್ಗತ್ತಲು ಕವಿಯುತ್ತದೆ. ಪ್ರತಿದಿನ ಸಾವಿರಾರು ಸರಕು ಸಾಗಣೆ ವಾಹನಗಳು, ಬಸ್‌ಗಳು, ಪ್ರಯಾಣಿಕ ವಾಹನಗಳು ಈ ರಸ್ತೆಯಲ್ಲಿ ಸಾಗುತ್ತಿದ್ದು ಸವಾರರು ಜೀವ ಕೈಲಿಡಿದು ಸಂಚರಿಸಬೇಕಾದ ಪರಿಸ್ಥಿತಿ ಇದೆ. ಹೆದ್ದಾರಿಯಲ್ಲಿ ಎದರು ಬದುರಾಗಿ ವೇಗವಾಗಿ ಬರುವ ವಾಹನಗಳು ಹೊರಸೂಸುವ ಪ್ರಖರ ಬೆಳಕಿನಿಂದ ಚಾಲಕರು ಗೊಂದಲಕ್ಕೆ ಸಿಲುಕುತ್ತಿದ್ದು ವಾಹನಗಳು ಡಿವೈಡರ್‌ಗಳಿಗೆ ಡಿಕ್ಕಿ ಹೊಡೆಯುತ್ತಿರುವ, ಚಾಲಕರ ನಿಯಂತ್ರಣ ತಪ್ಪಿ ಅಪಘಾತಕ್ಕೀಡಾಗುತ್ತಿರುವ ಘಟನೆಗಳು ನಡೆಯುತ್ತಿವೆ.

ಗಬ್ಬೂರ ವೃತ್ತ ಸಂಪೂರ್ಣ ಕತ್ತಲು ಆವರಿಸಿದ್ದು, ನಗರಕ್ಕೆ ಪ್ರವೇಶಿಸುವ ವಾಹನಗಳು ಎಲ್ಲಿಗೆ ಹೋಗಬೇಕು ಎಂಬುವುದು ಗೊತ್ತಾಗುವುದಿಲ್ಲ. ನಗರದಿಂದ ಬೇರೆಡೆ ಹೋಗುವ ಪ್ರಯಾಣಿಕರಿಗೆ ಬಸ್‌ಗಾಗಿ ಕತ್ತಲಲ್ಲಿ ನಿಲ್ಲುವ ಕೆಟ್ಟ ಸ್ಥಿತಿ ಇದೆ. ಗದಗ ರಸ್ತೆ ಹಾಗೂ ಕಾರವಾರ ರಸ್ತೆಯಲ್ಲಿಯೂ ಇದೆ ಪರಿಸ್ಥಿತಿ ಇದೆ. ಗೋಕುಲ ರಸ್ತೆಯಲ್ಲಿ ಮಾತ್ರ ವಿದ್ಯುತ್ ದೀಪಗಳು ನಿತ್ಯ ಬೆಳಗುತ್ತವೆ.

ಜವಾಬ್ದಾರಿ ಮರೆತ ಪಾಲಿಕೆ: ರಸ್ತೆ, ಒಳ ಚರಂಡಿ, ಕುಡಿಯುವ ನೀರು, ಬೀದಿ ದೀಪ, ಶುಚಿತ್ವ ಕಾಪಾಡುವುದು ಆಯಾ ಸ್ಥಳೀಯ ಸಂಸ್ಥೆಗಳ ಬಹುಮುಖ್ಯವಾದ ಜವಾಬ್ದಾರಿ. ಆದರೆ, ಹುಬ್ಬಳ್ಳಿಯಲ್ಲಿ ಮಹಾನಗರ ಪಾಲಿಕೆ ಹೊಣೆಗಾರಿಕೆ ಮರೆತ ಪರಿಣಾಮ ಸಾರ್ವಜನಿಕರು ಸಮಸ್ಯೆ ಅನುಭವಿಸುವಂತಾಗಿದೆ. ಬೈಕ್ ಸವಾರರ ಪಾಡಂತೂ ಹೇಳತೀರದು.



ಜನಪ್ರತಿನಿಧಿಗಳಿಗೆ ಮಾತ್ರ ಬೆಳಕು?

ವಿಜಯಪುರ ರಸ್ತೆಯಲ್ಲಿರುವ (ಕುಸುಗಲ್ ರಸ್ತೆ) ರೈಲ್ವೆ ಮೇಲ್ಸೇತುವೆ ಮೇಲೆ ವಿದ್ಯುತ್ ದೀಪಗಳ ಅಳವಡಿಸಲಾಗಿದ್ದು, ಜನಪ್ರತಿನಿಧಿಗಳಿಗೆ ಸಂಬಂಧಿಸಿದ ಕಾರ್ಯಕ್ರಮ ಹಾಗೂ ಅಲೆದಾಟವಿದ್ದಾಗ ಮಾತ್ರ ಬೆಳಗುತ್ತವೆ. ಬಾಕಿ ಸಮಯದಲ್ಲಿ ವಾಹನ ಸವಾರರು ಹಾಗೂ ಸಾರ್ವಜನಿಕರು ಕತ್ತಲಲ್ಲಿ ಅಲೆದಾಡುವ ಪರಿಸ್ಥಿತಿ ಇದೆ.

ಹುಬ್ಬಳ್ಳಿ ನಗರಕ್ಕೆ ಇಲ್ಲ ಪ್ರವೇಶ ದ್ವಾರ

ಹುಬ್ಬಳ್ಳಿಗೆ ವಾಣಿಜ್ಯನಗರಿ ಎಂದು ಕರೆಯಲಾಗುತ್ತದೆ. ಆದರೆ, ಗಬ್ಬೂರ ವೃತ್ತ ಹೊರತು ಪಡಿಸಿದರೆ ಉಳಿದ ಪ್ರವೇಶಗಳಲ್ಲಿ ಎಲ್ಲಿಯೂ ಪ್ರವೇಶ ದ್ವಾರಗಳಿಲ್ಲ. ಶಾಸಕ ಮಹೇಶ ಟೆಂಗಿನಕಾಯಿ ಪ್ರವೇಶ ದ್ವಾರಗಳ ಅಳವಡಿಸಲು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಸೂಚಿಸಿದ್ದರು. ಆದರೆ ಎರಡು ವರ್ಷಗಳು ಕಳೆದರು ಇನ್ನೂ ಈ ಕಾರ್ಯವಾಗಿಲ್ಲ.

> ಕುಸುಗಲ್ ರಸ್ತೆಯಲ್ಲಿ ಪ್ರವೇಶ ದ್ವಾರ ನಿರ್ಮಿಸಲು 10 ಲಕ್ಷ ಮೀಸಲಿಡಲಾಗಿದೆ. ಹಂತ ಹಂತವಾಗಿ ಉಳಿದ ಕಡೆ ಪ್ರವೇಶ ದ್ವಾರ ನಿರ್ಮಿಸಲಾಗುವುದು. ವಿದ್ಯುತ್ ದೀಪಗಳ ಬೆಳಗಿಸಲು ಅಧಿಕಾರಿಗಳಿಗೆ ಸೂಚಿಸುತ್ತೇನೆ.
>
> ■ ಮಹೇಶ ಟೆಂಗಿನಕಾಯಿ ಶಾಸಕ

> ವಿದ್ಯುತ್ ದೀಪಗಳ ಅಳವಡಿಸಲಾಗುವುದು. ನಗರದ ಪ್ರವೇಶದ್ವಾರ ಅಳವಡಿಸಲು ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದು.
>
> ■ ಡಾ. ರುದ್ರೇಶ ಘಾಳಿ, ಆಯುಕ್ತ ಮಹಾನಗರ ಪಾಲಿಕೆ

ವಿದ್ಯುತ್ ದೀಪ ಅಳವಡಿಸಿ

ನಗರಕ್ಕೆ ಪ್ರವೇಶಿಸುವ ಯಾವ ರಸ್ತೆಯಲ್ಲಿ ವಿದ್ಯುತ್ ದೀಪಗಳಿಲ್ಲ. ಪ್ರವೇಶದ ದ್ವಾರಗಳಿಲ್ಲ. ಏಳೆಂಟು ಜಿಲ್ಲೆಗಳಿಗೆ ಸಂಜೀವಿನಿ ಎಂದು ಕರೆಯಲ್ಪಡುವ ಕೆಎಂಸಿಆರ್‌ಐ ಆಸ್ಪತ್ರೆ ಇದ್ದು, ರಾತ್ರಿ ಬೇರೆಡೆಯಿಂದ ನಗರಕ್ಕೆ ಬರುವ ಜನರು ಪರದಾಡುವಂತಾಗಿದೆ. ಅದರಲ್ಲಿ ವಾಹನ ಸವಾರರ ಪರಿಸ್ಥಿತಿ ಹೇಳತೀರದು. ಜನಪ್ರತಿನಿಧಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳು ಇತ್ತ ಗಮನ ಹರಿಸಿ ಮೂಲ ಸೌಕರ್ಯ ಒದಗಿಸಬೇಕು ಎಂದು ಕರ್ನಾಟಕ ದಲಿತ ವಿಮೋಚನಾ ಸಮಿತಿ ನಗರ ಅಧ್ಯಕ್ಷ ಶ್ರೀಧರ ಕಂದಗಲ್ಲ ಆಗ್ರಹಿಸಿದ್ದಾರೆ.

ಕಿರುಸುದ್ದಿ

ಪ್ರಕರಣ ದಾಖಲಾಗಿದ್ದಕ್ಕೆ ಕೊಲೆಗೆ ಯತ್ನ

ಹುಬ್ಬಳ್ಳಿ: ವ್ಯಕ್ತಿಯೋರ್ವನ ವಿರುದ್ಧ ಪ್ರಕರಣ ದಾಖಲಾಗಲು ಕಾರಣರಾಗಿದ್ದಾನೆ ಎಂದು ಗುಡ್‌ಶೆಡ್ ರೋಡ್ ನಿವಾಸಿ ರಿಜ್ವಾನ್ ಸವಣೂರ ಎಂಬುವರ ಮೇಲೆ ನಾಲ್ವರು ಹಲ್ಲೆ ನಡೆಸಿ ಕೊಲೆ ಮಾಡಲು ಯತ್ನಿಸಿದ ಘಟನೆ ಭಾರತಿ ನಗರದ ಬರ್ನಾಬಸ್ ಹಾಲ್ ಹತ್ತಿರ ನಡೆದಿದೆ. ರಿಜ್ವಾನ ಅವರ ಸಹೋದರಿಗೆ ಸಂಬಂಧಿಸಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ಒಂದು ದಾಖಲಾಗಿದೆ. ನನ್ನ ವಿರುದ್ಧ ದೂರು ದಾಖಲಾಗಲು ರಿಜ್ವಾನ್ ಕಾರಣವೆಂದು ಟಿಪ್ಪುಸುಲ್ತಾನ ಬೇಪಾರಿ ಸೇರಿ ನಾಲ್ವರು ಕಟ್ಟಿಗೆಯಿಂದ ತಲೆಗೆ ಹೊಡೆದು ಕೊಲೆ ಮಾಡಲು ಯತ್ನಿಸಿದ್ದಾರೆ. ಈ ಕುರಿತು ಬೆಂಡಿಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪತ್ನಿ ಕಿರುಕುಳಕ್ಕೆ ಪತಿ ಆತ್ಮಹತ್ಯೆ

ಹುಬ್ಬಳ್ಳಿ: ಪತ್ನಿ ಹಾಗೂ ಮಗಳ ಕಿರುಕುಳಕ್ಕೆ ಮನನೊಂದ ಪತಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗೋಪನಕೊಪ್ಪದ ಮುಖ್ಯ ರಸ್ತೆಯಲ್ಲಿರುವ ಮೃತನ ಮನೆಯಲ್ಲಿ ನಡೆದಿದೆ. ಸಂತೋಷ ಹಳ್ಳೂರ(37) ಮೃತ ಪಟ್ಟ ವ್ಯಕ್ತಿ. ಲಲಿತಾ ಹಳ್ಳೂರ ಹಾಗೂ ನಕ್ಷತ್ರಾ ಎಂಬುವರ ವಿರುದ್ಧ ದೂರು ದಾಖಲಾಗಿದೆ. ಮೃತ ಸಂತೋಷ ಅವರು ಲಲಿತಾಳನ್ನು ಕಳೆದು 18 ವರ್ಷದ ಹಿಂದೆ ಮದುವೆಯಾಗಿದ್ದ. ಕಳೆದ ನಾಲ್ಕು ವರ್ಷದಿಂದ ಇಬ್ಬರ ನಡುವೆ ಆಗಾಗ ಜಗಳ ನಡೆಯುತ್ತಿತ್ತು. ಲಲಿತಾ ಸಾಲ ಮಾಡಿ ಅದನ್ನು ತಿರಿಸಲು ಒತ್ತಾಯ ಮಾಡಿದ್ದಳು. ಇತ್ತೀಚೆಗೆ ಇದೆ ವಿಚಾರಕ್ಕೆ ಜಗಳ ಮಾಡಿ ತನ್ನ ತವರ ಮನೆಗೆ ಹೋಗಿದ್ದಳು. ಇದಕ್ಕೆ ಮನನೊಂದು ಸಂತೋಷ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸೇತುವೆಗೆ ಡಿಕ್ಕಿ: ಸವಾರ ಸಾವು

ಕುರುಗೋಡು: ತಾಲೂಕು ಸೋಮಲಾಪುರ ಗ್ರಾಮದ ಕಂಪ್ಲಿ ಕುರುಗೋಡು ರಸ್ತೆ ಮಾರ್ಗದ ಕಾಲುವೆ ಸೇತುವೆಗೆ ನಿಯಂತ್ರಣ ತಪ್ಪಿ ಬೈಕ್ ಡಿಕ್ಕಿ ಹೊಡೆದಿದ್ದು, ಸವಾರ ಮೃತಪಟ್ಟಿದ್ದಾನೆ. ಸೋಮಲಾಪುರ ಗ್ರಾಮದ ಎ.ಮಾರೇಶ (41) ಮೃತಪಟ್ಟ ವ್ಯಕ್ತಿ. ಕುರುಗೋಡು ಕಡೆಯಿಂದ ಗ್ರಾಮಕ್ಕೆ ತೆರಳುವ ಸಂದರ್ಭ ಬೈಕ್ ಅತಿ ವೇಗವಾಗಿ ಚಲಾಯಿಸಿಕೊಂಡು ಹೋಗುವಾಗ ನಿಯಂತ್ರಣ ಕಳೆದುಕೊಂಡು ಬೈಕ್ ಕಾಲುವೆ ತಡೆಗೋಡೆಗೆ ಡಿಕ್ಕಿ ಹೊಡೆದು ಸವಾರ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಕುರಿತು ಕುರುಗೋಡು ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪಿಎಸ್‌ಐ ಸುಪ್ರೀತ್ ವಿರುಪಾಕ್ಷಪ್ಪ ತಿಳಿಸಿದ್ದಾರೆ.

ಮೊಬೈಲ್ ಕೊಡದ ಹಿನ್ನೆಲೆ ಯುವಕನ ಕೊಲೆ

ಮಹಿಳೆಗೆ 7 ವರ್ಷ ಜೈಲು ಶಿಕ್ಷೆ ಪ್ರಕಟ

ಬೆಳಗಾವಿ : ಮದ್ಯದ ಅಮಲಿನಲ್ಲಿ ಮೊಬೈಲ್ ನೀಡುವಂತೆ ಕೇಳಿದ ವೇಳೆ ನಡೆದ ವಾಗ್ವಾದದ ಹಿನ್ನೆಲೆಯಲ್ಲಿ ಯುವಕನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ ಪ್ರಕರಣದಲ್ಲಿ ಮಹಿಳೆಯೊಬ್ಬರಿಗೆ 7 ವರ್ಷಗಳ ಕಾರಾಗೃಹ ಶಿಕ್ಷೆ ಹಾಗೂ 25 ಸಾವಿರ ದಂಡ ವಿಧಿಸಿ ಬೆಳಗಾವಿ ಜಿಲ್ಲಾ ಸತ್ರ ನ್ಯಾಯಾಲಯ ತೀರ್ಪು ನೀಡಿದೆ ಎಂದು ಸರ್ಕಾರಿ ಅಭಿಯೋಜಕ ನಾರಾಯಣ ಅರಿ ತಿಳಿಸಿದ್ದಾರೆ.

ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 2023ರ ಏಪ್ರಿಲ್ 30ರಂದು ರಾತ್ರಿ ಕೀರ್ತಿ ಹೋಟೆಲ್ ಸಮೀಪದ ಡೋರಗಲ್ಲಿ ಕ್ರಾಸ್ ಬಳಿ ಈ ಘಟನೆ ನಡೆದಿತ್ತು. ಫಿರ್ಯಾದಿದಾರರು ಹಾಗೂ ನಾಗರಾಜ ಭೀಮಶಿ ರಾಗಿಪಾಟೀಲ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ, ಮದ್ಯದ ಅಮಲಿನಲ್ಲಿದ್ದ ಜಯಶ್ರೀ ಪವನ ಪವಾರ ಮೊಬೈಲ್ ನೀಡುವಂತೆ ಕೇಳಿದ್ದಳು.

ಈ ವೇಳೆ ಮೊಬೈಲ್ ಕೇಳಿದ ಕಾರಣವನ್ನು ಪ್ರಶ್ನಿಸಿದ್ದರಿಂದ ಇಬ್ಬರ ನಡುವೆ ವಾಗ್ವಾದ ನಡೆದಿದ್ದು, ಕೋಪಗೊಂಡ ಜಯಶ್ರೀ ತನ್ನ ಬಳಿಯಿದ್ದ ಚಾಕುವಿನಿಂದ ನಾಗರಾಜನ ಎದೆಗೆ ಇರಿದಿದ್ದಳು. ಗಂಭೀರವಾಗಿ ಗಾಯಗೊಂಡ ನಾಗರಾಜ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದನು. ಘಟನಾ ಸ್ಥಳಕ್ಕೆ ಮಾರ್ಕೆಟ್ ಪೊಲೀಸ್ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಅಂದಿನ ಪೊಲೀಸ್ ಇನ್ಸ್ಪೆಕ್ಟರ್ ಪಾಲ್ ಪ್ರಿಯಕುಮಾರ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ಪೂರ್ಣಗೊಂಡ ಬಳಿಕ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮಂಜುನಾಥ ನಾಯಕ ಅವರು ಆರೋಪಿ ಜಯಶ್ರೀ ಪವನ ಪವಾರಗೆ 7 ವರ್ಷಗಳ ಕಾರಾಗೃಹ ಶಿಕ್ಷೆ ಹಾಗೂ 25 ಸಾವಿರ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಜೊತೆಗೆ ಮೃತ ನಾಗರಾಜನ ವಾರಸುದಾರರಿಗೆ ಪರಿಹಾರ ಒದಗಿಸುವಂತೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿದೆ ಎಂದು ನಾರಾಯಣ ಅರಿ ತಿಳಿಸಿದ್ದಾರೆ.

ಮರು ಪರಿಶೀಲನೆಗೆ ಮಧ್ಯಸ್ತಿಕೆ ವಹಿಸಿ

ಹಗರಿಬೊಮ್ಮನಹಳ್ಳಿ: ಮೇ 29ರಂದು ಸರ್ವೋಚ್ಚ ನ್ಯಾಯಾಲಯದ ತೀರ್ಪು ಲಕ್ಷಾಂತರ ಶಿಕ್ಷಕರ ಕುಟುಂಬ ಬೀದಿ ಪಾಲು ಆಗುವ ಸಾಧ್ಯತೆ ಇದೆ ಆದ್ದರಿಂದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಮರುಪರಿಶೀಲಿಸುವಂತೆ ಎಬಿಆರ್‌ಎಸ್‌ಎಂ ಮಧ್ಯಸ್ತಿಕೆ ವಹಿಸಲಿ ಎಂದು ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸಹ ಸಂಘಟನಾ ಕಾರ್ಯದರ್ಶಿ ರೊಟ್ಟಿ ಕೊಟ್ರಪ್ಪ ತಿಳಿಸಿದ್ದಾರೆ. ಬುಧವಾರ ಪತ್ರಿಕೆಯೊಂದಿಗೆ ಮಾತನಾಡಿದ ಅವರು, 2010 ಆಗಸ್ಟ್ 23 ರಲ್ಲಿ ದೇಶದ ಎಲ್ಲಾ ರಾಜ್ಯಗಳು ಚಾಲ್ತಿಯಲ್ಲಿರುವ ನಿಯಮಗಳಿಗೆ ಅನುಗುಣವಾಗಿ ಶಿಕ್ಷಕರಾಗಿ ನೇಮಕಾತಿ ಆದ ದೇಶದಾದ್ಯಂತ 17 ಲಕ್ಷ ಶಿಕ್ಷಕರಲ್ಲಿ ಮೇ 29 ರ ಟಿಇಟಿ ಉತ್ತೀರ್ಣರಾಗಲೇಬೇಕೆಂಬ ತೀರ್ಪಿನಿಂದ ಟಿ ಇ ಟಿ ಕಡ್ಡಾಯ ಶಿಕ್ಷಕರಲ್ಲಿ ಸೇವಾ ಭದ್ರತೆ ಭವಿಷ್ಯದ ಅಭದ್ರತೆ ಭಾವನೆ ನಿರ್ಮಾಣವಾಗಿದೆ. ಇಂತವರಿಗೆ ಕೇಂದ್ರ ಸರ್ಕಾರ ಮತ್ತು ಕೇಂದ್ರ ಶಿಕ್ಷಣ ಸಚಿವರು ಸೂಕ್ತ ನ್ಯಾಯ ಒದಗಿಸುವ ಕ್ರಮ ವಹಿಸಲಿ ಎಂದರು. ರಾಜ್ಯ ಉಪಾಧ್ಯಕ್ಷ ಎ.ಗುಂಡಾಚಾರ್, ರಮೇಶ್ ಜಿಲ್ಲಾ ಕಾರ್ಯದರ್ಶಿ, ಎಂ.ಮಲ್ಲಿಕಾರ್ಜುನ, ವಾಲಿ ವೀರೇಶ್, ಯತ್ನಳ್ಳಮಲ್ಲಯ್ಯ ಇತರರು ಇದ್ದರು.

ಟಿಇಟಿ ಕಡ್ಡಾಯ ಸರ್ವೋಚ್ಚ ನ್ಯಾಯಾಲಯದ ತೀರ್ಪು

53 ಅಂಗಡಿ ಮುಂಗಟ್ಟು ತೆರವು

ಹುಬ್ಬಳ್ಳಿ: ಹಳೇ ಹುಬ್ಬಳ್ಳಿಯಲ್ಲಿರುವ ಮಹಾನಗರ ಪಾಲಿಕೆ ನಿರ್ಮಾಣ ಹಂತದ ಆಸ್ಪತ್ರೆಯ ಸುತ್ತಮುತ್ತಲು ಅಕ್ರಮವಾಗಿ ನಿರ್ಮಿಸಿಕೊಂಡಿದ್ದ 53 ಅಂಗಡಿ ಮುಂಗಟ್ಟುಗಳನ್ನು ಪಾಲಿಕೆ ಅಧಿಕಾರಿಗಳು ಪೊಲೀಸ್ ಭದ್ರತೆಯಲ್ಲಿ ತೆರವುಗೊಳಿಸಲಾಗಿದೆ. ಬುಧವಾರ ಪಾಲಿಕೆ ಆಯುಕ್ತ ಡಾ. ರುದ್ರೇಶ ಘಾಳಿ ಅವರ ನೇತೃತ್ವದಲ್ಲಿ ತೆರವು ಕಾರ್ಯಾಚರಣೆ ನಡೆಯಿತು. ಈ ವೇಳೆ ಅಧಿಕಾರಿಗಳು ಹಾಗೂ ವ್ಯಾಪಾರಸ್ಥರ ಮಧ್ಯೆ ಸ್ವಲ್ಪ ಹೊತ್ತು ವಾಗ್ವಾದವೂ ಸಹ ನಡೆಯಿತು. ಆಸ್ಪತ್ರೆ ಸುತ್ತಮುತ್ತ ಅಂಗಡಿಗಳ ನಿರ್ಮಿಸಿಕೊಂಡಿದ್ದರು. ಮುಂಜಾಗ್ರತ ಕ್ರಮವಾಗಿ ಪೊಲೀಸ್ ಬಂದೋಬಸ್ತ ನಿಯೋಜಿಸಲಾಗಿತ್ತು. ಅಂಗಡಿಗಳನ್ನು ತೆರವು ಮಾಡಿಕೊಳ್ಳಬೇಕು ಎಂದು ನೋಟಿಸ್ ನೀಡಲಾಗಿತ್ತು. ಆದರೆ, ವ್ಯಾಪಾರಸ್ಥರು ನ್ಯಾಯಾಲಯ ಮೊರೆ ಹೋಗಿದ್ದರು. ನ್ಯಾಯಾಲಯ ಪಾಲಿಕೆ ಪರ ತೀರ್ಪು ನೀಡಿದ್ದು, ಆದೇಶದಂತೆ ತೆರವು ಕಾರ್ಯಾಚರಣೆ ಮಾಡಲಾಗಿದೆ ಎಂದು ಹು-ಧಾ ಮಹಾನಗರ ಪಾಲಿಕೆ ಆಯುಕ್ತ ಡಾ. ರುದ್ರೇಶ ಘಾಳಿ ತಿಳಿಸಿದರು. ಹಳೇ ಹುಬ್ಬಳ್ಳಿ ಆಸ್ಪತ್ರೆ ಪುನರ್ ಅಭಿವೃದ್ಧಿ ಪಡಿಸಲಾಗುತ್ತಿದೆ. ಆಸ್ಪತ್ರೆಗೆ ಬರುವ ರೋಗಿಗಳಿಗೆ ಹಾಗೂ ವಾಹನಗಳಿಗೆ ಸಮಸ್ಯೆಯಾಗಿತ್ತು. ಈ ಹಿನ್ನೆಲೆ ತೆರವು ಕಾರ್ಯ ಮಾಡಲಾಗಿದೆ ಎಂದರು. ಈ ವೇಳೆ ಪಾಲಿಕೆ ಅಧಿಕಾರಿಗಳು, ಪೊಲೀಸರು ಇದ್ದರು.

ವಿಟಿಯು ಬ್ಲ್ಯೂ ಪಟ್ಟಿಗೆ ಎಐಎಸ್ ಜಿಐಟಿ 11 ವಿದ್ಯಾರ್ಥಿಗಳ ಆಯ್ಕೆ

ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ವತಿಯಿಂದ 2025–26ನೇ ಶೈಕ್ಷಣಿಕ ವರ್ಷದ ವಿವಿಧ ಕ್ರೀಡಾ ವಿಭಾಗಗಳಿಗೆ ಪ್ರಕಟಿಸಲಾದ ವಿಟಿಯು ಬ್ಲ್ಯೂ ಪಟ್ಟಿಯಲ್ಲಿ ಬೆಳಗಾವಿಯ ಎಐಎಸ್ ಗೋಗಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಐಎಸ್ ಜಿಐಟಿ) ಸಂಸ್ಥೆಯ 11 ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ.

ಫುಟ್ಬಾಲ್, ಹಾಕಿ, ಕುಸ್ತಿ, ಹ್ಯಾಂಡ್ಬಾಲ್ ಹಾಗೂ ವುಷು ಸೇರಿದಂತೆ ವಿವಿಧ ಕ್ರೀಡಾ ವಿಭಾಗಗಳಲ್ಲಿ ವಿದ್ಯಾರ್ಥಿಗಳು ಆಯ್ಕೆಯಾಗಿದ್ದು, ಇದು ಅವರ ಪ್ರತಿಭೆ, ಕಠಿಣ ಪರಿಶ್ರಮ ಹಾಗೂ ವಿಶ್ವವಿದ್ಯಾಲಯ ಮಟ್ಟದಲ್ಲಿ ತೋರಿದ ನಿರಂತರ ಸಾಧನೆಗೆ ಸಾಕ್ಷಿಯಾಗಿದೆ.

ಆಯ್ಕೆಯಾದವರಲ್ಲಿ ಶ್ರಾವಣಿ ವೈಂಗಂಕರ್, ಭೂಮಿ ನಾಟೇಕರ್ (ಮಹಿಳಾ ಫುಟ್ಬಾಲ್), ನಿವೇದಿತಾ ಇಂಗಲಗಿ (ಮಹಿಳಾ ಹಾಕಿ), ಭುವನೇಶ್ವರಿ ಜಾಧವ (ಮಹಿಳಾ ಕುಸ್ತಿ), ರಾಜು ಮಠ (ಪುರುಷ ಹಾಕಿ), ಪ್ರಜ್ವಲ್ ಹಿರೇಮಠ (ಪುರುಷ ಹ್ಯಾಂಡ್ಬಾಲ್), ವಿಷ್ಣು ವರ್ಮಾ (ಪುರುಷ ವುಷು), ಸುಧರ್ಶನ ಚೌಗುಲೆ, ಯಶ್ ಗವಾಳಿ, ಸಂಕೇತ್ ಪಾಟೀಲ ಹಾಗೂ ಬಸವರಾಜ ಬರೆಕರ್ (ಪುರುಷ ಫುಟ್ಬಾಲ್) ಸೇರಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ನಿರ್ವಹಣಾ ಮಂಡಳಿ, ಪ್ರಾಂಶುಪಾಲರು, ಅಧ್ಯಾಪಕರು ಹಾಗೂ ಸಿಬ್ಬಂದಿ ವರ್ಗ ಅಭಿನಂದನೆ ಸಲ್ಲಿಸಿದ್ದಾರೆ. ಮುಂದಿನ ಕ್ರೀಡಾ ಸ್ಪರ್ಧೆಗಳಲ್ಲಿಯೂ ಇದೇ ರೀತಿಯ ಸಾಧನೆ ಮುಂದುವರಿಯಲಿ ಎಂದು ಶುಭ ಹಾರೈಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಪ್ರಾಂಶುಪಾಲ ಡಾ. ವಿಜಯ ಅಥವಲೆ, ಆಡಳಿತ ವಿಭಾಗದ ಡೀನ್ ಪ್ರೊ. ದಿಗಂಬರ ಕುಲಕರ್ಣಿ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಜಾರ್ಜ್ ರೊಡ್ರಿಗ್ಸ್ ಅವರು ವಿದ್ಯಾರ್ಥಿಗಳ ಸಾಧನೆಯನ್ನು ಶ್ಲಾಘಿಸಿದರು. ವಿದ್ಯಾರ್ಥಿಗಳು ಸಂಸ್ಥೆಗೆ ಕೀರ್ತಿ ತರುವುದರ ಜೊತೆಗೆ ಮುಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು.



ಬ್ಯಾಂಕ್ - ಗ್ರಾಹಕರ ನಡುವೆ ವಿಶ್ವಾಸವೇ ಸೇತುವೆ

ಯಲ್ಲಾಪುರ: ಬ್ಯಾಂಕ್ ಹಾಗೂ ಗ್ರಾಹಕರ ನಡುವೆ ವಿಶ್ವಾಸವೇ ಸೇತುವೆಯಾಗಿದ್ದು, ಅದು ಗಟ್ಟಿಯಾಗಿದ್ದಷ್ಟು ಒಳ್ಳೆಯದು ಎಂದು ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ವಿದ್ಯಾಧೀಶ ತೀರ್ಥ ಶ್ರೀಪಾದ ವಡೇರ ಸ್ವಾಮೀಜಿ ನುಡಿದರು.

ಅವರು ಬುಧವಾರ ಸಂಜೆ ಯಲ್ಲಾಪುರದಲ್ಲಿ ದಿ ಶಿರಸಿ ಅರ್ಬನ್ ಸಹಕಾರಿ ಬ್ಯಾಂಕ್ ನೂತನವಾಗಿ ನಿರ್ಮಿಸಿದ ಬ್ಯಾಂಕಿನ ಸ್ವಂತ ಶಾಖಾ ಕಟ್ಟಡ ಉದ್ಘಾಟಿಸಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿ, ಯಾವುದೇ ವ್ಯಕ್ತಿ, ಬ್ಯಾಂಕ್ ಆಗಲಿ ಒಮ್ಮೆ ವಿಶ್ವಾಸ್ ಕಳೆದುಕೊಂಡರೆ ಮತ್ತೆ ಗಳಿಸಲು ಸಾಧ್ಯವಿಲ್ಲ. ಆದ್ದರಿಂದ ಯಾವುದೇ ಪರಿಸ್ಥಿತಿಯಲ್ಲಿಯೂ ಬ್ಯಾಂಕ್ ನಮ್ಮ ಜೊತೆ ಇರುತ್ತದೆ ಎಂಬ ವಿಶ್ವಾಸ ಗ್ರಾಹಕರಲ್ಲಿ ಇದ್ದಾಗ ಕಡಿಮೆ ಬಡ್ಡಿ ಇದ್ದರೂ ಠೇವಣಿ ಇಟ್ಟು ವ್ಯವಹಾರ ಮಾಡುತ್ತಾರೆ. ಎಲ್ಲ ಬ್ಯಾಂಕ್ ಗಳನ್ನು ನಿಯಂತ್ರಣ ಮಾಡುವ ರಿಜರ್ವ್ ಬ್ಯಾಂಕ್ ಶತಮಾನ ಕಂಡಿಲ್ಲ. ಆದರೆ ನಮ್ಮ ಹಿರಿಯರು 120 ವರ್ಷಗಳ ಹಿಂದೆಯೇ ಶಿರಸಿ ಅರ್ಬನ್ ಬ್ಯಾಂಕ್ ಸ್ಥಾಪಿಸಿರುವದು ಹೆಮ್ಮೆಯ ಸಂಗತಿ ಅದು ಈಗ 72 ಶಾಖೆಗಳನ್ನು ಹೊಂದಿದ್ದು ಇನ್ನು 3 ಶಾಖೆಗಳನ್ನು ತೆರೆಯುವ ಸಿದ್ಧತೆಯಲ್ಲಿರುವದು ಹಾಗೂ ಅಂತಾರರಾಜ್ಯಗಳಲ್ಲಿ ವಿಸ್ತರಿಸುವ ಉದ್ದೇಶ ಹೊಂದಿದ್ದು ಅದು ಈಡೇರಲಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಶಾಂತಾರಾಮ ಸಿದ್ದಿ , ಸಂಕಲ್ಪ ಸೇವಾ ಸಂಸ್ಥೆ ಅಧ್ಯಕ್ಷ ಪ್ರಮೋದ್ ಹೆಗಡೆ,ಉದ್ಯಮಿ ಬಾಲಕೃಷ್ಣ ನಾಯಕ,ಗ್ರಾಮದೇವಿ ದೇವಸ್ಥಾನದ ಟ್ರಸ್ಟಿ ರಾಜೇಂದ್ರ ಭಟ್,ವಿಶ್ವದರ್ಶನ ಸಂಸ್ಥೆ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ,ಹಾಗೂ ಬ್ಯಾಂಕಿನ ನಿರ್ದೇಶಕರು,ವಿವಿಧ ಬ್ಯಾಂಕಿನ ಅಧ್ಯಕ್ಷರು ಇತರರು ಇದ್ದರು. ಬ್ಯಾಂಕಿನ ಅಧ್ಯಕ್ಷ ಜಯದೇವ ಯು. ನಿಲೇಕಣಿ ಸ್ವಾಗತಿಸಿ ಪ್ರಸ್ತಾವಿಕ ಮಾತನಾಡಿದರು.ಕೆ ಎನ್ ಹೊಸಮನಿ ನಿರ್ವಹಿಸಿದರು.




ರೈತರ ಒಪ್ಪಿಗೆ ಇಲ್ಲದೆ ಟೌನ್‌ಶಿಪ್ ಬೇಡ: ಸಿ.ಟಿ.ರವಿ

ಕಲಬುರಗಿ: ಬಿಡದಿ ಟೌನ್‌ಶಿಪ್ ಯೋಜನೆಗೆ ಬಿಜೆಪಿ ವಿರೋಧವಿಲ್ಲ. ಆದರೆ, ರೈತರ ಒಪ್ಪಿಗೆ ಪಡೆದು ಯೋಜನೆ ಜಾರಿಗೊಳಿಸಬೇಕು ಎಂದು ಬಿಜೆಪಿ ಎಂಎಲ್ಸಿ ಹಾಗೂ ಮಾಜಿ ಸಚಿವ ಸಿ.ಟಿ.ರವಿ ಹೇಳಿದರು.

ಜಿಲ್ಲೆಯ ಜೇವರ್ಗಿ ಪಟ್ಟಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,

ರೈತರನ್ನು ಹೆದರಿಸಿ ಅಥವಾ ಒತ್ತಡ ಹೇರಿ ಭೂಮಿ ಪಡೆಯಬಾರದು. ಬಿಜೆಪಿ ರೈತರ ಪರ ನಿಂತಿದ್ದು, ರೈತರ ಸಮಾಧಿಗಳ ಮೇಲೆ ಟೌನ್‌ಶಿಪ್ ನಿರ್ಮಿಸುವ ಪ್ರಯತ್ನವನ್ನು ಒಪ್ಪುವುದಿಲ್ಲ, ಇದೇ ಹಿನ್ನೆಲೆಯಲ್ಲಿ ಬಿಜೆಪಿ ನಿಯೋಗ ರೈತರಿಗೆ ಬೆಂಬಲ ಸೂಚಿಸುತ್ತಿದೆ ಎಂದರು.

ಮಾಜಿ ಸಂಸದ ಡಾ.ಉಮೇಶ್ ಜಾಧವ್ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ,ಎಂಎಲ್ಸಿ ಶಶೀಲ್ ನಮೋಶಿ ಸೇರಿದಂತೆ ಇತರರು ಇದ್ದರು.



> ಸಾಮಾನ್ಯ ನಾಗರೀಕನಿಗೂ ರಕ್ಷಣೆ ಕೊಡುವ ಜವಾಬ್ದಾರಿ ಸರ್ಕಾರದ್ದು. ಯಾವುದೇ ಸಂಘಟನೆಗಳು ಕಡ್ಡಾಯವಾಗಿ ನೋಂದಣಿ ಆಗಿರಬೇಕೆಂದು ದೇಶದ ಸಂವಿಧಾನದ ಯಾವುದೇ ಕಲಂನಲ್ಲಿ ಬರೆದಿಲ್ಲ. ರಾಜ್ಯದ ಗೃಹ ಸಚಿವರ ಪ್ರಶ್ನೆಯೇ ಉಡಾಫೆಯ ಹಾಗೂ ವಿಷಯಾಂತರ ಪ್ರಶ್ನೆಯಾಗಿದೆ. ಸಂಘ ಏನು ಅಂತ ಅರಿಯಬೇಕಾದರೆ ಸಂಘದ ಶಾಖೆಗೆ ಬಂದಾಗ ಮಾತ್ರ ಅದರ ಅನುಭವ ಸಿಗಲಿದೆ.
>
> ■ ಸಿ.ಟಿ. ರವಿ, ಮಾಜಿ ಸಚಿವ, ಎಂಎಲ್ಸಿ

ಖರ್ಗೆಯವರಿಗೆ ಮುಕ್ತ ಆಹ್ವಾನ

ಆರ್‌ಎಸ್‌ಎಸ್ ಬಗ್ಗೆ ತಿಳಿದುಕೊಳ್ಳಲು ಖರ್ಗೆ ಅವರು ಶಾಖೆಗೆ ಬರಬಹುದು, ಅವರಿಗೆ ಮುಕ್ತ ಆಹ್ವಾನವಿದೆ. ಸಂಘಟನೆಯ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳಲು ಯಾರಾದರೂ ಕಚೇರಿಗೆ ಭೇಟಿ ನೀಡಬಹುದು. ಸಾಮಾನ್ಯ ಸ್ವಯಂಸೇವಕರಂತೆ ಬಂದರೆ ಪ್ರಿಯಾಂಕ್ ಖರ್ಗೆ ಅವರಿಗೂ ಸ್ವಾಗತವಿದೆ ಎಂದು ಸಿಟಿ ರವಿ ತಿಳಿಸಿದರು.


ಭದ್ರತಾ ಅಪಾಯದ ಹಿನ್ನೆಲೆ, ಕೇಂದ್ರದಿಂದ ಭದ್ರತೆ

ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗವತ್ ಅವರಿಗೆ ನೀಡಿರುವ ಜೆಡ್+ ಭದ್ರತೆ ಕುರಿತು ಪ್ರತಿಕ್ರಿಯಿಸಿದ ಅವರು, ಡಾ.ಮೋಹನ್ ಭಾಗವತ್ ಅವರು ಸ್ವತಃ ಭದ್ರತೆ ಕೇಳಿಕೊಂಡಿಲ್ಲ, ಅವರಿಗೆ ಇರುವ ಭದ್ರತಾ ಅಪಾಯದ ಆಧಾರದ ಮೇಲೆ ಕೇಂದ್ರ ಸರ್ಕಾರ ಭದ್ರತೆ ಒದಗಿಸಿದೆ. ಈ ವಿಷಯವೂ ರಾಜ್ಯದ ಗೃಹಸಚಿವ ಪ್ರಿಯಾಂಕ್ ಖರ್ಗೆಗೆ ತಿಳಿದಿಲ್ಲದಿದ್ದರೆ ಅವರು ಗೃಹ ಇಲಾಖೆಯನ್ನು ಹೇಗೆ ನಿಭಾಯಿಸುತ್ತಾರೆ ಎಂದು ಪ್ರಶ್ನಿಸಿದರು.

ಜಿ.ಟಿ. ಪಾಟೀಲರಿಗೆ ಸಚಿವ ಸ್ಥಾನ ನೀಡದಿದ್ದರೆ ಸರ್ಕಾರಕ್ಕೆ ಕಂಟಕ !

ರೋಣ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರ್ಕಾರ ಶಾಸಕ ಜಿ.ಎಸ್.ಪಾಟೀಲರಿಗೆ ಸಚಿವ ನೀಡದಿದ್ದರೆ ಸರ್ಕಾರಕ್ಕೆ ಕಂಟಕ ಎದುರಾಗಲಿದೆ ಎಂದು ಬೆಂಕಿ ಶ್ರೀ ಕುದರಿಮೋತಿ ಶ್ರೀಮಠದ ವಿಜಯಮಹಾಂತ ಶ್ರೀ ಸ್ಫೋಟಕ ಭವಿಷ್ಯ ನುಡಿದಿದ್ದಾರೆ. ಅವರು ಬುಧವಾರ ಪಟ್ಟಣದ ಯಾತ್ರಿನಿವಾಸದಲ್ಲಿ ಧರ್ಮಸಭೆಯಲ್ಲಿ ಪಾಲ್ಗೊಂಡು ನಂತರ ಸುದ್ದಿಗಾರರ ಜೊತೆ ಮಾತನಾಡುವ ಸಂಧರ್ಭದಲ್ಲಿ ಭವಿಷ್ಯ ನುಡಿದರು.

ಶಾಸಕ ಜಿ.ಎಸ್.ಪಾಟೀಲರು ಐದು ಬಾರಿ ಶಾಸಕರಾಗಿ ತಮ್ಮ ಪ್ರಾಮಾಣಿಕ ಸೇವೆಯನ್ನು ಸಲ್ಲಿಸಿದ್ದಾರೆ. ಇಂತವರಿಗೆ ಸಚಿವ ಸ್ಥಾನ ನಿಡುವಲ್ಲಿ ವಿಳಂಬ ಧೋರಣೆ ಸರಿಯಲ್ಲ. ಸಚಿವ ಸ್ಥಾನ ನೀಡದಿದ್ದರೆ ಹಲವು ರೀತಿಯ ತೊಂದರೆಗಳನ್ನು ಸರ್ಕಾರ ಎದುರಿಸಬಹುದು ಎಂದಿದ್ದಾರೆ. ರೋಣ ಮತಕ್ಷೇತ್ರಕ್ಕೆ ಸಾಮಾಜಿಕ ನ್ಯಾಯ ಒದಗಿಸಬೇಕು ಎನ್ನುವುದು ಎಲ್ಲ ಮಠಾಧೀಶರುಗಳ ಇಚ್ಛೆಯಾಗಿದೆ. ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಶಿವಾಚಾರ್ಯರು,ಅಭಿನವ ಕೊಟ್ಟೂರ ಶ್ರೀಗಳು, ಗಂಗಾಧರ ಶ್ರೀಗಳು, ಗುರುಸಿದ್ಧ ಶಿವಾಚಾರ್ಯರು, ವಿ.ಬಿ.ಸೋಮನಕಟ್ಟಿಮಠ ಉಪಸ್ಥಿತರಿದ್ದರು.



ಕುದರಿಮೋತಿ ಮಠದ ಶ್ರೀಗಳ ಭವಿಷ್ಯ

ವಿದ್ಯುತ್ ಖಾಸಗೀಕರಣ: ಸಮಗ್ರ ಅಧ್ಯಯನಕ್ಕೆ ಕೆಸಿಸಿಐ ಆಗ್ರಹ

ಹುಬ್ಬಳ್ಳಿ: ರಾಜ್ಯದ ವಿದ್ಯುತ್ ಉತ್ಪಾದನೆ, ಪ್ರಸರಣ ಮತ್ತು ವಿತರಣಾ ಕ್ಷೇತ್ರಕ್ಕೆ ಸಂಬಂಧಿಸಿದ ಸರ್ಕಾರಿ ವಿದ್ಯುತ್ ಕಂಪನಿಗಳನ್ನು ಖಾಸಗೀಕರಣಗೊಳಿಸುವ ಕುರಿತು ಸರ್ಕಾರ ಕೈಗೊಂಡಿರುವ ನಿರ್ಧಾರವು ವ್ಯಾಪಕ ಚರ್ಚೆಗೆ ಗ್ರಾಸವಾಗಿದ್ದು, ಇದರ ಆಗುಹೋಗುಗಳ ಕುರಿತು ಸಮಗ್ರ ಅಧ್ಯಯನ ನಡೆಸಿ ಮುಂದಿನ ಕ್ರಮ ಕೈಗೊಳ್ಳುವಂತೆ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ ಜಿ.ಕೆ ಆದಪ್ಪಗೌಡರ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ವಿದ್ಯುತ್ ಕ್ಷೇತ್ರದಲ್ಲಿ ಖಾಸಗಿ ವಲಯದ ಪಾಲ್ಗೊಳ್ಳುವಿಕೆಯಿಂದ ತಾಂತ್ರಿಕ ದಕ್ಷತೆ, ಬಂಡವಾಳ ಹೂಡಿಕೆ ಮತ್ತು ಸೇವಾ ಗುಣಮಟ್ಟದಲ್ಲಿ ಸುಧಾರಣೆಯಾಗುವ ಸಾಧ್ಯತೆಗಳಿವೆ. ಆದರೆ ಮತ್ತೊಂದೆಡೆ ವಿದ್ಯುತ್ ದರ ಏರಿಕೆ, ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಿಗೆ ಸೇವಾ ನಿರ್ಲಕ್ಷ್ಯ, ಉದ್ಯೋಗ ಭದ್ರತೆಗೆ ಧಕ್ಕೆಯಾಗುವ ಆತಂಕ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ಹಲವು ಪ್ರಶ್ನೆಗಳು ಉದ್ಭವಿಸುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ.

ರಾಜ್ಯದ ಕೈಗಾರಿಕೆಗಳು, ಕೃಷಿ ವಲಯ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಹಾಗೂ ಸಾಮಾನ್ಯ ಗ್ರಾಹಕರ ಆರ್ಥಿಕ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಯಾವುದೇ ನಿರ್ಧಾರ ಕೈಗೊಳ್ಳುವುದು ಅತ್ಯಗತ್ಯವಾಗಿದೆ. ವಿಶೇಷವಾಗಿ ವಿದ್ಯುತ್ ದರಗಳಲ್ಲಿ ಅನಿರೀಕ್ಷಿತ ಏರಿಕೆ ಸಂಭವಿಸಿದಲ್ಲಿ ಕೈಗಾರಿಕಾ ಸ್ಪರ್ಧಾತ್ಮಕತೆ ಕುಗ್ಗುವ ಅಪಾಯವಿದ್ದು, ಇದು ರಾಜ್ಯದ ಹೂಡಿಕೆ ವಾತಾವರಣದ ಮೇಲೂ ಪರಿಣಾಮ ಬೀರುವ ಸಾಧ್ಯತೆಯಿದೆ.

ಆದ್ದರಿಂದ ಸರ್ಕಾರವು ಈ ವಿಷಯದಲ್ಲಿ ಕೈಗಾರಿಕಾ ಸಂಘಟನೆಗಳು, ಗ್ರಾಹಕ ಸಂಘಗಳು, ಕಾರ್ಮಿಕ ಸಂಘಟನೆಗಳು, ಕೃಷಿ ಪ್ರತಿನಿಧಿಗಳು ಹಾಗೂ ತಜ್ಞರೊಂದಿಗೆ ಸಮಾಲೋಚನೆ ನಡೆಸಿ, ಪಾರದರ್ಶಕ ಮತ್ತು ಜನಪರ ನೀತಿಯನ್ನು ರೂಪಿಸಬೇಕು ಎಂದು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯ ಗೌರವ ಕಾರ್ಯದರ್ಶಿ ಉದಯ ರೇವಣಕರ ಅವರು ಪತ್ರಿಕಾ ಪ್ರಕಟಣೆಯ ಮೂಲಕ ವಿನಂತಿಸಿಕೊಂಡಿದ್ದಾರೆ.

ಪರಿಷತ್ 7 ಸ್ಥಾನಕ್ಕಿಂದು ಚುನಾವಣೆ

ಪುಟ ೧➡ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಜತೆಗೆ ಬಿಜೆಪಿಯ ಉಚ್ಚಾಟಿತ ಶಾಸಕರ ಪೈಕಿ ಎಸ್.ಟಿ. ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಗುರುತಿಸಿಕೊಂಡಿದ್ದು, ಇನ್ನೂ ಇಬ್ಬರು ಪಕ್ಷೇತರ ಶಾಸಕರಾದ ಲತಾ ಮಲ್ಲಿಕಾರ್ಜುನ, ಪುಟ್ಟಸ್ವಾಮಿಗೌಡ, ಎಸ್ ಕೆಪಿಯ ದರ್ಶನ್ ಪುಟ್ಟಣ್ಣಯ್ಯ ಬೆಂಬಲ ನೀಡುವುದು ಖಚಿತವಾಗಿರುವುದರಿಂದ ಕಾಂಗ್ರೆಸ್ ಗೆಲುವಿನ ನಿರೀಕ್ಷೆಯಲ್ಲಿದೆ. ಐದನೇ ಅಭ್ಯರ್ಥಿ ಗೆಲುವಿಗೆ ಅಡ್ಡಮತದಾನ ಆಗಲೇಬೇಕಿರುವುದರಿಂದ ಮೂರೂ ಪಕ್ಷಗಳು ತಮ್ಮ- ತಮ್ಮ ಶಾಸಕರಿಂದ ಅಡ್ಡಮತದಾನ ಆಗದಂತೆ ತಡೆಯಲು ಎಲ್ಲಾ ಪ್ರಯತ್ನಗಳನ್ನು ನಡೆಸಿವೆ. ಅಡ್ಡಮತದಾನ ತಪ್ಪಿಸಲು ಕಾಂಗ್ರೆಸ್ ಪಕ್ಷವು ಮಂಗಳವಾರ ಸಂಜೆಯಿಂದಲೇ ಶಾಸಕರನ್ನು ವಂಡರ್‌ಲಾ ರೆಸಾರ್ಟ್‌ನಲ್ಲಿಟ್ಟಿದೆ. ಮುಖ್ಯಮಂತ್ರಿಯಾದ ನಂತರ ಡಿ.ಕೆ. ಶಿವಕುಮಾರ್‌ಗೆ ಇದು ಮೊದಲ ಚುನಾವಣೆಯಾಗಿದ್ದು, ಆರಂಭಿಕ ಯಶಸ್ಸು ಪಡೆಯುವ ಮೂಲಕ ತಮ್ಮ ಇಮೇಜ್ ವೃದ್ಧಿಸಿಕೊಳ್ಳಲು ಈ ಚುನಾವಣೆ ಅವಕಾಶವಾಗಿರುವುದರಿಂದ ಐದನೇ ಅಭ್ಯರ್ಥಿ ಗೆಲ್ಲಿಸಲು ಪೂರ್ಣ ಪ್ರಮಾಣದ ತಯಾರಿ ಮಾಡಿಕೊಂಡಿದ್ದಾರೆ.

ಅಭ್ಯರ್ಥಿಗಳು ಯಾರು?: ವಿಧಾನಪರಿಷತ್‌ನ ಏಳು ಸ್ಥಾನಗಳಿಗೆ ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್, ತಿಪ್ಪಣ ಕಮಕನೂರ, ಪಿ.ವಿ ಮೋಹನ್, ಶಿವಣ್ಣ ಮಳವಳ್ಳಿ, ವಿನಯ್ ಕಾರ್ತಿಕ್ ಸ್ಪರ್ಧಿಸಿದ್ದರೆ, ಬಿಜೆಪಿಯಿಂದ ರಘು ಕೌಟಿಲ್ಯ, ಲಿಂಗರಾಜ್ ಪಾಟೀಲ ಹಾಗೂ ಜೆಡಿಎಸ್‌ನಿಂದ ಗೋವಿಂದರಾಜು ಅಖಾಡದಲ್ಲಿದ್ದಾರೆ.

ಬೆ.೯ರಿಂದ ಸಂಜೆ 4ರವರೆಗೆ ಮತದಾನ

ವಿಧಾನಪರಿಷತ್ತಿನ ಚುನಾವಣೆ ವಿಧಾನಸೌಧದ ಮೊದಲನೇ ಮಹಡಿಯಲ್ಲಿನ 106 ಸಂಖ್ಯೆಯ ಕೊಠಡಿಯಲ್ಲಿ ಗುರುವಾರ (ಜೂ.18) ಬೆಳಗ್ಗೆ ೯ರಿಂದ ಸಂಜೆ 4 ರವರೆಗೆ ಮತದಾನ ನಡೆಯಲಿದೆ. ಸಂಜೆ 5 ಗಂಟೆಗೆ ಮತ ಎಣಿಕೆ ಕಾರ್ಯ ನಡೆಯಲಿದ್ದು, ಗುರುವಾರವೇ ಫಲಿತಾಂಶ ಪ್ರಕಟವಾಗಲಿದೆ.

ನೇಮಕಾತಿಯಲ್ಲಿ ಕ್ರೀಡಾಳುಗಳಿಗೆ ಶೇ.2 ಮೀಸಲು

▸ ವೀರಣ್ಣ ಬಳಿಗಾರ

• **ಬೆಂಗಳೂರು:** ರಾಜ್ಯ ನಾಗರಿಕ ಸೇವೆಯ ಸಾಮಾನ್ಯ ನೇಮಕಾತಿಯಲ್ಲಿ ಕ್ರೀಡಾ ಸಾಧಕರಿಗೆ ಶೇ.2 ಮೀಸಲಾತಿ ನೀಡಲು ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದ್ದು, 34 ಕ್ರೀಡೆಯಲ್ಲಿ ಸಾಧನೆಗೈದ ಕ್ರೀಡಾಪಟುಗಳಿಗೆ ಭರ್ತಿಯಲ್ಲಿ ಶೇ.2 ಮೀಸಲಾತಿಯ ಅವಕಾಶ ಸಿಗಲಿದೆ. ಸರ್ಕಾರದ ನೇಮಕಾತಿಯ ಯಾವುದೇ ಸಾಮಾನ್ಯ ಅಧಿಸೂಚನೆಗಳಿಗೆ ಮೀಸಲಿಡಲಾದ ಶೇ.2ರಷ್ಟು ಖಾಲಿ ಹುದ್ದೆಗಳನ್ನು ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರತಿ ಪ್ರವರ್ಗಗಳಲ್ಲಿ ಕ್ರೀಡಾ ಸಾಧಕರಾಗಿರುವ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುತ್ತದೆ.

ರಾಜ್ಯದಲ್ಲಿ ಕನಿಷ್ಠ 10 ವರ್ಷ ಕರ್ನಾಟಕದಲ್ಲಿ ವಾಸವಾಗಿರುವ ಅಭ್ಯರ್ಥಿಯು ಸರ್ಕಾರ ಗುರುತಿಸಿರುವ 34 ಕ್ರೀಡೆಗಳಲ್ಲಿ ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ವೈಯಕ್ತಿಕವಾಗಿ ಅಥವಾ ತಂಡದ ಸದಸ್ಯರಾಗಿ ಭಾಗವಹಿಸಿ, ಕನಿಷ್ಠ ಒಂದು ರಾಷ್ಟ್ರೀಯ ಚಾಂಪಿಯನ್‌ಶಿಪ್ ಅಥವಾ ಕನಿಷ್ಠ ಒಂದು ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಕರ್ನಾಟಕ ಅಥವಾ ರೈಲ್ವೆಯಂತಹ ಸಂಸ್ಥೆಗಳನ್ನು ಸೇರಿ ಇತರ ರಾಜ್ಯಗಳನ್ನು ಪ್ರತಿನಿಧಿಸಿದ್ದ ಕ್ರೀಡಾಪಟು ಶೇ.2 ಮೀಸಲಾತಿ ಪಡೆಯಲು ಅರ್ಹನಾಗಿರುತ್ತಾನೆ.



ಆಯ್ಕೆ ಸಂದರ್ಭದಲ್ಲಿ ಕ್ರೀಡಾಪಟು ಒಂದಕ್ಕಿಂತ ಹೆಚ್ಚು ಆಟಗಳಲ್ಲಿ ಸಾಧನೆಗಳನ್ನು ಮಾಡಿದ್ದ ಸಂದರ್ಭದಲ್ಲಿ ಅವನ ಅತ್ಯುನ್ನತ ಸಾಧನೆಗೈದ ಕೃಪಾಂಕಗಳನ್ನು ಪರಿಗಣಿಸಲಾಗುತ್ತದೆ. ಅಭ್ಯರ್ಥಿಗಳು ಸಮಾನ ಅಂಕಗಳನ್ನು ಗಳಿಸಿದ ಸಂದರ್ಭದಲ್ಲಿ ತಂಡದ ಕ್ರೀಡೆಗಳಲ್ಲಿ ಸಾಧನೆ ಮಾಡಿರುವವರಿಗಿಂತ ವೈಯಕ್ತಿಕ ಕ್ರೀಡೆಗಳಲ್ಲಿ ಸಾಧನೆ ಮಾಡಿರುವವರಿಗೆ ಆದ್ಯತೆ ನೀಡಲಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಬೇಕಾದ ಸಂದರ್ಭದಲ್ಲಿ ಶೇ.2 ಕ್ರೀಡಾ ಕೋಟಾದ ಅಡಿಯಲ್ಲಿನ ಅಭ್ಯರ್ಥಿಗಳ ನಡುವಿನ ಪರಸ್ಪರ ಅರ್ಹತೆಯನ್ನು ನಿರ್ಧರಿಸಲು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇ.50 ಅಂಕಗಳು ಮತ್ತು ಅಭ್ಯರ್ಥಿಗಳಿಗೆ ಲಭ್ಯವಿರುವ ಸಂಪೂರ್ಣ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

34 ಕ್ರೀಡೆಗಳಿವು: ಆರ್ಚರಿ, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಬಾಸ್ಕೆಟ್ ಬಾಲ್, ಬಿಲಿಯರ್ಡ್ಸ್ ಮತ್ತು ಸ್ನೂಕರ್ ಬಾಕ್ಸಿಂಗ್, ಕ್ಯಾನೋಯಿಂಗ್, ಚೆಸ್, ಕ್ರಿಕೆಟ್, ಸೈಕ್ಲಿಂಗ್, ಈಕ್ವೆಸ್ಟ್ರಿಯನ್, ಫೆನ್ಸಿಂಗ್, ಫುಟ್ಬಾಲ್, ಗಾಲ್ಫ್, ಜಿಮ್ನಾಸ್ಟಿಕ್ಸ್, ಹ್ಯಾಂಡಬಾಲ್, ಹಾಕಿ, ಜುಡೋ, ಕಬಡ್ಡಿ, ಕಯಾಕಿಂಗ್, ಖೋ ಖೋ, ನೆಟ್ ಬಾಲ್, ರೋಯಿಂಗ್, ಶೂಟಿಂಗ್, ಸ್ಪೋರ್ಟ್ಸ್ ಕ್ಲೈಂಬಿಂಗ್, ಸ್ಕ್ವಾಷ್, ಟೇಬಲ್ ಟೆನ್ನಿಸ್, ಟೈಕ್ವಾಂಡೋ, ಟೆನ್ನಿಸ್, ಟ್ರೈಥ್ಲಾನ್, ವಾಲಿಬಾಲ್, ಭಾರ ಎತ್ತುವಿಕೆ, ಕುಸ್ತಿ ಮತ್ತು ಜಲಕ್ರೀಡೆಗಳು.

ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದರೆ 50 ಕೃಪಾಂಕ

ದಿಗಂತ ವಿಶೇಷ

ಸಾಮಾನ್ಯ ನೇಮಕಾತಿಯಲ್ಲಿ ಭರ್ತಿಗೆ ಅವಕಾಶ ಪಡೆಯುವ ಕ್ರೀಡಾ ಸಾಧಕರು ಒಲಿಂಪಿಕ್ಸ್ ಅಥವಾ ಪ್ಯಾರಾಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಪಡೆದರೆ ಶೇ.50 ಕೃಪಾಂಕ, ಬೆಳ್ಳಿ ಪಡೆದರೆ 49 ಕೃಪಾಂಕ, ಕಂಚಿನ ಪದಕಕ್ಕೆ 48 ಕೃಪಾಂಕ ಸಿಗಲಿದೆ. ಈ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ್ದರೂ 47 ಕೃಪಾಂಕ ಸಿಗಲಿದೆ. ಏಷ್ಯನ್ ಗೇಮ್ಸ್ ಗೇಮ್ಸ್, ಕಾಮನ್‌ವೆಲ್ತ್, ವಿಶ್ವಕಪ್, ವಿಶ್ವ ಚಾಂಪಿಯನ್‌ಶಿಪ್, ಏಷ್ಯನ್ ಚಾಂಪಿಯನ್‌ಶಿಪ್, ಯೂತ್ ಒಲಿಂಪಿಕ್ಸ್, ವಿಶ್ವವಿದ್ಯಾಲಯ, ಎಸ್.ಎ.ಎಫ್, ರಾಷ್ಟ್ರೀಯ, ಹಿರಿಯರ ಚಾಂಪಿಯನ್‌ಶಿಪ್, ಖೇಲೋ ಇಂಡಿಯಾ ಹಾಗೂ ಭಾರತೀಯ ವಿಶ್ವವಿದ್ಯಾಲಯಗಳ ಸಂಘದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೂ ಕ್ರಮವಾಗಿ ಕೃಪಾಂಕ ಸಿಗಲಿದೆ.

ಎಚ್‌ಡಿಕೆ ಕುಟುಂಬದ ವಿರುದ್ಧ ಪೋಸ್ಟರ್ ಪ್ರದರ್ಶನ

• **ರಾಮನಗರ:** ತಾಲೂಕಿನ ಬಿಡದಿ ಹೋಬಳಿಯಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ನೀಡಲು ಬುಧವಾರ ಬೈರಮಂಗಲಕ್ಕೆ ಭೇಟಿ ನೀಡಿದ ಬಿಜೆಪಿ ನಾಯಕರು ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಕುಟುಂಬದ ವಿರುದ್ಧ ಅಪರಿಚಿತರು ಯೋಜನಾ ಪ್ರದೇಶದ ಕೆಲವೆಡೆ ಅವಹೇಳನಕಾರಿ ಪೋಸ್ಟರ್‌ಗಳನ್ನು ಅಂಟಿಸಿದ್ದಾರೆ. ಅನಿತಾ ಕುಮಾರಸ್ವಾಮಿ ಅವರು 36-37 ಎಕರೆ ಭೂಮಿ ಖರೀದಿಸಿದ್ದಾರೆ. ಅದಕ್ಕೆ ಇನ್ನೂ ಯಾವನೋ ಒಬ್ಬನ ಫೋಟೋ ಹಾಕಿ ಅಂಟಿಸಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೇನೇಜಿ

◈ ವಿರೋಧ ಪಕ್ಷದವರು ಇರುವುದೇ ಟೀಕೆ ಮಾಡಲಿಕ್ಕಾಗಿ. ನಾವು ಏನೇ ಒಳ್ಳೆಯದನ್ನು ಮಾಡಿದರೂ ಅದಕ್ಕೆ ಅವರು ಅಡ್ಡಗಾಲು ಹಾಕುತ್ತಾರೆ - ಡಿಕೆಶಿ

- ಪ್ರಧಾನಿ ನರೇಂದ್ರ ಮೋದಿಯವರದೂ ಇದೇ ಅನುಭವವಂತೆ. ಅವರು ದೇಶದ ಹಿತಕ್ಕಾಗಿ ಯಾವುದೇ ಕೆಲಸ ಮಾಡಿದರೂ ವಿರೋಧ ಪಕ್ಷಗಳು ಅಪಪ್ರಚಾರ ಮಾಡುವ ಮೂಲಕ ಅಡ್ಡಗಾಲು ಹಾಕುತ್ತಿವೆಯಂತೆ!

ದಿನ ಭವಿಷ್ಯ

ಮೇಷ ವೃತ್ತಿಯಲ್ಲೂ, ವೈಯಕ್ತಿಕವಾಗಿಯೂ ಹೆಚ್ಚು ಹೊಣೆ. ಆತ್ಮೀಯ ಸಂಬಂಧಕ್ಕೆ ಧಕ್ಕೆ. ವಿರಸದ ಹಾದಿ ಹಿಡಿಯದಿರಿ. ಆರ್ಥಿಕ ಹಿಂಜರಿಕೆ.

ವೃಷಭ ಪೂರ್ವಸಲಾಗದ ಆಶ್ವಾಸನೆ ನೀಡಿ ಇಕ್ಕಟ್ಟಿಗೆ ಸಿಲುಕುವಿರಿ. ಅನ್ಯರಿಗೆ ಹಾನಿಯಾಗುವ ಕಾರ್ಯ ಎಸಗದಿರಿ. ಕೌಟುಂಬಿಕ ಸಮಸ್ಯೆ ಕಾಡುವುದು.

ಮಿಥುನ ವೃತ್ತಿಯಲ್ಲಿ ಸಫಲತೆ. ಪರಿಶ್ರಮಕ್ಕೆ ಅಧಿಕ ಫಲ ಪಡೆಯುವಿರಿ. ಹೊಟ್ಟೆ ಕೆಡಿಸುವ ಆಹಾರ ತಿನ್ನದಿರಿ. ಪ್ರೀತಿಯ ಸಂಬಂಧ ಇನ್ನಷ್ಟು ಗಟ್ಟಿಗೊಳ್ಳಲಿದೆ.

ಕಟಕ ಹೊಸತನಕ್ಕೆ ಯತ್ನಿಸುವಿರಿ. ಅದರಲ್ಲಿ ಆಂಶಿಕ ಯಶ. ಮನಸ್ಸು ಉಲ್ಲಸಿತ ಗೊಳಿಸುವ ಪ್ರಸಂಗ ಉಂಟಾದೀತು. ಪ್ರೀತಿಯಲ್ಲಿ ಸಫಲತೆ.

ಸಿಂಹ ಒಳಿತು, ಕೆಡಕು ಎರಡನ್ನೂ ಎದುರಿಸುವಿರಿ. ಉದ್ವಿಗ್ನ ಸ್ಥಿತಿ ಕಾಣುವಿರಿ. ಅದರ ಜತೆಗೇ ಪರಿಹಾರದ ನಿರಾಳತೆಯೂ. ಆರೋಗ್ಯ ಬಗ್ಗೆ ಕಾಳಜಿ ವಹಿಸಿ.

ಕನ್ಯಾ ಆತ್ಮೀಯ ಸಂಬಂಧಕ್ಕೆ ಹುಳಿ ಹಿಂಡಲು ಕೆಲವರ ಯತ್ನ ನಡೆದೀತು. ನೀವು ಎಚ್ಚರದಿಂದಿರಿ. ವೃತ್ತಿಯಲ್ಲಿ ಪ್ರತಿಕೂಲ ಪರಿಣಾಮ ಎದುರಿಸುವಿರಿ.

ತುಲಾ ಫಲಪ್ರದ ಬೆಳವಣಿಗೆ. ಉದ್ಯೋಗದಲ್ಲಿ ಹೊಸ ಅವಕಾಶ. ಏಕಾಂಗಿಗಳಿಗೆ ವೈವಾಹಿಕ ಬಂಧ ಏರ್ಪಡಬಹುದು. ತೃಪ್ತಿಕರ ಆರ್ಥಿಕ ಪ್ರಗತಿ.

ವೃಶ್ಚಿಕ ದುಗುಡಕ್ಕೆ ಕಾರಣವಾಗಿದ್ದ ವಿಷಯ ಇಂದು ಇತ್ಯರ್ಥ. ಆದರೆ ಸ್ವಲ್ಪ ಮಟ್ಟಿನ ಹಿನ್ನಡೆಯೂ ಉಂಟಾದೀತು. ಭಾವುಕ ಸನ್ನಿವೇಶ ಎದುರಿಸುವಿರಿ.

ಧನು ಹೊಣೆಗಾರಿಕೆ, ಒತ್ತಡ ಕಡಿಮೆ. ಯಾವುದೋ ವಿಷಯದಲ್ಲಿ ಭಾವುಕರಾಗಿ ನಿರ್ಧಾರ ತಾಳದಿರಿ. ಅದರ ಪ್ರಾಕ್ಟಿಕಲ್ ಆಯಾಮ ಪರಿಶೀಲಿಸಿ, ನಿರ್ಧರಿಸಿ.

ಮಕರ ವೃತ್ತಿಯಲ್ಲಿ ಸೃಷ್ಟಿಯಾಗಿದ್ದ ಸಮಸ್ಯೆ ಪರಿಹಾರ. ಕ್ಷುಲ್ಲಕ ವಿಷಯ ಮನಸ್ಸು ಕೆಡಿಸಬಹುದು. ಕೆಲವರ ಜತೆ ವಾಗ್ವಾದ ನಡೆಯಬಹುದು.

ಕುಂಭ ವೃತ್ತಿಯಲ್ಲಿ ನಿಮ್ಮ ಕಠಿಣ ದುಡಿಮೆಗೆ ತೃಪ್ತಿಕರ ಫಲಿತಾಂಶ. ಆದರೆ ಕೆಲವು ವಿಷಯಗಳು ಮನಸ್ಸು ಕದಡುತ್ತವೆ. ನಿಮ್ಮ ಮಾತು ತಪ್ಪರ್ಥ ಬಿಂಬಿಸಬಹುದು.

ಮೀನ ದಂಪತಿಗಳು ತಮ್ಮ ಸಂಬಂಧ ಬಲಪಡಿಸುವ ಕ್ರಮ ತೆಗೆದುಕೊಳ್ಳಬೇಕು. ಸಣ್ಣ ಭೇದವು ಸಂಬಂಧ ಕೆಡಿಸದಿರಲಿ. ಮುಖ್ಯ ಕಾರ್ಯ ಅಪೂರ್ಣ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30

ಅದೃಷ್ಟ ಸಂಖ್ಯೆ : 4,9,2,6

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ರಾಜ್ಯ ಸರ್ಕಾರ ಹುಡುಗಾಟಿಕೆ: ಬಿವೈವಿ

ಪ್ರಧಾನಿ ಒಪ್ಪಿಗೆ ನೀಡಿಲ್ಲ

• **ರಾಮನಗರ:** ಬಿಡದಿ ಟೌನ್‌ಶಿಪ್‌ಗೆ ಪ್ರಧಾನಿ ಒಪ್ಪಿಗೆ ನೀಡಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ ಪ್ರಧಾನಿಗಳು ಒಪ್ಪಿಗೆ ನೀಡಿಲ್ಲ, ರಾಜ್ಯ ಸರ್ಕಾರ ಈ ವಿಷಯದಲ್ಲಿ ಹುಡುಗಾಟಿಕೆ ಮಾಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಬಿಡದಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂದು ಹಲವಾರು ಹಳ್ಳಿಗಳಿಗೆ ಭೇಟಿ ನೀಡಿದ್ದೇವೆ. ರೈತರನ್ನು ಮಾತನಾಡಿಸಿದ್ದೇವೆ. ಇಲ್ಲಿನ ವಾಸ್ತವ ತಿಳಿಸಲು ಮುಂದಾಗಿದ್ದೇವೆ. ಹೊರತು ರಾಜಕೀಯ ಬೇಳೆ ಬೇಯಿಸಿಕೊಳ್ಳುವುದಿಲ್ಲ ಎಂದು ತಿಳಿಸಿದರು. ದೇಶಕ್ಕೆ ಅನ್ನ ನೀಡುವ ರೈತ ಎಲ್ಲೇ ಇರಲಿ ಅವರ ಪರವಾಗಿ ಬಿಜೆಪಿ ಇರಲಿದೆ. ಈ ಹಿಂದೆ ಬಿ ಎಸ್ ಯಡಿಯೂರಪ್ಪ ಅವರೂ ರೈತರ ಪರವಾಗಿದ್ದರು. ಆದರೆ ಈ ಸರ್ಕಾರ ರೈತ ವಿರೋಧಿ ಧೋರಣೆ ಅನುಸರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಇಲ್ಲಿನ ರೈತರು ತೆಂಗು, ಅಡಿಕೆ, ರೇಷ್ಮೆ ಬೆಳೆಯುತ್ತಿದ್ದಾರೆ. ಇಂತಹ ಫಲವತ್ತಾದ ಭೂಮಿಯನ್ನು ರೈತರಿಂದ ಬಲವಂತವಾಗಿ ಕಸಿಯಲು ಸರ್ಕಾರ ಮುಂದಾಗಿರುವುದು ಸರಿಯಲ್ಲ ಎಂದರು.

ರಾತ್ರೋ ರಾತ್ರಿ ಗೂಂಡಗಳು ಮನೆಗಳಿಗೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಕೆಲವು ರೈತರು ಹೇಳಿದ್ದಾರೆ. ಆದರೆ ನಮ್ಮ ಪ್ರಾಣ ಕೊಡ್ತೇವೆ. ಜಮೀನು ಬಿಟ್ಟು ಕೊಡಲ್ಲ ಎಂದು ರೈತರು ಹೇಳಿದ್ದಾರೆ. ಅನ್ನಕೊಡುವ ರೈತರ ಪರವಾಗಿ ನಿಲ್ಲಬೇಕಾದ ಮುಖ್ಯಮಂತ್ರಿಗಳು ರಿಯಲ್ ಎಸ್ಟೇಟ್ ಪರವಾಗಿ ಇದ್ದಾರೆ. ಸರ್ಕಾರ ಯಾವುದೇ ಕಾರಣಕ್ಕೂ ರೈತರ ಜೊತೆ ಚೆಲ್ಲಾಟ ಮಾಡಬಾರದು ಎಂದರು.

ಡಿ.ಕೆ. ಶಿವಕುಮಾರ್ ಅವರೇ ರಿಯಲ್ ಎಸ್ಟೇಟ್ ಧಂಧೆ ಮಾಡಲು ಬೇಕಾದಷ್ಟು ಜಾಗ ಇದೆ. ಇಲ್ಲಿನ ಸಣ್ಣ ಹಿಡುವಳಿದಾರರು ಬದುಕುಬೇಕು. ಹೈನುಗಾರಿಕೆ ಮಾಡಿದವರು, ರೇಷ್ಮೆ ಬೆಳೆದವರು ಬೀದಿಗೆ ಬಿದ್ದರೆ ಭಗವಂತ ನಿಮ್ಮನ್ನು ಕ್ಷಮಿಸಲ್ಲ, ಪ್ರಧಾನಿ ಟೌನ್ ಶಿಪ್‌ಗೆ ಒಪ್ಪಿಗೆ ನೀಡಿದ್ದಾರೆ ಎಂದು ಹೇಳುವ ನಿಮಗೆ ನಾಚಿಕೆ ಆಗಬೇಕು. ಮೋದಿ ಅವರ ಹೆಸರನ್ನು ಇಲ್ಲಿ ಎಳೆದುತಂದ ಡಿಕೆಶಿ ಅವರಿಗೆ ನಾಚಿಕೆ ಆಗಬೇಕು. ಮೋದಿ ಅವರು ಎಂದೂ ರೈತ ವಿರೋಧಿಯಾಗಿ ನಡೆದುಕೊಂಡಿಲ್ಲ ಎಂದರು. ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ ಉತ್ತರ ಕರ್ನಾಟಕದಲ್ಲಿ ಕೈಗಾರಿಕೆ ತನ್ನಿ, ಕೆಲಸಕೊಡಿ. ಫಲವತ್ತಾದ ಜಮೀನು ರಾಜ್ಯದ ಯಾವುದೇ ಭಾಗದಲ್ಲೂ ಕಸಿಯಲು ಬಿಡಲ್ಲ ಎಂದರು. ಬಿಡದಿ ವಿಷಯದಲ್ಲಿ ಪೋಸ್ಟರ್ ಕ್ಯಾಂಪೇನ್ ಮಾಡ್ತ ಇದ್ದಾರೆ. ನಾವು ನಿಮ್ಮ ಶಾಸಕರಲ್ಲ, ಇದರಲ್ಲಿ ದಬ್ಬಾಳಿಕೆ ಮಾಡಬೇಡಿ. ಗೂಂಡಾಗಳು ಮಾಡಿದ ಹಾಗೆ ನಮ್ಮ ಹತ್ರ ಮಾಡಬೇಡಿ.

ರೈತರ ಪರವಾಗಿ ನಾವು ಆಡಳಿತ ಮತ್ತು ವಿರೋಧ ಪಕ್ಷವಾಗಿ ಧ್ವನಿ ಎತ್ತೇ ಎತ್ತುತ್ತೇವೆ. ಮುಖ್ಯಮಂತ್ರಿಗಳು ತಮ್ಮ ಕುರ್ಚಿ ಉಳಿಸಿಕೊಳ್ಳಲು ರೈತರ ಪರವಾಗಿ ನಿಲ್ಲಲಿ. ರೈತರ ಹೊಟ್ಟೆ ಮೇಲೆ ಹೊಡೆದರೆ, ಕಣ್ಣೀರು ತರಿಸಿದರೆ ಒಳ್ಳೆಯದಾಗಲ್ಲ ಎಂದು ತಿಳಿಸಿದರು. ವಿಧಾನಸಭೆಯ ವಿಪಕ್ಷ ನಾಯಕ ಆರ್. ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಉಪಮುಖ್ಯಮಂತ್ರಿ ಮತ್ತು ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ್, ಸಂಸದ ಡಾ. ಸಿ.ಎನ್. ಮಂಜುನಾಥ್, ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್.ರವಿಕುಮಾರ್, ರಾಮನಗರ ಜಿಲ್ಲಾಧ್ಯಕ್ಷ ಆನಂದಸ್ವಾಮಿ ಹಾಗೂ ಇತರರು ಇದ್ದರು.



ರಾಜಕೀಯ ಬೇಡ

ಬಿಡದಿ ಟೌನ್‌ಶಿಪ್ ವಿಷಯದಲ್ಲಿ ಸರ್ಕಾರ ರಾಜಕೀಯ ಮಾಡುವುದು ಬೇಡ. ಬಿಜೆಪಿ ಸಹ ಹುಡುಗಾಟ ಮಾಡುವುದಿಲ್ಲ. ಕಳೆದ ಹಲವಾರು ದಿನಗಳಿಂದ ಬಿಡದಿ ಮತ್ತು ಸುತ್ತಮುತ್ತಲಿನ ರೈತರು ಟೌನ್‌ಶಿಪ್ ವಿರೋಧಿಸಿ ನಿರಂತರ ಹೋರಾಟ ಮಾಡುತ್ತಾ ಇದ್ದಾರೆ. ಆದರೆ ಸರ್ಕಾರ ಮತ್ತೊಂದು ಕಡೆ ಶೇ.80 ರಷ್ಟು ರೈತರು ಭೂಸ್ವಾಧೀನಕ್ಕೆ ಒಪ್ಪಿದ್ದಾರೆ ಎನ್ನುತ್ತಿದೆ. ಇಲ್ಲಿನ ಭೂಮಿ ಬರಡಾಗಿದೆ ಎಂದು ಹೇಳುತ್ತಿದೆ ಎಂದರು.

ಇಬ್ಬಗೆ ನೀತಿ ಸರಿಯೇ: ಆರ್.ಅಶೋಕ್

ಡಿಕೆಶಿಯವರೇ, ಕನಕಪುರದಲ್ಲಿ ಚಿನ್ನದ ಬೆಲೆ ಕೊಡಿಸುತ್ತೇನೆ. ಜಮೀನು ಮಾರಬೇಡಿ ಎನ್ನುತ್ತೀರಿ. ಬಿಡದಿಯಲ್ಲಿ ಬಲವಂತವಾಗಿ ಮಾರಾಟ ಮಾಡಿಸುತ್ತೀದ್ದೀರಿ. ಈ ಇಬ್ಬಗೆ ನೀತಿ ಸರಿಯೇ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ವಿಧಾನಸಭಾ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಪ್ರಶ್ನಿಸಿದರು. ರೈತರ ಚಳವಳಿಯಲ್ಲಿ ಭಾಗವಹಿಸಿ ಮಾತನಾಡಿ, ಉಪನಗರ ಯೋಜನೆಯಿಂದ ಹಸಿರು ವಲಯ ಮತ್ತು ಹೈನೋದ್ಯಮ ನಾಶವಾಗಲಿದೆ. ಲಕ್ಷಾಂತರ ಹಸುಗಳು ಕಸಾಯಿಖಾನೆಗೆ ಹೊಡೆಯಬೇಕಾ? ಒಕ್ಕಲೆದ್ದವರು ಎಲ್ಲಿ ಹೋಗಬೇಕು?. ರೈತರು ತಲೆಮಾರಿನಿಂದ ಕಾಪಾಡಿಕೊಂಡು ಬಂದ ಆಸ್ತಿಯನ್ನು ಹೊರ ರಾಜ್ಯಗಳಿಂದ ಬಂದವರಿಗೆ ಸೈಟು ಮತ್ತು ಜಮೀನು ಕೊಟ್ಟು ಹಣ ಮಾಡಿಕೊಳ್ಳಲು ಯೋಜನೆ ಮಾಡುತ್ತೀರಾ? ಎಂದು ಪ್ರಶ್ನಿಸಿದರು. ಈ ಯೋಜನೆಗೆ ಬಲವಂತವಾಗಿ ಭೂ ಸ್ವಾಧೀನ ಮಾಡಲು ಹೊರಟಿರುವ ರಾಜ್ಯ ಸರಕಾರದ ವಿರುದ್ಧ ರೈತರು ನಿರಂತರವಾಗಿ ಹೋರಾಟ ನಡೆಸುತ್ತಿದ್ದರೆ, ಮತ್ತೊಂದೆಡೆ ಡಿ.ಕೆ. ಶಿವಕುಮಾರ್ ರವರು ಶೇ.80ರಷ್ಟು ರೈತರು ಸ್ವಾಧೀನದ ಪರವಾಗಿದ್ದಾರೆ. ಭೂ ಸ್ವಾಧೀನಕ್ಕೆ ಒಳಪಡುವ ಜಾಗ ಬರಡು ಭೂಮಿ, ಯೋಜನೆಗೆ ಪ್ರಧಾನಿ ಮೋದಿರವರು ಕೂಡ ಒಪ್ಪಿಗೆ ನೀಡಿದ್ದಾರೆಂದು ಸುಳ್ಳು ಹೇಳುತ್ತಿದ್ದಾರೆ ಎಂದರು.

ಸಂಘದ ಶಾಖೆಗೆ ಬಂದಾಗಲೇ ಅದರ ಅನುಭೂತಿ: ಸಿ.ಟಿ.ರವಿ

• **ಕಲಬುರಗಿ:** ರಾಷ್ಟ್ರೀಯ ಸ್ವಯಂ ಸೇವಕ ಸಂಘ ಸಮಾಜದಲ್ಲಿ ಸಾಮರಸ್ಯವನ್ನು ಬೆಳೆಸುವ ಕೆಲಸದ ಜತೆಗೆ ಐಕ್ಯತೆ ಭಾವ, ವ್ಯಕ್ತಿಗಳಿಗೆ ದೇಶಭಕ್ತಿ ಹಾಗೂ ಸಮಾಜಮುಖಿಯಾಗಿ ಬೆಳೆಸುವಂತಹ ಕೆಲಸ ಮಾಡುತ್ತಿದ್ದು, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಪೂರ್ವ ಗೃಹ ಪೀಡಿತ ಚಿಂತನೆಗಳಿಂದ ಹೊರ ಬಂದು ಸಂಘದ ಶಾಖೆಗೆ ಬಂದಾಗ ಮಾತ್ರ ಸಂಘದ ಅನುಭೂತಿಯಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ, ಮಾಜಿ ಸಚಿವ ಸಿ.ಟಿ.ರವಿ ಹೇಳಿದರು.

ಜಿಲ್ಲೆಯ ಜೇವರ್ಗಿ ಭಾಗದಲ್ಲಿ ಹಾದು ಹೋಗುವ ಕೇಂದ್ರ ಸರ್ಕಾರದ ಹೆಮ್ಮೆಯ ಭಾರತ್ ಮಾಲಾ ರಸ್ತೆ ಯೋಜನೆ ರಸ್ತೆ ಕಾಮಗಾರಿ ವೀಕ್ಷಣೆ ಬಳಿಕ ಪತ್ರಿಕಾ ಗೋಷ್ಠಿ ನಡೆಸಿ ಮಾತನಾಡಿದರು. ಆರೆಸ್ಸೆಸ್ ಸರಸಂಘಚಾಲಕರಿಗೆ ಪತ್ರ ಬರೆದು ಪ್ರಶ್ನೆ ಕೇಳಿರುವ ಪ್ರಿಯಾಂಕ್ ಖರ್ಗೆಗೆ ಸಂಘ ಏನೆಂಬುದು ಇವರಿಗೆ ಅರ್ಥವಾಗಬೇಕಿದ್ದರೆ, ಸಂಘದ ಶಾಖೆಗೆ ಬರಲಿ. ಆಗ ಅದರ ಅನುಭೂತಿ ಸಿಗಲಿದೆ. ಸಂಘದ ಶಾಖೆಗೆ ಪ್ರತಿಯೊಬ್ಬರಿಗೂ ಮುಕ್ತ ಆಹ್ವಾನವಿದೆ ಎಂದು ಹೇಳಿದರು.

ಸ್ವಾತಂತ್ರ್ಯ ಸಿಕ್ಕಿದ್ದು 1947ರಲ್ಲಿ, ಸಂಘ ಆರಂಭವಾಗಿದ್ದು 1925ರಲ್ಲಿ . 1950ರಲ್ಲಿ ಸರ್ಕಾರ ಬ್ಯಾನ್ ವಾಪಸ್ ತೆಗಿದಿದೆ. ಆಗಲೇ ನೋಂದಣೆ ಮಾಡು ಅಂತ ಕೇಳಲಿಲ್ಲ. ಆಗ ಕೇಳಿದ್ದು ಸಂಘದ ಕಾರ್ಯ ಪದ್ಧತಿ ಮತ್ತು ಉದ್ದೇಶ ಇವುಗಳನ್ನು ಲಿಖಿತವಾಗಿ ತಿಳಿಸಿ ಅಂತ ಕೇಳಲಾಗಿತ್ತು. ಆಗ ಸಂಘ ತಿಳಿಸಿದೆ, ಉದ್ದೇಶ ತಾಯಿ ಭಾರತ ಮಾತೆಯನ್ನು ವಿಶ್ವಗುರು ಮಾಡುವುದು.

ಹಿಂದುಗಳನ್ನು ಸಂಘಟಿಸುವುದು, ವ್ಯಕ್ತಿಗೆ ಸಂಸ್ಕಾರ ಕೊಟ್ಟು ವ್ಯಕ್ತಿ ಮೂಲಕ ರಾಷ್ಟ್ರ ನಿರ್ಮಾಣದ ಕಾರ್ಯ ಪದ್ಧತಿ ಲಿಖಿತವಾಗಿ ನೀಡಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಸಂಸದ ಡಾ.ಉಮೇಶ್ ಜಾಧವ್ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಎಂಎಲ್ಸಿ ಶಶೀಲ್ ನಮೋಶಿ, ಒಬಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅವ್ವಣ್ಣಾ ಮ್ಯಾಕೇರಿ, ಶಿವರಾಜ್ ಪಾಟೀಲ್ ರದ್ದೇವಾಡಗಿ, ಅಮರನಾಥ ಪಾಟೀಲ್, ಶರಣಪ್ಪ ತಳವಾರ, ನಿತೀನ್ ಗುತ್ತೇದಾರ್, ಶೋಭಾ ಬಾಣಿ, ಸಂಜಯ್ ಮಿಸ್ಕಿನ್, ಮಂಡಲ ಅಧ್ಯಕ್ಷ ದೇವೇಂದ್ರ ಮುತ್ಕೋಡ್, ಮಲ್ಲಿಕಾರ್ಜುನ ಕುಸ್ತಿ, ರೇವಣಸಿದ್ದಪ್ಪ ಸಂಕಾಲಿ, ಸುರೇಶ್ ಪಾಟೀಲ್ ನೇದಲಗಿ ಉಪಸ್ಥಿತರಿದ್ದರು.



❝ **ರಾಷ್ಟ್ರವಾದಿ ಸಂಘಟನೆ ಕೋಮುವಾದಿ ಅಂತ ಹೇಳೋದು ಒಂದು ಅಸಂಬದ್ಧ. ದೇಶವನ್ನೇ ವಿಭಜನೆ ಸಿದ್ಧಾಂತ ಅನುಸರಿಸುವಂತಹ ಮುಸ್ಲಿಂ ಲೀಗ್ ಜತೆಗೆ ಆಡಳಿತ ನಡೆಸುವವರು ರಾಷ್ಟ್ರವಾದಿ ಸಂಘಟನೆ ಮೇಲೆ ಆಪಾದನೆ ಮಾಡ್ತಾ ಇದಾರೆ. ದೇಶ ಒಡೆಯುವವರು ಸೆಕ್ಯೂಲರ್, ಅಖಂಡ ಭಾರತ ಬಗ್ಗೆ ಮಾತನಾಡುವವರು ಕಮ್ಯೂನಲ್. ಇವರ ಬುದ್ಧಿಮತ್ತೆಗೆ ಏನಾಗಿದೆ ಎಂಬುದು ಗೊತ್ತಾಗುತ್ತಿಲ್ಲ.**

■ ಸಿ.ಟಿ.ರವಿ, ಎಂಎಲ್ಸಿ

ಭಾರತದ ಉನ್ನತಿ ತಡೆಗೆ ಹುನ್ನಾರ

ಪುಟ ೧➡ ಅವರು ಹಣ ಮತ್ತು ಸಂಘಟನಾ ಸಾಮರ್ಥ್ಯದಂತಹ ಬೆಂಬಲವನ್ನು ಕೂಡ ಹೊಂದಿದ್ದಾರೆ. ಆದರೆ ಇದೆಲ್ಲದರ ಹೊರತಾಗಿಯೂ, ಜನರು ಇದಕ್ಕೆ ಬಲಿಯಾಗದೆ ತಮ್ಮ ಮೌಲ್ಯಗಳ ಮೇಲೆ ದೃಢವಾಗಿ ನಿಲ್ಲಬೇಕು. ಭಾರತದ ಪ್ರಗತಿಯು ತನ್ನದೇ ಆದ ಕಲ್ಯಾಣಕ್ಕಾಗಿ ಮಾತ್ರವಲ್ಲದೆ ಇಡೀ ಪ್ರಪಂಚದ ಕಲ್ಯಾಣಕ್ಕಾಗಿ ಅತ್ಯಗತ್ಯ. ಜಗತ್ತಿನ ಒಳಿತಿಗೆ ಬಲಿಷ್ಠ ಭಾರತದ ಅಗತ್ಯವಿದೆ ಎಂದು ಭಾಗವತ್ ಹೇಳಿದರು. ಹಲ್ದಿಘಾಟಿ ಮತ್ತು ಮಹಾರಾಣಾ ಪ್ರತಾಪ್ ಅವರ ಐತಿಹಾಸಿಕ ಯುದ್ಧದ ಪರಂಪರೆಯನ್ನು ನೆನಪಿಸಿಕೊಂಡ ಮೋಹನ್ ಭಾಗವತ್, ನಮ್ಮ ಇತಿಹಾಸ ಗುಲಾಮಗಿರಿಯದ್ದಲ್ಲ, ಇದು ನಮ್ಮನ್ನು ಗುಲಾಮರನ್ನಾಗಿ ಮಾಡಲು ಪ್ರಯತ್ನಿಸಿದವರ ವಿರುದ್ಧದ ಹೋರಾಟದ ಇತಿಹಾಸ. ಮಹಾರಾಣಾ ಪ್ರತಾಪ್ ಅವರ ಹೋರಾಟವು ಧರ್ಮ, ಸಂಸ್ಕೃತಿ ಮತ್ತು ಸ್ವಾಭಿಮಾನವನ್ನು ರಕ್ಷಿಸುವುದಾಗಿತ್ತು. ಮಹಾರಾಣಾ ಪ್ರತಾಪ್ ಯಾವುದೇ ವೈಯಕ್ತಿಕ ಲಾಭಕ್ಕಾಗಿ ಹೋರಾಡಲಿಲ್ಲ, ಸಮಾಜ, ಸಂಸ್ಕೃತಿ ಮತ್ತು ತನ್ನ ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಅವರು ಇಂತಹ ಆಕ್ರಮಣಗಳ ವಿರುದ್ಧ ಶೌರ್ಯ-ಪರಾಕ್ರಮದಿಂದ ಹೋರಾಡಿದ್ದರು ಎಂದು ನೆನಪಿಸಿದರು.

ಬಿಜೆಪಿ ಶಾಸಕಾಂಗ ಪಕ್ಷದಿಂದ ಸಭೆ

• **ಬೆಂಗಳೂರು:** ವಿಧಾನಸಭೆಯಿಂದ ಆಯ್ಕೆಯಾಗುವ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಗುರುವಾರ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಬುಧವಾರ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಖಾಸಗಿ ಹೋಟೆಲ್‌ನಲ್ಲಿ ಜರುಗಿತು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್. ಅಶೋಕ ಮತ್ತು ಛಲವಾದಿ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ವಿಧಾನ ಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್. ರವಿ ಕುಮಾರ್ ಅವರನ್ನು ಬೂತ್ ಏಜೆಂಟ್ ಆಗಿ ನಿಯೋಜಿಸಲಾಗಿದೆ. ಪಕ್ಷದಿಂದ ಇಬ್ಬರು ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗಿದೆ. ಲಿಂಗರಾಜ್ ಪಾಟೀಲ್ ಮತ್ತು ರಘು ಕೌಟಿಲ್ಯ ಅವರು ಚುನಾವಣಾ ಕಣದಲ್ಲಿದ್ದಾರೆ. ಒಟ್ಟು 62 ಶಾಸಕರು ಬಿಜೆಪಿಯಲ್ಲಿದ್ದಾರೆ.

ಚಿನ್ನಯ್ಯ ಹೇಳಿದವರನ್ನೂ ಎಸ್‌ಐಟಿ ತನಿಖೆ ನಡೆಸಲಿ

ಪುಟ ೧➡ ಬದಲಾಗಿ ಆತನಿಗೆ ನಿರ್ದೇಶನ ನೀಡಲು ಷಡ್ಯಂತ್ರ ನಡೆಸಿದವರು ಹಾಕಿದ್ದಾಗಿದೆ. ಆತ ಶವ ಹೂತಿದ್ದೇನೆನ್ನುವ ಜಾಗಗಳನ್ನು ತೋರಿಸುವಾಗ ಇಯರ್‌ಫೋನ್ ಹಾಕಿಕೊಂಡಿದ್ದ. ಆ ಇಯರ್ ಫೋನ್ ಮುಚ್ಚಿಕೊಳ್ಳಲು ಮುಖಕ್ಕೆ ಮಾಸ್ಕ್ ಹಾಕಿಕೊಂಡಿದ್ದ. ಅವನಿಗೆ ಬೇರೆ ಯಾರೋ ವ್ಯಕ್ತಿಗಳು ಹೊರಗಿನಿಂದ ನಿರ್ದೇಶನ ನೀಡುತ್ತಿದ್ದರು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಪ್ರಕರಣದಲ್ಲಿ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಜೈಲಿಗೆ ಹೋದರೆ ಚಿನ್ನಯ್ಯನಿಗೆ 50 ಲಕ್ಷ ರೂ. ಮತ್ತು ಮನೆ ಕಟ್ಟಿಕೊಡುವ ಮಾತುಕತೆಯಾಗಿತ್ತು ಎಂಬುದನ್ನು ರಿಟ್ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಆದ್ದರಿಂದ ಚಿನ್ನಯ್ಯನಿಗೆ ಬ್ರೈನ್ ಮ್ಯಾಪಿಂಗ್ ಪರೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿದರು.

ಉಪ ಮುಖ್ಯಮಂತ್ರಿಯಾಗಿದ್ದ ಡಿ.ಕೆ. ಶಿವಕುಮಾರ್ ಅವರು ವಿಧಾನಸಭೆಯಲ್ಲಿ ಇದೊಂದು ಷಡ್ಯಂತ್ರ ಎಂದು ಹೇಳಿದ್ದಾರೆ. ದಕ್ಷಿಣ ಕನ್ನಡ ಉಸ್ತುವಾರಿ ಸಚಿವರಾಗಿದ್ದ ದಿನೇಶ್ ಗುಂಡೂರಾವ್ ಅವರು ಎಡಪಂಥೀಯರ ಒತ್ತಡದಿಂದ ಎಸ್‌ಐಟಿ ರಚನೆ ಮಾಡಲಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಎಸ್‌ಐಟಿ ರಚನೆಗೂ ಮೊದಲೇ ಪ್ರಣಬ್ ಮೊಹಂತಿ ಅವರೇ ಎಸ್‌ಐಟಿ ಮುಖ್ಯಸ್ಥರಾಗಿರಬೇಕೆಂದು ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಚಿನ್ನಯ್ಯ ಬ್ರೈನ್ ಮ್ಯಾಪಿಂಗ್ ಪರೀಕ್ಷೆಗೆ ಒಪ್ಪಿಕೊಂಡಿದ್ದ. ದ.ಕ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬ್ರೈನ್ ಮ್ಯಾಪಿಂಗ್‌ಗೆ ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದಾಗ್ಯೂ ಸರ್ಕಾರ ಎಸ್‌ಐಟಿ ರಚನೆ ಮಾಡಿತ್ತು. ಆದರೆ, ಈವರೆಗೆ ಎಸ್‌ಐಟಿ ಮಧ್ಯಂತರ ವರದಿ ಕೊಟ್ಟಿಲ್ಲ. ಹೀಗಾಗಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಸರ್ಕಾರವು ಈ ತನಿಖೆಯ ಮಧ್ಯಂತರ ವರದಿಯನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಹೇಳಿದರು.

ಅಲ್ಲಲ್ಲಿ ಜನಾಗ್ರಹ ಸಭೆಗಳ ಆಯೋಜನೆ

ಪುಟ ೧➡ ಆದಷ್ಟು ಬೇಗ ಈ ಪ್ರಕರಣದಲ್ಲಿ ನ್ಯಾಯ ಹೊರತರಬೇಕು. ಹೊಸ ಗೃಹ ಸಚಿವರು ಕೂಡ ಈ ಪ್ರಕರಣದಲ್ಲಿ ನೂರಾರು ಕೋಟಿ ಆಸ್ತಿಕರಿಗೆ ಪರಿಹಾರ ಕೊಡಿಸುತ್ತಾರೆಂಬ ವಿಶ್ವಾಸವಿದೆ. ಒಂದು ವೇಳೆ ರಾಜ್ಯ ಸರ್ಕಾರ ಸ್ಪಂದಿಸದಿದ್ದರೆ ಕೇಂದ್ರ ಸರ್ಕಾರಕ್ಕೆ ಮಧ್ಯ ಪ್ರವೇಶಿಸಲು ಮನವಿ ಮಾಡುತ್ತೇವೆ. ಸಮಗ್ರ ತನಿಖೆ ನಡೆಸುವಂತೆ ಆಗ್ರಹಿಸುತ್ತೇವೆ ಎಂದು ತಿಳಿಸಿದರು.



❝ **ನಟ ಪ್ರಕಾಶ್ ರಾಜ್ ಅವರು ತಾವು ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಅವರಲ್ಲಿ ಮಾತುಕತೆ ನಡೆಸಿದ್ದಾಗಿ ಒಪ್ಪಿಕೊಂಡಿದ್ದಾರೆ. ಈಗ ಎಸ್‌ಐಟಿ ವಿಚಾರಣೆಗೂ ಒಪ್ಪಿಕೊಂಡು ಬರಲಿ, ಆಗ ಅವರ ಕುರಿತಾಗಿರುವ ವಿಶ್ವಾಸ ಹೆಚ್ಚು ಬೆಳೆಯುತ್ತದೆ.**

■ ಚಕ್ರವರ್ತಿ ಸೂಲಿಬೆಲೆ, ಪುಣ್ಯಕ್ಷೇತ್ರ ಸಂರಕ್ಷಣಾ ಸಮಿತಿ

ಯುಬಿಟಿಗೆ ಬಂಡಾಯ ಬಿಸಿ

• **ಹೊಸದಿಲ್ಲಿ:** ಶಿವಸೇನೆ ಯುಬಿಟಿ(ಉದ್ಧವ್ ಬಾಳಾ ಸಾಹೇಬ್ ಠಾಕ್ರೆ)ಯಲ್ಲಿ ಮತ್ತೊಂದು ವಿಭಜನೆಯ ಸುಳಿವು ದಟ್ಟವಾಗಿದ್ದು, ಪಕ್ಷದ ಕೆಲವು ಬಂಡಾಯ ನಾಯಕರು ಬುಧವಾರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಅನೌಪಚಾರಿಕವಾಗಿ ಭೇಟಿಯಾಗಿ, ಲೋಕಸಭೆಯಲ್ಲಿರುವ ಪಕ್ಷದ 9 ಸಂಸದರ ಪೈಕಿ 6 ಮಂದಿ ತಮ್ಮೊಂದಿಗಿರುವುದಾಗಿ ಹೇಳಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಬಂಡಾಯ ಸಂಸದರು ಪ್ರತ್ಯೇಕ ಗುಂಪಿನ ಮಾನ್ಯತೆ ಕೋರಿ, ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ ಶಿಂಧೆ ನೇತೃತ್ವದ ಶಿವಸೇನೆಗೆ ವಿಲೀನಗೊಳ್ಳುವ ಸಂಬಂಧ ಶೀಘ್ರದಲ್ಲೇ ಅಧಿಕೃತವಾಗಿ ಸ್ಪೀಕರ್ ಭೇಟಿಯಾಗುವ ಸಾಧ್ಯತೆಯಿದೆ. ಈ ಭೇಟಿ ಗುರುವಾರವೇ ನಡೆಯಬಹುದು ಎನ್ನಲಾಗಿದೆ.

ಇಂದು ಸಭೆ: ಈ ನಡುವೆ ಉದ್ಧವ್ ಠಾಕ್ರೆ ನಿಷ್ಠ ರಾಜಸಭಾ ಸದಸ್ಯ ಸಂಜಯ್ ರಾವತ್, ಆಡಳಿತಾರೂಢ ಶಿವಸೇನೆಗೆ ಸೇರುವ ಕುರಿತು ಪಕ್ಷಕ್ಕೆ ಯಾರಿಂದಲೂ ಮಾಹಿತಿ ಬಂದಿಲ್ಲ ಎಂದು ಹೇಳಿದ್ದಾರೆ. ಶಿವಸೇನೆ ಯುಬಿಟಿ ಸಂಸದರೆಲ್ಲರೂ ಗುರುವಾರ ಬೆಳಗ್ಗೆ 11 ಗಂಟೆಗೆ ನಡೆಯುವ ಸಂಸದೀಯ ಪಕ್ಷದ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ಮೂರು ಸಾಲಿನ ವಿಪ್ ಜಾರಿಗೊಳಿಸಲಾಗಿದೆ. ಗುರುವಾರದ ಸಭೆಯ ನಂತರ ಎಲ್ಲವೂ ಸ್ಪಷ್ಟವಾಗಲಿದೆ ಎಂದು ರಾವತ್ ಸುದ್ದಿಗಾರರಿಗೆ ತಿಳಿಸಿದರು. ಅವರು ಪಕ್ಷದ ಲೋಕಸಭಾ ಸದಸ್ಯರಾದ ಅರವಿಂದ್ ಸಾವಂತ್ ಮತ್ತು ಅನಿಲ್ ದೇಸಾಯಿ ಅವರೊಂದಿಗೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿಯಾದರು.

ರಾವತ್ ಆಕ್ರೋಶ: ಶಿಂಧೆ ಶಿಬಿರದ ಮೂಲಗಳ ಪ್ರಕಾರ, ಬಂಡಾಯ ಸಂಸದರ ವಿರುದ್ಧ ಯುಬಿಟಿ ನಾಯಕರು ತೀವ್ರ ದಾಳಿ ನಡೆಸುವುದರಿಂದ ಅಸಮಾಧಾನ ಇನ್ನಷ್ಟು ಹೆಚ್ಚಾಗಿದೆ. ಸ್ಪೀಕರ್ ಭೇಟಿಗೂ ಮುನ್ನ ನಡೆದ ಸುದ್ದಿಗೋಷ್ಠಿಯಲ್ಲಿ ರಾವತ್ ಬಂಡಾಯ ಸಂಸದರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅವರು ಅವಾಚ್ಯ ಪದಗಳನ್ನು ಬಳಸಿದ ಪ್ರಸಂಗ ಕೂಡ ನಡೆದಿದೆ.

ಸುದ್ದಿಗೋಷ್ಠಿಯಲ್ಲಿ ರಾವತ್ ಅವರೊಂದಿಗೆ ಅರವಿಂದ್ ಸಾವಂತ್, ಅನಿಲ್ ದೇಸಾಯಿ ಹಾಗೂ ಲೋಕಸಭಾ ಸದಸ್ಯ ರಾಜಾಭಾವು ವಾಜೆ ಮಾತ್ರ ಉಪಸ್ಥಿತರಿದ್ದರು. ಇದರಿಂದ ಪಕ್ಷ ಎದುರಿಸುತ್ತಿರುವ ಸಂಕಷ್ಟ ಮತ್ತಷ್ಟು ಸ್ಪಷ್ಟವಾಗಿದೆ.

ಆರು ಮಂದಿ ಒಟ್ಟಿಗೆ ಹೋದರೆ ಮಾತ್ರ ರಕ್ಷಣೆ: ಲೋಕಸಭೆಯಲ್ಲಿ ಶಿವಸೇನೆ ಯುಬಿಟಿಗೆ ಒಟ್ಟು 9 ಸಂಸದರು ಇದ್ದಾರೆ. ಪಕ್ಷಾಂತರ ವಿರೋಧಿ ಕಾನೂನಿನ ಅಡಿಯಲ್ಲಿ ಅನರ್ಹತೆಯಿಂದ ತಪ್ಪಿಸಿಕೊಳ್ಳಬೇಕಾದರೆ ಕನಿಷ್ಠ 6 ಮಂದಿ ಸಂಸದರು ಒಟ್ಟಿಗೇ ಬದಲಾಗಬೇಕಾಗುತ್ತದೆ. 2022ರಲ್ಲಿ ಅವಿಭಜಿತ ಶಿವಸೇನೆಯಲ್ಲಿ ನಡೆದ ದೊಡ್ಡ ವಿಭಜನೆಗೆ ಏಕನಾಥ ಶಿಂಧೆ ಪ್ರಮುಖ ಕಾರಣರಾಗಿದ್ದರು. ಆ ಬಂಡಾಯದಿಂದ ಮಹಾರಾಷ್ಟ್ರದ ಮಹಾ ವಿಕಾಸ್ ಅಘಾಡಿ ಸರಕಾರ ಪತನಗೊಂಡಿತ್ತು.

ಯಾಕೆ 6 ಸಂಖ್ಯೆಗೆ ಮಹತ್ವ? ಶಿವಸೇನೆ ಯುಬಿಟಿಗೆ ಲೋಕಸಭೆಯಲ್ಲಿ 9 ಸಂಸದರು ಇದ್ದಾರೆ. ಪಕ್ಷಾಂತರ ವಿರೋಧಿ ಕಾನೂನಿನ ಪ್ರಕಾರ, ಅನರ್ಹತೆಯಿಂದ ತಪ್ಪಿಸಿಕೊಳ್ಳಲು ಕನಿಷ್ಠ ಎರಡು ಮೂರನೇ ಭಾಗದ ಬೆಂಬಲ ಬೇಕಾಗುತ್ತದೆ. ಈ ಲೆಕ್ಕದಲ್ಲಿ 6 ಸಂಸದರು ಒಟ್ಟಾಗಿ ನಿಲುವು ಬದಲಿಸಿದರೆ ಮಾತ್ರ ಬಂಡಾಯ ಗುಂಪು ಕಾನೂನು ರಕ್ಷಣೆಯ ವಾದ ಮಾಡಬಹುದು. ಆದರೆ ಯುಬಿಟಿ ನಾಯಕರು, ಮೂಲ ಪಕ್ಷವೇ ವಿಲೀನಗೊಳ್ಳಬೇಕೇ ಹೊರತು ಸಂಸದರ ಗುಂಪು ಮಾತ್ರ ಬೇರೆ ಪಕ್ಷಕ್ಕೆ ಸೇರುವುದು ಮಾನ್ಯವಲ್ಲ ಎಂದು ವಾದಿಸುತ್ತಿದ್ದಾರೆ.

ರಾಂಚಿ ಆರೆಸ್ಸೆಸ್ ಕಚೇರಿ ಮೇಲೆ ಪೆಟ್ರೋಲ್ ಬಾಂಬ್ ದಾಳಿ

• **ಹೊಸದಿಲ್ಲಿ:** ರಾಂಚಿಯಲ್ಲಿರುವ ತನ್ನ ಕಚೇರಿಯ ಮೇಲೆ ಮುಂಜಾನೆ ಪೆಟ್ರೋಲ್ ಬಾಂಬ್‌ಗಳನ್ನು ಎಸೆಯಲಾಗಿದೆ ಎಂದು ಆರ್‌ಎಸ್‌ಎಸ್ ಬುಧವಾರ ಹೇಳಿದೆ. ಈ ಸಂಬಂಧ ತನಿಖೆಗಾಗಿ ಪೊಲೀಸರು ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಿದ್ದಾರೆ. ಚುಟಿಯಾ ಪೊಲೀಸ್ ಠಾಣಾ ಪ್ರದೇಶದ ನಿವಾರನ್ಪುರದ ಆರ್‌ಎಸ್‌ಎಸ್ ಕಚೇರಿಯಲ್ಲಿ ಬುಧವಾರ ಮುಂಜಾನೆ 12.30ರ ಸುಮಾರಿಗೆ ಈ ಕೃತ್ಯ ನಡೆದಿದೆ. ರಾಂಚಿಯಲ್ಲಿರುವ ಆರ್‌ಎಸ್‌ಎಸ್ ಮಾಧ್ಯಮ ಸಮನ್ವಯ ಮುಖ್ಯಸ್ಥರಾದ ಸ್ನಿಗ್ಧಾ ರಂಜನ್, ಆರ್‌ಎಸ್‌ಎಸ್ ಕಚೇರಿಯ ಆವರಣದ ಮೇಲೆ ಪೆಟ್ರೋಲ್ ಬಾಂಬ್‌ಗಳನ್ನು ಎಸೆಯಲಾಗಿದೆ. ವಿಸ್ತೃತ ತನಿಖೆ ಬಳಿಕವೇ ಬಳಸಿದ ವಸ್ತುಗಳ ನಿಖರವಾದ ಸ್ವರೂಪ ದೃಢೀಕರಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ನಾವಿಕರ ಸುರಕ್ಷತೆಗೆ ಪಣ

ಪುಟ ೧➡ ಈ ಒಪ್ಪಂದದ ಅನುಷ್ಠಾನದಲ್ಲಿ ಅವರ ರಕ್ಷಣೆಗೆ ಆದ್ಯತೆ ಸಿಗುತ್ತದೆ ಎಂದು ನಂಬಿದ್ದೇನೆ ಎಂದರು. ಜಿ7 ಶೃಂಗ ಸಭೆಗೆ ಭಾರತವನ್ನು ಅತಿಥಿ ದೇಶವಾಗಿ ಆಹ್ವಾನಿಸಲಾಗಿದ್ದರಿಂದ ಪ್ರಧಾನಿ ಮೋದಿ ಫ್ರಾನ್ಸ್‌ಗೆ ಪ್ರಯಾಣ ಬೆಳೆಸಿದ್ದಾರೆ. ಜಿ7 ಒಕ್ಕೂಟವು ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಬ್ರಿಟನ್, ಅಮೆರಿಕ ಸೇರಿದಂತೆ ವಿಶ್ವದ ಮುಂದುವರಿದ ಆರ್ಥಿಕತೆಗಳನ್ನು ಒಳಗೊಂಡಿದೆ. ಯುರೋಪಿಯನ್ ಯೂನಿಯನ್ ಕೂಡ ಇದರ ಸದಸ್ಯ ರಾಷ್ಟ್ರವಾಗಿದೆ.

ಮೋದಿ ಭೇಟಿ ಅದ್ಭುತ ಎಂದ ಟ್ರಂಪ್

ಪುಟ ೧➡ ಜನರು ಅವರನ್ನು ತುಂಬಾ ಒಳ್ಳೆಯ ಮನುಷ್ಯ ಎನ್ನುತ್ತಾರೆ. ಆದರೆ ಅವರು ತುಂಬಾ ಕಠಿಣ ವ್ಯಕ್ತಿ ಮತ್ತು ಕಠಿಣ ಸಮಾಲೋಚಕ. ಅವರು ಭಾರತೀಯರನ್ನು ಪ್ರೀತಿಸುತ್ತಾರೆ, ಜತೆಗೆ ಅಮೆರಿಕವನ್ನೂ ಪ್ರೀತಿಸುತ್ತಾರೆ ಎಂದು ಟ್ರಂಪ್ ಹೇಳಿದರು. ಪಶ್ಚಿಮ ಏಷ್ಯಾದಲ್ಲಿ ನವದೆಹಲಿ ಪಾತ್ರದ ಕುರಿತು ಕೇಳಿದ ಪ್ರಶ್ನೆಗೆ, ಪ್ರಧಾನಿ ಮೋದಿ ನಾಯಕರಾಗಿರುವವರೆಗೆ ಭಾರತವು ಪ್ರತಿಯೊಂದರಲ್ಲೂ ದೊಡ್ಡ ಪಾತ್ರ ವಹಿಸುತ್ತದೆ ಎಂದು ನಾನು ಭಾವಿಸುತ್ತೇನೆ ಎಂದರು. ದ್ವಿಪಕ್ಷೀಯ ಸಂಬಂಧಗಳಲ್ಲಾದ ಬಿಕ್ಕಟ್ಟಿನ ಕುರಿತು ಉತ್ತರಿಸಿದ ಅವರು, ನಾನು ಶ್ವೇತಭವನದಲ್ಲಿ ಇರುವವರೆಗೂ ಭಾರತಕ್ಕೆ ಅಮೆರಿಕ ರೂಪದಲ್ಲಿ ಒಬ್ಬ ಉತ್ತಮ ಸ್ನೇಹಿತ ಇರುತ್ತಾನೆ ಎಂದು ಭರವಸೆ ನೀಡಿದರು.

ಎಸ್‌ಐಆರ್ ದ್ವಂದ್ವ ನಿಲುವು

• **ಬೆಂಗಳೂರು:** ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ ರಾಜ್ಯ ಸರ್ಕಾರವೇ ಅಧಿಕಾರಿಗಳನ್ನು ಎತ್ತಿ ಕಟ್ಟುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪ ಮಾಡಿದ್ದಾರೆ.

ಬೆಂಗಳೂರಿನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರವೇ ಎಸ್‌ಐಆರ್ ವಿಚಾರದಲ್ಲಿ ದ್ವಂದ್ವ ನಿಲುವು ತೋರುತ್ತಿದೆ. ಅಧಿಕಾರಿಗಳನ್ನು ರಾಜ್ಯ ಸರ್ಕಾರವೇ ಎತ್ತಿ ಕಟ್ಟುತ್ತಿದೆ. ಬೂತ್‌ಮಟ್ಟದ ಅಧಿಕಾರಿ(ಬಿಎಲ್‌ಒ)ಗಳು ಪ್ರತಿಭಟನೆ ಮಾಡುತ್ತಾರಂತೆ. ಇದಕ್ಕೆ ರಾಜ್ಯ ಸರ್ಕಾರವೇ ಕುಮ್ಮಕ್ಕು ಕೊಡುತ್ತಿದೆ ಎಂದು ಹೇಳಿದರು.

ವಾಸ್ತವ ಸತ್ಯವನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಪ್ರಿಯಾಂಕ್ ಖರ್ಗೆ ಅವರನ್ನು ಕೇಳುತ್ತೇವೆ. ನಿಮ್ಮ ಕಾಂಗ್ರೆಸ್ ಮಹಾನ್ ನಾಯಕ ರಾಹುಲ್ ಗಾಂಧಿ ದ್ವಿಪೌರತ್ವ ಪಡೆದಿದ್ದಾರೆ. ಇಲ್ಲವೆಂದು ಬಹಿರಂಗವಾಗಿ ಹೇಳಲಿ ನೋಡೋಣ. ರಾಹುಲ್ ಗಾಂಧಿ ಇನ್ನೊಂದು ದೇಶದ ಪೌರತ್ವ ಇಟ್ಟುಕೊಂಡು ಅಕ್ರಮವಾಗಿ ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸತ್ಯ ಹೇಳುವ ಕೆಲಸ ಕಾಂಗ್ರೆಸ್ ಮಾಡಲಿ ಎಂದು ಸವಾಲು ಹಾಕಿದರು. ಸಾಂವಿಧಾನಿಕ ಸಂಸ್ಥೆ ವಿರುದ್ಧ ಅಧಿಕಾರಿಗಳನ್ನು, ಜನರನ್ನು ಎತ್ತಿ ಕಟ್ಟುವ ಕೆಲಸಕ್ಕೆ ಸರ್ಕಾರ ಮುಂದಾಗಿದೆ ಎಂದು ಕಿಡಿಕಾರಿದರು.

ಮಾವು ಬೆಲೆ ಕುಸಿತ: ಕೇಂದ್ರ ಕೃಷಿ ಸಚಿವರಿಗೆ ಎಚ್‌ಡಿಕೆ ಪತ್ರ

• **ಬೆಂಗಳೂರು:** ಬೆಲೆ ಕುಸಿತದಿಂದ ಕಂಗೆಟ್ಟಿರುವ ರಾಜ್ಯದ ಮಾವು ಬೆಳೆಗಾರರ ನೆರವಿಗೆ ಧಾವಿಸುವಂತೆ ಕೇಂದ್ರ ಎಚ್.ಡಿ ಕುಮಾರಸ್ವಾಮಿ ಅವರು ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಕೃಷಿ ಸಚಿವರಿಗೆ ಪತ್ರ ಬರೆದು, ರೈತರ ಸಂಕಷ್ಟದ ಬಗ್ಗೆ ಚರ್ಚೆ ನಡೆಸಿರುವ ಅವರು, 2026-27ರ ಋತುವಿನಲ್ಲಿ ರೈತರು ಎದುರಿಸುತ್ತಿರುವ ಬೆಲೆ ಕುಸಿತ ಸಂಕಷ್ಟವನ್ನು ತಗ್ಗಿಸಲು ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ (ಎಂಐಎಸ್) ಮೂಲಕ ನೆರವಾಗಬೇಕು ಹಾಗೂ ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಅಡಿಯಲ್ಲಿ ಬೆಂಬಲ ಬೆಲೆ ನೀಡಬೇಕು ಎಂದು ವಿನಂತಿಸಿದ್ದಾರೆ.



ಕರ್ನಾಟಕವು ಅತಿಹೆಚ್ಚು ಮಾವು ಬೆಳೆಯುವ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದಲ್ಲಿ ಸುಮಾರು 1.45 ಲಕ್ಷ ಹೆಕ್ಟೇರ್‌ನಲ್ಲಿ ಮಾವು ಕೃಷಿ ಮಾಡಲಾಗುತ್ತಿದ್ದು, ಪ್ರಸಕ್ತ ಋತುವಿನಲ್ಲಿ ಸುಮಾರು 10 ಲಕ್ಷ ಮೆಟ್ರಿಕ್ ಟನ್ ಮಾವು ಬೆಳೆಯಲಾಗಿದೆ ಆದರೆ, ಬೆಲೆ ಕುಸಿತ ಹಾಗೂ ಪ್ರತಿಕೂಲಕರ ಹವಾಮಾನದಿಂದ ರೈತರು ಸಂಕಷ್ಟಕ್ಕೆ ತುತ್ತಾಗಿದ್ದಾರೆ ಎಂದು ಗಮನ ಸೆಳೆದಿದ್ದಾರೆ.

ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಬೆಂಗಳೂರು ಗ್ರಾಮಾಂತರ, ಧಾರವಾಡ, ತುಮಕೂರು ಮತ್ತು ಹಾವೇರಿಯಂತಹ ಜಿಲ್ಲೆಗಳಲ್ಲಿ ಸಾವಿರಾರು ರೈತ ಕುಟುಂಬಗಳು ಮಾವು ಕೃಷಿಯನ್ನು ಅವಲಂಬಿಸಿದೆ. ಇದು ಅತ್ಯಂತ ಪ್ರಮುಖ ವಾಣಿಜ್ಯ ತೋಟಗಾರಿಕಾ ಬೆಳೆಯಾಗಿದೆ. ಮಾರುಕಟ್ಟೆಯ ಏರಿಳಿತಗಳು ಮತ್ತು ಅತಿಯಾದ ಪೂರೈಕೆ ಪರಿಸ್ಥಿತಿಗಳಿಂದಾಗಿ ಅನೇಕ ಬೆಳೆಗಾರರು ತಮ್ಮ ಉತ್ಪನ್ನಗಳನ್ನು ಲಾಭದಾಯಕ ಮಟ್ಟಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವ ಪರಿಸ್ಥಿತಿ ಸೃಷ್ಟಿಯಾಗಿದೆ ಎಂದು ತಮ್ಮ ಪತ್ರದಲ್ಲಿ ಕೇಂದ್ರ ಸಚಿವರು ಉಲ್ಲೇಖಿಸಿದ್ದಾರೆ.

ಅಹವಾಲು ಸ್ವೀಕಾರ



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬುಧವಾರ ಸದಾಶಿವನಗರ ನಿವಾಸದ ಬಳಿ ಆಗಮಿಸಿದ್ದ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

232 ತಹಸೀಲ್ದಾರ್ ಹುದ್ದೆ ಬಡ್ತಿ: ಡಿಸಿಎಂ

• **ಬೆಂಗಳೂರು:** ಗ್ರೇಡ್-2 ತಹಸೀಲ್ದಾರ್ ಹುದ್ದೆಯಿಂದ ಗ್ರೇಡ್-1 ಹುದ್ದೆಗೆ ಬಡ್ತಿ ನೀಡಬೇಕೆಂಬ ಬಹುಕಾಲದ ಬೇಡಿಕೆ ಕಳೆದ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ಸರ್ಕಾರವು ಇದನ್ನು ಆದ್ಯತೆ ಮೇರೆಗೆ ಪರಿಗಣಿಸಿ, ಅರ್ಹತೆಗೆ ಅನುಸಾರವಾಗಿ ಬಡ್ತಿ ನೀಡಿದೆ ಎಂದು ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.



ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿ, ಇದು ಕೇವಲ ಆಡಳಿತಾತ್ಮಕ ಮೈಲುಗಲ್ಲಷ್ಟೇ ಅಲ್ಲ. ಬದಲಿಗೆ ನ್ಯಾಯಬದ್ಧ, ಪಾರದರ್ಶಕ ಹಾಗೂ ಸಮಯೋಚಿತ ನಿರ್ಧಾರಗಳ ಮೂಲಕ ಆಡಳಿತ ಯಂತ್ರವನ್ನು ಬಲಪಡಿಸುವ ಸರ್ಕಾರದ ದೃಢವಾದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಒಟ್ಟು 232 ಗ್ರೇಡ್ -2 ತಹಸೀಲ್ದಾರ್‌ಗಳಿಗೆ ಗ್ರೇಡ್ 1 ತಹಸೀಲ್ದಾರ್ ಹುದ್ದೆಗೆ ಬಡ್ತಿ ನೀಡಲಾಗಿದೆ.

ಬಲಿಷ್ಠ ಮತ್ತು ಸ್ಫೂರ್ತಿದಾಯಕ ಆಡಳಿತ ಯಂತ್ರವೇ ಪರಿಣಾಮಕಾರಿ ಆಡಳಿತದ ಬುನಾದಿ. ಕಂದಾಯ ಇಲಾಖೆಯು ಪ್ರತಿಯೊಬ್ಬ ನಾಗರಿಕರಿಗೂ ಪಾರದರ್ಶಕ, ಉತ್ತರದಾಯಿ ಹಾಗೂ ಕಾಳಜಿಯುಕ್ತ ಸೇವೆಯನ್ನು ಒದಗಿಸಬೇಕೆಂಬ ರಾಜ್ಯ ಸರ್ಕಾರದ ಸಂಕಲ್ಪದ ಭಾಗವೇ ಈ ಮಹತ್ವದ ನಿರ್ಧಾರವಾಗಿದೆ.

> ಹಲವು ವರ್ಷಗಳಿಂದ ಬಾಕಿ ಉಳಿದಿದ್ದ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಮೂಲಕ, ಸರ್ಕಾರವು ಅರ್ಹತೆ, ಬದ್ಧತೆ ಮತ್ತು ಪ್ರಾಮಾಣಿಕತೆಯನ್ನು ಗುರುತಿಸಿ ಸದಾ ಪ್ರೋತ್ಸಾಹಿಸುತ್ತದೆ ಎಂಬ ವಿಶ್ವಾಸವನ್ನು ನೌಕರ ವರ್ಗದಲ್ಲಿ ಮೂಡಿಸುವಲ್ಲಿ ನಾವು ಯಶಸ್ವಿಯಾಗಿದ್ದೇವೆ ಎಂಬ ನಂಬಿಕೆ ನನಗಿದೆ.
> ■ **ಡಾ.ಜಿ.ಪರಮೇಶ್ವರ್,** ಡಿಸಿಎಂ

ಈ ಕಾರ್ಯವನ್ನು ಸುಗಮವಾಗಿ ಸಾಕಾರಗೊಳಿಸಿದ ಎಲ್ಲಾ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಯ ನಿರಂತರ ಪ್ರಯತ್ನಗಳಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಪರಮೇಶ್ವರ್ ಸಲ್ಲಿಸಿದ್ದಾರೆ.

ಉತ್ತರದಾಯಿ, ಪಾರದರ್ಶಕ, ಸಂವೇದನಾಶೀಲ ಮತ್ತು ಸರ್ವರಿಗೂ ಸುಲಭವಾಗಿ ಲಭ್ಯವಾಗುವ ಸೇವಾ ಮಾದರಿಯ ಮೂಲಕ ನವ ಕರ್ನಾಟಕವನ್ನು ಕಟ್ಟೋಣ ಎಂದು ಅಧಿಕಾರಿ ವರ್ಗದಲ್ಲಿ ಉಪ ಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ ಮನವಿ ಮಾಡಿದ್ದಾರೆ.

ಕಿರುಸುದ್ದಿ

150 ಪಿಡಿಒ ಭರ್ತಿಗೆ ಕೆಪಿಎಸ್‌ಸಿಗೆ ಖಂಡ್ರೆ ಪತ್ರ

• **ಬೆಂಗಳೂರು:** ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ) 150 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಶೀಘ್ರ ಪೂರ್ಣಗೊಳಿಸುವಂತೆ ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ, ಕರ್ನಾಟಕ ಲೋಕ ಸೇವಾ ಆಯೋಗದ ಕಾರ್ಯದರ್ಶಿಗೆ ತಿಳಿಸಿದ್ದಾರೆ. ಕೆಪಿಎಸ್‌ಸಿ ಕಾರ್ಯದರ್ಶಿಗೆ ಕಳಿಸಿರುವ ಲಿಖಿತ ಸೂಚನೆಯಲ್ಲಿ ಅವರು, ಗ್ರಾಮೀಣ ಪ್ರದೇಶದ ಪ್ರಗತಿಯಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿದ್ದು, ಕಲ್ಯಾಣ ಕರ್ನಾಟಕ ವೃಂದದಲ್ಲಿ 97 ಹಾಗೂ ಉಳಿಕೆ ವೃಂದದಲ್ಲಿ 150 ಪಂಚಾಯ್ತಿ ಅಧಿಕಾರಿಗಳ ಹುದ್ದೆಗಳ ಭರ್ತಿಗೆ 2024ರಲ್ಲಿ ಅಧಿಸೂಚನೆ ಆಗಿದ್ದರೂ ಅಂತಿಮ ಪಟ್ಟಿ ಪ್ರಕಟಿಸದಿರುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ನೇಮಕಾತಿಯಲ್ಲಿನ ಈ ವಿಳಂಬದಿಂದಾಗಿ ಗ್ರಾಮೀಣಾಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅಡ್ಡಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಆದಷ್ಟು ಶೀಘ್ರ ಪೂರ್ಣಗೊಳಿಸುವಂತೆ ತಿಳಿಸಿದ್ದಾರೆ.



ಶಾಲಾ ಸಿಬ್ಬಂದಿ ಭಿನ್ನಾಭಿಪ್ರಾಯ: ಮುಖ್ಯಶಿಕ್ಷಕ ಆತ್ಮಹತ್ಯೆ

• **ದಾವಣಗೆರೆ:** ಜಿಲ್ಲೆಯ ಹರಿಹರ ತಾಲೂಕು ಕೊಕ್ಕನೂರು ಗ್ರಾಮದ ಸರ್ಕಾರಿ ಶಾಲೆಯಲ್ಲಿ ವಿಷ ಸೇವಿಸಿ ಗಂಭೀರ ಸ್ಥಿತಿಯಲ್ಲಿದ್ದ ಮುಖ್ಯಶಿಕ್ಷಕ ನಗರದ ಖಾಸಗಿ ಆಸ್ಪತ್ರೆಯೊಂದರಲ್ಲಿ ಮಂಗಳವಾರ ತಡರಾತ್ರಿ ಸಾವನ್ನಪ್ಪಿದ್ದಾರೆ. ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಪ್ರಭಾರ ಮುಖ್ಯಶಿಕ್ಷಕ ಜಯಪ್ಪ(55) ಮೃತಪಟ್ಟವರು. ಕೆಲ ದಿನಗಳಿಂದ ಪ್ರಭಾರ ಮುಖ್ಯಶಿಕ್ಷಕ ಜಯಪ್ಪ ಹಾಗೂ ಶಾಲೆಯ ಸಹ ಶಿಕ್ಷಕರು, ಅಡುಗೆ ಸಿಬ್ಬಂದಿ ನಡುವೆ ಭಿನ್ನಾಭಿಪ್ರಾಯವಿತ್ತು. ವಿವಾದಕ್ಕೆ ಸಂಬಂಧಿಸಿದಂತೆ ಸೋಮವಾರ ಶಾಲಾಭಿವೃದ್ಧಿ ಸಮಿತಿ ಸದಸ್ಯರು, ಗ್ರಾಮದ ಮುಖಂಡರ ನೇತೃತ್ವದಲ್ಲಿ ರಾಜಿ ಸಂಧಾನ ಸಭೆ ನಡೆಸಲಾಗಿತ್ತು. ಸಮಸ್ಯೆ ಬಗೆಹರಿಯದ ಹಿನ್ನೆಲೆಯಲ್ಲಿ ಮಂಗಳವಾರ ಬಿಆರ್‌ಸಿ ನೇತೃತ್ವದಲ್ಲಿ ಸಭೆ ನಡೆಸಲಾಗಿತ್ತು. ಸಭೆ ನಡೆಯುತ್ತಿದ್ದ ವೇಳೆಯೇ ಶೌಚಾಲಯಕ್ಕೆ ತೆರಳಿದ್ದ ಪ್ರಭಾರ ಮುಖ್ಯಶಿಕ್ಷಕ ಜಯಪ್ಪ ಅಲ್ಲಿಯೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅಸ್ವಸ್ಥಗೊಂಡಿದ್ದ ಜಯಪ್ಪ ಅವರನ್ನು ಜಿಲ್ಲಾಸ್ಪತ್ರೆಗೆ, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಬದುಕುಳಿಯಲಿಲ್ಲ. ಬಿಸಿಯೂಟದ ಅಕ್ರಮಗಳಿಗೆ ಬ್ರೇಕ್ ಹಾಕಿದ್ದೇ ಸಾವಿಗೆ ಕಾರಣ ಎಂಬುದಾಗಿ ಮೃತರ ಕುಟುಂಬಸ್ಥರು ಆರೋಪಿಸಿದ್ದಾರೆ.

ರಾಜ್ಯದ ಸಮಸ್ಯೆಗಳಿಗೆ ಸ್ಪಂದಿಸಿ: ಬಿ.ಶ್ರೀರಾಮುಲು

• **ಕೊಟ್ಟೂರು:** ಗೃಹ ಮಂತ್ರಿ ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್‌ಎಸ್ ನೋಂದಣಿ ಮಾಡಿಸಿಕೊಳ್ಳದ ಬಗ್ಗೆ ತಲೆಕೆಡಿಸಿಕೊಳ್ಳದೆ, ರಾಜ್ಯದ ಸಮಸ್ಯೆಗಳಿಗೆ ಸ್ಪಂದಿಸಲಿ. ಆರ್‌ಎಸ್‌ಎಸ್ ನೋಂದಣಿ ಮಾಡಿಸಿಕೊಳ್ಳದಿರುವುದಕ್ಕೆ ಪತ್ರ ವ್ಯವಹಾರ ಮಾಡುವ ಬದಲು ನೋಟೀಸ್ ನೀಡಲಿ. ಅವರ ಪತ್ರಕ್ಕೆ ಮುಖ್ಯಸ್ಥ ಮೋಹನ್ ಭಾಗವತ್ ಉತ್ತರಿಸಿದ್ದಾರೆ. ಅದು ಅರ್ಥವಾಗದಿದ್ದಲ್ಲಿ ಮತ್ತೊಮ್ಮೆ ತರಿಸಿಕೊಂಡು ಅರ್ಥ ಮಾಡಿಕೊಳ್ಳಲಿ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು. ಉಜ್ಜಯಿನಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ರಾಜ್ಯದಲ್ಲಿ ಗೃಹಲಕ್ಷ್ಮೀ ಯೋಜನೆಯ 5 ಸಾವಿರ ಕೋಟಿ ರೂ.ಗಳಿಗೆ ಈವರೆಗೂ ಇಲಾಖೆ ಲೆಕ್ಕ ನೀಡಿಲ್ಲ. ಆರ್ಥಿಕ ದಿವಾಳಿಯತ್ತ ಸಾಗಿರುವುದು ಸ್ಪಷ್ಟವಾಗಿದೆ. ಇದೇ ನೆಪದಲ್ಲಿ 16 ಲಕ್ಷಕ್ಕೂ ಅಧಿಕ ಜನರಿಗೆ ಸಿಗುತ್ತಿದ್ದ ವಿವಿಧ ಯೋಜನೆ ಪಿಂಚಣಿಯನ್ನು ಸ್ಥಗಿತಗೊಳಿಸಿದ್ದಾರೆ ಎಂದು ಆರೋಪಿಸಿದರು.

ವಿಪಕ್ಷಕ್ಕೆ ಡಿಕೆಶಿ ಮುಖ್ಯಮಂತ್ರಿ ಆಗಿದ್ದು ಸಹಿಸಲಾಗುತ್ತಿಲ್ಲ: ಶಾಸಕ ಬಾಲಕೃಷ್ಣ

ಅವಕಾಶವಾದಿ ರಾಜಕಾರಣ

• **ಬಿಡದಿ:** ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗಲೂ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿತ್ತು. ಆಗಲೂ ಕೆಲವು ರೈತರು ವಿರೋಧ ವ್ಯಕ್ತಪಡಿಸುತ್ತಿದ್ದರು. ಆಗ ಕುಮಾರಸ್ವಾಮಿ, ಆರ್. ಅಶೋಕ್ ಅವರು ಯಾಕೆ ಈ ರೈತರ ಪರ ಹೋರಾಟಕ್ಕೆ ಬರಲಿಲ್ಲ? ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಿರುವುದನ್ನು ಸಹಿಸಲಾಗದೇ ಅವರನ್ನು ರಾಜಕೀಯವಾಗಿ ಹಣಿಯಲು ವಿರೋಧ ಪಕ್ಷದವರು ಈ ಯೋಜನೆ ವಿರುದ್ಧ ಹೋರಾಟ ಮಾಡುತ್ತಿದ್ದಾರೆ ಎಂದು ಮಾಗಡಿ ಶಾಸಕ ಬಾಲಕೃಷ್ಣ ಅವರು ಹರಿಹಾಯ್ದರು.

ಬಿಡದಿಯ ರೆಸಾರ್ಟ್ ಬಳಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಜಗದೀಶ್ ಶೆಟ್ಟರ್ ಅವರು ಕೈಗಾರಿಕಾ ಸಚಿವರಾಗಿದ್ದಾಗ 1 ಸಾವಿರ ಎಕರೆ ಜಾಗ ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದ್ದರು. ಆಗ ನಾನು ಜಮೀನು ತೆಗೆದುಕೊಳ್ಳುವುದಾದರೆ ಪೂರ್ತಿ ಜಾಗ ಸ್ವಾಧೀನಪಡಿಸಿಕೊಳ್ಳಿ, ಕೇವಲ 1 ಸಾವಿರ ಎಕರೆ ಮಾತ್ರ ಸ್ವಾಧೀನ ಪಡಿಸಿಕೊಂಡು ಉಳಿದ ಜಾಗ ಹಾಗೆ ರೆಡ್ ಜೋನ್‌ನಲ್ಲಿ ಇಡುವುದು ಸೂಕ್ತವಲ್ಲ ಎಂದು ಹೇಳಿದಾಗ ರೈತರು ಸ್ಪಂದಿಸಲಿಲ್ಲ ಎಂದರು.

ಬಳಿಕ ಈಗ ಹೋರಾಟ ಮಾಡುತ್ತಿರುವ ವಿಜಯೇಂದ್ರ ಅವರು ನಮ್ಮನ್ನು ಕರೆದು, ನೀವು ಹೋರಾಟ ಮಾಡಬೇಡಿ, ಕಾನೂನಾತ್ಮಕವಾಗಿ ಉತ್ತಮ ಬೆಲೆ ಕೊಡಿಸುತ್ತೇವೆ. ಇಲ್ಲಿ ಏರೋನಾಟಿಕಲ್‌ಗೆ ಸಂಬಂಧಿಸಿದ ಕೈಗಾರಿಕೆ ತರುವ ಆಲೋಚನೆ ಮಾಡಿದ್ದೇವೆ. ನೀವು ಸಹಕಾರ ನೀಡಿ ಎಂದು ನನಗೆ ಹೇಳಿದ್ದರು. ಬೇಕಾದರೆ ಅವರು ಹಾಗೇ ಹೇಳಿದ್ದರಾ? ಇಲ್ಲವಾ ಎಂದು ವಿಜಯೇಂದ್ರ ಅವರು ಹೇಳಬೇಕು ಎಂದರು. ಅವರನ್ನು ತಾವು ಭೇಟಿಯಾಗಿದ್ದ ಫೋಟೋಗಳನ್ನು ಬಹಿರಂಗಪಡಿಸಿದರು.

ಡಿ.ಕೆ.ಶಿವಕುಮಾರ್ ಅವರಿಗೆ ರಾಜಕೀಯ ವಿರೋಧ ಮಾಡುವುದಾದರೆ ಮಾಡಲಿ, ನನ್ನ ತಕರಾರಿಲ್ಲ. ಆದರೆ ವಿಜಯೇಂದ್ರ ಅವರು ಅಂದು ಆ ರೀತಿ ಮಾತನಾಡಿ, ಇಂದು ಯಾವ ಮನಸ್ಥಿತಿಯಲ್ಲಿ ಹೋರಾಟ ಮಾಡುತ್ತಾರೆ? ಅಶ್ವತ್ಥ ನಾರಾಯಣ ಅವರು ಹಾಗೂ ಆಗಿನ ಶಾಸಕರು ಈ ಬಗ್ಗೆ ಯಾವುದೇ ರೀತಿ ಪ್ರತಿಕ್ರಿಯೆ ನೀಡಿರಲಿಲ್ಲ. ಬಿಜೆಪಿಯವರು ಅಂದು ಮನಸ್ಸು ಮಾಡಿದ್ದರೆ ಈ ಯೋಜನೆ ಕೈಬಿಡಬಹುದಾಗಿತ್ತಲ್ಲವೇ?. ರೈತರು ಇಷ್ಟು ಗಲಾಟೆ ಮಾಡುವ ಅಗತ್ಯವೇ ಇರುತ್ತಿರಲಿಲ್ಲ. ಇಂದು ರಾಜಕೀಯವಾಗಿ ವಿರೋಧ ಮಾಡಲು ಬಂದಿದ್ದಾರೆ. ಇಲ್ಲಿ ಅವಕಾಶವಾದ ರಾಜಕಾರಣ ಮಾಡುತ್ತಿದ್ದಾರೆ ಎಂದು ತಿರುಗೇಟು ನೀಡಿದರು.

ಈ ಯೋಜನೆ ಡಿ.ಕೆ. ಶಿವಕುಮಾರ್ ಅವರು ಪ್ರಾರಂಭ ಮಾಡಿರುವುದಲ್ಲ. ಕುಮಾರಸ್ವಾಮಿ ಅವರು ಪ್ರಾರಂಭ ಮಾಡಿದ್ದರು. ನಮ್ಮ ಸರ್ಕಾರ ಬಂದ ಮೇಲೆ ರೈತರು ರೆಡ್ ಜೋನ್ ತೆಗೆಯಿರಿ ಅಥವಾ ಪರಿಹಾರ ನೀಡಿ ಎಂದು ಮನವಿ ಮಾಡಿದ ಕಾರಣಕ್ಕೆ ಈ ಯೋಜನೆಗೆ ಚಾಲನೆ ನೀಡಲಾಯಿತು. ಇದು ಡಿ.ಕೆ. ಶಿವಕುಮಾರ್ ಸಿಎಂ ಆದ ಬಳಿಕ ಕೈಗೊಂಡ ಯೋಜನೆಯಲ್ಲ. ಈ ವಿಚಾರವಾಗಿ ವಿಜಯೇಂದ್ರ ಅವರ ಜೊತೆಗೆ ಚರ್ಚೆ ಮಾಡಲು ನಾನು ಸಿದ್ಧನಿದ್ದೇನೆ ಎಂದರು.

ರೈತರು 50% ಅಭಿವೃದ್ಧಿ ಹೊಂದಿದ ಭೂಮಿ ಪಡೆಯಲು ಅವಕಾಶ: ಕುಮಾರಸ್ವಾಮಿ ಅವರೇ ಈ ಭಾಗದ ಜನರಿಗೆ 40% ಅಭಿವೃದ್ಧಿ ಪಡಿಸಿದ ಭೂಮಿಯನ್ನು ಪರಿಹಾರ ನೀಡುತ್ತೇನೆ ಎಂದು ಭರವಸೆ ನೀಡಿರುವ ವಿಡಿಯೋ ನಾನೇ ತೋರಿಸಿದ್ದೇನೆ. ರೈತರಿಗೆ ಪರಿಹಾರದ ಮೊತ್ತ ಕಡಿಮೆಯಾದರೆ, ಅವರು ಹಣ ತೆಗೆದುಕೊಳ್ಳುವುದು ಬೇಡ 50% ಅಭಿವೃದ್ಧಿಪಡಿಸಿದ ಭೂಮಿಯನ್ನೇ ನೀಡುತ್ತೇವೆ. ಆಗ ಇಂದಿನ ಮಾರುಕಟ್ಟೆ ಬೆಲೆಗಿಂತ ಹೆಚ್ಚಿನ ಹಣ ಸಿಗುತ್ತದೆ. ದುಡ್ಡನ್ನೇ ಪಡೆಯಬೇಕು ಎಂದು ಒತ್ತಡ ಹಾಕುತ್ತಿಲ್ಲ ಎಂದರು.

ಅಶೋಕ್ ಅವರು ಅಧಿವೇಶನದಲ್ಲಿ ಯಾಕೆ ಪ್ರಸ್ತಾಪ ಮಾಡಲಿಲ್ಲ?

ಇದು ರೈತರ ಸಮಸ್ಯೆಯಲ್ಲವೇ. ಈ ವಿಚಾರ ಪ್ರಸ್ತಾಪಿಸಿದರೆ ಯಾರಾದರೂ ಅವರಿಗೆ ವಿರೋಧ ವ್ಯಕ್ತಪಡಿಸುತ್ತಿದ್ದರಾ? ಬೆಳಗಾವಿ ಅಧಿವೇಶನದ ಬಳಿಕ ಬೆಂಗಳೂರಿನಲ್ಲೂ ಅಧಿವೇಶನ ನಡೆಯಲಿಲ್ಲವೇ? ರಾಜ್ಯಪಾಲರ ಜಂಟಿ ಅಧಿವೇಶನ ಹಾಗೂ ಬಜೆಟ್ ಅಧಿವೇಶನ ನಡೆದಿವೆ. ಅವರಿಗೆ ಇಚ್ಛಾಶಕ್ತಿ ಇದ್ದಿದ್ದರೆ ಈ ಅಧಿವೇಶನಗಳಲ್ಲಿ ಯಾಕೆ ಈ ವಿಚಾರ ಎತ್ತಲಿಲ್ಲ? ಎಂದು ತಿಳಿಸಿದರು.

ರೈತರಿಗೆ ಮಾರುಕಟ್ಟೆ ಮೌಲ್ಯಕ್ಕಿಂತ ಪರಿಹಾರ ನಿಗದಿ

ಈ ಭಾಗವನ್ನು ರೆಡ್ ಜೋನ್ ಮಾಡಿದ ಕಾರಣಕ್ಕೆ ಇಲ್ಲಿ ವರ್ಗಾವಣೆ ಪ್ರಕ್ರಿಯೆ ಆಗಲಿಲ್ಲ. ಸರ್ಕಾರ ಸ್ವಾಧೀನಪಡಿಸಿಕೊಳ್ಳಬೇಕಾದರೆ, 2 ವರ್ಷ ವರ್ಗಾವಣೆ ಸಮಯ ತೆಗೆದುಕೊಳ್ಳುತ್ತದೆ. ಇಲ್ಲಿ ವರ್ಗಾವಣೆ ಆಗದೆ ರೆಡ್ ಜೋನ್ ಆದ ಕಾರಣ ಎಸ್‌ಆರ್ ಮೌಲ್ಯ ಹೆಚ್ಚಾಗದೇ, ತಟಸ್ಥವಾಗಿ ಉಳಿಯಿತು. ಪ್ರತಿ ಎಕರೆಗೆ 1.50 ಕೋಟಿ ಮಾತ್ರ ನಿಗದಿಯಾಗಿತ್ತು. ಜಿಲ್ಲಾಧಿಕಾರಿಗಳು ಬೇರೆ ಬೇರೆ ಸುಪ್ರೀಂ ಕೋರ್ಟ್ ಆದೇಶ ತೆಗೆದು ರೈತರಿಗೆ ಹೆಚ್ಚಿನ ಪರಿಹಾರ ನೀಡಬೇಕು ಎಂದು 2.50 ಕೋಟಿಗೆ ನಿಗದಿ ಮಾಡಲಾಗಿದೆ. ಈ ಪರಿಹಾರವನ್ನು ರೈತರು ಒಪ್ಪಿದ್ದರು. ಹಿಂದೆಯಿಂದ ಕೆಲವರು ಕಡ್ಡಿಯಾಡಿಸಿರುವುದಕ್ಕೆ ಈ ರೀತಿ ಆಗಿದೆ. ಕಾನೂನು ಪ್ರಕಾರ ನಾವು ಎಸ್‌ಆರ್ ಮೌಲ್ಯದ ಮೂರು ಪಟ್ಟು ಪರಿಹಾರ ನೀಡಬೇಕು. ಆದರೆ ನಮ್ಮ ಸರ್ಕಾರ ಐದರಿಂದ ಆರುಪಟ್ಟು ಹೆಚ್ಚಿನ ಪರಿಹಾರ ನೀಡುತ್ತಿದೆ ಎಂದು ತಿಳಿಸಿದರು.



> ಶಿವಕುಮಾರ್ ಸಿಎಂ ಆಗಿರುವುದನ್ನು ನಮ್ಮ ಸಮುದಾಯದ ಬೇರೆ ಪಕ್ಷಗಳ ನಾಯಕರಿಗೆ ಸಹಿಸಲು ಆಗುತ್ತಿಲ್ಲ. ಅವರ ಹೊಟ್ಟೆ ತೊಳೆಸುತ್ತದೆ. ಸಿದ್ದರಾಮಯ್ಯ ಅವರು ದೊಡ್ಡ ಮನಸ್ಸು ಮಾಡಿ ಅಧಿಕಾರ ಬಿಟ್ಟುಕೊಟ್ಟಿರುವುದನ್ನು ಅವರಿಂದ ಸಹಿಸಲು ಆಗುತ್ತಿಲ್ಲ.
> ■ **ಬಾಲಕೃಷ್ಣ** ಶಾಸಕ

ಸರ್ಕಾರದ ಕನಸು ಶೀಘ್ರದಲ್ಲೇ ನನಸು: ಸಚಿವ ಶರಣಪ್ರಕಾಶ



• **ಮೈಸೂರು:** ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಸರ್ಕಾರಿ ವೈದ್ಯಕೀಯ ಕಾಲೇಜು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಕ್ಯಾನ್ಸರ್ ಆಸ್ಪತ್ರೆ ನಿರ್ಮಿಸುವ ಸರ್ಕಾರದ ಕನಸು ಶೀಘ್ರದಲ್ಲೇ ನನಸಾಗಲಿದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ ತಿಳಿಸಿದರು.

ಮೈಸೂರಿನ ಮೇಟಗಳ್ಳಿಯಲ್ಲಿರುವ ಜಯದೇವ ಆಸ್ಪತ್ರೆಯಲ್ಲಿ ಸಂಭವಿಸಿದ ಸಾವಿನ ಪ್ರಕರಣಗಳ ಕುರಿತಾದ ವದಂತಿಗಳ ಹಿನ್ನೆಲೆಯಲ್ಲಿ ಅವರು ಬುಧವಾರ ಜಯದೇವ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಆಸ್ಪತ್ರೆ ವೈದ್ಯಾಧಿಕಾರಿಗಳು, ಅಧೀಕ್ಷಕರು, ಜಯಸಂಸ್ಥೆಯ ನಿರ್ದೇಶಕರೊಂದಿಗೆ ಸಭೆ ನಡೆಸಿ, ಮಾಹಿತಿಯನ್ನು ಪಡೆದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ನೆನ್ನೆ ಒಂದೇ ದಿನ 10 ಸಾವುಗಳು ಸಂಭವಿಸಿರುವುದು ಅಸಮಾಧಾನ ತಂದಿದ್ದರೂ, ದಾಖಲಾದ ರೋಗಿಗಳು ಅತ್ಯಂತ ಗಂಭೀರ ಸ್ಥಿತಿಯಲ್ಲಿದ್ದ ಕಾರಣ ಹೀಗಾಗಿದೆ. ಈ ಬಗ್ಗೆ ತನಿಖೆ ನಡೆಸಿ ಥರ್ಡ್ ಪಾರ್ಟಿ ಇವ್ಯಾಲ್ಯುಯೇಷನ್' ವರದಿ ನೀಡುವಂತೆ ವೈದ್ಯರ ಸಮಿತಿಗೆ ಸೂಚಿಸಲಾಗಿದೆ ಎಂದರು.

> ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿ ಕೊರತೆ ನೀಗಿಸಲು ಈಗಾಗಲೇ ಬೆಂಗಳೂರು-ಮೈಸೂರಿಗೆ 10 ಮತ್ತು ಕಲ್ಬುರ್ಗಿಗೆ 6 ಕಾರ್ಡಿಯಾಲಜಿಸ್ಟ್ ಸೇರಿದಂತೆ ಹಲವು ಹುದ್ದೆಗಳ ಭರ್ತಿಗೆ ಕರೆ ನೀಡಲಾಗಿದೆ. ಇಡೀ ರಾಜ್ಯದಲ್ಲಿ 56,000 ಹುದ್ದೆಗಳ ಭರ್ತಿಗೆ ಕಾಲಮಿತಿ ನಿಗದಿಪಡಿಸಲಾಗಿದೆ.
> ■ **ಡಾ. ಶರಣಪ್ರಕಾಶ ಆರ್. ಪಾಟೀಲ,** ಸಚಿವ

ಜಯದೇವ ಆಸ್ಪತ್ರೆ ಇಡೀ ದೇಶಕ್ಕೆ ಮಾದರಿಯಾಗಿದೆ. ಇಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲಿ 2 ರಿಂದ 3 ಲಕ್ಷ ವೆಚ್ಚವಾಗುವ ಸ್ಟಂಟ್ ಚಿಕಿತ್ಸೆಯನ್ನು ಇಲ್ಲಿ ಕೇವಲ 60 ಸಾವಿರಕ್ಕೆ ನೀಡಲಾಗುತ್ತಿದೆ. ಇಂತಹ ಸರ್ಕಾರಿ ಆಸ್ಪತ್ರೆಗಳ ಬಗ್ಗೆ ನಕಾರಾತ್ಮಕ ಸುದ್ದಿ ಹರಡಿದರೆ ಬಡ ಜನರಿಗೆ ಅನ್ಯಾಯವಾಗುತ್ತದೆ, ಖಾಸಗಿ ಆಸ್ಪತ್ರೆಗಳಿಗೆ ಲಾಭವಾಗುತ್ತದೆ ಎಂದರು.

ಜಯದೇವ ಆಸ್ಪತ್ರೆಗಳಲ್ಲಿ ಈ ಪ್ರಮಾಣ ಕೇವಲ 4% ರಿಂದ 6% ರಷ್ಟಿದೆ ಇದು ರಾಷ್ಟ್ರೀಯ ಸರಾಸರಿಗಿಂತಲೂ ಅತ್ಯಂತ ಉತ್ತಮವಾಗಿದೆ ಎಂದರು.

ಕರ್ತವ್ಯ ಆ್ಯಪ್‌ಗೆ ನೋಂದಣಿಯಾಗದ 2 ಲಕ್ಷ ನೌಕರರು

• **ಬೆಂಗಳೂರು:** ರಾಜ್ಯ ಸರ್ಕಾರ ಪರಿಚಯಿಸಿರುವ ಕರ್ತವ್ಯ ಮೊಬೈಲ್ ಆ್ಯಪ್ ಮೂಲಕ ಜಿಪಿಎಸ್ ಆಧಾರಿತ ಹಾಜರಾತಿ ವ್ಯವಸ್ಥೆಗೆ ರಾಜ್ಯದಲ್ಲಿ ಇದುವರೆಗೂ 2,13,925 ಅಧಿಕಾರಿ, ನೌಕರರು ಕರ್ತವ್ಯ ಮೊಬೈಲ್ ಅಪ್ಲಿಕೇಷನಲ್ಲಿ ನೋಂದಾಯಿಸಿಕೊಂಡಿರುವುದಿಲ್ಲ.

ಈ ಕುರಿತು ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಸಿಇಒಗಳು, ತಮ್ಮ ಜಿಲ್ಲೆಯಲ್ಲಿ ಇದುವರೆಗೂ ಕರ್ತವ್ಯ ಮೊಬೈಲ್ ಅಪ್ಲಿಕೇಷನ್‌ನಲ್ಲಿ ನೋಂದಾಯಿಸದ ಅಧಿಕಾರಿ,ನೌಕರರನ್ನು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಕಟ್ಟುನಿಟ್ಟಿನ ಸೂಚನೆಗಳನ್ನು ನೀಡುವಂತೆ ಹಾಗೂ ಈ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು 7 ದಿನಗಳೊಳಗಾಗಿ ಸಲ್ಲಿಸುವಂತೆ ಸರ್ಕಾರದ ಮುಖ್ಯಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಸೂಚಿಸಿದ್ದಾರೆ.

ಜೂ.4 ರಂದು ವಿಧಾನಸೌಧಲ್ಲಿ ನಡೆದ ಎಲ್ಲಾ ಕಾರ್ಯದರ್ಶಿಗಳ ಸಭೆಯಲ್ಲಿ ಸಿಎಂ ಡಿ.ಕೆ ಶಿವಕುಮಾರ್ ಅವರು, ಎಲ್ಲಾ ಸರ್ಕಾರಿ ಅಧಿಕಾರಿ, ನೌಕರರು ಕಡ್ಡಾಯವಾಗಿ ಸಮಯಕ್ಕೆ ಸರಿಯಾಗಿ ಕಛೇರಿಯಲ್ಲಿ ಹಾಜರಿರುವಂತೆ ಸೂಚಿಸಿದ್ದು, ಅದರಂತೆ ಎಲ್ಲಾ ಅಧಿಕಾರಿ,ನೌಕರರು ಕರ್ತವ್ಯ ಮೊಬೈಲ್ ಅಪ್ಲಿಕೇಷನ್‌ನಲ್ಲಿ ನೋಂದಣಿ ಮಾಡಿಕೊಂಡು ಪ್ರತಿದಿನ ತಮ್ಮ ಹಾಜರಾತಿಯನ್ನು ದಾಖಲಿಸುವುದು ಕಡ್ಡಾಯ ಮಾಡಲಾಗಿದೆ.

ದೇಶಭಕ್ತಿಗೆ ನೋಂದಣಿ ಅವಶ್ಯಕತೆಯಿಲ್ಲ: ಶೆಟ್ಟರ್

• **ಹುಬ್ಬಳ್ಳಿ:** ನೂರು ವರ್ಷ ಇತಿಹಾಸವಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ದೇಶ ಭಕ್ತಿಗೆ ನಿಮ್ಮ ನೋಂದಣಿ ಅವಶ್ಯಕತೆ ಇಲ್ಲ ಎಂದು ಸಂಸದ ಶೆಟ್ಟರ್ ತಿಳಿಸಿದರು.

ದಿನ ಬೆಳಗಾದರೆ ಆರ್‌ಎಸ್‌ಎಸ್ ಜಪ ಮಾಡುವ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಇತಿಹಾಸ, ಪ್ರಸ್ತುತ ವಿದ್ಯಮಾನಗಳ ಜ್ಞಾನ ಸ್ವಲ್ಪ ಕಮ್ಮಿ ಇದ್ದ ಹಾಗಿದೆ. ತುರ್ತು ಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವದ ಕತ್ತು ಹಿಸುಕಿದ ಕಾಂಗ್ರೆಸ್ ಪಕ್ಷ, ಇಂದು ದೇಶದ ಅತಿ ದೊಡ್ಡ ಸ್ವಯಂ ಸೇವಾ ಸಂಸ್ಥೆಯನ್ನು ಪ್ರಶ್ನಿಸಲು ಹೊರಟಿದೆ ಎಂದು ಕಿಡಿಕಾರಿದ್ದಾರೆ. ರಾಜ್ಯದ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವಾಗ, ಗೃಹ ಸಚಿವರಾಗಿ ಅಧಿಕಾರ ವಹಿಸಿಕೊಂಡ ಪ್ರಿಯಾಂಕ ಅವರು ಜನರ ಸುರಕ್ಷತೆಗೆ ಕೆಲಸ ಮಾಡುವುದನ್ನು ಬಿಟ್ಟು, ಆರ್‌ಎಸ್‌ಎಸ್ ನಿಂದನೆಯಲ್ಲಿ ತೊಡಗಿ ತಮ್ಮ ಅಸಮರ್ಥತೆ ಪ್ರದರ್ಶಿಸುತ್ತಿದ್ದಾರೆ ಎಂದರು.

ಪಿಎಸ್‌ಐ ಆತ್ಮಹತ್ಯೆ

• **ಕಲಬುರಗಿ:** ನಗರದ ಗಂಗಾನಗರ ಪ್ರದೇಶ ದಲ್ಲಿರುವ ತಮ್ಮ ನಿವಾಸದಲ್ಲಿ ಪಿಎಸ್‌ಐ ಬಸವರಾಜ್ ಹೆರೂರ್ ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ.



ಮೃತ ಬಸವರಾಜ್ ಅವರು 2014ನೇ ಬ್ಯಾಚ್‌ನ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿದ್ದು, ಕಳೆದ 2 ವರ್ಷಗಳಿಂದ ಜಿಲ್ಲಾ ಅಪರಾಧ ದಾಖಲೆ ಬ್ಯೂರೋ (ಡಿಸಿಆರ್‌ಬಿ) ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ನಿನ್ನೆ ತಡರಾತ್ರಿ ಸ್ನೇಹಿತರಿಗೆ ಕರೆ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುವ ಕುರಿತು ಮಾಹಿತಿ ನೀಡಿದ್ದರು ಎನ್ನಲಾಗಿದೆ.

ವಿಷಯ ತಿಳಿದ ಸ್ನೇಹಿತರು ಕೂಡಲೇ ಬಸವರಾಜ್ ತಂದೆಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಬಳಿಕ ತಂದೆ ಮನೆಗೆ ತೆರಳಿ ಬಾಗಿಲು ಒಡೆದು ಒಳ ಪ್ರವೇಶಿಸಿದಾಗ, ಬಸವರಾಜ್ ಸೀರೆಯನ್ನು ಫ್ಯಾನ್‌ಗೆ ಕಟ್ಟಿ ನೇಣು ಬಿಗಿದುಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ ಎಂದು ತಿಳಿದು ಬಂದಿದೆ.

ಕ್ಷಮೆಗೆ ನಿರಾಕರಿಸಿದ ಪ್ರಕಾಶ್ ರಾಜ್: ಸುದೀರ್ಘ ವಾಗ್ವಾದ

• **ಬೆಂಗಳೂರು:** ಚಿನ್ನಯ್ಯ ನೀಡಿರುವ ಹೇಳಿಕೆ ಬಗ್ಗೆ ನಟ ಪ್ರಕಾಶ್‌ರಾಜ್ ಕರೆದಿದ್ದ ಸುದ್ದಿಗೋಷ್ಠಿಗೆ ಸಾಮಾಜಿಕ ಜಾಲತಾಣದಲ್ಲಿ ಆಹ್ವಾನಿಸುವಾಗ ಮಾರಿಕೊಂಡ ಮಾಧ್ಯಮದವರಿಗೆ ವಿಶೇಷ ಆಹ್ವಾನ ಎಂದು ಹೇಳಿರುವುದು ಸುದೀರ್ಘ ವಾಗ್ವಾದಕ್ಕೆ ಕಾರಣವಾಯಿತು. ಕೊನೆಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಲಾಗದೇ ಮುಜುಗರ ಅನುಭವಿಸಬೇಕಾಯಿತು.



ಮಾರಿಕೊಂಡವರು ಯಾರು ಎಂಬುದನ್ನು ಹೇಳಬೇಕು. ಇಲ್ಲದೇ ಇದ್ದರೆ ಕ್ಷಮೆ ಕೇಳಬೇಕು ಎಂದು ಮಾಧ್ಯಮದ ಹಲವರು ಪಟ್ಟು ಹಿಡಿದರು. ನಿಮಗಲ್ಲ ಹೇಳಿದ್ದು ಮಾರಿಕೊಂಡವರಿಗೆ ಹೇಳಿದ್ದು ಎಂದು ಪ್ರಕಾಶ್ ರಾಜ್ ಕೂಡ ಕ್ಷಮೆ ಕೇಳಲು ನಿರಾಕರಿಸಿದ್ದರಿಂದ ಸುದ್ದಿಗೋಷ್ಠಿಯಲ್ಲಿ ಒಂದೂವರೆ ತಾಸಿಗೂ ಅಧಿಕ ಸಮಯ ಈ ಚರ್ಚೆಯಲ್ಲೇ ಕಳೆದು ಹೋಯಿತು.

ಬುಧವಾರ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿ ಆರಂಭವಾಗುತ್ತಿದ್ದಂತೆ ಮಾರಿಕೊಂಡವರು ಯಾರು ಎಂದು ಮಾಧ್ಯಮದವರು ಪ್ರಶ್ನಿಸಿದರು. ಮಾಧ್ಯಮ ಅಂದರೆ ಎಲ್ಲ ಮಾಧ್ಯಮಗಳು ಬರುತ್ತವೆ. ಇಂಥವರೆಲ್ಲ ಮಾರಿಕೊಂಡವರು ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು ಎಂದು ಪತ್ರಕರ್ತರು ಒತ್ತಾಯಿಸಿದರು. ಅವರಿಗೂ ಹೆಂಡತಿ ಮಕ್ಕಳಿದ್ದಾರೆ. ಅವರು ಬದುಕಿಕೊಳ್ಳಲಿ ಎಂಬ ಕಾಳಜಿಯಿಂದ ಹೇಳುವುದಿಲ್ಲ. ಭಾರತ ಪತ್ರಿಕೋದ್ಯಮದಲ್ಲಿ ಮಾರಿಕೊಂಡ ಮಾಧ್ಯಮಗಳೂ ಇವೆ. ಮಾರಿಕೊಳ್ಳದವರೂ ಇದ್ದಾರೆ ಎಂಬುದು ಜನರಿಗೆ ಗೊತ್ತು ಎಂದು ಪ್ರಕಾಶ್ ರಾಜ್ ಉತ್ತರಿಸಿದರು.

ಜಯದೇವ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ, ಅಧೀಕ್ಷಕರ ಸ್ಪಷ್ಟನೆ

ವದಂತಿಗಳಿಗೆ ಕಿವಿಗೊಡದಿರಿ

• **ಮೈಸೂರು:** ನಗರದ ಮೇಟಗಹಳ್ಳಿಯಲ್ಲಿ ಇರುವ ಜಯದೇವ ಆಸ್ಪತ್ರೆಯಲ್ಲಿ ಕಳೆದ 24 ಗಂಟೆಗಳಲ್ಲಿ 11 ಜನ ರೋಗಿಗಳು ಸಾವನ್ನಪ್ಪಿದ್ದಾರೆ. ಮಂಗಳವಾರ ಬೆಳಗ್ಗೆ 8 ಗಂಟೆಯಿಂದ ಬುಧವಾರ ಬೆಳಗ್ಗೆ 8 ಗಂಟೆಯವರೆಗೆ 11 ಮಂದಿ ಮೃತಪಟ್ಟಿದ್ದಾರೆ.

ಇದು ಸಾಮಾನ್ಯಕ್ಕಿಂತ ಹೆಚ್ಚು ಸಂಖ್ಯೆಯಾಗಿದ್ದರೂ, ಮೃತಪಟ್ಟವರಲ್ಲಿ ಬಹುತೇಕರು ತೀವ್ರ ಹೃದಯಾಘಾತ, ಹೃದಯ ವೈಫಲ್ಯ ಹಾಗೂ ವಯೋಸಹಜ ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು. ಕೆಲವರು ಆಸ್ಪತ್ರೆಗೆ ದಾಖಲಾಗುವ ವೇಳೆಯೇ ಅತ್ಯಂತ ಗಂಭೀರ ಸ್ಥಿತಿಯಲ್ಲಿದ್ದರು ಎಂದು ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಸದಾನಂದ ತಿಳಿಸಿದರು.



ಮಂಗಳವಾರ ಬೆಳಗ್ಗೆ 8 ಗಂಟೆಯಿಂದ ಬುಧವಾರ ಬೆಳಗ್ಗೆ 8 ಗಂಟೆಯವರೆಗೆ ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ ದಾಖಲಾದ 11 ಮಂದಿ ಸಾವನ್ನಪ್ಪಿದ ಬಗ್ಗೆ ರೋಗಿಗಳ ಸಂಬಂಧಿಕರು ವೀಡಿಯೊ ಮಾಡಿ ಆಸ್ಪತ್ರೆಯಲ್ಲಿ ವೈದ್ಯರು, ವ್ಯವಸ್ಥೆ ಸರಿ ಇಲ್ಲ ಎಂದು ಆರೋಪ ಮಾಡಿದ್ದು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು. ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇರುವುದಿಲ್ಲ, ವೈದ್ಯರ ಕೊರತೆ ಸುಳ್ಳು ಆರೋಪ, ನಮ್ಮ ಆಸ್ಪತ್ರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ. ಕೆಲವು ಕಡೆ ತಪ್ಪು ಸುದ್ದಿ ಹರಡಲಾಗಿದೆ. ಆಸ್ಪತ್ರೆಯಲ್ಲಿ 40 ಜನ ವೈದ್ಯರು ಇದ್ದಾರೆ. 24 ಜನ ಕಾರ್ಡಿಯೋಲಾಜಿಸ್ಟ್ ಇದ್ದಾರೆ. 10 ಅನಸ್ಥಾಸಿಯೇಸ್ಟ್, 1 ಸರ್ಜನ್ ಇದ್ದಾರೆ. ಪೋಸ್ಟ್ ಗ್ರ್ಯಾಜುಯೇಟ್ಸ್ 10 ಜನ ವೈದ್ಯರು ಇದ್ದಾರೆ ಎಂದು ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಡಾ.ದಿನೇಶ್ ತಿಳಿಸಿದರು.

> 11 ಜನರು ಹಾರ್ಟ್ ಅಟ್ಯಾಕ್ ಆಗಿ ಬಂದವರು. ತೀವ್ರ ನಿಗಾ ಘಟಕದಲ್ಲಿ ಇಟ್ಟು ಔಷಧೋಪಚಾರ ಮಾಡಲಾಗುತ್ತಿತ್ತು. ಎಲ್ಲರೂ ಒಂದೇ ದಿನ ಅಡ್ಮಿಟ್ ಆಗಿಲ್ಲ. 11 ಜನವೂ ವಯಸ್ಸಾದವರು, ತೀವ್ರ ಅಸ್ವಸ್ಥರು ಅವರು ಇಲ್ಲಿಗೆ ಬರುವವರೆಗೂ ಜೀವನ್ಮರಣದಿಂದ ಹೋರಾಟ ನಡೆಸಿದ್ದಾರೆ. ಇಂತಹ ಸನ್ನಿವೇಶದಲ್ಲಿ 9% ರೋಗಿಗಳು ಮಾತ್ರ ಬದುಕುವ ಸಾಧ್ಯತೆ ಇದೆ.
> ■ **ಡಾ.ದಿನೇಶ್,** ಹೃದ್ರೋಗ ಆಸ್ಪತ್ರೆ ನಿರ್ದೇಶಕ

ಗುಣಮಟ್ಟದ ಶಿಕ್ಷಣ ಬಲಗೊಳಿಸಲು ಕೆಪಿಎಸ್ ಶಿಕ್ಷಕರಿಗೆ 10 ವರ್ಷ ಸೇವಾವಧಿ ನಿಗದಿ

ಶಾಲೆಗಳಲ್ಲಿ ಶಿಕ್ಷಕರ ಸ್ಥಿರತೆ ಕಾಪಾಡುವ ಉದ್ದೇಶ

▸ **ನಂದಿನಿ ಎನ್.**

ದಿಗಂತ ವಿಶೇಷ

• **ಬೆಂಗಳೂರು:** ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಬಲಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ, ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ (ಕೆಪಿಎಸ್) ಕಾರ್ಯನಿರ್ವಹಿಸುವ ಶಿಕ್ಷಕರಿಗೆ ಕನಿಷ್ಠ 10 ವರ್ಷಗಳ ಸೇವಾವಧಿಯನ್ನು ನಿಗದಿಪಡಿಸಿದೆ. ಶಿಕ್ಷಕರ ನಿಯೋಜನೆ ಮತ್ತು ವರ್ಗಾವಣೆ ನಿಯಮಗಳಲ್ಲಿ ತರಲಾಗಿರುವ ಈ ಬದಲಾವಣೆಯು ಶಾಲೆಗಳಲ್ಲಿ ಶಿಕ್ಷಕರಿಗೆ ಸ್ಥಿರತೆಯನ್ನು ಕಾಪಾಡುವ ಉದ್ದೇಶವನ್ನು ಹೊಂದಿದೆ.

ಶಿಕ್ಷಕರು ಪದೇ-ಪದೇ ವರ್ಗಾವಣೆಯಾಗುವುದರಿಂದ ವಿದ್ಯಾರ್ಥಿಗಳ ಕಲಿಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ. ಅಲ್ಲದೇ ಶಾಲೆಯ ಸ್ಥಳೀಯ ಪರಿಸರ, ವಿದ್ಯಾರ್ಥಿಗಳ ಹಿನ್ನೆಲೆ ಹಾಗೂ ಸಮುದಾಯದ ಅಗತ್ಯಗಳ ಬಗ್ಗೆ ಶಿಕ್ಷಕರು ಆಳವಾದ ಅರಿವು ಹೊಂದಲು ಸಮಯ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕೆಪಿಎಸ್ ಶಾಲೆಗಳಲ್ಲಿ ಶಿಕ್ಷಕರನ್ನು ದೀರ್ಘಾವಧಿಗೆ ನಿಯೋಜಿಸುವ ಮೂಲಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸರ್ಕಾರ ಮುಂದಾಗಿದೆ.

ಶಾಲಾ ಶಿಕ್ಷಣ ಇಲಾಖೆಯ ಇತ್ತೀಚಿನ ಅಂಕಿ-ಅಂಶಗಳ ಪ್ರಕಾರ, 2023-24ನೇ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಶಾಲೆಗಳಲ್ಲಿ 42.96 ಲಕ್ಷ ವಿದ್ಯಾರ್ಥಿಗಳು ದಾಖಲಾಗಿದ್ದರೆ, 2024-25ನೇ ಸಾಲಿನಲ್ಲಿ ಈ ಸಂಖ್ಯೆ 40.74 ಲಕ್ಷಕ್ಕೆ ಇಳಿಕೆಯಾಗಿದೆ. ಅಂದರೆ, ಅಲ್ಪಾವಧಿಯಲ್ಲೇ ಸುಮಾರು ಎರಡು ಲಕ್ಷ ವಿದ್ಯಾರ್ಥಿಗಳ ದಾಖಲಾತಿ ಕುಸಿತ ಕಂಡಿದೆ.

ಶಿಕ್ಷಣವು ಕೇವಲ ಬೋಧನೆ ಮತ್ತು ಕಲಿಕೆಗೆ ಸೀಮಿತವಾಗದೇ, ವಿದ್ಯಾರ್ಥಿಗಳೊಂದಿಗೆ ಭಾವನಾತ್ಮಕ ಬಾಂಧವ್ಯ ಬೆಳೆಸುವ ಪ್ರಕ್ರಿಯೆಯಾಗಿದೆ. ಆದರೆ, ಪ್ರಸ್ತುತ ವ್ಯವಸ್ಥೆಯಲ್ಲಿ ಅನೇಕ ಶಿಕ್ಷಕರು 3, 4 ವರ್ಷಗಳಿಗೊಮ್ಮೆ ವರ್ಗಾವಣೆಯಾಗುತ್ತಿರುವುದರಿಂದ ಅವರು ಆರಂಭಿಸಿದ ಶೈಕ್ಷಣಿಕ ಯೋಜನೆಗಳು ಮತ್ತು ಕಾರ್ಯಕ್ರಮಗಳು ಮಧ್ಯದಲ್ಲೇ ಸ್ಥಗಿತಗೊಳ್ಳುತ್ತಿವೆ. ಇದರ ಪರಿಣಾಮ ಮಕ್ಕಳ ಕಲಿಕೆಯ ಮೇಲೂ ಬೀಳುತ್ತಿದೆ.

ಶಿಕ್ಷಕರ ಸ್ಥಿರತೆ ಇರುವ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಸಾಧನೆಯಲ್ಲಿ ಸರಾಸರಿ ಶೇ.15ರಷ್ಟು ಸುಧಾರಣೆ ಕಂಡುಬರುತ್ತದೆ. ಒಂದೇ ಶಾಲೆಯಲ್ಲಿ ದೀರ್ಘಕಾಲ ಸೇವೆ ಸಲ್ಲಿಸುವ ಶಿಕ್ಷಕರು ವಿದ್ಯಾರ್ಥಿಗಳ ಅಗತ್ಯಗಳನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡು ಅವರಿಗೆ ಅಗತ್ಯಕ್ಕೆ ತಕ್ಕ ಶೈಕ್ಷಣಿಕ ಮಾರ್ಗದರ್ಶನ ನೀಡಲು ಸಾಧ್ಯವಾಗುತ್ತದೆ. ಶಾಲೆಗಳ ಮೂಲಸೌಕರ್ಯ ಅಭಿವೃದ್ಧಿ, ಗ್ರಂಥಾಲಯ, ಪ್ರಯೋಗಾಲಯ, ಕ್ರೀಡಾ ಸೌಲಭ್ಯಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಮುದಾಯದ ಸಹಭಾಗಿತ್ವ ಹೆಚ್ಚಿಸಲು ಶಿಕ್ಷಕರ ಸ್ಥಿರತೆ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಶಾಲೆ-ಸಮುದಾಯ ಸಂಬಂಧ ಮತ್ತಷ್ಟು ಬಲ

ದೀರ್ಘಾವಧಿಯ ಸೇವಾವಧಿಯು ಶಿಕ್ಷಕರಿಗೆ ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್‌ಡಿಎಂಸಿ) ಸದಸ್ಯರು, ಪೋಷಕರು ಹಾಗೂ ಸ್ಥಳೀಯ ದಾನಿಗಳೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಲು ಸಹಕಾರಿಯಾಗಲಿದೆ. ಈ ಬಾಂಧವ್ಯವು ಶಾಲೆಗಳ ಅಭಿವೃದ್ಧಿಗೆ ಅಗತ್ಯವಾದ ಆರ್ಥಿಕ ನೆರವು ಮತ್ತು ಸಾಮಾಜಿಕ ಸಹಕಾರವನ್ನು ಸ್ಥಳೀಯ ಮಟ್ಟದಲ್ಲಿಯೇ ಕ್ರೋಢೀಕರಿಸಲು ನೆರವಾಗಲಿದೆ.

ಸಂಪಾದಕೀಯ

ಪ್ರಬಲ ಕಾಯ್ದೆ ಜಾರಿಯಾಗಬೇಕಿದೆ

ಮಹಾರಾಷ್ಟ್ರದ ನಾಗಪುರದಲ್ಲಿ ವಾಯುಪಡೆಯ ಅಧಿಕಾರಿಯೊರ್ವರ ಪತ್ನಿಗೆ ಮತ್ತು ಬರಿಸಿ, ಅತ್ಯಾಚಾರ ಎಸಗಿ ಬಲವಂತದ ಮತಾಂತರ ಪ್ರಕರಣ ಗಂಭೀರವಾದ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಬಲವಂತದ ಮತಾಂತರ ಕೂಡದು ಎಂಬ ಭಾವನೆ ಜಾಗೃತವಾಗಿರುವ ಸಂದರ್ಭದಲ್ಲಿ ಮತ್ತು ಮತಾಂತರ ವಿರೋಧಿ ಪ್ರಬಲ ಕಾಯ್ದೆಯನ್ನು ಜಾರಿಗೆ ತರಬೇಕೆಂಬ ಕೂಗಿನ ನಡುವೆಯೂ ಇಂಥ ಪ್ರಕರಣಗಳು ಸಂಭವಿಸುತಿರುವುದು ಮತಾಂಧತೆಯ ಪರಾಕಾಷ್ಠೆ ಮತ್ತು ಕಾನೂನಿನ ಭಯ ಇಲ್ಲದಿರುವುದರ ಸಂಕೇತ. ಅದರಲ್ಲೂ ವಾಯುಪಡೆಯ ಅಧಿಕಾರಿಯೊರ್ವರ ಪತ್ನಿ ಕೂಡ ಸುರಕ್ಷಿತವಲ್ಲ ಎಂಬುದು ಇನ್ನೂ ಗಂಭೀರವಾಗಿ ಚಿಂತಿಸಬೇಕಾದ ವಿಷಯ.



ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲ್ಪಟ್ಟ ಆರೋಪಿಗಳು ಸಮಾಜಘಾತುಕ ಕೃತ್ಯಕ್ಕೆ ಇಳಿದವರೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಈ ಪ್ರಕರಣ ದೇಶಕ್ಕೆ ಅತ್ಯಂತ ಪ್ರಬಲವಾದ ಮತಾಂತರ ವಿರೋಧಿ ಕಾನೂನಿನ ಅವಶ್ಯಕತೆಯನ್ನು ಎತ್ತಿತೋರಿಸುತ್ತದೆ.

ಮತಾಂಧತೆಯ ತೀವ್ರತೆ ನಾನಾ ಆಕಾರಗಳನ್ನು ಹೊತ್ತು ತನ್ನ ಕೆಲಸವನ್ನು ಮಾಡುತ್ತಲೇ ಇರುತ್ತದೆ ಎನ್ನುವುದಕ್ಕೆ ಇದು ಉದಾಹರಣೆ. ಅತ್ಯಾಚಾರ, ಮಾದಕವಸ್ತುಗಳ ಬಳಕೆಗಳಿಂದ ಕಾನೂನು-ಸುವ್ಯವಸ್ಥೆಯ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತವೆ. ಇವೆಲ್ಲದರ ತರುವಾಯ ಕೂಡ ಮತಾಂತರ ವಿರೋಧಿ ಕಾಯ್ದೆ ಜಾರಿಗೆ ವಿರೋಧಗಳು ವ್ಯಕ್ತವಾಗುತ್ತಿರುವುದು ದುರಂತ. ರಾಜಕೀಯ ಪಕ್ಷಗಳು ಸೆಕ್ಯುಲರ್ ಭ್ರಮೆಯಿಂದ ಕಾಯ್ದೆಗೆ ವಿರೋಧವನ್ನು ವ್ಯಕ್ತಪಡಿಸುತ್ತಾರೆಯೇ ವಿನಾ ಅಪರಾಧ ಪ್ರಕರಣಗಳಿಗೆ ಕೊನೆ ಹಾಡುವ ಮನಸು ಮಾಡುತ್ತಿಲ್ಲ. ತನ್ನ ಇಚ್ಛೆಗೆ ವಿರುದ್ಧವಾಗಿ ಮಾಡುವ ಮತಾಂತರ ಸಮಾಜದ ಶಾಂತಿಗೆ ಭಂಗ ತರುವುದಷ್ಟೇ ಅಲ್ಲದೆ, ಸೌಹಾರ್ದದ ಹಾದಿಗಳನ್ನು ಮುಚ್ಚುತ್ತಾ ಬರುತ್ತದೆ. ಪರಸ್ಪರ ಸಂಶಯ, ಅಸಹನೆಗಳು ಉಂಟಾಗುತ್ತದೆ. ಇವೆಲ್ಲದರ ಪರಿಹಾರಕ್ಕೆ ಯೋಗ್ಯ ಕಾನೂನೊಂದೇ ಪರಿಹಾರ. ಕಾನೂನಿನ ಭಯವೊಂದೇ ವ್ಯವಸ್ಥಿತ ಮತ್ತು ಸೌಹಾರ್ದ ಸಮಾಜವನ್ನು ನಿರ್ಮಿಸಬಲ್ಲದು. ಈ ಕಾಲಘಟ್ಟದಲ್ಲೂ ಇಂಥ ಪ್ರಕರಣಗಳು ನಡೆಯುತ್ತವೆ ಎಂದರೆ ಆದಷ್ಟು ಶೀಘ್ರವಾಗಿ ಕಾನೂನು ಜಾರಿಗೆ ಬರಲೇ ಬೇಕಿದೆ.

ಬಲವಂತದ ಮತಾಂತರ ಕಾಯ್ದೆ ಧಾರ್ಮಿಕ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಆಯ್ಕೆಗೆ ಅಡ್ಡಿಯಾಗದು. ಯಾವ ರೀತಿಯಲ್ಲೂ ಅದು ಸಂವಿಧಾನಬಾಹಿರವಲ್ಲ. ಬಲವಂತದ ಅಥವಾ ಮೋಸದ ಮತಾಂತರಗಳನ್ನು ತಡೆಯಲು ಕೆಲವು ರಾಜ್ಯಗಳು ಜಾರಿಗೆ ತಂದ ಕಾಯ್ದೆಗಳು ಈಗಾಗಲೇ ಯಶಸ್ವಿಯಾಗಿವೆ. ಬಲವಂತ, ಒತ್ತಾಯ ಮತ್ತು ಆಮಿಷದ ಮೂಲಕ ಮಾಡುವ ಮತಾಂತರಗಳನ್ನು ಮಾತ್ರ ಕಾಯ್ದೆ ನಿಷೇಧಿಸುತ್ತದೆ. ಕಾಯ್ದೆ ದುರ್ಬಲ ವರ್ಗ, ಅಪ್ರಾಪ್ತರು ಮತ್ತು ಸಾಮಾಜಿಕವಾಗಿ ಅಸುರಕ್ಷಿತರನ್ನು ರಕ್ಷಿಸಲು ಬಳಕೆಯಾಗುತ್ತಿದೆ. ಹೆಚ್ಚುವರಿ ಶಿಕ್ಷೆಯನ್ನೂ ಕಾನೂನಿನಲ್ಲಿ ಅಳವಡಿಸಬೇಕಿದೆ. ಇದುವರೆಗೆ ರಾಜ್ಯಗಳು ಜಾರಿಗೆ ತಂದ ಕಾಯ್ದೆಗಳಿಂದ ಯಾವ ರಾಜ್ಯಗಳಲ್ಲೂ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತಂದ ಉದಾಹರಣೆಗಳಿಲ್ಲ. ಜೊತೆಗೆ ಮತಾಂತರ ಮತ್ತು ಸ್ವ ಇಚ್ಛೆಯ ಧಾರ್ಮಿಕ ಆಯ್ಕೆ ನಡುವಿನ ಗೊಂದಲಗಳು ಉಂಟಾಗಲಿಲ್ಲ ಎಂಬುದು ಇಲ್ಲಿ ಉಲ್ಲೇಖನೀಯ. ಕೆಲವು ವಿಮರ್ಶಕರು ಈಗಿರುವ ದಂಡಸಂಹಿತೆ ಸಾಕಾಗಬಹುದು ಎನ್ನುತ್ತಾರೆ. ಆದರೆ ಅದರ ಕಣ್ಣಮುಂದೆಯೇ ನಾಗಪುರದ ಘಟನೆ ನಡೆಯಿತು ಎಂಬುದನ್ನು ನೋಡಬೇಕಿದೆ.

ಸುಸ್ಥಿರವಾದ ಸಂಪತ್ತನ್ನು ಸಂಗ್ರಹಿಸು

ಅತಸ್ಕರ ಕರಗ್ರಾಹ್ಯಂ ಅರಾಜಕ ವಶಂ ವದಮ್ ।
ಆದಾಯಾದ ವಿಭಾಗಾರ್ಹಂ ಧನಮಾರ್ಜಯ ಸುಸ್ಥಿರಮ್ ॥ -ಸುಭಾಷಿತ ಸುಧಾನಿಧಿ

ಕಳ್ಳರ ಕರಗತವಾಗದ, ರಾಜರು ವಶಪಡಿಸಿಕೊಳ್ಳಲಾಗದ, ದಾಯಾದಿಗಳು ಹಂಚಿಕೊಳ್ಳಲಾಗದ ಸುಸ್ಥಿರವಾದ ಐಶ್ವರ್ಯವನ್ನು ಸಂಪಾದಿಸು - ಎಂಬುದು ಶ್ಲೋಕಾರ್ಥ.

ಎಲ್ಲರ ಅಪೇಕ್ಷೆಯಿರುವುದು ಸಂಪತ್ತನ್ನು ಸಂಪಾದಿಸಬೇಕು ಎಂಬುದಾಗಿ. ಯಾರು ತಾನೇ ಸಂಪತ್ತನ್ನು ಬಯಸುವುದಿಲ್ಲ. ಪ್ರತಿಯೊಬ್ಬರ ಬಯಕೆಯೂ ಇದೇ ಆಗಿದೆ. ಯಾವ ಮಾರ್ಗವಾದರೂ ಸರಿ. ಹೇಗಾದರೂ ಸರಿ, ಸಂಪತ್ತು ಬರಬೇಕು. ಇಂದಿನ



ದಿನಗಳಲ್ಲಿ ಸಂಪತ್ತಿಲ್ಲದೇ ಬದುಕನ್ನು ನಿರ್ವಹಿಸಲು ಸಾಧ್ಯವಿಲ್ಲ. ಏನೇ ಮಾಡುವುದಿದ್ದರೂ ಸಂಪತ್ತು ಬೇಕು. ಸಂಪತ್ತು ಎಂದರೆ ಕೇವಲ ಹಣವಲ್ಲ. ಆರೋಗ್ಯವೂ ಸಂಪತ್ತು, ಜ್ಞಾನವೂ ಸಂಪತ್ತು, ವಿದ್ಯೆಯೂ ಸಂಪತ್ತು, ಸಂಸ್ಕಾರವೂ ಸಂಪತ್ತು. ಹೀಗಿದ್ದರೂ ಹೆಚ್ಚಿನವರಾದ ನಾವು ಹಣವನ್ನೇ ಸಂಪತ್ತು ಎಂದುಕೊಂಡಿದ್ದೇವೆ. ಎಲ್ಲ ಬಗೆಯ ಸಂಪತ್ತಿರಬೇಕಾದುದು ಸಹಜವಾದರೂ ಪ್ರಕೃತ ಶ್ಲೋಕದಲ್ಲಿ ಇವೆಲ್ಲವನ್ನೂ ಮೀರಿದ ಸುಸ್ಥಿರವಾದ ಐಶ್ವರ್ಯವನ್ನು ಸಂಪಾದಿಸುವಂತೆ ಆಗ್ರಹಪಡಿಸುತ್ತಾನೆ.

ಸುಸ್ಥಿರವಾದ ಸಂಪತ್ತೆಂದರೆ ವಿದ್ಯೆ ಮಾತ್ರ. ಅಂತಹ ವಿಶೇಷತೆ ವಿದ್ಯೆಗಿದೆ. ವಿದ್ಯೆಗೆ ತನ್ನದೇ ಆದ ವಿಶೇಷತೆಯಿದೆ. ತನ್ನದೇ ಆದ ಮಹತ್ವವಿದೆ. ಮೂರು ವಿಶೇಷಣಗಳೊಂದಿಗೆ ವಿದ್ಯಾಧನದ ಹಿರಿಮೆಯನ್ನು ಹೇಳಲಾಗಿದೆ. ಮೊದಲನೆಯದು 'ಅತಸ್ಕರಕರಗ್ರಾಹ್ಯಮ್' ಅಂದರೆ ಕಳ್ಳರ ಕರಗತವಾಗದ ಸಂಪತ್ತು ಎಂದರ್ಥ. ಭೌತಿಕ ಸಂಪತ್ತಾದ ಹಣ, ಒಡವೆ, ಭೂಮಿ... ಇತ್ಯಾದಿಗಳನ್ನು ಗಳಿಸಿದರೆ ಒಂದು ದಿನ ಕಳ್ಳಕಾಕರ ವಶವಾಗುತ್ತದೆ. ಕಳ್ಳರು ಹಣ, ಒಡವೆಗಳನ್ನು ಕದ್ದರೆ, ಗೂಂಡಾಗಿರಿಯಲ್ಲಿ ತೊಡಗಿಕೊಳ್ಳುವ ಖದೀಮರು ಹೆದರಿಸಿ, ಬೆದರಿಸಿ ಆಸ್ತಿಯನ್ನು ತಮದನ್ನಾಗಿಸಿಕೊಳ್ಳುತ್ತಾರೆ. ಆದ್ದರಿಂದ ಇಂತಹ ಸಂಪತ್ತು ಶಾಶ್ವತವಲ್ಲ. ಕಳ್ಳರು ಕದಿಯಲಾರದ ಸಂಪತ್ತೆಂದರೆ ಜ್ಞಾನ ಮಾತ್ರ. ಯಾರೊಬ್ಬರಿಂದಲೂ ಇದು ಅಪಹರಿಸಲ್ಪಡದು.

ಜ್ಞಾನದ ಇನ್ನೊಂದು ವಿಶೇಷತೆಯೆಂದರೆ 'ಅರಾಜಕ ವಶಂವದಮ್'. ಅಂದರೆ ರಾಜರಿಂದಲೂ ವಶಪಡಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು. ಉಳಿದ ಭೌತಿಕ ಸಂಪತ್ತುಗಳನ್ನು ರಾಜನು ವಶಪಡಿಸಿಕೊಳ್ಳಲು ಸಾಧ್ಯ. ಆದರೆ ಗಳಿಸಿದ ಜ್ಞಾನವನ್ನು ವಶಪಡಿಸಿಕೊಳ್ಳಲು ಸಾಧ್ಯವಿಲ್ಲ.

ಉಳಿದ ಸಂಪತ್ತುಗಳಲ್ಲಿ ಭಾಗವನ್ನು ದಾಯಾದಿಗಳು ಕೇಳಬಹುದು. ಒಡಹುಟ್ಟಿದವರು ಸಮಪಾಲನ್ನು ಕೇಳಬಹುದು. ಗಳಿಸಿದ ಜ್ಞಾನದಲ್ಲಿ ಪಾಲು ಕೇಳಲಾದೀತೆ? ಅಥವಾ ಪಾಲು ಮಾಡಿಕೊಡಲಾದೀತೆ? ಸರ್ವಥಾ ಸಾಧ್ಯವಿಲ್ಲ. ಆದ್ದರಿಂದಲೇ ವಿದ್ಯೆಯು ಸಂಪತ್ತುಗಳಲ್ಲಿ ಪ್ರಧಾನವಾದ ಸಂಪತ್ತು ಎನಿಸಿಕೊಂಡಿದೆ. ಪರಿಶ್ರಮದಿಂದ ಗಳಿಸಿಕೊಂಡವರಿಗೆ ಇದು ಪೂರ್ಣ ಸಲ್ಲುತ್ತದೆ. ಆದ್ದರಿಂದ ಸ್ಥಿರವಾಗಿ ನಮ್ಮಲ್ಲಿಯೇ ಉಳಿಯಬಲ್ಲ ವಿದ್ಯಾಸಂಪತ್ತನ್ನು ಗಳಿಸಬೇಕು ಎಂಬುದು ಕಥನದ ಆಶಯ.

ಪರಿಶ್ರಮಪಟ್ಟು ವಿದ್ಯೆ ಗಳಿಸಬೇಕು ಎಂಬುದು ತಾತ್ಪರ್ಯ. ಇದು ವಿದ್ಯೆಯ ಮಹತ್ವವನ್ನು ಸಾರುತ್ತದೆ. ವಿದ್ಯೆಯ ಹಿರಿಮೆಯನ್ನು ಸಾರುವ ಹತ್ತಾರು ಶ್ಲೋಕಗಳಿವೆ. 'ನ ಚೋರಹಾರ್ಯ' ಎಂಬ ಸುಭಾಷಿತ ವಿದ್ಯೆಯ ಮಹತ್ವವನ್ನು ಸಾರಿ ಹೇಳಿ, 'ವಿದ್ಯಾಧನಂ ಸರ್ವಧನಾತ್ ಪ್ರಧಾನಮ್' ಎಂದಿದೆ. ಆದ್ದರಿಂದ ವಿದ್ಯಾವಂತರಾಗೋಣ, ಜ್ಞಾನಿಗಳಾಗೋಣ. ಎಲ್ಲರೂ ಜ್ಞಾನಿಗಳಾಗಲು ಸಹಕರಿಸೋಣ.

ಟ್ರಂಪ್ ಭೇಟಿ: ಮೋದಿ ಸಂವೇದನಾಶೀಲ ನಡೆ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಿದ ಪ್ರಧಾನಿ ನರೇಂದ್ರ ಮೋದಿಯವರು ಭಾರತೀಯ ನಾವಿಕರ ದುರಂತ ಸಾವಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಘಟನೆ ಹೊಸ ಭಾರತದ ವಿದೇಶಾಂಗ ನೀತಿಗೆ ಒಂದು ಉತ್ತಮ ಉದಾಹರಣೆ. ವಿದೇಶಾಂಗ ನೀತಿ ಸಂಬಂಧಗಳಲ್ಲಿ ಆರ್ಥಿಕ ಸಹಕಾರ ಮತ್ತು ಭದ್ರತೆಯ ಮಾತುಕತೆಗಳು ಮುಖ್ಯವಾದರೂ, ಮಾನವೀಯತೆ ಮತ್ತು ಜೀವಹಾನಿ ಸಂಬಂಧಿತ ಪ್ರಶ್ನೆಗಳು ಯಾವತ್ತೂ ಅಗ್ರಸ್ಥಾನದಲ್ಲಿರಬೇಕು ಎಂದು ಪ್ರಧಾನಿ ಸ್ಪಷ್ಟಪಡಿಸಿದ್ದಾರೆ.

ಪತ್ರ ಮಿತ್ರ

ನಿಜಕ್ಕೂ ಅದು ಭಾರತದ ಪರಂಪರೆ ಪ್ರತಿಪಾದಿಸುವ ಮೌಲ್ಯಗಳು. ಭಾರತೀಯ ಸಮುದ್ರಯಾನ ಸಿಬ್ಬಂದಿಯ ಸುರಕ್ಷತೆ ಕುರಿತು ಭಾರತ ಸದಾ ದೃಢ ಮತ್ತು ಸ್ಪಷ್ಟ ನಿಲುವು ಹೊಂದಿದೆ ಎಂಬುದನ್ನು ಈ ಭೇಟಿ ಮತ್ತೊಮ್ಮೆ ನೆನಪಿಸಿತು. ತಮ್ಮ ಹಿಂದೆ ನಾಡ ಪ್ರಭುಗಳು ಇದ್ದಾರೆ ಎನ್ನುವ ಧೈರ್ಯವನ್ನು ಇದು ಹೆಚ್ಚಿಸುತ್ತದೆ. ಭಾರತೀಯ ನಾವಿಕರ ಕುಟುಂಬಗಳಿಗೆ ನ್ಯಾಯ, ಸಾಂತ್ವನ ಮತ್ತು ಮತ್ತು ಹೊಣೆಗಾರಿಕೆ ಖಚಿತಪಡಿಸುವುದು ಸರ್ಕಾರದ ನೈತಿಕ ಜವಾಬ್ದಾರಿ ಎಂಬ ಸಂದೇಶವೂ ಈ ಆಕ್ಷೇಪದಲ್ಲಿ ಅಡಗಿದೆ. ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಭಾರತ ತನ್ನ ನಾಗರಿಕರ ಹಕ್ಕು ಮತ್ತು ಸುರಕ್ಷತೆಗಾಗಿ ಎತ್ತುವ ಧ್ವನಿ, ದೇಶದ ವಿದೇಶಾಂಗ ನೀತಿಯ ಬಲವನ್ನು ತೋರಿಸುತ್ತದೆ. ಈ ರಾಜತಾಂತ್ರಿಕ ಭೇಟಿ ಕೇವಲ ಕಾರ್ಯಕಾರಿ ಸಂಭಾಷಣೆಯಾಗದೆ, ಮಾನವೀಯ ಸಂವೇದನೆಗೂ ವೇದಿಕೆಯಾಯಿತು.

-ಶ್ರೀನಿವಾಸ್ ಹಳಗತ್ತಿ, ಮುದೋಳ

ನೋಂದಣಿ ಮಾಡಿಕೊಳ್ಳದಿರುವುದು ಅಪರಾಧವಲ್ಲ

ಅನೂಪ್ ದೇಶಪಾಂಡೆ, ಹೈಕೋರ್ಟ್ ವಕೀಲರು



ಆರ್‌ಎಸ್‌ಎಸ್ ನೋಂದಣಿ ಮಾಡಿಕೊಳ್ಳದಿರುವುದರ ಕುರಿತು ಪ್ರಿಯಾಂಕ್ ಖರ್ಗೆ ಅವರ ವಾಗ್ದಾಳಿ ರಾಜಕೀಯ ಚರ್ಚೆಯಲ್ಲಿ ಪ್ರಬಲವಾಗಿ ಧ್ವನಿಸಬಹುದಾದರೂ, ಕಾನೂನಿನ ದೃಷ್ಟಿಯಲ್ಲಿ ಅದು ಅತ್ಯಂತ ದುರ್ಬಲವಾದದ್ದು. ಪ್ರತಿಯೊಂದು ಸಂಸ್ಥೆಯು ಅಸ್ತಿತ್ವಕ್ಕೆ ಬರುವ ಮೊದಲು ನೋಂದಾಯಿಸಿಕೊಳ್ಳಲೇಬೇಕು ಎಂದು ಸಂವಿಧಾನ ಎಲ್ಲೂ ಹೇಳುವುದಿಲ್ಲ. ಭಾರತದ ಸುಪ್ರೀಂ ಕೋರ್ಟ್ ಈಗಾಗಲೇ ಹಲವು ಬಾರಿ ಈ ವಿಷಯವನ್ನು ಸ್ಪಷ್ಟಪಡಿಸಿದೆ. ಆದ್ದರಿಂದ, ಆರ್‌ಎಸ್‌ಎಸ್ ನೋಂದಾಯಿತವಾಗಿಲ್ಲ ಎಂಬ ಒಂದೇ ಕಾರಣಕ್ಕೆ ಅದು ಸಂಶಯಾಸ್ಪದ ಅಥವಾ ಕಾನೂನುಬಾಹಿರ ಸಂಸ್ಥೆ ಎಂದು ಬಿಂಬಿಸುವುದು ಕಾನೂನಾತ್ಮಕ ವಾದವಲ್ಲ. ಆದ್ದರಿಂದ ಇದನ್ನು ಕಾನೂನಿನ ಮುಖವಾಡ ಧರಿಸಿದ ಕೇವಲ ರಾಜಕೀಯ ದಾಳಿ ಎನ್ನಬಹುದು.

ಸಂವಿಧಾನದ ವಿಧಿ 19(1)(ಸಿ) ನಾಗರಿಕರಿಗೆ ಸಂಘ-ಸಂಸ್ಥೆಗಳನ್ನು ಸ್ಥಾಪಿಸುವ ಹಕ್ಕನ್ನು ನೀಡುತ್ತದೆ. ಇದು ಮೂಲಭೂತ ಹಕ್ಕಾಗಿದೆ. ಅಂದರೆ ಜನರು ಸಂಘಟನೆಗಳನ್ನು ರಚಿಸಲು ಸರ್ಕಾರದ ಅನುಮತಿಯನ್ನು ಪಡೆಯದೆ ಸಂಸ್ಥೆಗಳನ್ನು ನಿರ್ವಹಿಸಲು ಸ್ವತಂತ್ರರಾಗಿದ್ದಾರೆ. ಈ ಹಕ್ಕು ನಾಗರಿಕರಿಗೆ ಸೇರಿದ್ದೇ ಹೊರತು ಸರ್ಕಾರಕ್ಕಲ್ಲ. ನೋಂದಾಯಿತ ಸಂಸ್ಥೆಗಳು ಮಾತ್ರ ಮಾನ್ಯ, ನೋಂದಣಿಯಾಗದ ಸಂಸ್ಥೆಗಳು ಅಮಾನ್ಯ ಎಂದು ನಿರ್ಧರಿಸುವ ಅಧಿಕಾರ ಸರ್ಕಾರಕ್ಕಿಲ್ಲ. ಕಾನೂನು ಅದನ್ನು ಬೆಂಬಲಿಸುವುದಿಲ್ಲ. ಸುಪ್ರೀಂಕೋರ್ಟ್ ಈ ವಿಷಯವನ್ನು 'ಆಲ್ ಇಂಡಿಯಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ ವರ್ಸಸ್ ಇಂಡಸ್ಟ್ರಿಯಲ್ ಟ್ರಿಬ್ಯೂನಲ್' (AIR 1962 SC 171) ಪ್ರಕರಣದಲ್ಲಿ ಅತ್ಯಂತ ಸ್ಪಷ್ಟವಾಗಿ ಹೇಳಿದೆ. ಸಂಘಟನೆಯನ್ನು ಸ್ಥಾಪಿಸುವ ಹಕ್ಕು ಪರಿಪೂರ್ಣ ಮೂಲಭೂತ ಹಕ್ಕು ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಆದರೆ, ಸರ್ಕಾರದ ಕಡೆಯಿಂದ ಮಾನ್ಯತೆ ಪಡೆಯುವುದು ಮೂಲಭೂತ ಹಕ್ಕಲ್ಲ ಎಂದೂ ಅದು ಹೇಳಿದೆ. ಸರಳವಾಗಿ ಹೇಳುವುದಾದರೆ, ಸರ್ಕಾರಕ್ಕೆ ಇಷ್ಟವಿರಲಿ ಅಥವಾ ಇಲ್ಲದಿರಲಿ ನಾಗರಿಕರು ಸಂಘಟನೆಯನ್ನು ಕಟ್ಟಬಹುದು. ಸರ್ಕಾರ ಆ ಮೂಲಭೂತ ಸ್ವಾತಂತ್ರ್ಯವನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಅದು ಸರ್ಕಾರದ ಅಧಿಕೃತ ಮಾನ್ಯತೆ ಅಥವಾ ವಿಶೇಷ ಸವಲತ್ತು ಮಾತ್ರವೇ ಹೊರತು, ಅನುಮತಿಯೆಂದಲ್ಲ. ನ್ಯಾಯಾಲಯವು ಇದೇ ತತ್ವವನ್ನು 'ಬೋರ್ಡ್ ಆಫ್ ಟ್ರಸ್ಟೀಸ್, ಆಯುರ್ವೇದಿಕ್ ಅಂಡ್ ಯುನಾನಿ ಟಿಬಿಯಾ ಕಾಲೇಜ್ ವರ್ಸಸ್ ಸ್ಟೇಟ್ ಆಫ್ ಡೆಹಲಿ' (AIR 1962 SC 458) ಪ್ರಕರಣದಲ್ಲೂ ಪುನರುಚ್ಚರಿಸಿದೆ. ಯಾವುದೇ ಒಂದು ನೋಂದಾಯಿತವಲ್ಲದ ಸಂಸ್ಥೆಯು ಕೇವಲ ನೋಂದಣಿಯಾಗಿಲ್ಲ ಎಂಬ ಕಾರಣಕ್ಕಾಗಿ ಕಾನೂನುಬಾಹಿರವಾಗುವುದಿಲ್ಲ ಎಂದು ಅದು ತೀರ್ಪು ನೀಡಿದೆ. ಅದು ಒಂದು ಕಂಪನಿ ಅಥವಾ ನೋಂದಾಯಿತ ಸಂಸ್ಥೆಯಂತೆ ಕಾನೂನಾತ್ಮಕ ಅಧಿಕಾರಗಳನ್ನು ಹೊಂದಿಲ್ಲದಿರಬಹುದು, ಆದರೆ ಅದು ಬೇರೆ ವಿಷಯ. ಆದಾಗ್ಯೂ, ಅದು ಕಾನೂನುಬದ್ಧ ಜನರ ಗುಂಪಾಗಿಯೇ ಇರುತ್ತದೆ. ನ್ಯಾಯಾಲಯದ ತಾರ್ಕಿಕತೆಯು ಮುಖ್ಯವಾಗಿದೆ. ಏಕೆಂದರೆ ಇದು ಸಾರ್ವಜನಿಕ ಚರ್ಚೆಯಲ್ಲಿ ಹೆಚ್ಚಾಗಿ ಗೊಂದಲಕ್ಕೀಡಾಗುವ ಎರಡು ವಿಷಯಗಳನ್ನು ಪ್ರತ್ಯೇಕಿಸುತ್ತದೆ. ಒಂದು ಗುಂಪಾಗಿ ಅಸ್ತಿತ್ವದಲ್ಲಿರುವ ಹಕ್ಕು ಮತ್ತು ನೋಂದಣಿಯಿಂದ ಸಿಗುವ ಕಾನೂನು ಪ್ರಯೋಜನಗಳನ್ನು ಆನಂದಿಸುವ ಹಕ್ಕು.

'ಸಿದ್ಧಾರ್ಥ್ ಧೀರೇಂದ್ರ ಭಟ್ ವರ್ಸಸ್ ಸ್ಟೇಟ್ ಆಫ್ ಗುಜರಾತ್' (AIR 1999 SC 2244) ಪ್ರಕರಣದಲ್ಲಿ ಈ ನಿಲುವು ಇನ್ನಷ್ಟು ಸ್ಪಷ್ಟವಾಗುತ್ತದೆ. ಸ್ವಯಂಪ್ರೇರಿತವಾಗಿ ಸಂಘಟನೆಯನ್ನು ಕಟ್ಟುವ ನಾಗರಿಕರಿಗೆ ಕೇವಲ ಒಟ್ಟಿಗೆ ಸೇರಲು ಸರ್ಕಾರದ ಪೂರ್ವ ಅನುಮತಿಯಾಗಲಿ ಅಥವಾ ಕಡ್ಡಾಯ ನೋಂದಣಿಯಾಗಲಿ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇದು ಕಾನೂನು. ಸಚಿವರ ವೈಯಕ್ತಿಕ ಅಭಿಪ್ರಾಯವಲ್ಲ ಅಥವಾ ಉತ್ತರದಾಯಿತ್ವದ ಬಗೆಗಿನ ಸಾರ್ವಜನಿಕ ಘೋಷಣೆಯೂ ಅಲ್ಲ. ಒಂದು ಗುಂಪಿನ ಮೂಲ ಅಸ್ತಿತ್ವಕ್ಕೆ ಕಡ್ಡಾಯ ನೋಂದಣಿ ಅಗತ್ಯವಿಲ್ಲ ಎಂದು ಕಾನೂನು ಹೇಳುತ್ತದೆ. ಒಂದು ವೇಳೆ ಆ ಗುಂಪು ನಂತರ ಕೆಲವು ಕಾನೂನಾತ್ಮಕ ಪ್ರಯೋಜನಗಳನ್ನು ಬಯಸಿದರೆ, ಅದು ಬೇರೆ ವಿಷಯ. ಇದೇ ವಿಷಯದಲ್ಲಿ ಖರ್ಗೆ ಅವರ ಹೇಳಿಕೆಯು ಮಿತಿ ಮೀರಿದಂತಿದೆ. ಅವರು ಕೇವಲ ಪಾರದರ್ಶಕತೆಯನ್ನು ಕೇಳುತ್ತಿಲ್ಲ. ಅವರು ನೋಂದಣಿಯ ಕೊರತೆಯನ್ನು ಕಾನೂನುಬಾಹಿರ ಎಂದು ರಾಜಕೀಯ ಆರೋಪವನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ಆದರೆ ಸಂವಿಧಾನ ಅದಕ್ಕೆ ಅವಕಾಶ ನೀಡುವುದಿಲ್ಲ. ಒಂದು ಸಂಸ್ಥೆಯು ನೋಂದಣಿ ಇಲ್ಲದೆಯೂ ಅಸ್ತಿತ್ವದಲ್ಲಿರಬಹುದು. ಅದು ನೋಂದಣಿ ಇಲ್ಲದೆಯೂ ಕಾರ್ಯನಿರ್ವಹಿಸಬಹುದು. ನೋಂದಣಿ ಇಲ್ಲದೆಯೂ ಅದು ಕಾನೂನುಬದ್ಧವಾಗಿರಬಹುದು. ಸರ್ಕಾರವು ಒಂದು ಸಂಸ್ಥೆಯನ್ನು ಅಥವಾ ಅದರ ಸಿದ್ಧಾಂತವನ್ನು ದ್ವೇಷಿಸುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಕಾನೂನುಬಾಹಿರ ಎನ್ನಲು ಸಾಧ್ಯವಿಲ್ಲ.

'ಸ್ಟೇಟ್ ಆಫ್ ಮಧ್ಯಪ್ರದೇಶ ವರ್ಸಸ್ ರಮಾಶಂಕರ್ ರಘುವಂಶಿ' (1983 AIR 374) ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಇಲ್ಲಿ ವಿಶೇಷವಾಗಿ ಮಹತ್ವದ್ದಾಗಿದೆ. ಆ ಪ್ರಕರಣದಲ್ಲಿ ಮುನ್ಸಿಪಲ್ ಶಾಲಾ ಶಿಕ್ಷಕರೊಬ್ಬರು ಆರ್‌ಎಸ್‌ಎಸ್ ಮತ್ತು ಜನಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರು ಎಂಬ ಕಾರಣಕ್ಕಾಗಿ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿತ್ತು. ಸುಪ್ರೀಂ ಕೋರ್ಟ್ ಸರ್ಕಾರದ ಈ ಕ್ರಮವನ್ನು ರದ್ದುಗೊಳಿಸಿತು. ಕೇವಲ ಸೈದ್ಧಾಂತಿಕ ಅಥವಾ ರಾಜಕೀಯ ಒಡನಾಟದ ಕಾರಣಕ್ಕಾಗಿ ಸರ್ಕಾರಿ ಉದ್ಯೋಗವನ್ನು ನಿರಾಕರಿಸುವುದು ಸಂವಿಧಾನದ ವಿಧಿ 14 ಮತ್ತು 16 ರ ಉಲ್ಲಂಘನೆಯಾಗುತ್ತದೆ ಎಂದು ಅದು ತೀರ್ಪು ನೀಡಿತು. ಆರ್‌ಎಸ್‌ಎಸ್ ಒಡನಾಟವು ತನ್ನದೇ ಆದ ರೀತಿಯಲ್ಲಿ ಯಾವುದೇ ಕಾನೂನಾತ್ಮಕ ಕಪ್ಪು ಚುಕ್ಕೆಯಲ್ಲ ಎಂಬುದನ್ನು ನ್ಯಾಯಾಲಯ ಸ್ಪಷ್ಟಪಡಿಸಿದೆ. ಈ ಪ್ರಕರಣದಲ್ಲಿ ನ್ಯಾಯಾಲಯದ ತಾರ್ಕಿಕತೆಯು ಕೇವಲ ಒಬ್ಬ ಶಿಕ್ಷಕನ ಕೆಲಸದ ಮಿತಿಯನ್ನು ಮೀರಿ ಬೆಳೆದಿತ್ತು. ರಾಜಕೀಯ ಅಥವಾ ಸೈದ್ಧಾಂತಿಕ ಸಹಾನುಭೂತಿಯನ್ನು ಶಿಕ್ಷೆಗೆ ಕಾರಣವಾಗಿ ನೋಡುವ ಸರ್ಕಾರದ ಮನಸ್ಥಿತಿಯ ವಿರುದ್ಧ ಅದು ಎಚ್ಚರಿಕೆ ನೀಡಿತ್ತು. ಪ್ರಜಾಪ್ರಭುತ್ವದಲ್ಲಿ ಸರ್ಕಾರಕ್ಕೆ ಇಷ್ಟವಿಲ್ಲದಿದ್ದ ತಕ್ಷಣವೇ ಆಲೋಚನೆ, ನಂಬಿಕೆ ಮತ್ತು ಸಂಘಟನೆಯನ್ನು ಅಪರಾಧದ ನಡವಳಿಕೆಯಂತೆ ನೋಡಲು ಸಾಧ್ಯವಿಲ್ಲ ಎಂದು ಆ ತೀರ್ಪಿನ ಸಾರವಾಗಿತ್ತು.

ಭಾರತೀಯ ತೆರಿಗೆ ಕಾನೂನು ಕೂಡ ಬಾಡಿ ಆಫ್ ಇಂಡಿವಿಜುವಲ್ಸ್ (BOI) ಅಥವಾ ವ್ಯಕ್ತಿಗಳ ಒಕ್ಕೂಟ ಎಂಬ ವರ್ಗವನ್ನು ಗುರುತಿಸುತ್ತದೆ. ಆದಾಯ ತೆರಿಗೆ ಕಾಯ್ದೆಯಡಿ ಒಂದು ಒಕ್ಕೂಟವು ನೋಂದಾಯಿತವಾಗಿರಲಿ ಅಥವಾ ಇಲ್ಲದಿರಲಿ, ತೆರಿಗೆ ಉದ್ದೇಶಗಳಿಗಾಗಿ ಅದನ್ನು ಒಂದು 'ವ್ಯಕ್ತಿ' (Person) ಎಂದೇ ಪರಿಗಣಿಸಲಾಗುತ್ತದೆ. ಇದರರ್ಥ formal ಆದ ನೋಂದಣಿ ಇಲ್ಲದೆಯೂ ಜನರ ಗುಂಪುಗಳು ಅಸ್ತಿತ್ವದಲ್ಲಿರಬಹುದು ಮತ್ತು ನಿರ್ದಿಷ್ಟ ಉದ್ದೇಶಗಳಿಗಾಗಿ ಅವುಗಳನ್ನು ಗುರುತಿಸಬಹುದು ಎಂಬುದನ್ನು ಕಾನೂನು ಈಗಾಗಲೇ ಒಪ್ಪಿಕೊಂಡಿದೆ. ಇಲ್ಲಿ ವಿಷಯ ಸರಳವಾಗಿದೆ. ನೋಂದಣಿ ಮಾಡಿಕೊಳ್ಳದಿರುವುದು ಕಾನೂನುಬಾಹಿರತೆಯಲ್ಲ. ಅದು ಕೇವಲ ನೋಂದಣಿಯಾಗದಿರುವಿಕೆ ಅಷ್ಟೆ. ಒಂದು BOI ನೋಂದಾಯಿತ ಸಂಸ್ಥೆಯ ಎಲ್ಲಾ ಅಧಿಕಾರಗಳನ್ನು ಹೊಂದಿಲ್ಲದಿರಬಹುದು, ಆದರೆ ಕಾನೂನಿಗೆ ಅದನ್ನು ಹೇಗೆ ನಿರ್ವಹಿಸಬೇಕೆಂದು ತಿಳಿದಿದೆ. ನ್ಯಾಯಾಲಯಗಳು ಆರ್‌ಎಸ್‌ಎಸ್ ಅನ್ನು ವ್ಯಕ್ತಿಗಳ ಒಂದು ನಿರ್ದಿಷ್ಟ ಮತ್ತು ಗುರುತಿಸಬಹುದಾದ ಸಂಸ್ಥೆ ಎಂದೂ ಬಣ್ಣಿಸಿವೆ. 'ಟೇಕ್ ಚಂದ್ ಗುಪ್ತಾ ವರ್ಸಸ್ ಆರ್.ಕೆ. ಕರಂಜಿಯಾ' ಪ್ರಕರಣದಲ್ಲಿ ಅಲಹಾಬಾದ್ ಹೈಕೋರ್ಟ್ ಇದೇ ಭಾಷೆಯನ್ನು ಬಳಸಿದೆ. ಇದರರ್ಥ ಆರ್‌ಎಸ್‌ಎಸ್ ಅನ್ನು ಕಾನೂನಿನಲ್ಲಿ ಒಂದು ಸ್ಪಷ್ಟ ಮತ್ತು ಗುರುತಿಸಬಹುದಾದ ಸಂಸ್ಥೆಯಾಗಿ ಪರಿಗಣಿಸಲಾಗಿದೆಯೇ ಹೊರತು, ಕಾನೂನಿನ ತಿಳುವಳಿಕೆಗೆ ಹೊರತಾದ ಯಾವುದೋ ಒಂದು ನೆರಳಾಗಿ ಅಲ್ಲ. ನಂತರದ ಮಾನನಷ್ಟ ಪ್ರಕರಣಗಳಲ್ಲಿನ ನ್ಯಾಯಾಲಯದ ತಾರ್ಕಿಕತೆಯು ಇದೇ ಮೂಲಭೂತ ಕಲ್ಪನೆಯನ್ನು ಅವಲಂಬಿಸಿದೆ. ಒಂದು ನಿರ್ದಿಷ್ಟ ಗುಂಪು ಸಾಮಾನ್ಯ ಅರ್ಥದಲ್ಲಿ ನೋಂದಾಯಿಸಲ್ಪಡದಿದ್ದರೂ ಸಹ ಅದನ್ನು ಕಾನೂನು ಉದ್ದೇಶಗಳಿಗಾಗಿ ಗುರುತಿಸಬಹುದು. ಸಂಘ-ಸಂಸ್ಥೆಗಳ ಮೇಲೆ ಸರ್ಕಾರಕ್ಕೆ ಅನಿಯಮಿತ ಅಧಿಕಾರವಿದೆ ಎಂಬಂತೆ ವರ್ತಿಸಲು ಸಾಧ್ಯವಿಲ್ಲ ಎಂಬುದನ್ನು ತೋರಿಸುವ ಮತ್ತೊಂದು ಪ್ರಮುಖ ಪ್ರಕರಣವಿದೆ. 'ಸ್ಟೇಟ್ ಆಫ್ ಮದ್ರಾಸ್ ವರ್ಸಸ್ ವಿ.ಜಿ. ರಾವ್' ಪ್ರಕರಣದಲ್ಲಿ ಸಾಕಷ್ಟು ರಕ್ಷಣೆಗಳಿಲ್ಲದೆ ಕೇವಲ ಅಧಿಸೂಚನೆಯ ಮೂಲಕ ಸಂಘಟನೆಗಳನ್ನು ಕಾನೂನುಬಾಹಿರ ಎಂದು ಘೋಷಿಸಲು ಸರ್ಕಾರಕ್ಕೆ ಅವಕಾಶ ನೀಡುವ ಕಾನೂನನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತು. ಸಂಘಟನೆಯ ಸ್ವಾತಂತ್ರ್ಯದ ಮೇಲಿನ ನಿರ್ಬಂಧಗಳು ತರ್ಕಬದ್ಧವಾಗಿರಬೇಕು, ಅನಿಯಂತ್ರಿತವಾಗಿರಬಾರದು ಮತ್ತು ಸರಿಯಾದ ಪರಿಶೀಲನೆಗೆ ಒಳಪಟ್ಟಿರಬೇಕು ಎಂದು ನ್ಯಾಯಾಲಯ ಹೇಳಿದೆ. ಇದು ಮೂಲಭೂತ ಸಾಂವಿಧಾನಿಕ ಎಚ್ಚರಿಕೆಯಾಗಿದೆ. ಸರ್ಕಾರವು ತನ್ನ ಕಾರ್ಯಾಂಗದ ಅಧಿಕಾರವನ್ನು ಬಳಸಿ ಸಂಘಟನೆಗಳನ್ನು ಹತ್ತಿಕ್ಕಲು ಸಾಧ್ಯವಿಲ್ಲ.

ಅದಕ್ಕಾಗಿಯೇ ಖರ್ಗೆ ಅವರ ವಾದವು ತುಂಬಾ ದುರ್ಬಲವಾಗಿದೆ. ಉತ್ತರದಾಯಿತ್ವದ ಬಗ್ಗೆ ಮಾತನಾಡುವುದು ಒಂದು ವಿಷಯವಾದರೆ, ಒಂದು ಸಂಸ್ಥೆಯನ್ನು ದ್ವೇಷಿಸಲಾಗುತ್ತದೆ ಎಂಬ ಕಾರಣಕ್ಕಾಗಿ ಅದನ್ನು ಬಲವಂತವಾಗಿ ನೋಂದಣಿಗೆ ಒಳಪಡಿಸಬೇಕು ಎಂದು ಸೂಚಿಸುವುದು ಇನ್ನೊಂದು ವಿಷಯ. ಮೊದಲನೆಯದು ರಾಜಕೀಯ ವಾಕ್ಚಾತುರ್ಯ. ಎರಡನೆಯದಕ್ಕೆ ಸಾಂವಿಧಾನಿಕ ಸಮರ್ಥನೆಯ ಅಗತ್ಯವಿರುತ್ತದೆ. ನೋಂದಾಯಿತವಲ್ಲದ ಪ್ರತಿಯೊಂದು ಸಂಸ್ಥೆಯೂ ಸಂಶಯಾಸ್ಪದ ಎಂದು ಸರ್ಕಾರ ಊಹಿಸಲು ಸಾಧ್ಯವಿಲ್ಲ, ಅಥವಾ ನೋಂದಣಿಯ ಕೊರತೆಯನ್ನು ಕಾನೂನು ಖಂಡನೆಗೆ ಆಧಾರವಾಗಿ ಬಳಸಲು ಸಾಧ್ಯವಿಲ್ಲ. ನಿರ್ದಿಷ್ಟ ಪ್ರಾಯೋಗಿಕ ಉದ್ದೇಶಗಳಿಗಾಗಿ ನೋಂದಣಿ ಮುಖ್ಯವಾಗಬಹುದು ಎಂಬುದನ್ನು ಕಾನೂನು ಕೂಡ ಒಪ್ಪಿಕೊಳ್ಳುತ್ತದೆ. ಒಂದು ಗುಂಪು ಬ್ಯಾಂಕ್ ಖಾತೆಯನ್ನು ತೆರೆಯಲು, ಆಸ್ತಿ ಖರೀದಿಸಲು, ವಿದೇಶಿ ದೇಣಿಗೆಗಳನ್ನು ಪಡೆಯಲು, ಪತ್ರಿಕೆಗಳನ್ನು ಪ್ರಕಟಿಸಲು ಅಥವಾ ಯಾವುದಾದರೂ ವಿಶೇಷ ಕಾನೂನಿನ ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯಲು ಬಯಸಿದರೆ, ಆ ನಿರ್ದಿಷ್ಟ ಉದ್ದೇಶಕ್ಕಾಗಿ ನೋಂದಣಿ ಅಗತ್ಯವಾಗಬಹುದು. ಅದು ಸಹಜ. ಆದರೆ ಅದರರ್ಥ ನೋಂದಣಿಯೇ ಆ ಗುಂಪಿನ ಮೂಲ ಅಸ್ತಿತ್ವಕ್ಕೆ ಒಂದು ಷರತ್ತು ಎಂದಲ್ಲ. ಒಂದು ಗುಂಪು ನೋಂದಣಿ ಇಲ್ಲದೆಯೇ ರಾಜಕೀಯವಾಗಿ, ಸಾಮಾಜಿಕವಾಗಿ ಅಥವಾ ಸೈದ್ಧಾಂತಿಕವಾಗಿ ಸಕ್ರಿಯವಾಗಿರಬಹುದು ಮತ್ತು ಸಂವಿಧಾನವು ಆ ಮುಕ್ತ ಅವಕಾಶವನ್ನು ರಕ್ಷಿಸುತ್ತದೆ. ಸಚಿವರ ವಾದದಲ್ಲಿರುವ ದೊಡ್ಡ ಕಾನೂನುಬದ್ಧ ತಪ್ಪೆಂದರೆ, ಅವರು ನಿರ್ದಿಷ್ಟ ಕಾರ್ಯಗಳಿಗಾಗಿ ಇರುವ ಒಂದು ಗುಂಪಿನ ಕಾನೂನು ಸ್ಥಿತಿಯನ್ನು (Legal Status) ಆ ಗುಂಪಿನ ಅಸ್ತಿತ್ವದ ಹಕ್ಕಿನೊಂದಿಗೆ ಗೊಂದಲಗೊಳಿಸುತ್ತಿದ್ದಾರೆ. ವ್ಯಕ್ತಿಗಳ ಒಂದು ಒಕ್ಕೂಟವು ನೋಂದಣಿ ಇಲ್ಲದೆ ತಾನು ಮಾಡಬಹುದಾದ ಕೆಲಸಗಳಲ್ಲಿ ಸೀಮಿತವಾಗಿರಬಹುದು, ಆದರೆ ಅದು ಆ ಗುಂಪು ಕಾನೂನುಬಾಹಿರ ಎಂದು ಹೇಳುವುದಕ್ಕೆ ಸಮನಲ್ಲ. ಭಾರತೀಯ ಕಾನೂನು ಇಂತಹ ವ್ಯತ್ಯಾಸಗಳಿಂದ ತುಂಬಿದೆ. ಪ್ರತಿಯೊಂದು ಕಾನೂನಾತ್ಮಕ ಮಿತಿಯೂ ನಿಷೇಧವಲ್ಲ ಮತ್ತು ಪ್ರತಿಯೊಂದು ನೋಂದಾಯಿತವಲ್ಲದ ಸಂಸ್ಥೆಯೂ ಕಾನೂನುಬಾಹಿರವಲ್ಲ.

ಅಂತಿಮ ನಿಲುವು ಸ್ಪಷ್ಟವಾಗಿದೆ. ನೋಂದಣಿ ಮಾಡಿಕೊಳ್ಳದಿರುವುದು ಅಪರಾಧವಲ್ಲ. ಸರ್ಕಾರ ಅದನ್ನು ಅಪರಾಧವಾಗಿ ಪರಿಗಣಿಸಲು ಸಾಧ್ಯವಿಲ್ಲ. ಆರ್‌ಎಸ್‌ಎಸ್ ಅನ್ನು ಕೀಳಾಗಿ ಚಿತ್ರಿಸಲು, ಅದರ ಕಾನೂನಾತ್ಮಕ ಅಸ್ತಿತ್ವವನ್ನು ನಿರಾಕರಿಸಲು ಅಥವಾ ಅದರ ಸದಸ್ಯರು ಕಾನೂನಿನ ಹೊರಗೆ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಬಿಂಬಿಸಲು ಸರ್ಕಾರವು ಕೇವಲ ನೋಂದಣಿಯನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದಾರೆ. ಸುಪ್ರೀಂ ಕೋರ್ಟ್ ಈಗಾಗಲೇ ಮೂಲಭೂತ ತತ್ವವನ್ನು ಇತ್ಯರ್ಥಪಡಿಸಿದೆ. ನಾಗರಿಕರಿಗೆ ಸಂಘಟಿತರಾಗುವ ಹಕ್ಕಿದೆ ಮತ್ತು ನೋಂದಣಿಯ ಕೊರತೆಯಿಂದಾಗಿ ಆ ಹಕ್ಕು ರದ್ದಾಗುವುದಿಲ್ಲ. ಪ್ರಿಯಾಂಕ್ ಖರ್ಗೆ ಅವರ ಹೇಳಿಕೆಯು ರಾಜಕೀಯ ಲಾಭವನ್ನು ಗಳಿಸಿಕೊಡಬಹುದು, ಆದರೆ ಕಾನೂನಿನಲ್ಲಿ ಅದು ನಿಲ್ಲುವುದಿಲ್ಲ. ಸಂವಿಧಾನವು ಏನನ್ನು ರಕ್ಷಿಸುತ್ತದೆಯೋ, ಅದನ್ನು ರಾಜಕೀಯವು ಅಳಿಸಲು ಸಾಧ್ಯವಿಲ್ಲ. ಸುಪ್ರೀಂ ಕೋರ್ಟ್ ಈಗಾಗಲೇ ಏನನ್ನು ಮಾನ್ಯ ಮಾಡಿದೆಯೋ, ಅದನ್ನು ಒಬ್ಬ ಸಚಿವರು ಅಷ್ಟು ಸುಲಭವಾಗಿ ನಿರಾಕರಿಸಲು ಸಾಧ್ಯವಿಲ್ಲ.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಜನರ ಬಂಡಾಯ

ರಾಜಾ ಮುನೀಬ್



ಪಾಕ್ ಆಕ್ರಮಿತ ಕಾಶ್ಮೀರ ನಿಜಕ್ಕೂ 'ಆಜಾದ್' ಆಗಿದ್ದರೆ ಜನರನ್ನೇಕೆ ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಂಧನದಲ್ಲಿಡಲಾಗಿದೆ?

ಕೆಲವಾರು ದಶಕಗಳಿಂದ ಪಾಕಿಸ್ತಾನವು ತನ್ನ ವಶದಲ್ಲಿರುವ ಪಾಕಿಸ್ತಾನದ ಭಾಗವು (ಪಾಕ್ ಆಕ್ರಮಿತ ಕಾಶ್ಮೀರ) 'ಕಾಶ್ಮೀರಿಗರ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ಒಂದು ಮಾದರಿ' ಎಂದು ಹೇಳಿಕೊಂಡು ಬರುತ್ತಿತ್ತು. ಈ ಪ್ರದೇಶವು ಭಾರತದ ಜಮ್ಮು-ಕಾಶ್ಮೀರದ ಜನರ ಆಶೋತ್ತರಗಳನ್ನು ಪ್ರತಿನಿಧಿಸುತ್ತದೆ ಎಂಬುದಾಗಿಯೂ ಅದು ಅಂತಾರಾಷ್ಟ್ರೀಯ ಹೇಳಿಕೆಗಳಲ್ಲಿ ಹೇಳಿಕೊಂಡು ಬರುತ್ತಿತ್ತು. ಪಾಕಿಸ್ತಾನವು ಅದನ್ನು 'ಆಜಾದ್ ಕಾಶ್ಮೀರ್' ಎಂಬುದಾಗಿಯೂ ಕರೆಯುತ್ತದೆ. ಆದರೆ ಈಗ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಬೇರೆಯೇ ಕತೆ ಹೇಳುತ್ತಿವೆ. ಅಲ್ಲಿನ ಜನರು ಪಾಕಿಸ್ತಾನ ಆಡಳಿತ ಕಪಿಮುಷ್ಟಿಯಲ್ಲಿ ಹೇಗೆ ನರಳುತ್ತಿದ್ದಾರೆ ಎಂಬುದು ಈಗ ಹೆಚ್ಚೆಚ್ಚು ಬೆಳಕಿಗೆ ಬರುತ್ತಿದೆ. ತಮ್ಮ ಆರ್ಥಿಕ ಮತ್ತು ಸಾಮಾಜಿಕ ದುಸ್ಥಿತಿಯ ವಿರುದ್ಧವಾಗಿ ಅಲ್ಲಿನ ಜನರು ಇತ್ತೀಚೆಗೆ ನಡೆಸಿದ ಪ್ರತಿಭಟನೆಯು ಇದೀಗ ಭಾರೀ ದೊಡ್ಡ ರಾಜಕೀಯ ಆಯಾಮವನ್ನು ಪಡೆದಿದ್ದು, ಪಾಕಿಸ್ತಾನದ ಸೇನೆಯ ಕ್ರೂರತೆಯನ್ನೂ ಬಹಿರಂಗಪಡಿಸಿದೆ. ಹೆಚ್ಚುತ್ತಿರುವ ವಿದ್ಯುತ್ ಬೆಲೆ, ಹಣದುಬ್ಬರ ಹಾಗೂ ಇನ್ನಿತರ ಕೆಲವು ಸಂಕಷ್ಟಗಳನ್ನು ಆಡಳಿತದ ಗಮನಕ್ಕೆ ತರಲು ಪ್ರತಿಭಟನೆಗೆ ಇಳಿದ ಜನರ ಮೇಲೆ ಪಾಕ್ ಆಡಳಿತ ಹಾಗೂ ಸೇನೆಯು ನಡೆಸಿದ ದೌರ್ಜನ್ಯವು ಇಡೀ ವಿಶ್ವದ ಗಮನ ಸೆಳೆದಿದೆ.

ಇತೀಚೆಗೆ ನಡೆದ ಪ್ರತಿಭಟನೆಯು ಅಲ್ಲಿನ ಜನರು ಕೇವಲ ಆರ್ಥಿಕ ಸಂಕಷ್ಟ ಹೊಂದಿರುವುದಲ್ಲ, ಅದಕ್ಕಿಂತಲೂ ದೊಡ್ಡ ಹಾಗೂ ಗಂಭೀರ ಸಂಕಷ್ಟವನ್ನು ಎದುರಿಸುತ್ತಿದ್ದಾರೆ ಎಂಬುದನ್ನು ತೋರ್ಪಡಿಸಿದೆ. ತಮ್ಮ ಮೇಲೆ ಹೇರಲಾಗಿರುವ ರಾಜಕೀಯ ವ್ಯವಸ್ಥೆಯನ್ನು ಕೂಡಾ ಜನರು ವಿರೋಧಿಸುತ್ತಿದ್ದಾರೆ. ಸ್ಥಳೀಯ ಜನರಿಗೆ ಈ ರಾಜಕೀಯ ವ್ಯವಸ್ಥೆಯಲ್ಲಿ ಪ್ರಾತಿನಿಧ್ಯವಿಲ್ಲವಾಗಿದೆ. ಎಲ್ಲವೂ ಇಸ್ಲಾಮಾಬಾದಿನಿಂದ ಹೇರಲ್ಪಡುತ್ತಿವೆ. ಇದೀಗ ಅಲ್ಲಿಯ ಜನರು ಪಾಕ್ ಆಕ್ರಮಿತ ಕಾಶ್ಮೀರದ ಮೇಲೆ ಪಾಕಿಸ್ತಾನ ಆಡಳಿತದ ಅಧಿಕಾರವನ್ನು ನ್ನೇ ಹಾಗೂ ಆಜಾದ್‌ನ ಅರ್ಥವನ್ನು ಪ್ರಶ್ನಿಸಲಾರಂಭಿಸಿದ್ದಾರೆ. ಪಾಕಿಸ್ತಾನವು ಈ ಪ್ರದೇಶ ಸ್ವಾಯತ್ತ ಎಂದು ಹೇಳಿಕೊಳ್ಳುತ್ತದೆಯಾದರೂ ವಾಸ್ತವದಲ್ಲಿ ಅಲ್ಲಿಗೆ ಸಂಬಂಧಿಸಿದ ನಿರ್ಧಾರಗಳನ್ನೆಲ್ಲಾ ಪಾಕಿಸ್ತಾನ ಸರಕಾರವೇ ತೆಗೆದುಕೊಳ್ಳುತ್ತದೆ. ಪ್ರತಿಯೊಂದೂ ಪಾಕ್ ಸರಕಾರ ಮತ್ತು ಸೇನೆಯ ಆದೇಶದಂತೆಯೇ ನಡೆಯುತ್ತದೆ. ಸ್ಥಳೀಯ ರಾಜಕೀಯ ಮುಖಂಡರು ಹೆಸರಿಗಷ್ಟೇ ಇರುವುದು ಹೊರತು ಅವರಿಗೆ ನಿಜವಾದ ಅಧಿಕಾರವೇ ಇಲ್ಲ.

ತಮ್ಮ ದೂರು ದುಮ್ಮಾನಗಳನ್ನು ಪಾಕ್ ಆಡಳಿತದ ಗಮನಕ್ಕೆ ತರಲೆಂದು ಪಾಕ್ ಆಕ್ರಮಿಸಿದ ಕಾಶ್ಮೀರದ ಜನರೆಲ್ಲರೂ ಸೇರಿಕೊಂಡು 'ಜಂಟಿ ಅವಾಮಿ ಕ್ರಿಯಾ ಸಮಿತಿ' (ಜೆಎಎಸಿ) ರಚಿಸಿದರು. ಇತ್ತೀಚೆಗೆ ಜೆಎಎಸಿ ಸರಕಾರದ ವಿರುದ್ಧ ಪ್ರತಿಭಟನೆಗೆ ಕರೆ ನೀಡುವುದರೊಂದಿಗೆ ಬಿಕ್ಕಟ್ಟು ಬಿಗಡಾಯಿಸಿತು. ಇದು ನಾಗರಿಕ ಸಮಾಜದ ಪ್ರತಿಭಟನೆಯಾಗಿತ್ತು. ಆದರೆ ಪಾಕ್ ಸರಕಾರವು ಈ ಜೆಎಎಸಿ ಸಂಘಟನೆಯನ್ನು ಭಯೋತ್ಪಾದಕ ಸಂಘಟನೆಯೆಂದು ಘೋಷಿಸಿ ಅದರ ಮುಖಂಡರನ್ನೆಲ್ಲಾ ಬಂಧಿಸಿತು. ಇದನ್ನು ಪ್ರತಿರೋಧಿಸಿ ಸಾವಿರಾರು ಜನರು ರಾವಲ್‌ಕೋಟ್‌ನಲ್ಲಿ ನೆರೆದು ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ ಪ್ರತಿಭಟನಾಕಾರರ ಮೇಲೆ ಪಾಕಿಸ್ತಾನಿ ಸೈನಿಕರು ಗುಂಡಿನ ದಾಳಿ ನಡೆಸಿದ್ದರಿಂದ 30ಕ್ಕೂ ಅಧಿಕ ಮಂದಿ ಸಾವಿಗೀಡಾಗಿ 200ಕ್ಕೂ ಅಧಿಕ ಮಂದಿ ಗಾಯಗೊಂಡರು. ಪ್ರಸಕ್ತ ಅಶಾಂತಿ, ಪ್ರತಿಭಟನೆಯು ಪ್ರಮುಖವಾಗಿರುವುದೇಕೆಂದರೆ ಕಳೆದ ಕೆಲವು ವರ್ಷಗಳಿಂದ ಇಂತಹುದೇ ವಿದ್ಯಮಾನಗಳು ಪದೇಪದೇ ಸಂಭವಿಸುತ್ತಿರುವುದು. 2026ರ ಜೂನ್‌ನಲ್ಲಿ ನಡೆದ ಘಟನೆಯು ಪ್ರತ್ಯೇಕ ಘಟನೆಯಲ್ಲ. ಅದು ಪದೇಪದೇ ಸಂಭವಿಸುತ್ತಿರುವ ವಿದ್ಯಮಾನದ ಒಂದು ಭಾಗವಷ್ಟೆ.

2024ರ ಮೇ ತಿಂಗಳಲ್ಲಿ ಕೂಡಾ ಗೋಧಿ ಹಿಟ್ಟು ಮತ್ತು ವಿದ್ಯುತ್ ಬೆಲೆ ಹೆಚ್ಚಳದ ವಿರುದ್ಧವಾಗಿ ಪಾಕ್ ಆಕ್ರಮಿತ ಕಾಶ್ಮೀರದ ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದರು. ಆಗಲೂ ಜನರು ಮತ್ತು ಭದ್ರತಾ ಪಡೆಗಳ ಮಧ್ಯೆ ಸಂಘರ್ಷ ನಡೆದಿತ್ತು. ಹಲವಾರು ಪ್ರತಿಭಟನೆಕಾರರನ್ನು ಭದ್ರತಾ ಪಡೆಗಳು ಹತ್ಯೆಗೈದಿದ್ದವು. ಪಾಕ್ ಸರಕಾರವು ತಾತ್ಕಾಲಿಕವಾಗಿ ಪ್ರತಿಭಟನೆಕಾರರ ಬೇಡಿಕೆಗಳಿಗೆ ಒಪ್ಪಿತ್ತು. ಇದರಿಂದ ಪ್ರತಿಭಟನೆಯು ಶಮನವಾಗಿತ್ತಾದರೂ ಜನರ ಸಂಕಷ್ಟಗಳು ಪರಿಹಾರವಾಗಲಿಲ್ಲ.

2025ರ ಸೆಪ್ಟೆಂಬರ್‌ನಲ್ಲಿ ಮತ್ತೆ ಇದೇ ರೀತಿಯ ಬೆಳವಣಿಗೆ ಸಂಭವಿಸಿತು. ಮುಜಾಫರ್‌ಬಾದ್‌ನಲ್ಲಿ ಜನರು ದೊಡ್ಡ ಮಟ್ಟದ ಪ್ರತಿಭಟನೆ ನಡೆಸಿದರು. ಅಲ್ಲೂ ಭದ್ರತಾ ಪಡೆಗಳೊಂದಿಗೆ ಸಂಘರ್ಷ ನಡೆಯಿತು. ಆಗಲೂ ಕೆಲವಾರು ಜನರು ಭದ್ರತಾ ಪಡೆಗಳ ಗುಂಡಿಗೆ ಬಲಿಯಾದರು. ಜನರ ಸಂಚಾರದ ಮೇಲೆ ಮತ್ತು ಫೋನ್ ಬಳಕೆಯ ಮೇಲೆ ನಿರ್ಬಂಧ ಹೇರಲಾಯಿತು. ಭದ್ರತಾ ಪಡೆಗಳ ಸಂಖ್ಯೆ ಹೆಚ್ಚಿಸಲಾಯಿತು. ಬಳಿಕ ಸರಕಾರವು ಜನರ ಬೇಡಿಕೆ ಈಡೇರಿಸುವುದಾಗಿ ಆಶ್ವಾಸನೆ ನೀಡಿತು. ಪ್ರತಿಭಟನೆ ನಿಂತಿತಾದರೂ ಜನರ ಬೇಡಿಕೆ ಈಡೇರಲಿಲ್ಲ. ಮೂಲಭೂತ ಸಮಸ್ಯೆಗಳು ಹಾಗೇ ಉಳಿದುಕೊಂಡವು.

ಪದೇಪದೇ ಇಂತಹ ಪ್ರಸಂಗ ಸಂಭವಿಸುತ್ತಿರುವುದು ಈ ಬಿಕ್ಕಟ್ಟಿನ ಗಂಭೀರತೆಯನ್ನು ತೋರಿಸುತ್ತದೆ. ಆರ್ಥಿಕ ಸಂಕಷ್ಟವು ಜನರು ಪ್ರತಿಭಟನೆಗೆ ಇಳಿಯಲು ಪ್ರೇರೇಪಿಸುತ್ತಿದೆ. ಭದ್ರತಾ ಪಡೆಗಳು ಬಲಪ್ರಯೋಗದಿಂದ ಅದನ್ನು ದಮನಿಸಲು ಯತ್ನಿಸುತ್ತಾರೆ. ಸಂಪರ್ಕ ವ್ಯವಸ್ಥೆ ಕಡಿದುಹಾಕಲಾಗುತ್ತದೆ. ಒತ್ತಡ ಹೇರಿ ಜನರು ಸಂಧಾನಕ್ಕೆ ಬರುವಂತೆ ಮಾಡಲಾಗುತ್ತದೆ. ಸಂಧಾನದಲ್ಲಿ ನೀಡಲಾದ ಆಶ್ವಾಸನೆಗಳಲ್ಲಿ ಕೆಲವನ್ನು ಮಾತ್ರ ಈಡೇರಿಸಲಾಗುತ್ತದೆ. ಜನರ ಆಕ್ರೋಶ ಮತ್ತೆ ಹೆಚ್ಚುತ್ತದೆ. ಹೊಸದಾಗಿ ಪ್ರತಿಭಟನೆ ಶುರುವಾಗುತ್ತದೆ. ಈ ಪ್ರಕ್ರಿಯೆಗಳು ಪುನರಪಿ ನಡೆಯುತ್ತವೆ. ಪ್ರತಿಯೊಂದು ಪ್ರತಿಭಟನೆ ಕೂಡಾ ಪಾಕಿಸ್ತಾನಿ ಆಡಳಿತ ಮತ್ತು ಜನರ ನಡುವಿನ ವಿಶ್ವಾಸವನ್ನು ಕುಂದಿಸುತ್ತಾ ಬರುತ್ತದೆ. ಜತೆಗೇ ಪಾಕಿಸ್ತಾನಿ ಆಡಳಿತವು ಪಾಕ್ ಆಕ್ರಮಿತ ಕಾಶ್ಮೀರದ ಜನರಿಗೆ ಅಲ್ಲಿನ ರಾಜಕೀಯದಲ್ಲಿ ಕಾರ್ಯ ನಿರ್ವಹಿಸಲು ಪ್ರಾಮಾಣಿಕವಾಗಿ ಅವಕಾಶ ನೀಡುವುದಿಲ್ಲವೆಂಬುದು ಸಾಬೀತಾಗುತ್ತದೆ. ಮೊಬೈಲ್ ಹಾಗೂ ಇಂಟರ್ನೆಟ್ ಸಂಪರ್ಕ ಕಡಿದುಹಾಕುವುದು ಆಡಳಿತದ ಕಡೆಯಿಂದ ನಡೆಯುತ್ತಿರುವ ಅತ್ಯಂತ ಕೆಟ್ಟ ಕ್ರಮವಾಗಿದೆ.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಅಶಾಂತಿಯು ಈಗ ಅಂತಾರಾಷ್ಟ್ರೀಯವಾಗಿಯೂ ಗಮನ ಸೆಳೆದಿದೆ. ಹಲವಾರು ದೇಶಗಳು ಈ ಪ್ರದೇಶಕ್ಕೆ ಭೇಟಿ ನೀಡದಂತೆ ತನ್ನ ದೇಶದ ಪ್ರವಾಸಿಗರಿಗೆ ಎಚ್ಚರಿಕೆ ನೀಡಿವೆ. ಈ ಎಚ್ಚರಿಕೆ ನೀಡಿರುವುದು, ಪಾಕ್ ಆಕ್ರಮಿತ ಕಾಶ್ಮೀರವು ಸ್ಥಿರತೆ ಮತ್ತು ಶಾಂತಿಯನ್ನು ಹೊಂದಿದೆ ಎಂಬ ಪಾಕ್ ಸರಕಾರದ ಹೇಳಿಕೆಯನ್ನು ಅಲ್ಲಗಳೆಯುತ್ತದೆ. ವಿದೇಶಿ ರಾಷ್ಟ್ರಗಳು ತಮ್ಮ ಪ್ರಜೆಗಳು ಒಂದು ಪ್ರದೇಶಕ್ಕೆ ಹೋಗಬಾರದೆಂದು ತನ್ನ ಪ್ರಜೆಗಳಿಗೆ ಎಚ್ಚರಿಕೆ ನೀಡಿದವೆಂದರೆ ಅದರ ಅರ್ಥ ಆ ಪ್ರದೇಶವು ಪ್ರಕ್ಷುಬ್ಧವಾಗಿದೆಯೆಂದರ್ಥ.

ಪಾಕಿಸ್ತಾನವು ಜಮ್ಮು ಕಾಶ್ಮೀರವು ತನಗೆ ಸೇರಬೇಕೆಂದು ದಶಕಗಳಿಂದ ಆಗ್ರಹಿಸುತ್ತಲೇ ಬಂದಿದೆ. ಆದರೆ ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಭಾರತದ ಕಾಶ್ಮೀರದ ನಡುವಿನ ಪ್ರಗತಿಯ ವ್ಯತ್ಯಾಸ ಗಮನಿಸಿದರೆ ದಂಗಾಗುವುದು. ಕಾಶ್ಮೀರವು ಎಲ್ಲಾ ವಿಧಗಳಿಂದ ಪ್ರಗತಿ ಸಾಧಿಸುತ್ತಿದ್ದರೆ ಪಾಕ್ ಆಕ್ರಮಿತ ಕಾಶ್ಮೀರವು ಇನ್ನೂ ಬಹಳಷ್ಟು ಹಿಂದುಳಿದಿದೆ. ಪಾಕ್ ಆಕ್ರಮಿತ ಕಾಶ್ಮೀರದ ಜನರು ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಪ್ರದೇಶವನ್ನು ಭಾರತದ ಕಾಶ್ಮೀರದೊಂದಿಗೆ ತುಲನೆ ಮಾಡುತ್ತಾ ತಾವು ಬಹಳಷ್ಟು ಹಿಂದುಳಿದಿರುವ ಬಗ್ಗೆ ಖೇದಿಸುತ್ತಿದ್ದಾರೆ. ಪಾಕ್ ಆಕ್ರಮಿತ ಕಾಶ್ಮೀರದ ಜನರು ಮೂಲಭೂತ ಸೌಕರ್ಯಗಳಿಗಾಗಿಯೂ ಹೋರಾಟ ನಡೆಸಬೇಕಾಗಿ ಬಂದಿದೆ.

ಪಾಕ್ ಆಕ್ರಮಿತ ಕಾಶ್ಮೀರದ ಜನರು ಈಗ ಕೇವಲ ವಿದ್ಯುತ್ ಪೂರೈಕೆ, ಆರ್ಥಿಕ ಪ್ರಗತಿಗಾಗಿ ಒತ್ತಾಯಿಸಿ ಪ್ರತಿಭಟಿಸುತ್ತಿರುವುದಲ್ಲ. ಪಾಕ್ ಸರಕಾರವು ಈ ಪ್ರಾಂತ್ಯದೆಡೆಗೆ ತೋರುತ್ತಿರುವ ಮಲತಾಯಿ ಧೋರಣೆಯನ್ನೂ ಪ್ರತಿಭಟಿಸುತ್ತಿದ್ದಾರೆ. ಇಡೀ ರಾಜಕೀಯ ವ್ಯವಸ್ಥೆಯ ವಿರುದ್ಧವೇ ಸಿಡಿದೇಳುತ್ತಿದ್ದಾರೆ. ರಾಜಕೀಯ ಸ್ವಾತಂತ್ರ್ಯವನ್ನು ಬಯಸುತ್ತಿದ್ದಾರೆ. ಇದು ಮಹತ್ವದ ಬೆಳವಣಿಗೆ.

'ಆಜಾದ್ ಕಾಶ್ಮೀರ'ದಲ್ಲಿನ ಪ್ರತಿಭಟನೆಗಳು ನಿಲ್ಲುವ ಸಂಕೇತ ತೋರುತ್ತಿಲ್ಲ, ಇನ್ನಷ್ಟು ತೀವ್ರಗೊಳ್ಳುವುದು ಖಂಡಿತವಾಗಿದೆ. ಇದು ಪಾಕಿಸ್ತಾನಕ್ಕೆ ಸಂಬಂಧಿಸಿ ಗುರುತರ ಪ್ರಶ್ನೆಯೊಂದನ್ನು ಎತ್ತುತ್ತದೆ. ಈ ಪ್ರಾಂತವು ನಿಜಕ್ಕೂ 'ಆಜಾದ್' ಆಗಿದ್ದರೆ ಜನರನ್ನೇಕೆ ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಂಧನದಲ್ಲಿಡಲಾಗಿದೆ?

ಜಿ7 ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಎಚ್ಚರಿಕೆ

ಪಶ್ಚಿಮ ಏಷ್ಯಾ ಬಿಕ್ಕಟ್ಟು ಬಡ ರಾಷ್ಟ್ರಗಳಿಗೆ ಹೊರೆ

ಎವಿಯನ್-ಲೆಸ್-ಬೈನ್ಸ್(ಫ್ರಾನ್ಸ್): ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಇಂಧನ, ರಸಗೊಬ್ಬರ ಹಾಗೂ ಆಹಾರ ಪೂರೈಕೆ ಸರಪಳಿಗಳ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ಅದರ ದೀರ್ಘಕಾಲೀನ ಪರಿಣಾಮಗಳನ್ನು ಅಭಿವೃದ್ಧಿಶೀಲ ರಾಷ್ಟ್ರಗಳು ಎದುರಿಸಬೇಕಾಗಬಹುದು ಎಂದು ಪ್ರಧಾನಿ ನರೇಂದ್ರ ಮೋದಿ ಎಚ್ಚರಿಸಿದರು. ಜಿ7 ಶೃಂಗಸಭೆಯ ಔಟ್‌ರೀಚ್ ಅಧಿವೇಶನದಲ್ಲಿ ಮಾತನಾಡಿದ ಮೋದಿ, ಭೂರಾಜಕೀಯ ಸಂಘರ್ಷಗಳ ಭಾರವನ್ನು ಅತ್ಯಂತ ದುರ್ಬಲ ರಾಷ್ಟ್ರಗಳ ಮೇಲೆ ಹಾಕಬಾರದು ಎಂದರು. ಇಂತಹ ಆಘಾತಗಳಿಂದ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ರಕ್ಷಿಸಲು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳು ವಿಶೇಷ ಬೆಂಬಲ ವ್ಯವಸ್ಥೆಗಳನ್ನು ರೂಪಿಸಬೇಕು ಎಂದು ಕರೆ ನೀಡಿದರು.

IMPACT ಎಂಬ ಹೊಸ ಜಾಗತಿಕ ಯೋಜನೆ: ಈ ಸಂದರ್ಭದಲ್ಲಿ ಮೋದಿ ಇಂಟರ್‌ನ್ಯಾಷನಲ್ ಮೊಬಿಲೈಸೇಶನ್ ಪಾರ್ಟ್ನರ್‌ಶಿಪ್ ಫಾರ್ ಆಕ್ಸಿಲರೇಟಿಂಗ್ ಕನೆಕ್ಟಿವಿಟಿ ಆ್ಯಂಡ್ ಟ್ರೇಡ್ (IMPACT) ಎಂಬ ಹೊಸ ಜಾಗತಿಕ ಸಹಭಾಗಿತ್ವ ಚೌಕಟ್ಟನ್ನು ಪ್ರಸ್ತಾಪಿಸಿದರು. ಜಿ7 ರಾಷ್ಟ್ರಗಳ ಬಂಡವಾಳ, ಭಾರತದ ಪ್ರತಿಭೆ ಮತ್ತು ಗ್ಲೋಬಲ್ ಸೌತ್ ರಾಷ್ಟ್ರಗಳ ಪಾಲುದಾರಿಕೆಯನ್ನು ಒಟ್ಟುಗೂಡಿಸಿ ವ್ಯಾಪಾರ, ತಂತ್ರಜ್ಞಾನ, ಇಂಧನ ಹಾಗೂ ಅವಕಾಶಗಳನ್ನು ಸಂಪರ್ಕಿಸುವ ಆರ್ಥಿಕ ಕಾರಿಡಾರ್‌ಗಳನ್ನು ನಿರ್ಮಿಸಬಹುದು ಎಂದು ಹೇಳಿದರು.

ಐಎಂಇಸಿ ಮಾದರಿಯಲ್ಲೇ ಹೊಸ ಸಂಪರ್ಕ ಯೋಜನೆ: ಭಾರತ-ಮಧ್ಯಪ್ರಾಚ್ಯ-ಯುರೋಪ್ ಆರ್ಥಿಕ ಕಾರಿಡಾರ್ (IMEC) ಯೋಜನೆಯಿಂದ ಪ್ರೇರಣೆ ಪಡೆದು, ಆಫ್ರಿಕಾ, ಲ್ಯಾಟಿನ್ ಅಮೆರಿಕ ಮತ್ತು ಪೆಸಿಫಿಕ್ ದ್ವೀಪ ರಾಷ್ಟ್ರಗಳೊಂದಿಗೆ ಹೊಸ ಸಂಪರ್ಕ ಯೋಜನೆಗಳನ್ನು ಕೈಗೊಳ್ಳಬಹುದು ಎಂದು ಮೋದಿ ಅಭಿಪ್ರಾಯಪಟ್ಟರು.

2023ರ ಜಿ20 ಶೃಂಗಸಭೆಯಲ್ಲಿ ಘೋಷಿಸಲಾದ IMEC ಯೋಜನೆಯು ಏಷ್ಯಾ, ಮಧ್ಯಪ್ರಾಚ್ಯ ಮತ್ತು ಯುರೋಪ್ ನಡುವೆ ವ್ಯಾಪಾರ ಹಾಗೂ ಸಂಪರ್ಕವನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯ ಉಪಕ್ರಮವಾಗಿದೆ. ಆದರೆ ಮಧ್ಯಪ್ರಾಚ್ಯದ ಬಿಕ್ಕಟ್ಟಿನ ಕಾರಣದಿಂದ ಯೋಜನೆ ಇನ್ನೂ ಪೂರ್ಣ ಪ್ರಮಾಣದಲ್ಲಿ ಆರಂಭವಾಗಿಲ್ಲ.

ಅಭಿವೃದ್ಧಿಯ ನಿಜವಾದ ಅರ್ಥವೇನು?: ಇಂದಿನ ಜಗತ್ತಿನಲ್ಲಿ ಅಭಿವೃದ್ಧಿಯನ್ನು ಕೇವಲ ಜಿಡಿಪಿ ಅಥವಾ ವ್ಯಾಪಾರದ ಅಂಕಿ-ಅಂಶಗಳಿಂದ ಅಳೆಯಲಾಗುವುದಿಲ್ಲ ಎಂದು ಹೇಳಿದರು. ಅಭಿವೃದ್ಧಿ ಯಾರಿಗಾಗಿ, ಯಾರೊಂದಿಗೆ ಮತ್ತು ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದೇ ಮುಖ್ಯ ಪ್ರಶ್ನೆ ಎಂದು ಅವರು ತಿಳಿಸಿದರು. ಭಾರತದ ಅಭಿವೃದ್ಧಿ ಕಥೆಯು ಸಮಗ್ರತೆ, ಜನಸಂಖ್ಯೆಯ ವ್ಯಾಪ್ತಿ ಮತ್ತು ಪ್ರಜಾಸತ್ತಾತ್ಮಕ ಸಬಲೀಕರಣದ ಕಥೆಯಾಗಿದೆ ಎಂದು ಹೇಳಿದ ಅವರು, ಭಾರತ ಅಭಿವೃದ್ಧಿಯಾದರೆ ಮಾನವಕುಲದ ಆರನೇ ಒಂದು ಭಾಗ ಅಭಿವೃದ್ಧಿಯಾಗುತ್ತದೆ ಎಂದರು.

ಯುವಶಕ್ತಿ ಮತ್ತು ಕೌಶಲಕ್ಕೆ ಜಾಗತಿಕ ವೇದಿಕೆ: ಅನೇಕ ದೇಶಗಳು ವೃದ್ಧಜನಸಂಖ್ಯೆಯ ಸವಾಲು ಎದುರಿಸುತ್ತಿರುವಾಗ ಭಾರತ ಹಾಗೂ ಗ್ಲೋಬಲ್ ಸೌತ್ ರಾಷ್ಟ್ರಗಳಲ್ಲಿ ಅಪಾರ ಯುವ ಪ್ರತಿಭೆ, ಉದ್ಯಮಶೀಲತೆ ಮತ್ತು ಕೌಶಲ ಸಂಪನ್ಮೂಲಗಳಿವೆ ಎಂದು ಮೋದಿ ಹೇಳಿದರು.



ಜಾಗತಿಕ ಸಮೃದ್ಧಿಗೆ ಭಾರತದ ಬದ್ಧತೆ

ಕಳೆದ ಕೆಲವು ವರ್ಷಗಳಲ್ಲಿ ಸಭೆಯಲ್ಲಿ ಭಾಗವಹಿಸಿದ್ದ ಬಹುತೇಕ ರಾಷ್ಟ್ರಗಳೊಂದಿಗೆ ಭಾರತ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿದೆ. ಭಾರತ ವಿಭಜನೆಗಿಂತ ಏಕೀಕರಣ, ಸಂರಕ್ಷಣಾತ್ಮಕ ನೀತಿಗಿಂತ ಸಹಭಾಗಿತ್ವ ಮತ್ತು ಅನಿಶ್ಚಿತತೆಯ ಬದಲು ಹಂಚಿಕೆಯ ಸಮೃದ್ಧಿಯನ್ನು ನಂಬುತ್ತದೆ ಎಂದು ಅವರು ಪ್ರತಿಪಾದಿಸಿದರು. ಮುಂದಿನ ದಿನಗಳಲ್ಲಿ ಜಾಗತಿಕ ಆರ್ಥಿಕ ಸ್ಥಿರತೆ, ವಿಶ್ವಾಸಾರ್ಹ ಪೂರೈಕೆ ಸರಪಳಿ ಮತ್ತು ಸಮೃದ್ಧ ಆರ್ಥಿಕ ವ್ಯವಸ್ಥೆ ನಿರ್ಮಾಣಕ್ಕಾಗಿ ಭಾರತ ಎಲ್ಲ ರಾಷ್ಟ್ರಗಳೊಂದಿಗೆ ಕೈಜೋಡಿಸಿ ಕಾರ್ಯನಿರ್ವಹಿಸಲಿದೆ ಎಂದು ಪ್ರಧಾನಿ ಮೋದಿ ಹೇಳಿದರು.

ಇಯು ಜತೆ ಎಫ್‌ಟಿಎ ಶೀಘ್ರ

ಎವಿಯನ್-ಲೆಸ್-ಬೈನ್ಸ್: ಭಾರತ ಮತ್ತು ಯುರೋಪಿಯನ್ ಯೂನಿಯನ್(ಇಯು) ಈ ವರ್ಷದ ಅಂತ್ಯದೊಳಗೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಲಿವೆ ಎಂದು ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಬುಧವಾರ ಪ್ರಕಟಿಸಿದ್ದಾರೆ.

ಫ್ರಾನ್ಸ್‌ನಲ್ಲಿ ನಡೆದ ಜಿ7 ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ನಡೆಸಿದ ಮಾತುಕತೆಯ ನಂತರ ಈ ಘೋಷಣೆ ಹೊರಬಿದ್ದಿದೆ. ಯುರೋಪಿಯನ್ ಕೌನ್ಸಿಲ್ ಅಧ್ಯಕ್ಷ ಆಂಟೋನಿಯೊ ಕೋಸ್ಟಾ ಅವರೂ ಈ ಸಭೆಯಲ್ಲಿ ಭಾಗವಹಿಸಿದ್ದು, ಉಭಯ ಬಣಗಳು ಭದ್ರತೆ ಮತ್ತು ರಕ್ಷಣಾ ಸಹಕಾರವನ್ನು ಹೆಚ್ಚಿಸಲು ನಿರ್ಧರಿಸಿವೆ.

ಈ ಒಪ್ಪಂದ, ಇಯುಗೆ ರಫ್ತಾಗುವ ಭಾರತದ ಶೇ.99ರಷ್ಟು ಸರಕುಗಳ ಮೇಲಿನ ಸುಂಕವನ್ನು ಕಡಿಮೆ ಮಾಡುತ್ತದೆ ಮತ್ತು ಭಾರತಕ್ಕೆ ರಫ್ತಾಗುವ ಇಯುನ ಶೇ.97ಕ್ಕೂ ಹೆಚ್ಚು ಸರಕುಗಳ ಮೇಲಿನ ಸುಂಕವನ್ನು ಕಡಿತಗೊಳಿಸಲಿದೆ. ಯುರೋಪಿಯನ್ ರಫ್ತುದಾರರಿಗೆ ವಾರ್ಷಿಕ ಸುಂಕದಲ್ಲಿ ನಾಲ್ಕು ಬಿಲಿಯನ್ ಯುರೋಗಳಷ್ಟು ಉಳಿತಾಯವಾಗಲಿದೆ ಎಂದು ಅಂದಾಜಿಸಿದೆ. 2024-25ರ ಆರ್ಥಿಕ ವರ್ಷದಲ್ಲಿ ಇಯು ಜತೆಗಿನ ಭಾರತದ ಒಟ್ಟು ಸರಕು ವ್ಯಾಪಾರ ಸುಮಾರು 136 ಬಿಲಿಯನ್ ಡಾಲರ್ ಆಗಿದ್ದು, ರಫ್ತು 76 ಬಿಲಿಯನ್ ಡಾಲರ್ ಮತ್ತು ಆಮದು 60 ಬಿಲಿಯನ್ ಡಾಲರ್ ಆಗಿತ್ತು.

ಜನವರಿ 2026ರಲ್ಲಿ ಅನುಮೋದಿಸಲಾದ ಜಂಟಿ ಭಾರತ-ಇಯು ಸಮಗ್ರ ಕಾರ್ಯತಂತ್ರದ ಕಾರ್ಯಸೂಚಿಯ ಪ್ರಗತಿಯ ಬಗ್ಗೆ ನಾಯಕರು ಚರ್ಚಿಸಿದ್ದಾರೆ ಎನ್ನಲಾಗಿದ್ದು, ಭಾರತ-ಮಧ್ಯಪ್ರಾಚ್ಯ-ಯುರೋಪ್ ಕಾರಿಡಾರ್ ಯೋಜನೆಯನ್ನು ಮುನ್ನಡೆಸಲು ಒಪ್ಪಿಗೆ ಸೂಚಿಸಿದ್ದಾರೆ.

ಮತಾಂತರ ಕಾಯ್ದೆ ಮತ್ತು ಭಿನ್ನಾಭಿಪ್ರಾಯಗಳು

ಗಮನಾರ್ಹ ಅಂಶಗಳು

- ದೇಶದಲ್ಲಿ ಯಾವುದೇ ಕೇಂದ್ರೀಯ ಫೆಡರಲ್ ಕಾಯ್ದೆ ಇಲ್ಲ
- 12 ರಾಜ್ಯಗಳಲ್ಲಿ ಪ್ರಾದೇಶಿಕ ಕಾನೂನುಗಳು ಜಾರಿಯಲ್ಲಿವೆ
- ಸಾಬೀತುಪಡಿಸುವ ಜವಾಬ್ದಾರಿ ಆರೋಪಿಯ ಮೇಲಿರುತ್ತದೆ
- ಪರಿಶಿಷ್ಟ ಜಾತಿ, ಪಂಗಡ ಮತ್ತು ಮಹಿಳೆಯರ ಮತಾಂತರಕ್ಕೆ ಕಠಿಣ ಶಿಕ್ಷೆ
- ಕೇವಲ ಮತಾಂತರಕ್ಕಾಗಿ ನಡೆಯುವ ವಿವಾಹಗಳು ಅಸಿಂಧು

ಕುತೂಹಲ ಮೂಡಿಸಿರುವ ಅರ್ಜಿ ವಿಚಾರಣೆ

ಈ ಕಾನೂನುಗಳ ತೀವ್ರ, ಕಠಿಣ ನಿಯಮಗಳು ವ್ಯಕ್ತಿಯ ಮುಕ್ತ ಬದುಕಿನ ಹಕ್ಕನ್ನು ಹರಣ ಮಾಡುತ್ತವೆ ಎಂದು ವಾದಿಸಿ, ಉತ್ತರ ಪ್ರದೇಶ, ಗುಜರಾತ್ ಮತ್ತು ಹಿಮಾಚಲ ಪ್ರದೇಶದ ಕಾಯ್ದೆಗಳ ವಿರುದ್ಧ ಸಲ್ಲಿಕೆಯಾಗಿರುವ ಹಲವು ಪ್ರಮುಖ ಸಾಂವಿಧಾನಿಕ ಸವಾಲುಗಳ ಅರ್ಜಿಗಳು ಪ್ರಸ್ತುತ ಸುಪ್ರೀಂ ಕೋರ್ಟ್‌ನ ಪರಿಶೀಲನೆಯಲ್ಲಿದ್ದು, ತೀವ್ರ ಕುತೂಹಲ ಮೂಡಿಸಿವೆ.

ನಾಗ್ಪುರದಲ್ಲಿ ವಾಯುಪಡೆ ಅಧಿಕಾರಿಯೊಬ್ಬರ ಪತ್ನಿಯ ಮೇಲೆ ನಡೆದ ಬಲವಂತದ ಮತಾಂತರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣ ದೇಶದ ವಿವಿಧ ರಾಜ್ಯಗಳಲ್ಲಿ ಜಾರಿಯಲ್ಲಿರುವ ಮತಾಂತರ ವಿರೋಧಿ ಕಾಯ್ದೆಗಳ ಕಾನೂನು ಸ್ವರೂಪದ ಕುರಿತು ರಾಷ್ಟ್ರಮಟ್ಟದಲ್ಲಿ ತೀವ್ರ ಕಾನೂನು ಚರ್ಚೆಯನ್ನು ಹುಟ್ಟುಹಾಕಿದೆ. ಈ ಗಂಭೀರ ಘಟನೆಯ ಬೆನ್ನಲ್ಲೇ, ಸದ್ಯ ಭಾರತದ ಹನ್ನೆರಡು ರಾಜ್ಯಗಳಲ್ಲಿ ಜಾರಿಯಲ್ಲಿರುವ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆಗಳು ಮತ್ತು ಅವು ನಾಗರಿಕರ ಮೂಲಭೂತ ಸಾಂವಿಧಾನಿಕ ಹಕ್ಕುಗಳೊಂದಿಗೆ ಹೊಂದಿರುವ ಸಂಘರ್ಷದ ಕುರಿತು ಕಾನೂನು ತಜ್ಞರು ಹಾಗೂ ನಾಗರಿಕ ಹಕ್ಕುಗಳ ಸಂಸ್ಥೆಗಳ ನಡುವೆ ಗಂಭೀರ ವೈಚಾರಿಕ ಸಂಘರ್ಷ ಆರಂಭವಾಗಿದ್ದು, ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.



ನಾಗ್ಪುರ ಪ್ರಕರಣವೇನು?

ನಾಗ್ಪುರದ ಸೋನೇಗಾಂವ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ಪ್ರಕಾರ, 24 ವರ್ಷದ ಮಹಿಳೆಯನ್ನು ಆಸ್ತಿ ವ್ಯವಹಾರದ ನೆಪದಲ್ಲಿ ಹೋಟೆಲ್‌ಗೆ ಕರೆದೊಯ್ದು, ಮಾದಕ ದ್ರವ್ಯ ನೀಡಿ ಪ್ರಜ್ಞೆ ತಪ್ಪಿಸಲಾಗಿತ್ತು. ಮುಖ್ಯ ಆರೋಪಿ ಅಯ್ಯಾಜ್ ತಾಜ್ ಮದಾರೆ ಎಂಬಾತ ಆಕೆಯ ಆಕ್ಷೇಪಾರ್ಹ ದೃಶ್ಯಗಳನ್ನು ಚಿತ್ರೀಕರಿಸಿ, ಜಾಲತಾಣಗಳಲ್ಲಿ ಹಂಚಿಕೊಳ್ಳುವುದಾಗಿ ಬೆದರಿಸಿ ನಿರಂತರ ಲೈಂಗಿಕ ದೌರ್ಜನ್ಯ ಎಸಗಿದ್ದಲ್ಲದೆ, ಸುಮಾರು 3 ಲಕ್ಷದಿಂದ 4 ಲಕ್ಷ ರೂ. ವರೆಗೆ ಹಣವನ್ನೂ ಸುಲಿಗೆ ಮಾಡಿದ್ದ. ಬಳಿಕ, ಮೇ 31ರಂದು ಆರೋಪಿಯು ಅಮೀನ್ ಶೇಖ್ ಎಂಬಾತನ ನೆರವಿನಿಂದ ಸಂತ್ರಸ್ತೆಯನ್ನು ಕಲ್ಮೇಶ್ವರದ ನಿರ್ದಿಷ್ಟ ಸ್ಥಳಕ್ಕೆ ಬಲವಂತವಾಗಿ ಕರೆದೊಯ್ದು, ಅಲ್ಲಿ ಮಧ್ಯಪ್ರದೇಶದ ಮೌಲ್ವಿ ಹಜರತ್ ಮೌಲಾನಾ ಎಂಬಾತ ಸಂತ್ರಸ್ತೆಯ ಇಚ್ಛೆಗೆ ವಿರುದ್ಧವಾಗಿ ಧಾರ್ಮಿಕ ವಿಧಿಗಳನ್ನು ನಡೆಸಿ, ಇಸ್ಲಾಮ್‌ಗೆ ಮತಾಂತರಗೊಳಿಸಿರುವುದಾಗಿ ಘೋಷಿಸಿದ್ದ. ಘಟನೆಯ ವೀಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ನಂತರ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದು, ತಲೆಮರೆಸಿಕೊಂಡಿರುವ ಮೌಲ್ವಿಯ ಪತ್ತೆಗಾಗಿ ವಿಶೇಷ ತಂಡವನ್ನು ರಚಿಸಿದ್ದಾರೆ.




ಕಠಿಣ ನಿಯಮಗಳು ಮತ್ತು ಕಾರ್ಯವಿಧಾನ

ಭಾರತದಲ್ಲಿ ಮತಾಂತರವನ್ನು ನಿಯಂತ್ರಿಸಲು ಯಾವುದೇ ಕೇಂದ್ರ ಕಾನೂನು ಇಲ್ಲದ ಕಾರಣ, ವಿವಿಧ ರಾಜ್ಯಗಳು ತಮ್ಮದೇ ಆದ ಸ್ವತಂತ್ರ ಕಾಯ್ದೆಗಳನ್ನು ಜಾರಿಗೆ ತಂದಿವೆ. ಇತ್ತೀಚೆಗೆ ಮಾರ್ಚ್ ತಿಂಗಳಲ್ಲಿ ಮಹಾರಾಷ್ಟ್ರ ಈ ಕಾನೂನನ್ನು ಅಂಗೀಕರಿಸಿದ್ದು, ಒಟ್ಟು 12 ರಾಜ್ಯಗಳು ಪ್ರಸ್ತುತ ಇಂತಹ ನಿಯಮಗಳನ್ನು ಹೊಂದಿವೆ. ಈ ಆಧುನಿಕ ಕಾಯ್ದೆಗಳು ಸಾಂಪ್ರದಾಯಿಕ ಕ್ರಿಮಿನಲ್ ಕಾನೂನಿನ ಸ್ವರೂಪವನ್ನೇ ಸಂಪೂರ್ಣವಾಗಿ ಬದಲಾಯಿಸಿವೆ.

ಸಾಮಾನ್ಯವಾಗಿ ಯಾವುದೇ ಅಪರಾಧದ ಸಂದರ್ಭದಲ್ಲಿ ಆರೋಪ ಹೊರಿಸಿದ ಪ್ರಾಸಿಕ್ಯೂಷನ್ ವಿಭಾಗವೇ ಆರೋಪವನ್ನು ಸಾಬೀತುಪಡಿಸಬೇಕು. ಆದರೆ ಮತಾಂತರ ವಿರೋಧಿ ಕಾಯ್ದೆಗಳಲ್ಲಿ ಸಾಬೀತುಪಡಿಸುವ ಜವಾಬ್ದಾರಿಯನ್ನು ಸಂಪೂರ್ಣವಾಗಿ ಆರೋಪಿಯ ಮೇಲೆಯೇ ಹೊರಿಸಲಾಗಿದೆ. ತಾನು ಯಾವುದೇ ಆಮಿಷ, ವಂಚನೆ ಅಥವಾ ಬಲವಂತದ ಮೂಲಕ ಮತಾಂತರ ಮಾಡಿಲ್ಲ ಎಂದು ಆರೋಪಿಯೇ ನ್ಯಾಯಾಲಯದಲ್ಲಿ ಸಾಬೀತುಪಡಿಸಬೇಕಾಗುತ್ತದೆ. ಜತೆಗೆ, ಧರ್ಮ ಬದಲಾಯಿಸಲು ಇಚ್ಛಿಸುವ ವ್ಯಕ್ತಿ ಮತ್ತು ಧಾರ್ಮಿಕ ವಿಧಿ ನಡೆಸುವ ಧರ್ಮಗುರುಗಳು ಕನಿಷ್ಠ 30ರಿಂದ 60 ದಿನಗಳ ಮುಂಚಿತವಾಗಿ ಜಿಲ್ಲಾಧಿಕಾರಿಗೆ ಮುನ್ಸೂಚನೆ ನೀಡುವುದು ಕಡ್ಡಾಯ.

ಸಾಂವಿಧಾನಿಕ ಹಕ್ಕುಗಳೊಂದಿಗೆ ಉಂಟಾಗಿರುವ ಘರ್ಷಣೆ

ಈ ಕಾಯ್ದೆಗಳ ಸಿಂಧುತ್ವ, ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ ತೀವ್ರ ಭಿನ್ನಾಭಿಪ್ರಾಯಕ್ಕೆ ದಾರಿ ಮಾಡಿಕೊಟ್ಟಿದೆ. 197 ರ ಐತಿಹಾಸಿಕ ರೆವರೆಂಡ್ ಸ್ಟೇನಿಸ್ಲಾಸ್ ಮತ್ತು ಮಧ್ಯಪ್ರದೇಶ ಸರ್ಕಾರ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಸಂವಿಧಾನದ 25ನೇ ವಿಧಿಯಲ್ಲಿರುವ ಧರ್ಮ ಪ್ರಚಾರದ ಹಕ್ಕು ಮತ್ತೊಬ್ಬರನ್ನು



ಮತಾಂತರಿಸುವ ಮೂಲಭೂತ ಹಕ್ಕನ್ನು ಒಳಗೊಂಡಿರುವುದಿಲ್ಲ, ಸಾರ್ವಜನಿಕ ಸುವ್ಯವಸ್ಥೆ ಕಾಪಾಡಲು ರಾಜ್ಯಗಳು ಇಂತಹ ನಿಯಂತ್ರಣ ಹೇರಬಹುದು ಎಂದು ನ್ಯಾಯಾಲಯ ತೀರ್ಪು ನೀಡಿತ್ತು. ಆದರೆ, ಇತ್ತೀಚಿನ ಕಠಿಣ ತಿದ್ದುಪಡಿಗಳು ಸಂವಿಧಾನದ 21ನೇ ವಿಧಿಯಲ್ಲಿ ಲಭ್ಯವಿರುವ ವ್ಯಕ್ತಿಯ ಗೌಪ್ಯತೆಯ ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯವನ್ನು ನೇರವಾಗಿ ಇಕ್ಕಟ್ಟಿಗೆ ಸಿಲುಕಿಸುತ್ತವೆ ಎಂದು ನಾಗರಿಕ ಹಕ್ಕುಗಳ ಸಂಘಟನೆಗಳು ಮತ್ತು ಅಲ್ಪಸಂಖ್ಯಾತ ಸಂಸ್ಥೆಗಳು ವಾದಿಸುತ್ತಿವೆ. ವಯಸ್ಕರು ತಮ್ಮ ಜೀವನ ಸಂಗಾತಿಯನ್ನು ಅಥವಾ ತಮ್ಮ ಇಷ್ಟದ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ ಸ್ವಾಯತ್ತತೆಗೆ ಈ ಕಾಯ್ದೆಗಳು ಕಂಟಕವಾಗಿವೆ ಎಂಬುದು ವಿಮರ್ಶಕರ ಅಭಿಪ್ರಾಯ.

ದುರ್ಬಳಕೆಯ ಆತಂಕ

ಕಾನೂನು ತಜ್ಞರ ಪ್ರಕಾರ, ಈ ಕಾಯ್ದೆಗಳ ಇತ್ತೀಚಿನ ಸ್ವರೂಪಗಳು ಸಮಾಜದಲ್ಲಿ ಹೊಸ ಕಾನೂನು ಸಂಕಷ್ಟಗಳನ್ನು ಸೃಷ್ಟಿಸುತ್ತಿವೆ. ಉತ್ತರ ಪ್ರದೇಶ, ಮಧ್ಯಪ್ರದೇಶ, ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶದಂತಹ ರಾಜ್ಯಗಳಲ್ಲಿ ಕೇವಲ ಮತಾಂತರದ ಉದ್ದೇಶಕ್ಕಾಗಿ ನಡೆದ ವಿವಾಹಗಳನ್ನು ಕಾನೂನುಬದ್ಧವಾಗಿ ರದ್ದುಗೊಳಿಸುವ ಅಧಿಕಾರ ನೀಡಲಾಗಿದೆ.

ಕಿರುಸುದ್ದಿ

ಟೆಲಿಗ್ರಾಂ ನಿರ್ಬಂಧ ತಡೆಗೆ ದಿಲ್ಲಿ ಹೈ ನಕಾರ

ಹೊಸದಿಲ್ಲಿ: ನೀಟ್ ಯುಜಿ 2026ರ ಮರುಪರೀಕ್ಷೆಗೆ ಮುಂಚಿತವಾಗಿ ಕೇಂದ್ರ ಹೇರಿದ್ದ ತಾತ್ಕಾಲಿಕ ನಿರ್ಬಂಧಕ್ಕೆ ತಡೆ ನೀಡಲು ದಿಲ್ಲಿ ಹೈಕೋರ್ಟ್ ಬುಧವಾರ ನಿರಾಕರಿಸಿದೆ. ಕೇಂದ್ರ ಸರ್ಕಾರದ ಈ ನಿರ್ಧಾರದ ವಿರುದ್ಧ ಟೆಲಿಗ್ರಾಂ ಸಂಸ್ಥೆ ಮತ್ತು ಅದರ ಸಿಇಒ ಪಾವೆಲ್ ಡುರೊವ್ ತೀವ್ರ ಆಕ್ರೋಶ ಹೊರಹಾಕಿದ್ದು, ಸರ್ಕಾರದ ಆದೇಶವನ್ನು ಪ್ರಶ್ನಿಸಿ ಬುಧವಾರ ದಿಲ್ಲಿ ಹೈಕೋರ್ಟ್‌ಗೆ ತುರ್ತು ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ನ್ಯಾಯಮೂರ್ತಿ ತೇಜಸ್ ಕಾರಿಯಾ ಅವರ ರಜಾಕಾಲದ ಪೀಠದ ಮುಂದೆ ಪ್ರಸ್ತಾಪಿಸಲಾಯಿತು. ಪೀಠವು ಈ ಪ್ರಕರಣವನ್ನು ತುರ್ತು ಆಧಾರದ ಮೇಲೆ ಆಲಿಸಲು ಒಪ್ಪಿಕೊಂಡು ವಿಚಾರಣೆ ನಡೆಸಿದೆ. ಕೇಂದ್ರವು ತನ್ನ ಉತ್ತರವನ್ನು ಸಲ್ಲಿಸಲು ಸಮಯ ಕೋರಿದೆ. ಆದ್ದರಿಂದ ವಿಚಾರಣೆಯನ್ನು ಗುರುವಾರ ಮಧ್ಯಾಹ್ನಕ್ಕೆ ಮುಂದೂಡಿದೆ.

ಆರ್‌ಜಿ ಕರ್ ಅತ್ಯಾಚಾರ: ಸ್ಮಶಾನದಲ್ಲಿ ಸಿಬಿಐ ತನಿಖೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಸ್ಮಶಾನಕ್ಕೆ ಸಿಬಿಐ ತಂಡ ಭೇಟಿ ನೀಡಿ ಅತ್ಯಾಚಾರ ಸಂತ್ರಸ್ತೆ ಮಹಿಳಾ ವೈದ್ಯೆಯ ಅಂತ್ಯಕ್ರಿಯೆ ನಡೆಸಿದ ಸ್ಥಳದಲ್ಲಿ ಪರಿಶೀಲನೆ ನಡೆಸಿದ್ದಾರೆ. ಎರಡು ವರ್ಷಗಳ ಹಿಂದೆ ಆರ್.ಜಿ. ಕರ್ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ವೈದ್ಯೆ ಮೇಲೆ ನಡೆದ ಅತ್ಯಾಚಾರ-ಕೊಲೆ ತನಿಖೆಯನ್ನು ಸಿಬಿಐ ನಡೆಸುತ್ತಿದೆ. ಸಿಬಿಐ ಅಧಿಕಾರಿಗಳು ಘಾಟ್‌ನ ಸುತ್ತಲೂ ಪರಿಶೀಲನೆ ನಡೆಸಿ, ಮೃತ ವೈದ್ಯೆ ಅಂತ್ಯಕ್ರಿಯೆ ನಡೆದ ರಾತ್ರಿ ಮಾಡಿದ ನಮೂದುಗಳ ಬಗ್ಗೆ ರಿಜಿಸ್ಟರ್ ಪುಸ್ತಕದಿಂದ ವಿವರಗಳನ್ನು ಪಡೆದಿದ್ದಾರೆ.

ಇಡಿಯಿಂದ ಪಿಣರಾಯಿ ಪುತ್ರಿ ವೀಣಾ ವಿಚಾರಣೆ

ತಿರುವನಂತಪುರಂ: ವಿವಾದಿತ ಗಣಿಗಾರಿಕೆ ಸಂಸ್ಥೆಯ ಹಗರಣದ ತನಿಖೆಯ ಭಾಗವಾಗಿ ಕೇರಳದ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಪುತ್ರಿ ವೀಣಾ.ಟಿ ಅವರನ್ನು ಬುಧವಾರ ಕೊಚ್ಚಿಯಲ್ಲಿ ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ಹಲವು ಗಂಟೆಗಳ ಕಾಲ ಪ್ರಶ್ನಿಸಿದ್ದಾರೆ. ವೀಣಾ ಅವರು ಬೆಳಗ್ಗೆ 10.30ರ ಸುಮಾರಿಗೆ ಇಡಿ ಕಚೇರಿಗೆ ಆಗಮಿಸಿದ್ದು, ತಡರಾತ್ರಿಯವರೆಗೂ ವಿಚಾರಣೆ ನಡೆದಿದೆ. ಇಡಿ ಕಳೆದ ತಿಂಗಳು ತಿರುವನಂತಪುರಂ ಮತ್ತು ಕಣ್ಣೂರಿನಲ್ಲಿರುವ ವಿಜಯನ್ ಅವರ ಮನೆಗಳ ಮೇಲೆ ದಾಳಿ ನಡೆಸಿತ್ತು. ನಂತರ ತಿರುವನಂತಪುರಂನಲ್ಲಿ ಸಿಪಿಎಂ ಕಾರ್ಯಕರ್ತರು ಅಧಿಕಾರಿಗಳ ಮೇಲೆ ದಾಳಿ ನಡೆಸಿದ್ದರು. ಬುಧವಾರ ಇಡಿ ಕಚೇರಿಯಲ್ಲಿ ಭಾರೀ ಪೊಲೀಸ್ ನಿಯೋಜನೆ ಮಾಡಲಾಗಿತ್ತು.

ರಕ್ಷಣಾ ಉತ್ಪಾದನೆ 1.78 ಲಕ್ಷ ಕೋಟಿ ರೂ.ಗೆ ಏರಿಕೆ

ಹೊಸದಿಲ್ಲಿ: ಭಾರತದ ವಾರ್ಷಿಕ ರಕ್ಷಣಾ ಉತ್ಪಾದನೆ 2025-26ರ ಆರ್ಥಿಕ ವರ್ಷದಲ್ಲಿ 1.78 ಲಕ್ಷ ಕೋಟಿ ರೂ.ಗಳ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದೆ ಎಂದು ರಕ್ಷಣಾ ಸಚಿವಾಲಯ ಬುಧವಾರ ಪ್ರಕಟಿಸಿದೆ. ಈ ಮೂಲಕ, ಹಿಂದಿನ ಆರ್ಥಿಕ ವರ್ಷದ



1.54 ಲಕ್ಷ ಕೋಟಿ ರೂ.ಗಳ ಉತ್ಪಾದನೆಗೆ ಹೋಲಿಸಿದರೆ ಶೇ.15.6ರಷ್ಟು ಪ್ರಗತಿ ಸಾಧಿಸಿ ಹೊಸ ಮೈಲಿಗಲ್ಲು ನೆಟ್ಟಂತಾಗಿದೆ. ಈ ಅಂಕಿ-ಅಂಶ, 2020-21ರಿಂದ ಶೇ.110ರಷ್ಟು ಹೆಚ್ಚಳವಾಗಿರುವುದನ್ನು ತೋರಿಸುತ್ತದೆ. 2013-14 ರಲ್ಲಿದ್ದ 43,746 ಕೋಟಿ ರೂ.ಗಳಿಂದ ಸುಮಾರು ನಾಲ್ಕು ಪಟ್ಟು ಹೆಚ್ಚಾಗಿದೆ.

ವಲಯವಾರು ಕೊಡುಗೆಗಳು: ಒಟ್ಟು ಉತ್ಪಾದನೆಯಲ್ಲಿ ರಕ್ಷಣಾ ಸಾರ್ವಜನಿಕ ವಲಯದ ಉದ್ಯಮಗಳು ಮತ್ತು ಇತರ ಪಿಎಸ್‌ಯುಗಳು ಸರಿಸುಮಾರು ಶೇ.76ರಷ್ಟು ಪಾಲನ್ನು ಹೊಂದಿವೆ. ಖಾಸಗಿ ವಲಯ, ಶೇ.24ರಷ್ಟು ಕೊಡುಗೆ ನೀಡಿದ್ದು, ಇದು 2024-25ರಲ್ಲಿದ್ದ ಶೇ.22ಕ್ಕೆ ಹೋಲಿಸಿದರೆ ಹೆಚ್ಚಳವಾಗಿದೆ. ಇದರೊಂದಿಗೆ ಖಾಸಗಿ ವಲಯ, 2025-26ರಲ್ಲಿ ಸುಮಾರು 42,000 ಕೋಟಿ ರೂ.ಗಳ ಸಾರ್ವಕಾಲಿಕ ಗರಿಷ್ಠ ಪಾಲನ್ನು ತಲುಪಿದೆ.

ದಾಖಲೆಯ ರಫ್ತು ಪ್ರಗತಿ: ಉತ್ಪಾದನೆಯ ಬೆಳವಣಿಗೆ, 2025-26ರಲ್ಲಿ 38,424 ಕೋಟಿ ರೂ.ಗಳ ದಾಖಲೆಯ ರಕ್ಷಣಾ ರಫ್ತು ಸಾಧಿಸಲು ಕಾರಣವಾಗಿದೆ. ಈ ಸಾಧನೆ, ಆತ್ಮನಿರ್ಭರ ಭಾರತ ಯೋಜನೆಯಲ್ಲಿ ಉತ್ಪಾದನೆಯಲ್ಲಿ ಸ್ವಾವಲಂಬನೆಗಾಗಿ ಸರ್ಕಾರ ನೀಡುತ್ತಿರುವ ಉತ್ತೇಜನದಿಂದ ಸಾಧ್ಯವಾಗಿದೆ, ಎಂದು ಸಚಿವಾಲಯ ತಿಳಿಸಿದೆ.

ಖರ್ಗೆ ವಿರುದ್ಧ ಹಕ್ಕುಚ್ಯುತಿ ನೋಟಿಸ್ ಸಲ್ಲಿಸಿದ ಬಿಜೆಪಿ

ಹೊಸದಿಲ್ಲಿ: ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಆರು ರಾಜ್ಯಸಭಾ ಸದಸ್ಯರು ಜಂಟಿಯಾಗಿ ಹಕ್ಕುಚ್ಯುತಿ ನೋಟಿಸ್ ಸಲ್ಲಿಸಿದ್ದಾರೆ. ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿಯವರ ವಿರುದ್ಧ ಅವಹೇಳನಕಾರಿ, ಅವಮಾನಕರ ಮತ್ತು ಅಗೌರವ ಹೇಳಿಕೆಗಳನ್ನು ನೀಡಿದ್ದಾರೆ ಮತ್ತು ಸಂಸತ್ತು ಮತ್ತು ಅದರ ಸದಸ್ಯರ ಘನತೆಯನ್ನು ಕುಗ್ಗಿಸಿದ್ದಾರೆ ಎಂದು ಸಂಸದರು ಆರೋಪಿಸಿದ್ದಾರೆ. ವಿರೋಧ ಪಕ್ಷದ ನಾಯಕ ಖರ್ಗೆ ವಿರುದ್ಧ ಬಿಜೆಪಿ ಸಂಸದರಾದ ಬ್ರಿಜ್ ಲಾಲ್, ಮಿಥಿಲೇಶ್ ಕುಮಾರ್, ಸುಮಿತ್ರ ಬಾಲ್ಮಿಕ್, ಶಿವೇಶ್ ಕುಮಾರ್, ಸಿಕಂದರ್ ಕುಮಾರ್ ಮತ್ತು ನಾಗೇಂದ್ರ ರೇ ಅವರು ಜಂಟಿಯಾಗಿ ನೋಟಿಸ್ ಸಲ್ಲಿಸಿದ್ದಾರೆ ರಾಜ್ಯಸಭೆಯ ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಅವರು ಈ ನೋಟಿಸ್ ಅನ್ನು ಪರಿಶೀಲನೆ, ತನಿಖೆ ಮತ್ತು ವರದಿಗಾಗಿ ವಿಶೇಷ ಹಕ್ಕುಗಳ ಸಮಿತಿಗೆ ಕಳುಹಿಸಿದ್ದಾರೆ. ಸಮಿತಿಯು ಈಗ ಈ ವಿಷಯವನ್ನು ತನಿಖೆ ಮಾಡಿ ತನ್ನ ವರದಿಯನ್ನು ಸಿದ್ಧಪಡಿಸುತ್ತದೆ. ವರದಿಯ ಆಧಾರದ ಮೇಲೆ ಮುಂದಿನ ಕ್ರಮವನ್ನು ನಿರ್ಧರಿಸಲಾಗುತ್ತದೆ. ಕೌನ್ಸಿಲ್ ಆಫ್ ಸ್ಟೇಟ್ಸ್‌ನಲ್ಲಿ(ರಾಜ್ಯಸಭೆ) ಕಾರ್ಯವಿಧಾನ ಮತ್ತು ವ್ಯವಹಾರದ ನಡವಳಿಕೆಯ ನಿಯಮಗಳ ನಿಯಮ 188ರ ಅನ್ವಯದಲ್ಲಿ ಈ ನೋಟಿಸ್ ನೀಡಲಾಗಿದೆ. ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಪದೇ ಪದೇ ಮತ್ತು ಉದ್ದೇಶಪೂರ್ವಕವಾಗಿ ಅತ್ಯಂತ ಅವಹೇಳನಕಾರಿ ಮತ್ತು ಅಗೌರವದ ಹೇಳಿಕೆಗಳನ್ನು ನೀಡಿದ್ದಾರೆ. ಇದರಿಂದಾಗಿ ಸಂಸತ್ತು ಮತ್ತು ಅದರ ಸದಸ್ಯರ ಘನತೆಗೆ ಧಕ್ಕೆ ಉಂಟಾಗಿದೆ ಎಂದು ನೋಟಿಸ್‌ನಲ್ಲಿ ಆರೋಪಿಸಲಾಗಿದೆ.

ಒಪ್ಪಂದಕ್ಕೆ ಸಹಿಯಾದ ಬಳಿಕ ಹಾರ್ಮುಜ್ ಪುನರಾರಂಭ

ದುಬೈ: ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ ಅಂತ್ಯಗೊಳಿಸಲು ರೂಪುಗೊಂಡಿರುವ ಮಧ್ಯಂತರ ಶಾಂತಿ ಒಪ್ಪಂದಕ್ಕೆ ಸಹಿ ಆದ ತಕ್ಷಣ ಇರಾನ್, ಹೋರ್ಮುಜ್ ಜಲಸಂಧಿಯನ್ನು ಪುನಃ ತೆರೆಯಲಿದ್ದು, ತನ್ನ ತೈಲವನ್ನು ಯಾವುದೇ ನಿರ್ಬಂಧವಿಲ್ಲದೆ ಮಾರಾಟ ಮಾಡಲು ಅವಕಾಶ ಪಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಶುಕ್ರವಾರ ಸಹಿ ಆಗುವ ನಿರೀಕ್ಷೆಯಿರುವ ಈ ಒಪ್ಪಂದದ ಪ್ರಕಾರ, ಯುದ್ಧದಿಂದ ಹಾನಿಗೊಳಗಾದ ಇರಾನ್ ಪುನರ್‌ನಿರ್ಮಾಣಕ್ಕಾಗಿ ಕನಿಷ್ಠ 300 ಬಿಲಿಯನ್ ಡಾಲರ್ ನೆರವು ಪಡೆಯಬಹುದು. ಜತೆಗೆ, ಇರಾನ್‌ನ ಅಣು ಕಾರ್ಯಕ್ರಮ ಕುರಿತು ಅಂತಿಮ ಒಪ್ಪಂದವಾದರೆ ಅಮೆರಿಕ ಮತ್ತು ವಿಶ್ವಸಂಸ್ಥೆಯ ನಿರ್ಬಂಧಗಳನ್ನು ಹಂತ ಹಂತವಾಗಿ ತೆಗೆದುಹಾಕುವ ಭರವಸೆಯೂ ಇದೆ. ಆದರೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಒಪ್ಪಂದಕ್ಕೆ ನಿಗದಿತ ವೇಳಾಪಟ್ಟಿಯಂತೆ ಸಹಿ ಆಗುವುದೇ ಎಂಬ ಬಗ್ಗೆ ಅನಿಶ್ಚಿತತೆ ವ್ಯಕ್ತಪಡಿಸಿದ್ದಾರೆ. ಈ ಒಪ್ಪಂದವು ಯುದ್ಧವನ್ನು ತಕ್ಷಣ ನಿಲ್ಲಿಸಿ, ಮುಂದಿನ 60 ದಿನಗಳ ಅಣು ಮಾತುಕತೆಗಳಿಗೆ ದಾರಿ ಮಾಡಿಕೊಡಲಿದೆ. ಜಾಗತಿಕ ತೈಲ ಮತ್ತು ಅನಿಲ ಸಾಗಣೆಗೆ ಅತ್ಯಂತ ಪ್ರಮುಖವಾದ ಹಾರ್ಮುಜ್ ಜಲಸಂಧಿ ಪುನರಾರಂಭವಾದರೆ ವಿಶ್ವ ಆರ್ಥಿಕತೆಗೆ ದೊಡ್ಡ ಪರಿಹಾರ ಸಿಗಲಿದೆ. ಇಂಧನ ದರಗಳ ಏರಿಕೆ ಮತ್ತು ಸರಬರಾಜು ವ್ಯತ್ಯಯಗಳ ಮೇಲೂ ಇದರಿಂದ ನಿಯಂತ್ರಣ ಸಾಧ್ಯವಾಗಲಿದೆ. ಆದಾಗ್ಯೂ, ಇರಾನ್‌ನ ಅಣು ಚಟುವಟಿಕೆಗಳು, ನಿರ್ಬಂಧಗಳ ಸಂಪೂರ್ಣ ತೆರವು ಹಾಗೂ ಪ್ರಾದೇಶಿಕ ಭದ್ರತೆ ಸೇರಿದಂತೆ ಹಲವು ಪ್ರಮುಖ ವಿಷಯಗಳು ಮುಂದಿನ ಮಾತುಕತೆಗಳಲ್ಲಿ ನಿರ್ಧಾರವಾಗಬೇಕಿದೆ.

ಮತಾಂತರ: 8 ಜನರ ಬಂಧನ

ಲಡಾಖ್: ಸಂಘಟಿತ ಧಾರ್ಮಿಕ ಮತಾಂತರ ಸಂಬಂಧಿತ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಶಂಕೆ ಮೇಲೆ ಎಂಟು ಮಂದಿಯನ್ನು ಬುಧವಾರ ಬಂಧಿಸಲಾಗಿದೆ. ಲಡಾಖ್‌ನ ವಿವಿಧ ಭಾಗಗಳಲ್ಲಿ ಮತಾಂತರದ ಚಟುವಟಿಕೆಗಳ ಬಗ್ಗೆ ಖಚಿತ ಮಾಹಿತಿ ಆಧಾರದ ಮೇಲೆ, ಲೇಹ್ ಪೊಲೀಸ್ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸಂಬಂಧಿತ ನಿಬಂಧನೆಗಳ ಅನ್ವಯದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆರೋಪಿಗಳು ಜನ್ಸ್ಕಾರ್, ಚಾಂಗ್ಥಾಂಗ್ ಮತ್ತು ಆರ್ಯನ್ ಕಣಿವೆಯ ಪ್ರದೇಶಗಳಲ್ಲಿ ಮತಾಂತರ ಸಂಬಂಧಿತ ಚಟುವಟಿಕೆಗಳಿಗಾಗಿ ಸ್ಥಳೀಯ ಯುವಕರನ್ನು ನೇಮಿಸಿಕೊಳ್ಳುವಲ್ಲಿ ತೊಡಗಿದ್ದಾರೆ ಎಂದು ಆರೋಪಿಸಲಾಗಿದೆ. ಈ ಗುಂಪು ಲೇಹ್‌ನ ಸ್ಕಾಂಪರಿಯಲ್ಲಿ ವಸತಿ ಆವರಣವನ್ನು ಬಾಡಿಗೆಗೆ ಪಡೆದಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಈ ಬಾಡಿಗೆ ನಿವಾಸದಲ್ಲಿ ಧಾರ್ಮಿಕ ವಸ್ತುಗಳ ಅನುವಾದ ಮತ್ತು ಪ್ರಸಾರಕ್ಕಾಗಿ ಕಚೇರಿಗಳನ್ನು ಸ್ಥಾಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಆವರಣವನ್ನು ಧಾರ್ಮಿಕ ಮತಾಂತರಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೂ ಬಳಸಲಾಗಿದೆ ಎಂದು ಶಂಕಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ವಿಕಸಿತ ಭಾರತ ರೋಜಗಾರ್ ಯೋಜನೆ ಅನುದಾನ ನಾಳೆ ಬಿಡುಗಡೆ

ಉದ್ಯೋಗ ಸೃಷ್ಟಿಗೆ ₹2,400 ಕೋಟಿ ಪ್ರೋತ್ಸಾಹಧನ

ಹೊಸದಿಲ್ಲಿ: ಉದ್ಯೋಗಸೃಷ್ಟಿ, ಔಪಚಾರಿಕ ಉದ್ಯೋಗ ವೃದ್ಧಿ ಹಾಗೂ ಸಾಮಾಜಿಕ ಭದ್ರತಾ ವ್ಯಾಪ್ತಿ ವಿಸ್ತರಣೆಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪ್ರಧಾನಮಂತ್ರಿ ವಿಕಸಿತ ಭಾರತ ರೋಜಗಾರ್ ಯೋಜನೆಯಲ್ಲಿ ಸುಮಾರು 2,400 ಕೋಟಿ ರೂ. ಪ್ರೋತ್ಸಾಹಧನವನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಬಿಡುಗಡೆ ಮಾಡಲಿದ್ದಾರೆ.

ದಿಲ್ಲಿಯಲ್ಲಿ ನಡೆಯಲಿರುವ ವಿಶೇಷ ಕಾರ್ಯಕ್ರಮದಲ್ಲಿ ಈ ಮೊತ್ತವನ್ನು ವಿತರಿಸಲಾಗುವುದು. ಉದ್ಯೋಗಾಧಾರಿತ ಪ್ರೋತ್ಸಾಹ ಯೋಜನೆಯ ಅನುಷ್ಠಾನದಲ್ಲಿ ಇದು ಮಹತ್ವದ ಮೈಲುಗಲ್ಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಈ ಯೋಜನೆಯಲ್ಲಿ ಈಗಾಗಲೇ ದೇಶಾದ್ಯಂತ 15 ಲಕ್ಷ ಉದ್ಯೋಗಾವಕಾಶಗಳ ಸೃಷ್ಟಿಗೆ ನೆರವು ದೊರೆತಿದೆ. ಹೊಸದಾಗಿ ಉದ್ಯೋಗಕ್ಕೆ ಸೇರುವ ಯುವಜನರನ್ನು ಔಪಚಾರಿಕ ಉದ್ಯೋಗ ವ್ಯವಸ್ಥೆಗೆ ಕರೆತರುವುದು ಮತ್ತು ಹೆಚ್ಚುವರಿ ಉದ್ಯೋಗ ಸೃಷ್ಟಿಸುವ ಉದ್ಯೋಗದಾತರನ್ನು ಪ್ರೋತ್ಸಾಹಿಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದೆ.

15 ಸಾವಿರ ರೂ.ವರೆಗೆ ನೆರವು: ಯೋಜನೆಯಲ್ಲಿ ಮೊದಲ ಬಾರಿಗೆ ಉದ್ಯೋಗಕ್ಕೆ ಸೇರುವ ನೌಕರರಿಗೆ 15 ಸಾವಿರ ರೂ. ವರೆಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಇದರಿಂದ ಉದ್ಯೋಗ ಜೀವನ ಆರಂಭಿಸುವ ಯುವಜನರಿಗೆ ಆರ್ಥಿಕ ಬೆಂಬಲ ಸಿಗಲಿದೆ. ಇದೇ ವೇಳೆ ಹೆಚ್ಚುವರಿ ಉದ್ಯೋಗ ಸೃಷ್ಟಿಸುವ ಉದ್ಯೋಗದಾತರಿಗೆ ಪ್ರತಿ ಹೆಚ್ಚುವರಿ ನೌಕರನಿಗೆ ತಿಂಗಳಿಗೆ 3 ಸಾವಿರ ರೂ.ವರೆಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಇದರಿಂದ ನಿರಂತರ ಉದ್ಯೋಗ ಸೃಷ್ಟಿಗೆ ಉತ್ತೇಜನ ದೊರೆಯಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಉತ್ಪಾದನಾ ವಲಯಕ್ಕೆ 4 ವರ್ಷ ಪ್ರೋತ್ಸಾಹ: ಆರ್ಥಿಕ ಬೆಳವಣಿಗೆಯಲ್ಲಿ ಉತ್ಪಾದನಾ ವಲಯದ ಮಹತ್ವವನ್ನು ಗಮನದಲ್ಲಿಟ್ಟುಕೊಂಡು, ಈ ವಲಯದ ಉದ್ಯೋಗದಾತರಿಗೆ ನಾಲ್ಕು ವರ್ಷಗಳವರೆಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಇತರ ವಲಯಗಳ ಉದ್ಯೋಗದಾತರು ಎರಡು ವರ್ಷಗಳವರೆಗೆ ಈ ಸೌಲಭ್ಯ ಪಡೆಯಬಹುದಾಗಿದೆ.

ಯೋಜನೆಯ ಮುಖ್ಯಾಂಶಗಳು



- ಒಟ್ಟು ಅನುದಾನ: 99,446 ಕೋಟಿ ರೂ.
- ಎರಡು ವರ್ಷಗಳಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗ ಸೃಷ್ಟಿ
- ಮೊದಲ ಬಾರಿಗೆ ಉದ್ಯೋಗಕ್ಕೆ ಸೇರುವವರು ಸುಮಾರು 1.92 ಕೋಟಿ
- 15 ಸಾವಿರ ರೂ.ವರೆಗೆ ಉದ್ಯೋಗಿಗಳಿಗೆ ನೆರವು
- ಉದ್ಯೋಗದಾತರಿಗೆ ಪ್ರೋತ್ಸಾಹ
- ಯೋಜನೆ ಜಾರಿಗೆ ಬಂದ ದಿನ: 2025ರ ಆಗಸ್ಟ್ 1

ನೌಕಾಪಡೆಗೆ ವಾರಾಂತ್ಯದಲ್ಲಿ ಮೂರು ಹಡಗು ಸೇರ್ಪಡೆ

ಹೊಸದಿಲ್ಲಿ: ಭಾರತೀಯ ನೌಕಾಪಡೆಯು ಈ ವಾರದ ಕೊನೆಯಲ್ಲಿ ಐಎನ್‌ಎಸ್ ದುನಾಗಿರಿ, ಐಎನ್‌ಎಸ್ ಅಗ್ರೆ ಮತ್ತು ಐಎನ್‌ಎಸ್ ಸಂಸ್ಶೋಧಕ್ ಎಂಬ ಮೂರು ಮುಂಚೂಣಿ ಹಡಗುಗಳು ಕೋಲ್ಕತ್ತಾದಲ್ಲಿ ಒಟ್ಟಿಗೆ ಕಾರ್ಯಾರಂಭಕ್ಕೆ ಚಾಲನೆ ನೀಡಲಿದೆ. ಪ್ರಧಾನಿ ಕೋಲ್ಕತ್ತಾ ಭೇಟಿ ವೇಳೆಯಲ್ಲೇ ಈ ಸಮಾರಂಭ ನಡೆಯುವ ಸಾಧ್ಯತೆಯಿದೆ.

ಐಎನ್‌ಎಸ್ ದುನಾಗಿರಿ : ಬ್ರಹ್ಮೋಸ್ ಸೂಪರ್‌ಸೋನಿಕ್ ಕ್ರೂಸ್ ಕ್ಷಿಪಣಿಗಳು,ಆಧುನಿಕ ವಾಯು-ರಕ್ಷಣಾ ವ್ಯವಸ್ಥೆಗಳು ಮತ್ತು ಜಲಾಂತರ್ಗಾಮಿ ವಿರೋಧಿ ಶಸ್ತ್ರಾಸ್ತ್ರಗಳನ್ನು ಹೊಂದಿದ ಈ ಯುದ್ಧನೌಕೆಯನ್ನು ಸಮುದ್ರದಲ್ಲಿ ವ್ಯಾಪಕ ಶ್ರೇಣಿಯ ಯುದ್ಧ ಕಾರ್ಯಾಚರಣೆಗಳನ್ನು ಕೈಗೊಳ್ಳಲು ವಿನ್ಯಾಸಗೊಳಿಸಲಾಗಿದೆ.

ಐಎನ್‌ಎಸ್ ಅಗ್ರೆ: ಐಎನ್‌ಎಸ್ ಅಗ್ರೆಯು ಜಲಾಂತರ್ಗಾಮಿ ವಿರೋಧಿ ಯುದ್ಧ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಕಡಲತೀರದ ನೀರಿನಲ್ಲಿ ಕಾರ್ಯಾಚರಣೆಗಾಗಿ ವಿನ್ಯಾಸಗೊಳಿಸಲಾದ ಈ ಹಡಗು ಹಗುರವಾದ ಟಾರ್ಪಿಡೋಗಳು, ಸ್ಥಳೀಯ ಜಲಾಂತರ್ಗಾಮಿ ವಿರೋಧಿ ರಾಕೆಟ್ ಲಾಂಚರ್‌ಗಳು ಮತ್ತು ಸುಧಾರಿತ ಸೋನಾರ್ ವ್ಯವಸ್ಥೆಗಳನ್ನು ಹೊಂದಿದೆ.

ಐಎನ್‌ಎಸ್ ಸಂಸ್ಶೋಧಕ್: ಭಾರತೀಯ ನೌಕಾಪಡೆಗೆ ಸೇರ್ಪಡೆಗೊಳ್ಳಲಿರುವ ಮೂರು ಹಡಗುಗಳನ್ನು ಪೂರ್ಣಗೊಳಿಸುವುದು ಐಎನ್‌ಎಸ್ ಸಂಸ್ಶೋಧಕ್, ಇದು ಸಮೀಕ್ಷೆ ಹಡಗು (ದೊಡ್ಡ) ಕಾರ್ಯಕ್ರಮದ ಅಂತಿಮ ಹಡಗು. ಈ ವೇದಿಕೆಯು ಸುಧಾರಿತ ಹೈಡ್ರೋಗ್ರಾಫಿಕ್ ಸಮೀಕ್ಷೆ ಉಪಕರಣಗಳು, ಸ್ವಾಯತ್ತ ನೀರೊಳಗಿನ ವಾಹನಗಳು ಮತ್ತು ಸಮುದ್ರಾಳದ ಮ್ಯಾಪಿಂಗ್, ನ್ಯಾವಿಗೇಷನಲ್ ಚಾರ್ಟಿಂಗ್ ಮತ್ತು ಸಮುದ್ರಶಾಸ್ತ್ರದ ದತ್ತಾಂಶ ಸಂಗ್ರಹಣೆಗೆ ಬಳಸುವ ರಿಮೋಟ್ ಆಪರೇಟೆಡ್ ಸಿಸ್ಟಮ್‌ಗಳನ್ನು ಹೊಂದಿದೆ.

ವಿಕಸಿತ ಭಾರತ್ ಸ್ವಾಭಿಮಾನ ಸಮಾವೇಶದಲ್ಲಿ ಸಿ.ಟಿ ರವಿ ಹೇಳಿಕೆ

ಯುಪಿಎ ಅವಧಿಯಲ್ಲಿ ಸ್ಕ್ಯಾಮ್, ಮೋದಿ ಆಡಳಿತದಲ್ಲಿ ಸ್ಕೀಮ್

ಕಲಬುರಗಿ: ಪ್ರಧಾನಿ ನರೇಂದ್ರ ಮೋದಿ ಅವರ ಅಭಿವೃದ್ಧಿ ಹಾಗೂ ವಿಕಸಿತ ಭಾರತದ ಆಡಳಿತಕ್ಕೆ ದೇಶದ ಜನರೆಲ್ಲರೂ ರಕ್ಷಾಕವಚವಾಗಿ ನಿಲ್ಲಬೇಕಿದೆ. ನಾವು ಮೋದಿಯವರಿಗೆ ರಕ್ಷಣೆಯಾದರೆ, ಅವರು ಇಡೀ ದೇಶಕ್ಕೆ ರಕ್ಷಾಕವಚವಾಗಲಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ತಿಳಿಸಿದರು.

ನಗರದ ಕೆಕೆಸಿಸಿಐ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಮೋದಿ ಸರ್ಕಾರದ 12 ವರ್ಷ ವಿಕಸಿತ ಭಾರತ ಸಂಕಲ್ಪ ಸಮಾವೇಶ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೋದಿ ಸರ್ಕಾರದ ಸಾಧನೆ ಅರ್ಥವಾಗಬೇಕಾದರೆ ಹಿಂದಿನ ಯುಪಿಎ ಆಡಳಿತವನ್ನು ಅವಲೋಕಿಸಬೇಕು. ಅಂದು 2ಜಿ, ಕೋಲ್‌ಜಿ ಹಾಗೂ ಕಾಮನ್‌ವೆಲ್ತ್‌ನಂತಹ ಬೃಹತ್ ಹಗರಣಗಳೇ ನೆನಪಾಗುತ್ತಿದ್ದವು. ಆದರೆ, ಕಳೆದ 12 ವರ್ಷಗಳಲ್ಲಿ ಮೋದಿ ನೇತೃತ್ವದ ಸರ್ಕಾರದ ಮೇಲೆ ಒಂದೇ ಒಂದು ಹಗರಣದ ಕಲೆಯೂ ಇಲ್ಲ. ಅಂದು ಕೇವಲ ಸ್ಕ್ಯಾಮ್ (ಹಗರಣ) ಗಳಿದ್ದರೆ, ಇಂದು ಬಡವರಿಗಾಗಿ ಸ್ಕೀಮ್ (ಯೋಜನೆ) ಗಳ ಸರ್ಕಾರ ನಡೆಯುತ್ತಿದೆ ಎಂದು ಹೇಳಿದರು.

ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಮಾತೆತ್ತಿದರೆ ಅದಾನಿ, ಅಂಬಾನಿ ಎಂದು ಟೀಕಿಸುವ ಕಾಂಗ್ರೆಸ್ಸಿಗರು, ಬೆಂಗಳೂರಿನ ಟನಲ್ ರೋಡ್ ಕಾಮಗಾರಿಗಾಗಿ ಮತ್ತೆ ಅದೇ ಅದಾನಿ ಸಮೂಹದ ಜತೆ ಒಪ್ಪಂದ ಮಾಡಿಕೊಳ್ಳುತ್ತಾರೆ. ಇದು ಕಾಂಗ್ರೆಸ್ ಪಕ್ಷದ ದ್ವಿಮುಖ ನೀತಿಯನ್ನು ಬಿಚ್ಚಿಡುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೇಶದಲ್ಲಿದ್ದ 91 ಸಾವಿರ ಕಿ.ಮೀ ರಾಷ್ಟ್ರೀಯ ಹೆದ್ದಾರಿ ಇಂದು 1.61 ಲಕ್ಷ ಕಿ.ಮೀ ತಲುಪಿದೆ. ಶೇ. 99ರಷ್ಟು ರೈಲ್ವೆ ವಿದ್ಯುತೀಕರಣ ಪೂರ್ಣಗೊಂಡಿದ್ದು, ದೇಶದ 25 ಕೋಟಿ ಜನರು ಬಡತನದಿಂದ ಮುಕ್ತರಾಗಿದ್ದಾರೆ. ಭಾರತ ಇಂದು ವಿಶ್ವದ 4ನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ ಎಂದರು.

ಮುಖಂಡ ಅವ್ವಣ್ಣ ಮ್ಯಾಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಜಿಲ್ಲಾಧ್ಯಕ್ಷರಾದ ಚಂದು ಪಾಟೀಲ್, ಅಶೋಕ್ ಬಗಲಿ, ಮಾಜಿ ಸಚಿವ ಬಾಬುರಾವ ಚವ್ಹಾಣ, ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ್, ಮಾಜಿ ವಿಧಾನ ಪರಿಷತ್ ಸದಸ್ಯ ಅಮರನಾಥ್ ಪಾಟೀಲ್, ಮುಖಂಡರಾದ ಅವ್ವಣ್ಣ ಮ್ಯಾಕೇರಿ, ಶರಣಪ್ಪ ತಳವಾರ್, ನಿತೀನ್ ಗುತ್ತೇದಾರ, ಸಿದ್ದಾಜೀ ಪಾಟೀಲ್, ಚನ್ನಮ್ಮ ಪಾಟೀಲ್, ಶೋಭಾ ಬಾಣಿ, ಸುಧಾ ಹಾಲಕಾಯಿ, ಲಿಂಗರಾಜ್ ಬಿರಾದಾರ್, ಹರ್ಷಾನಂದ ಗುತ್ತೇದಾರ, ಗಿರಿರಾಜ್ ಯಳಮೇಲಿ ಸೇರಿ ಅನೇಕರು ಇದ್ದರು. ರೇವಣಸಿದ್ದಪ್ಪ ಸಂಕಾಲಿ ಸ್ವಾಗತಿಸಿದರು. ಶಿವಯೋಗಿ ನಾಗನಹಳ್ಳಿ ವಂದಿಸಿದರು. ಮಹದೇವ್ ಬೆಳಮಗಿ ನಿರೂಪಿಸಿದರು.



ಹಿಂದಿನ ಯುಪಿಎ ಸರ್ಕಾರದ ಅವಧಿಯಲ್ಲಿ ಕೇವಲ ಹಗರಣಗಳ ಸರಣಿಯೇ ಇರುತ್ತಿತ್ತು. ಆದರೆ ಪ್ರಧಾನಿ ನರೇಂದ್ರ ಮೋದಿ ಅವರ 12 ವರ್ಷಗಳ ಆಡಳಿತದಲ್ಲಿ ಹಗರಣಗಳ ಮುಕ್ತವಾಗಿ ಬಡ ಜನರಿಗಾಗಿ ಕೇವಲ ಯೋಜನೆಗಳು ಜಾರಿಯಾಗುತ್ತಿವೆ. ಈ ಅಭಿವೃದ್ಧಿಯ ಆಡಳಿತಕ್ಕೆ ನಾವೆಲ್ಲರೂ ರಕ್ಷಾಕವಚವಾಗಬೇಕಿದೆ.
■ **ಸಿ.ಟಿ.ರವಿ, ಬಿಜೆಪಿ ಎಂಎಲ್‌ಸಿ**

ಪ್ರಧಾನಿ ಮೋದಿಯವರ ಕನಸಿನ ಮೆಗಾ ಟೆಕ್ಸ್‌ಟೈಲ್ ಪಾರ್ಕ್, 1021 ಕೋಟಿ ರೂಪಾಯಿ ವೆಚ್ಚದ ಭಾರತಮಾಲಾ ರಸ್ತೆ ಹಾಗೂ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನ ಸೌಲಭ್ಯಗಳು ಕಲಬುರಗಿ ಜಿಲ್ಲೆಯ ಮುಖಪುಟವನ್ನೇ ಬದಲಾಯಿಸುತ್ತಿವೆ. ಈ ಐತಿಹಾಸಿಕ ಸಾಧನೆಗಳನ್ನು ಕಾರ್ಯಕರ್ತರು ಜನಸಾಮಾನ್ಯರಿಗೆ ತಲುಪಿಸಬೇಕು.
■ **ಡಾ.ಉಮೇಶ್ ಜಾಧವ್, ಮಾಜಿ ಸಂಸದ**

ಸಮ್ಮೇಳನ ಪ್ರಕರಣ ಸುಖಾಂತ್ಯ

ಹಾವೇರಿ ವಿವಿ ಉಪಕುಲಪತಿ–ಎಸ್‌ಎಫ್‌ಐ ಒಕ್ಕೂಟದ ಮಧ್ಯೆ ವಾದ, ವಿವಾದ

ಹಾವೇರಿ: ಹಾವೇರಿ ವಿಶ್ವ ವಿದ್ಯಾಲಯದಲ್ಲಿ ಎಸ್‌ಎಫ್‌ಐ ಪ್ರಥಮ ಸಮ್ಮೇಳನ ನಡೆಸುವ ವಿಷಯವಾಗಿ ಎಸ್‌ಎಫ್‌ಐ ಹಾವೇರಿ ವಿವಿ ವಿದ್ಯಾರ್ಥಿ ಒಕ್ಕೂಟ ಮತ್ತು ಯೂನಿವರ್ಸಿಟಿಯ ಉಪ ಕುಲಪತಿಗಳ ನಡುವೆ ಉಂಟಾದ ಗೊಂದಲ ತಾರಕಕ್ಕೇರಿದ್ದು, ಪೊಲೀಸರು ಮಧ್ಯ ಪ್ರವೇಶಿಸುವ ಮೂಲಕ ವಾತಾವರಣ ತಿಳಿಗೊಳಿಸಿದರು.

ಹಾವೇರಿ ವಿವಿಯ ಉಪ ಕುಲಪತಿ ಸುರೇಶ ಜಂಗಮಶೆಟ್ಟಿ ಅನುಮತಿ ನಿರಾಕರಣೆಯ ಮಧ್ಯೆಯೇ ಎಸ್‌ಎಫ್‌ಐ ಹಾವೇರಿ ವಿವಿ ವಿದ್ಯಾರ್ಥಿ ಒಕ್ಕೂಟವು ಬುಧವಾರ ಕೆರಿಮತ್ತಿಹಳ್ಳಿಯಲ್ಲಿರುವ ಹಾವೇರಿ ವಿಶ್ವ ವಿದ್ಯಾಲಯದ ಕ್ಯಾಂಪಸ್‌ನಲ್ಲಿ ಹಾವೇರಿ ವಿಶ್ವ ವಿದ್ಯಾಲಯದ ಸರ್ವಾಂಗೀಣ ಅಭಿವೃದ್ಧಿಗಾಗಿ, ವಿಶ್ವ ವಿದ್ಯಾಲಯದ ಮೂಲಭೂತ ಸೌಕರ್ಯಗಳ ಪರಿಹಾರಕ್ಕಾಗಿ ಪ್ರಥಮ ಸಮ್ಮೇಳನವನ್ನು ನಡೆಸಲು ಮುಂದಾಗಿತ್ತು. ಆಗ ಉಪ ಕುಲಪತಿಗಳು ಹಾಗೂ ಸಮ್ಮೇಳನ ಆಯೋಜಕರ ಮಧ್ಯೆ ವಾಗ್ವಾದ ನಡೆದಿತ್ತು. ಬಳಿಕ ಸ್ಥಳಕ್ಕಾಗಮಿಸಿದ ಹಾವೇರಿ ಗ್ರಾಮೀಣ ಠಾಣೆಯ ಪೊಲೀಸರು ವಿವಿಯ ನಿಯಮ ಉಲ್ಲಂಘಿಸಿದ್ದ ಎಸ್‌ಎಫ್‌ಐ ಕಾರ್ಯಕರ್ತರನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದಿದ್ದರು. ಬಳಿಕ ಎಸ್‌ಎಫ್‌ಐ ಕಾರ್ಯಕರ್ತರಿಗೆ ಎಚ್ಚರಿಕೆ ನೀಡಿ ವಾಪಾಸ್ ವಿವಿ ಕ್ಯಾಂಪಸ್‌ಗೆ ಕರೆದುಕೊಂಡು ಬಂದು ಸಭೆ ನಡೆಸಿದರು.



ವಿವಿಯ ಯಾವುದಾದರೂ ಒಂದು ವಿಭಾಗದಿಂದ ಕಾರ್ಯಾಗಾರದ ಮಾದರಿಯಲ್ಲಿ ಸಮ್ಮೇಳನ ನಡೆಸುವಂತೆ ಉಪಕುಲಪತಿಗಳು ಸೂಚಿಸಿದರು. ಇದಕ್ಕೆ ಎಸ್‌ಎಫ್‌ಐ ಮುಖಂಡರು ಒಪ್ಪಿಗೆ ನೀಡಿದರು.

ಸಭೆಯಲ್ಲಿ ಅಲ್ಪಸಂಖ್ಯಾತರ ಆಯೋಗದ ಸದಸ್ಯೆ ಪರಿಮಳ ಜೈನ್, ವಿವಿ ಉಪ ಕುಲಪತಿ ಪ್ರೊ.ಸುರೇಶ ಜಂಗಮಶೆಟ್ಟಿ, ಶಹರ ಪೊಲೀಸ್ ಠಾಣೆ ಸಿಪಿಐ ಮೋತಿಲಾಲ್ ಪವಾರ, ಗ್ರಾಮೀಣ ಠಾಣೆ ಪಿಎಸ್‌ಐ ರವಿಕುಮಾರ ಡಿ., ಸಂಘಟನೆಯ ವಿದ್ಯಾರ್ಥಿ ಮುಖಂಡರು ಸೇರಿದಂತೆ ಹಲವರು ಇದ್ದರು.

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	2411	5849
ಉದ್ದಿನಕಾಳು	1816	7229
ಒಣ ಮೆಣಸಿನಕಾಯಿ	4601	37699
ಹೆಸರುಕಾಳು	1610	5010
ಜೋಳ	2226	3626
ಮೆಕ್ಕೆಜೋಳ	1612	2069
ಸಾಸಿವೆ	5329	5329
ಈರುಳ್ಳಿ	500	2200
ಆಲೂಗಡ್ಡೆ	1200	1800
ಕುಸುಬೆ	5226	5226
ಸೋಯಾಬಿನ್	6629	6629
ಗೋಧಿ	2129	2266

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.
ಜಾಹೀರಾತು ವ್ಯವಸ್ಥಾಪಕರು

IN THE COURT OF CIVIL JUDGE & JMFC AT SIRUGUPPA
Criminal. Misc. Case No: 498/2026
Between: Sri. K.Revanna ... Petitioner.
And
To,
The Tahasildar -Cum- Birth and Deaths Registrar Taluk Office siruguppa.& Others .... Respondents.
TO WHOM SO EVER IT MAY CONCERN NOTICE
Whereas above named petitioner here in have instituted above petition under section 13(3)of birth and death Acts 1964 against the respondents for purpose of seeking death certificate of petitioners Father by name Kali Naganathappa S/O Bharmappa,Who was expired on 23-02-2015 at the residence of the Petitioner.
Any person interested are here by summoned to appear before this court in person or by pleader duly instructed and able to answer all material questions relating to the petition on 27-07-2026 at 11.00 am before this court.
In default of your appearance on the date/ day of above petition will be heard and determined as "Ex-parte"
Given under my hand &seal of the court this 17th day of June - 2026
By Order of the court,
Sd/- Chief ministrial officer,
Civil judge & JMFC Court Siruguppa.
Sd/- Shekappa. T
Advocates Siruguppa,

IN THE COURT OF CIVIL JUDGE & JMFC AT SIRUGUPPA
Criminal. Misc. Case No: 493/2026
Between: Sri. Mudukanna ... Petitioner.
And
To,
The Tahasildar - Cum- Birth and Deaths Registrar Taluk Office siruguppa & Others ..... Respondents.
TO WHOM SO EVER IT MAY CONCERN NOTICE
Whereas above named petitioner here in have instituted above petition under section 13(3) of birth and death Acts 1964 against the respondents for purpose of seeking death certificate of petitioners GrandFather by name MAREPPA S/O NADUVE MALLAPPA, Who was expired on 09-02-1972 at the residence of the Petitioner.
Any person interested are here by summoned to appear before this court in person or by pleader duly instructed and able toanswer all material questions relating to the petition on 28-07-2026 at11.00 am before this court.
In default of your appearance on the date/ day of above petition will be heard and determined as "Ex-parte"
Given under my hand &seal of the court this 17th day of June - 2026
By Order of the court,
Sd/- Chief ministrial officer,
Civil judge & JMFC Court Siruguppa.
Sd/- Shekappa. T
Advocates Siruguppa,

ಕರ್ನಾಟಕ ಸರ್ಕಾರ
ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ,
ಜಿ.ಜಿ.ಮಾಗಾವಿ ಛೇಂಬರ್ಸ್, 2ನೇ ಮಹಡಿ, ಪಿ.ಬಿ.ರೋಡ, ಹಾವೇರಿ–581110
ಸಂ:ಗಭೂಇ/ಹಿಭೂಹಾ/ಮರಳು/2026–27 ದಿನಾಂಕ:17–06–2026
ಇ–ಹರಾಜು ಪ್ರಕಟಣೆ
ಹಾವೇರಿ ಜಿಲ್ಲೆ, ಹಾವೇರಿ ತಾಲ್ಲೂಕಿನ, ಹಾವನೂರು ಗ್ರಾಮದ ಸರ್ವೆ ನಂ:264, 271, 272 & 273ಕ್ಕೆ ಹೊಂದಿಕೊಂಡ ತುಂಗಭದ್ರಾ ನದಿ ಪಾತ್ರದಲ್ಲಿ ಗುರುತಿಸಿರುವ ಹಾವನೂರು ಬಾಕ್ ನಂ:01, 12–20 ಎಕರೆ/ ಗುಂಟೆ, ಇತರ ವರ್ಗಕ್ಕೆ ಮೀಸಲಾತಿ ಕಲ್ಪಿಸಿರುವ ಮರಳು ಬ್ಲಾಕ್‌ನ್ನು ಮರು ಟೆಂಡರ್ ಪ್ರಕ್ರಿಯೆ ನಡೆಸಲು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಕ್ನಿಕಲ್ & ಫೈನಾನ್ಸಿಯಲ್ ಇ–ಟೆಂಡರ್‌ಗೆ ಒಳಪಡಿಸಿ ಎಲ್ಲಾ ಕಾರ್ಯವಿಧಾನಗಳು ಪೂರೈಸಿದ ನಂತರ, ಗುತ್ತಿಗೆ ಕಾರ್ಯಾದೇಶ ನೀಡಿದ ದಿನಾಂಕದಿಂದ 05(ಐದು)ವರ್ಷಗಳ ಅವಧಿಯವರೆಗೆ (ಮಳೆಗಾಲ ಮತ್ತು ಇನ್ನಿತರೆ ಪ್ರಾಕೃತಿಕ ವಿಕೋಪಗಳನ್ನೊಳಗೊಂಡ ಅವಧಿಸಹಿತ) ಗುತ್ತಿಗೆ ನೀಡಬೇಕಾಗಿದ್ದು,ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿತ ವ್ಯಕ್ತಿಗಳು/ಕಂಪನಿ/ಫರ್ಮ್ ಇವರುಗಳು ಮರಳಿನ ಬ್ಲಾಕ್‌ನಲ್ಲಿ ಲಭ್ಯವಿರುವ ಮರಳಿನ ಪ್ರಮಾಣ, ರಸ್ತೆ ವ್ಯವಸ್ಥೆ, ಸ್ಥಳೀಯ ಸಮಸ್ಯೆಗಳನ್ನು ಪರಿಶೀಲಿಸಿಕೊಂಡು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಕ್ನಿಕಲ್ & ಫೈನಾನ್ಸಿಯಲ್ ಇ–ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ.
ಈ ಮರು ಟೆಂಡರ್ ಪ್ರಕ್ರಿಯೆಯಲ್ಲಿ ಮರಳು ಗುತ್ತಿಗೆ ಪಡೆಯಲು ಟೆಕ್ನಿಕಲ್ ಆಂಡ್ ಫೈನಾನ್ಸಿಯಲ್ ಇ–ಟೆಂಡರ್ ಮಾಡಲು ಅರ್ಹ ಅರ್ಜಿದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಈ ಪ್ರಕಟಣೆಯನ್ನು ಕೆಳಗೆ ಸಹಿಮಾಡಿದ ಅಧಿಕಾರಿಯವರಿಂದ ಹೊರಡಿಸಲಾಗಿದೆ. ಆಸಕ್ತ ಇ–ಪ್ರೋಕ್ಯೂರ್‌ಮೆಂಟ್‌ನ ನೊಂದಾಯಿತ ಅರ್ಜಿದಾರರು ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ http://kppp.karnataka.gov.in ಮೂಲಕ ದಿನಾಂಕ:19–06–2026 ರಿಂದ :20–07–2026 ರವರೆಗೆ ಅರ್ಜಿಸಲ್ಲಿಸ ಬೇಕಿರುತ್ತದೆ. ಅರ್ಜಿ ಸಲ್ಲಿಸಲು ದಿನಾಂಕ: 20–07–2026 ಕೊನೆಯ ದಿನವಾಗಿದ್ದು, ಸಂಜೆ 5.30 ರವರೆಗೆ ನಿಗದಿ ಪಡಿಸಲಾಗಿರುತ್ತದೆ. ಉದ್ದೇಶಿತ ಗುತ್ತಿಗೆ ಪಡೆಯಲು ಇಚ್ಛಿಸುವ ಮರಳಿನ ಬ್ಲಾಕ್‌ಗೆ ಟೆಕ್ನಿಕಲ್ & ಫೈನಾನ್ಸಿಯಲ್ ಇ–ಟೆಂಡರ್‌ಗೆ ಅರ್ಜಿಸಲ್ಲಿಸುವ ಮುನ್ನ ಸದರಿ ಮರಳು ಬ್ಲಾಕ್‌ಗೆ ಅರ್ಹರಾಗಲು ವಿಧಿಸಲಾದ ಪೂರ್ವಾರ್ಹತ ಷರತ್ತು/ನಿಬಂಧನೆಗಳ/ಅಂಶಗಳ ಬಗ್ಗೆ ಖಾತರಿ ಪಡಿಸಿಕೊಳ್ಳತಕ್ಕದ್ದು.
ಸಹಿ/–ಹಿರಿಯ ಭೂವಿಜ್ಞಾನಿಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾವೇರಿ

O. S. No. 80/2025
ಮೆ॥ ಪ್ರಧಾನ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಬಾಗಲಕೋಟ ಇವರ ನ್ಯಾಯಾಲಯದಲ್ಲಿ
1) ಶ್ರೀಮತಿ: ದ್ಯಾಮವ್ವ ತಂ: ಹನಮಂತಗೌಡ ಗೌಡರ .....ವಾದಿ
ವಿರುದ್ಧ
1) ಶ್ರೀಮತಿ: ಶಾಂತವ್ವ ತಂ: ಹನಮಂತಗೌಡ ಗೌಡರ ಹಾಗೂ ಇತರರು .....ಪ್ರತಿವಾದಿಯರುಗೆ,
9B) ಶ್ರೀ ಸಿದ್ದನಗೌಡ ತಂ. ಮುತ್ತನಗೌಡ ಗೌಡರ ವಯಾ? 47, ಉ: ಕೃಷಿ
10A) ಶ್ರೀಮತಿ ದೊಡ್ಡಭೀಮವ್ವ ಗಂ. ವೆಂಕನಗೌಡ ಗೌಡರ ವಯಾ॥ 58 ಉ: ಮನೆಕೆಲಸ ಎಲ್ಲರು ಸಾ॥ ಕಡ್ಲಿಮಟ್ಟಿ, ತಾ॥ ಜಿ॥ ಬಾಗಲಕೋಟೆ .....ಎದುರುದಾರರು
ಸಾರ್ವಜನಿಕ ಪ್ರಕಟಣೆ
(ಅರ್ಜಿ ಕ್ರಮಾಧೇಶ 5 ನಿಯಮ 20 ಎ ದಿವಾಣಿ ಪ್ರಕ್ರಿಯ ಸಂಹಿತೆ ಅಡಿಯಲ್ಲಿ ಕೋರ್ಟ ನೋಟಿಸು/ಸಮನ್ಸ)
ಸದರಿ ಮೇಲ್ಕಾಣಿಸಿದ ಪ್ರಕರಣ ವಾದಿಯು ಪ್ರತಿವಾದಿಯರ ವಿರುದ್ಧ ಅಸಲು ದಾವಾ ನಂ. 80/2025 ಮೆ॥ ಪ್ರಧಾನ ದಿವಾಣಿ ನ್ಯಾಯಾಧೀಶರು ಬಾಗಲಕೋಟ ಪ್ರಕರಣ ದಾಖಲಿಸಿ, ಇವರ ಮಧ್ಯಂತರ ಅರ್ಜಿಗೆ ಸಂಬಂದಿಸಿದಂತೆ ಮೇಲಿನ ಪ್ರತಿವಾದಿಯರಿಗೆ ಮೆ॥ ನ್ಯಾಯಾಲಯದಿಂದ ನೋಟಿಸು/ಸಮನ್ಸು ಹೊರಡಿಸಿದ್ದು, ಆದರೆ ತಾವು ಉದ್ದೇಶಪೂರ್ವಕವಾಗಿ ಕೋರ್ಟ ಸಮನ್ಸ ತೆಗೆದುಕೊಳ್ಳದೇ ತಪ್ಪಿಸಿಕೊಳ್ಳುತ್ತಿದ್ದೀರಿ. ಆ ನಂತರ ಮೆ॥ ನ್ಯಾಯಾಲಯದ ಆದೇಶ ಪ್ರಕಾರ ಡಿಸೆಂಬರನಲ್ಲಿ ದಿನಪತ್ರಿಕೆ ಮೂಲಕ ಕೋರ್ಟ ಸಮನ್ಸ ಕಳುಹಿಸಿದ್ದು, ಆದರೆ ಪ್ರತಿವಾದಿಯರು ಸದರಿಯವರ ನೋಟಿಸನ್ನು ತೆಗೆದುಕೊಳ್ಳದೇ ಗೈರಹಾಜರ ಇರುತ್ತಿರಿ. ಈಗ ವಾದ ಪತ್ರ ತಿದ್ದುಪಡೆ ಆಗಿದ್ದು ಇರುತ್ತದೆ. ಆದ್ದರಿಂದ ಈ ಪ್ರಕಟಣೆಯ ಮೂಲಕ ನಿಮಗೆ ತಿಳಿಸುವುದೇನೆಂದರೆ, ಸದರಿ ಪ್ರಕರಣದಲ್ಲಿ ನೀವು ಖುದ್ದಾಗಿ ಅಥವಾ ನಿಮ್ಮ ವಕೀಲರ ಮುಖಾಂತರ ದಿ: 02/07/2026 ರಂದು ಮುಂಜಾನೆ 10:30 ಗಂಟೆಗೆ ಮೆ॥ ನ್ಯಾಯಾಲಯಕ್ಕೆ ಸದರಿ ಪ್ರಕರಣದಲ್ಲಿ ಹಾಜರಾಗಿ ತಕರಾರು ಸಲ್ಲಿಸಬೇಕು, ಒಂದು ವೇಳೆ ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕತರ್ಫೆ ಆದೇಶವನ್ನು ಮಾಡಿ, ಸದರಿ ಪ್ರಕರಣವನ್ನು ವಿಚಾರಣೆ ಮಾಡಲಾಗುವುದು ಅಂತಾ ಕೋರ್ಟ ಸಮನ್ಸ.
ಈ ಸಮನ್ಸು ಇವತ್ತಿನ ದಿವಸ ದಿನಾಂಕ 16/06/2026 ರಂದು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಹಾಗೂ ಮುದ್ರೆಯೊಂದಿಗೆ ಕೊಡಲ್ಪಟ್ಟಿರುತ್ತದೆ.
ಸ್ಥಳ: ಬಾಗಲಕೋಟೆ
ದಿನಾಂಕ: 16/06/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೆದಾರರು,
ಮೆ॥ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು, ಬಾಗಲಕೋಟೆ.
ಸಹಿ/– ಪಿ.ಎಸ್. ಮಗಜಿ ವಾದಿ ಪರ ವಕೀಲರು



ಮಾನ್ಯ ಹಿರಿಯ ಪ್ರಧಾನ ದಿವಾಣಿ ನ್ಯಾಯಾಧೀಶರು, ಮುಧೋಳ ಇವರ ನ್ಯಾಯಾಲಯದಲ್ಲಿ..
ಅಸಲ ದಾವಾ ನಂ.267/2025
1. ಹಣಮಂತ ತಂದೆ. ಈರಪ್ಪ ಅವರಾದಿ ....ವಾದಿ
ವಿರುದ್ಧ
1. ಚೇತನ ತಂದೆ. ಬಸವರಾಜ ಸಿರಸಂಗಿ, ಹಾಗೂಇನ್ನೂಬ್ಬರು ......ಪ್ರತಿವಾದಿಯರು
ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ ೫ ನಿಯಮ 20–A ಅಡಿಯಲ್ಲಿ ನೋಟಿಸು
1)ಚೇತನ ತಂದೆ. ಬಸವರಾಜ ಸಿರಸಂಗಿ ವಯಾ: 37ವರ್ಷ, ಉದ್ಯೋಗ: ವ್ಯಾಪಾರ, ಗೋವಿಂದಪೂರ ಗಲ್ಲಿ, ತಾ॥ಮುಧೋಳ. ....ಪ್ರತಿವಾದಿ ನಂ.1
ಮೇಲ್ಕಾಣಿಸಿದ ವಾದಿಯು ನಿಮ್ಮ ಹಾಗು ಇನ್ನೂಬ್ಬರ ವಿರುದ್ಧ ನಿರ್ದಿಷ್ಟ ಕರಾರು ಕಾರ್ಯ ನಿರ್ವಹಣೆ ಕುರಿತು ಈ ಮಾನ್ಯ ನ್ಯಾಯಾಲಯದಲ್ಲಿ ಮೇಲ್ಕಾಣಿಸಿದ ದಾವಾ ದಾವಿಲ ಮಾಡಿದ್ದು, ನೀವು ಅದರಲ್ಲಿ ಪ್ರತಿವಾದಿ ನಂ.1 ಇರುತ್ತೀರಿ. ಸದರ ದಾವೆಯು ಮುಂದಿನ ಮುದ್ದತ್ತು ದಿನಾಂಕ 10/7/2026 ಇರುತ್ತದೆ. ನಿಮಗೆ ಅನೇಕ ಸಾರೆ ನ್ಯಾಯಾಲಯದ ಮುಖಾಂತರ ಹಾಗು,ರಜಿಸ್ಟರ್ಡ ಸ್ಪೀಡ್ ಪೋಸ್ಟ ಮುಖಾಂತರ ಸಮನ್ಸ /ನೋಟಿಸ ಜಾರಿ ಮಾಡಲು ಪ್ರಯತ್ನಿಸಿದ್ದು, ಆದರೆ ನಿಮ್ಮ ಮೇಲೆ ಸಮನ್ಸ್ ಜಾರಿ ಆಗಿರುವದಿಲ್ಲ. ಕಾರಣ ಮೇಲೆ ಹೇಳಿದ ದಿನಾಂಕದಂದು ನೀವು ಸ್ವತ: ಅಥವಾ ನ್ಯಾಯವಾದಿಗಳ ಮುಖಾಂತರವಾಗಲಿ ಹಾಜರಾಗಿ, ನಿಮ್ಮದೇನಾದರೂ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮೇಲೆ ನಮೂದಿಸಿದ ಮೇಲ್ಮನವಿಯಲ್ಲಿ ಮಾನ್ಯ ನ್ಯಾಯಾಲಯವು ನಿಮ್ಮ ಗೈರ ಹಾಜರಾತಿಯಲ್ಲಿ ಮುಂದಿನ ಕ್ರಮ ಜರುಗಿಸುವದು ಅಂತಾ ಕೊಟ್ಟ ನೋಟೀಸು.
ಇವತ್ತು ದಿನಾಂಕ: 08/06/2026 ರಂದು ನ್ಯಾಯಾಲ ಯದ ಮೊಹರು ಹಾಕಿ ಸಹಿಯೊಂದಿಗೆ ಕೊಡಲ್ಪಟ್ಟಿದೆ.
ನ್ಯಾಯಾಲಯದ ಆದೇಶದ ಮೇರೆಗೆ
ಮುಧೋಳ
ದಿನಾಂಕ:08/06/2026
ಸಹಿ/–ಶಿರಸ್ತೆದಾರರು
ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ
ಸಹಿ/–(ಎಲ್.ಎಸ್.ಅವರಾದಿ)
ವಾದಿ ಪರ ವಕೀಲರು.

ಮಾನ್ಯ ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಮುಧೋಳ ಅವರ ನ್ಯಾಯಾಲಯದಲ್ಲಿ..
ಅಪರಾಧಿಕ ಸಂಕೀರ್ಣ ಸಂಖ್ಯೆ: 189/2026.
1.ಅಮೀರಬಿ ಗಂಡ, ಮಮ್ಮದಸಾಬ ಮುನ್ನೋಳಿ, ವಯಾ:75ವರ್ಷ,ಉದ್ಯೋಗ:ಮನೆಗೆಲಸ,ಸಾಕೀನ :ಲೋಕಾಪೂರ,ತಾ:ಮುಧೋಳ ಜಿ::ಬಾಗಲಕೋಟ 2.ಕಮಲಸಾಬ ತಂದೆ,ಮಮ್ಮದಸಾಬ ಮುನ್ನೋಳಿ, ವಯಾ:56ವರ್ಷ, ಉದ್ಯೋಗ:ಕೂಲಿ, ಸಾಕೀನ: ಲೋಕಾಪೂರ,ತಾ:ಮುಧೋಳ ಜಿ:ಬಾಗಲಕೋಟ. 3.ಶಕೀಲಾಭಾನು ಗಂಡ, ಲಾಲಸಾಬ ಗುದಗಿ, ವಯಾ:53ವರ್ಷ, ಉದ್ಯೋಗ:ಮನೆಗೆಲಸ, ಸಾಕೀನ: ಲೋಕಾಪೂರ, ತಾ:ಮುಧೋಳ ಜಿ:ಬಾಗಲಕೋಟ. 4.ರಮೀಜಾಬೇಗಂ ಗಂಡ, ಅಪ್ಪಾಸಾಬ ಗುದಗಿ ವಯಾ:48ವರ್ಷ,ಉದ್ಯೋಗ :ಮನೆಗೆಲಸ, ಸಾಕೀನ:ಲೋಕಾಪೂರ, ತಾ: ಮುಧೋಳ ಜಿ:ಬಾಗಲಕೋಟ.5.ರಾಜಬಿ ಗಂಡ, ಹುಸೇನಸಾಬ ಅನವಾಲ ವಯಾ:46 ವರ್ಷ, ಉದ್ಯೋಗ:ಮನೆಗೆಲಸ, ಸಾಕೀನ:ಲೋಕಾಪೂರ, ತಾ:ಮುಧೋಳ ಜಿ:ಬಾಗಲಕೋಟ. 6.ಶಾಜಾದ್ಬಿ ಗಂಡ, ಹುಸೇನಸಾಬ ಅತ್ತಾರ ವಯಾ:31 ವರ್ಷ, ಉದ್ಯೋಗ:ಮನೆಗೆಲಸ, ಸಾಕೀನ:ಕೆರೂರ, ತಾ:ಜಿ: ಬಾಗಲಕೋಟ. ---------ಅರ್ಜಿದಾರರು.
::ವಿರುದ್ಧ::
1.ತಹಸೀಲ್ದಾರ,ಮುಧೋಳ, ಜಿ:: ಬಾಗಲಕೋಟ. 2. ಗ್ರಾಮ ಲೆಕ್ಕಾಧಿಕಾರಿಗಳು, ಲೋಕಾಪುರ, ತಾ: ಮುಧೋಳ. --ಎದುರುದಾರರು.
ಜಾಹಿರನಾಮೆ
ಪ್ರಸ್ತುತ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿದಾರರ ತಂದೆ–ಮಮ್ಮದಸಾಬ ತಂದೆ.ಕಮಾಲಸಾಬ ಮುನ್ನೊಳ್ಳಿ ಇವರು ದಿನಾಂಕ:28/12/2002ರಂದು ಮುಧೋಳ ತಾಲೂಕಿನ,ಲೋಕಾಪೂರ ಗ್ರಾಮದಲ್ಲಿ ಮರಣ ಹೊಂದಿದ್ದು, ಆ ಬಗ್ಗೆ ಎದುರುದಾರರು ತಮ್ಮ ಕಾರ್ಯಾಲಯದ ಮರಣ ರಜಿಸ್ಟರದಲ್ಲಿ ದಾಖಲ ಮಾಡಿಕೊಳ್ಳಬೇಕೆಂದು ಆದೇಶ ಕೋರಿ ಈ ಕೇಸನ್ನು ಮಾನ್ಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಇರುತ್ತದೆ.
ಕಾರಣ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನಂದರೆ, ಪ್ರಸ್ತುತ ಕೇಸಿನಲ್ಲಿ ಯಾರದಾದರೂ ಹಕ್ಕು ವ ಹಿತಾಸಕ್ತಿ ಇದ್ದಲ್ಲಿ ಪ್ರಸ್ತುತ ಕೇಸಿನಲ್ಲಿ ದಿನಾಂಕ10–07/2026 ರಂದು ಮುಂಜಾನೆ 10:30 ಘಂಟೆಗೆ ನ್ಯಾಯಾಲಯದಲ್ಲಿ ಹಾಜರ ಇದ್ದು, ತಮ್ಮ ತಕರಾರು ಸಲ್ಲಿಸಬಹುದು. ಒಂದು ವೇಳೆ ಯಾವುದೇ ತಕರಾರ ಬಾರದಿದ್ದಲ್ಲಿ ಅರ್ಜಿದಾರಳ ಮಾಂಗಣಿ ಪ್ರಕಾರ ಆದೇಶ ಮಾಡಲಾಗುವುದು ತಿಳಿಯಿರಿ ಅಂತಾ ಕೊಟ್ಟ ಜಾಹೀರನಾಮೆ.
ಮುಧೋಳ.
ದಿನಾಂಕ:22/05/2026.
ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/–ಶಿರಸ್ತೇದಾರರು. (ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕದಂಡಾಧಿಕಾರಿಗಳು, ಮುಧೋಳ ಇವರ ನ್ಯಾಯಾಲಯದಲ್ಲಿ)
ಸಹಿ/–(ಎಸ್.ಮ.ಪಠಾಣ)
ಅರ್ಜಿದಾರ ಪರ ವಕೀಲರು.

ಕ್ರಿ.ಮಿ. ನಂ. : 95/2026
ಮಾನ್ಯ 4ನೇ ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು ಜೆ. ಎಮ್ ಎಫ್ ಸಿ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ
ಅರ್ಜಿದಾರ : ಜಗದೀಶ ತಂದೆ ಹನುಮಂತಪ್ಪ ವಾಲ್ಮೀಕಿ @ ತಳವಾರ
ವಿರುದ್ಧ
ಎದುರುಗಾರರು : ಮಾನ್ಯ ಸಹಾಯಕ ಆಯುಕ್ತರು ವ ಜನನ-ಮರಣ ನೋಂದಣಿ ಅಧಿಕಾರಿಗಳು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವಲಯ ಕಚೇರಿ ನಂ. 10, ಹೆಗ್ಗೇರಿ, ಹಳೇ ಹುಬ್ಬಳ್ಳಿ, ಹುಬ್ಬಳ್ಳಿ
ನೋಟಿಸು
ಮೇಲ್ಕಂಡ ಪ್ರಕರಣವನ್ನು ಅರ್ಜಿದಾರನು ಮೃತ ತನ್ನ ತಂದೆಯಾದ **ಶ್ರೀ ಹನಮಂತಪ್ಪ ತಂದೆ ದುರ್ಗಪ್ಪ ವಾಲ್ಮೀಕಿ** ಇವರು ದಿನಾಂಕ: **01.02.2010** ರಂದು ಹುಬ್ಬಳ್ಳಿ ಶಹರ 1ನೇ ಕ್ರಾಸ್, ಬಾಣತಿಕಟ್ಟಿ, ಹಳೇಹುಬ್ಬಳ್ಳಿ, ಹುಬ್ಬಳ್ಳಿ ಮನೆಯಲ್ಲಿ ಫೋತಿಯಾಗಿದ್ದು ಇರುತ್ತದೆ ಅಂತಾ, ಸದರ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ದಾಖಲಿಸಿರುತಾರೆ.
ಸದರ ಮರಣ ದಾಖಲಾತಿ ಕುರಿತು ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತ ಸಂಬಂಧ ತಂಟೆ ತಕರಾರು ವಗೈರೆ ಇದ್ದಲ್ಲಿ ಅವರ ಹಾಜರಾತಿಗಾಗಿ ತಾ: **20.07.2026** ರಂದು ಬೆಳಗಿನ **11.00** ಗಂಟೆಗೆ ಮುದ್ದತ್ತು ನೇಮಿಸಿದ್ದು ಆ ದಿವಸ ಸದರಿಯವರು ತಾವಾಗಲಿ ತಮ್ಮ ವಕೀಲರ ಮುಖಾಂತರ ಹಾಜರಾಗಬಹುದು. [illegible]
ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ 2026 ನೇ ಜೂನ ತಿಂಗಳ 01ನೇ ಈ ದಿನದಂದು ಇದನ್ನು ಕೊಡಲಾಯಿತು.
ಕೋರ್ಟ ಮೊಹರು
ಸಹಿ/– ಶಿರಸ್ತೇದಾರರು
4ನೇ ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ
ಅರ್ಜಿದಾರರ ಪರ ವಕೀಲರು
ಸಹಿ/– **ಎಸ್.ಬಿ. ಭಾಂಡಗೇಕರ**, ವಕೀಲರು, ಹುಬ್ಬಳ್ಳಿ ದಿನಾಂಕ : 01.06.2026

IN THE COURT OF CIVIL JUDGE & JMFC AT SIRUGUPPA
Criminal. Misc. Case No: 497/2026
Between: Sri. Kali Erreppa & Others ... Petitioner.
And
To,
The Tahasildar - Cum- Birth and Deaths Registrar Taluk Office siruguppa. .... Respondents.
TO WHOM SO EVER IT MAY CONCERN NOTICE
Whereas above named petitioner here in have instituted above petition under section 13(3)of birth and death Acts 1964 against the respondents for purpose of seeking death certificate of petitioners Father by name Kali Eranna S/O Hanumanthappa,Who was expired on 10-05-1985 at the residence of the Petitioner.
Any person interested are here by summoned to appear before this court in person or by pleader duly instructed and able to answer all material questions relating to the petition on 28-07-2026 at 11.00 am before this court.
In default of your appearance on the date/ day of above petition will be heard and determined as "Ex-parte"
Given under my hand & seal ofthe court this 17th day of June - 2026
By Order of the court,
Sd/- Chief ministrial officer, Civil judge & JMFC Court Siruguppa.
Sd/- Shekappa. T
Advocates Siruguppa,

IN THE COURT OF CIVIL JUDGE & JMFC AT SIRUGUPPA
Criminal. Misc. Case No: 537/2026
Between: Sri.C.Shanthappa & others ... Petitioner.
And
To,
The Tahasildar - Cum- Birth and Deaths Registrar Taluk Office siruguppa. .... Respondents.
TO WHOM SO EVER IT MAY CONCERN NOTICE
Whereas above named petitioner here in have instituted above petition under section13(3)of birth and death Acts 1964 against the respondents for purpose of seeking death certificate of petitioners Mother by name Byagar Ambamma, D/o Mareppa Who was expired on 09-03-2001 at the residence of the Petitioner.
Any person interested are here by summoned to appear before this court in person or by pleader duly instructed and able to answe r all material questions relating to the petition on 07-08-2026 at 11.00 am before this court.
In default of your appearance on the date/ day of above petition will be heard and determined as "Ex-parte"
Given under my hand &seal of the court this 17th day of June - 2026
By Order of the court,
Sd/- Chief ministrial officer,
Civil judge & JMFC Court Siruguppa.
Sd/- Shekappa. T
Advocates Siruguppa,

IN THE COURT OF CIVIL JUDGE & JMFC AT SIRUGUPPA
Criminal. Misc. Case No: 541/2026
Between: Smt. Devaramane hanumakka & others .... Petitioner.
And
To,
The Tahasildar -Cum-Birth and Deaths Registrar Taluk Office siruguppa. .... Respondents.
TO WHOM SO EVER IT MAY CONCERN NOTICE
Whereas above named petitioner here in have instituted above petition under section13(3) of birth and death Acts1964 against the respondents for purpose of seeking death certificate of petitioners Father by name Devaramane S Eranna S/o Eranna, Who was expired on 18-10-2003 at the residence of the Petitioner.
Any person interested are here by summoned to appear before this court in person or by pleader duly instructed and able to answer all material questions relating to the petition on 03-08-2026 at 11.00 am before this court.
In default of your appearance on the date/ day of above petition will be heard and determined as "Ex-parte"
Given under my hand &seal of the court this 17th day of June - 2026
By Order of the court,
Sd/- Chief ministrial officer,
Civil judge & JMFC Court Siruguppa.
Sd/- Shekappa. T
Advocates Siruguppa,

ಕರ್ನಾಟಕ ಸರಕಾರ
ಸಹಾಯಕ ನಿರ್ದೇಶಕರು (ಗ್ರೇಡ್–2) ಸಮಾಜ ಕಲ್ಯಾಣ ಇಲಾಖೆ ಹಿರೇಕೆರೂರು
ಟೆಂಡರ್ ಸಂಖ್ಯೆ: ಸನಿಸಕಇಹಿ:ಎಸ್–2:ಕಛೇರಿ ವಾಹನ:2026–27.
ದಿನಾಂಕ : 15–06–2026.
ಮರು ಟೆಂಡರ್ ಪ್ರಕಟಣೆ
ಇಲಾಖೆ ಕಾರ್ಯಕ್ರಮಗಳ ಅನುಷ್ಠಾನ ಕಾರ್ಯಕ್ಕಾಗಿ ಸಹಾಯಕ ನಿರ್ದೇಶಕರು (ಗೇಡ್–2) ಸಮಾಜ ಕಲ್ಯಾಣ ಇಲಾಖೆ, ಹಿರೇಕೆರೂರು ಕಛೇರಿಗೆ ಬಾಡಿಗೆ ಆಧಾರದ ಮೇಲೆ ವಾಹನ ಪಡೆಯುವ ಬಗ್ಗೆ.
(1) ಟೆಂಡರ್ ಪ್ರಕಟಣೆ ದಿನಾಂಕ : **16–06–2026.** (2) ಟೆಂಡರ್‌ಗೆ ಇಟ್ಟ ಮೊತ್ತ ಅಂದಾಜು ಮೊತ್ತ ರೂ. **4.20** ಲಕ್ಷ (3) ಟೆಂಡರ ಫಾರಂ ಬೆಲೆ **Rs. 500/–** (4) ಟೆಂಡರ್ ಫಾರಂಗಳು (ತಾಂತ್ರೀಕ & ಆರ್ಥಿಕ ಲಕೋಟೆ ಇರುವ) ಸಲ್ಲಿಸಲು ಕೊನೆಯ ದಿನಾಂಕ : **24–06–2026** ಸಾಯಂಕಾಲ 04.30 ಘಂಟೆ (5) ತಾಂತ್ರಿಕ ಲಕೋಟೆ ತೆರೆಯುವ ವೇಳೆ ಮತ್ತು ದಿನಾಂಕ : **29–06–2026** ಮಧ್ಯಾಹ್ನ 3.00 ಘಂಟೆ (ಸಾಧ್ಯವಾದಲ್ಲಿ ಮಾತ್ರ ಬದಲಾವಣೆಗೆ ಒಳಪಟ್ಟಿರುತ್ತದೆ.) (6) ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ ವೇಳೆ ಮತ್ತು ದಿನಾಂಕ : **30–06–2026** ಮಧ್ಯಾಹ್ನ 3.00 ಘಂಟೆ (ಸಾಧ್ಯವಾದಲ್ಲಿ ಮಾತ್ರ ಬದಲಾವಣೆಗೆ ಒಳಪಟ್ಟಿರುತ್ತದೆ.) (7) ಟೆಂಡರನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ ರೂ. **10,500/–** (8) ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : ಸಹಾಯಕ ನಿರ್ದೇಶಕರ ಕಛೇರಿ (ಗ್ರೇಡ–2) ಸಮಾಜ ಕಲ್ಯಾಣ ಇಲಾಖೆ ಹಿರೇಕೆರೂರು ಕಛೇರಿ ವೇಳೆಯಲ್ಲಿ ಸಂಪರ್ಕಿಸುವದು. ಫೋನ್ : **9480843151, 9591815972, 7483231095**
ಸಹಿ/– ಸಹಾಯಕ ನಿರ್ದೇಶಕರು (ಗ್ರೇಡ್–2) ಸಮಾಜ ಕಲ್ಯಾಣ ಇಲಾಖೆ, ಹಿರೇಕೆರೂರು.

PUBLIC NOTICE
Notice is hereby given that my client Sri. Sunil S/o Prakash Kyarkatti has lost the following original documents pertaining to commercial shops in the first floor of the building known and called as " MALLIKARJUN AVENUE", constructed on the land bearing CTS No. 2937B of CTS ward No.I, situated at Koppikar road, Hubballi city, District: Dharwad:
1. Registered Sale Deed bearing Doc No. 3559 dated 11.09.2000 pertaining to shop No. 10.
2. Registered Sale Deed bearing Doc No. 1566 dated 06.07.1995 pertaining to shop No. 9.
3. Registered Sale Deed bearing Doc No. 2537 dated 06.08.1999 pertaining to shop No.13.
Therefore, any person having found the said documents or having any claim, right, title, interest, lien, charge, mortgage or objection in respect of the aforesaid property is hereby called upon to notify the undersigned in writing with supporting documents within **seven days (7)** from the date of publication of this notice.
If no claim or objection is received within the stipulated period, it shall be presumed that no person has any claim in respect of the said documents or property and further necessary steps will be taken accordingly.
V. F. Kallimath. Advocate
No. 48, Shakti nagar, Gokul road, Hubli.
Hubli
Date:17-06-2026 Cell:97401-93077

ಪತ್ರಿಕಾ ಪ್ರಕಟಣೆ
ಸಿದ್ದಾಪುರ ಜೆ.ಎಂ.ಎಫ್.ಸಿ ಕೋರ್ಟಿನಲ್ಲಿ
ಕ್ರಿ.ಮಿ.ನಂ: 22/2026
ಶ್ರೀಮತಿ ನೇತ್ರಾವತಿ W/o ಮಾಲ್ಲೇಶ್ವರ ಗೌಡ ಪ್ರಾ.ಅ.47ವರ್ಷ, ಸಾ:ಹುತ್ತಗಾರ, ಪೋ:ಕೋಡ್ಸರ ಮುಠಳ್ಳಿ ತಾ:ಸಿದ್ದಾಪುರ (ಉ.ಕ) ....ಅರ್ಜಿದಾರಳು
–ವಿರುದ್ಧ–
1).ಜನನ–ಮರಣ ನೊಂದಣಾಧಿಕಾರಿಗಳು ತಹಶೀಲ್ದಾರ ಕಛೇರಿ ಸಿದ್ದಾಪುರ (ಉ.ಕ) ಹಾಗೂ ಇತರರು ....ಎದ್ದುರುದಾರರು
ಅರ್ಜಿದಾರಳ ತಾಯಿಯಾದ ಮೋಹಿನಿ ಕನ್ನಾ ಗೌಡ ಇವರು ದಿನಾಂಕ: 29/12/2022 ರಂದು ಸಿದ್ದಾಪುರ ತಾಲೂಕ ಕಬ್ಬಳ್ಳಿ ಗ್ರಾಮದ, ಶಿರಗೋಡಬೈಲ್ ಊರಿನಲ್ಲಿರುವ ಅರ್ಜಿದಾರಳ ತಂದೆಯ ಮನೆಯಲ್ಲಿ ಅನಾರೋಗ್ಯದಿಂದ ಮರಣ ಹೊಂದಿರುತ್ತಾರೆ. ಅರ್ಜಿದಾರಳು ಸಿದ್ದಾಪುರ ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ತನ್ನ ತಾಯಿಯ ಮರಣ ಪ್ರಮಾಣ ಪತ್ರವನ್ನು ಪಡೆಯುವ ಸಂಬಂಧಅರ್ಜಿ ಸಲ್ಲಿಸಿರುತ್ತಾಳೆ. ಸದ್ರಿ ಪ್ರಕರಣವು ದಿನಾಂಕ:3/8/2026 ರಂದು ಸಿದ್ದಾಪುರ ಜೆ.ಎಂ.ಎಫ್.ಸಿ. ಕೋರ್ಟಿನ ಮುಂದೆ ವಿಚಾರಣೆಗೆ ಇರುತ್ತದೆ.
ಈ ಬಗ್ಗೆ ಯಾರದ್ದಾದರೂ ತಕ್ಕಾರು ವಗೈರೆ ಇದ್ದಲ್ಲಿ ದಿನಾಂಕ: 3/8/2016 ರಂದು ಸಿದ್ದಾಪುರ ಜೆ.ಎಂ.ಎಫ್.ಸಿ. ಕೋರ್ಟಿನಲ್ಲಿ ಬೆಳಿಗ್ಗೆ 10–45 ಘಂಟೆಗೆ ನೀವಾಗಲೀ, ಅಥವಾ ನಿಮ್ಮ ವಕೀಲರ, ಮೂಲಕ ಹಾಜರಾಗಿ ನಿಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು, ಆದಿಲ್ಲವಾದಲ್ಲಿ ನಿಮ್ಮ ಅನುಪಸ್ಥಿತಿಯಲ್ಲಿ ಏಕತರ್ಫಿ ಎಂದು ಆಜ್ಞೆ ಮಾಡಲಾಗುವುದು ತಿಳಿದಿರಲಿ.
ಸಿದ್ದಾಪುರ
ದಿನಾಂಕ:12/06/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಶಿರಸ್ತೆದಾರರು (ಆಡಳಿತ)
ಜೆ.ಎಂ.ಎಫ್.ಸಿ. ಕೋರ್ಟ ಸಿದ್ದಾಪುರ
ಸಹಿ/–ಎಸ್.ಕೆ.ಗೌಡ
ಅರ್ಜಿದಾರಳ ಪರ ವಕೀಲರು.

ಸಾರ್ವಜನಿಕ ನೋಟಿಸು.
ಈ ಮೂಲಕ ನಮ್ಮ ಪಕ್ಷಗಾರರಾದ ಶ್ರೀ ಇಮಾಮಹುಸೇನ ತಂದೆ ಅಬ್ದುಲರೆಹಮಾನ ಕೊಲ್ಹಾಪೂರ, ಸಾ॥ನಿರ್ಮಲ ನಗರ ದಾಂಡೇಲಿ, ತಾ॥ದಾಂಡೇಲಿ, ಜಿ॥ಉತ್ತರಕನ್ನಡ, ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಕೊಡುವ **ಸಾರ್ವಜನಿಕ ನೋಟೀಸು ಏನೆಂದರೆ.**
ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕ ಕಲಘಟಗಿ ಪಟ್ಟಣ ಪಂಚಾಯತ ವ್ಯಾಪ್ತಿಯ ವಾರ್ಡನಂ.13ರಲ್ಲಿನ ಸ್ವತ್ತಿನ ಸಂಖ್ಯೆ 27–511–160, ಸ್ವತ್ತಿನ ಹಳೇ ಸಂಖ್ಯೆ: ರಿ.ಸ.ನಂ. 62/*/1 ಪ್ಲಾಟ ನಂ.28 ಹಾಗೂ ಸ್ವತ್ತಿನ ಸಂಖ್ಯೆ: 27–511–162, ಸ್ವತ್ತಿನ ಹಳೇ ಸಂಖ್ಯೆ: ರಿ.ಸ.ನಂ. 62/*/1 ಪ್ಲಾಟ ನಂ. 29ನೇದ್ದವುಗಳನ್ನು ಮಾಲಿಕರಾದ ರಂಜನ ತಂದೆ ಕೃಷ್ಣಪ್ಪ ಐನಾಪೂರ, ಇವರಿಂದ ನಮ್ಮ ಪಕ್ಷಗಾರರು ಖರೀದಿ ನೋಂದ ಮಾಡಿಕೊಳ್ಳುವ ವರಿದ್ದು, ಕಾರಣ ಸದರಿ ಆಸ್ತಿಗಳ ಕುರಿತು ಸಾರ್ವಜನಿಕರಿಂದಾಗಲೀ ಅಥವಾ ಯಾವುದೇ ಹಣಕಾಸಿನ ಸಂಸ್ಥೆಗಳಿಂದಾಗಲಿಯಾವುದಾದರೂ ಭೋಜಾ, ಒತ್ತಿ, ಹಕ್ಕು ವಗೈರೆ ಹಿತಸಂಬಂಧ ಇದ್ದಲ್ಲಿ ಹಾಗೂ ಆಸ್ತಿಗಳಮಾಲಿಕರ ವಾರಸುದಾರರಿಂದಾಗಲೀ ಯಾವುದೇ ತಂಟೆ ವ ತಕರಾರು ಇದ್ದಲ್ಲಿ ಈ ನೋಟೀಸ ಪ್ರಕಟವಾದ 07 ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಲಿಖಿತವಾಗಿ ಯಾವುದೇ ರೀತಿಯ ತಕರಾರುಗಳು ಇದ್ದಲ್ಲಿ ಸಲ್ಲಿಸತಕ್ಕದ್ದು, ಒಂದು ವೇಳೆ ಸದರಿ ನೋಟಿಸ್‌ಗೆ ಸದರಿ ಅವಧಿಯ ಒಳಗಾಗಿ ಯಾವುದೇ ರೀತಿಯ ತಕರಾರು ಬರದೆ ಹೋದಲ್ಲಿ ನಮ್ಮ ಪಕ್ಷಗಾರರು ಸದರ ಮೇಲ್ಕಂಡ ಆಸ್ತಿಗಳ ಕುರಿತು ಖರೀದಿ ವ್ಯವಹಾರ ನೋಂದಣಿ ಮಾಡಿಕೊಳ್ಳುವವರು ಇರುತ್ತಾರೆ. ನಂತರ ಬಂದ ಯಾವುದೇ ತಕರಾರುಗಳು ಸದರಿ ವ್ಯವಹಾರಕ್ಕೆ ಬಾಧ್ಯಾಯಿಸುವದಿಲ್ಲ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.
ಸ್ಥಳ: ಕಲಘಟಗಿ
ದಿನಾಂಕ: 17/06/2026
ಸಹಿ/–ಶ್ರೀ ಆರ್.ವಾಯ್.ರೊಳ್ಳಿ, ವಕೀಲರು, ಕಲಘಟಗಿ, ತಾ॥ ಕಲಘಟಗಿ ಜಿ॥ ಧಾರವಾಡ.
ಮೊ. ನಂ.9611728382,7090521171

ಅಸಲ ದಾವಾ ನಂ:197/2025
ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು ಕುಂದಗೋಳ ಇವರ ನ್ಯಾಯಾಲಯದಲ್ಲಿ
ವಾದಿ: ಶ್ರೀಮತಿ ಶಕುಂತಲಾ ಕೋಂ ಕುಮಾರಸ್ವಾಮಿ ಬಳ್ಳಾರಿಮಠ
ವಿರುದ್ಧ
ಪ್ರತಿವಾದಿಯರು: 1)ಗಂಗಾಧರ ತಂದೆ ಶಂಕ್ರಯ್ಯ ನಡೂರಮಠ ವಯಾ: 58 ವರ್ಷ ಉದ್ಯೋಗ: ಶೇತ್ಕಿ ಸಾಕೀನ ಬೆಟದೂರ, ತಾ : ಕುಂದಗೋಳ
ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 5 ನಿಯಮ 20 ರಡಿ ನೋಟಿಸು
ಈ ಮೇಲ್ಕಾಣಿಸಿದ ಪ್ರಕರಣದಲ್ಲಿ ವಾದಿಯು ದಾವಾದ ಆಸ್ತಿಯಲ್ಲಿ ಹಿಸ್ಸೆ ಕೇಳಿ ದಾವಾದಾಖಲ ಮಾಡಿದ್ದು, ಸದರ ದಾವೆಯಲ್ಲಿ ಪ್ರತಿವಾದಿ ನಂ 1 ನೇದವರಿಗೆ ಸಮನ್ಸ ಜಾರಿ ಆಗುವುದಿಲ್ಲ.ಹೀಗಾಗಿ ಈ ಮೂಲಕ ಪ್ರತಿವಾದಿ ನಂ 1 ನೇದವರಿಗೆ ಈ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸುವುದೇನಂದರೆ ಮಾನ್ಯ ನ್ಯಾಯಾಲಯಕ್ಕೆ ದಿನಾಂಕ: 21/07/2026 ರಂದು ಬೆಳಿಗ್ಗೆ 10–30 ಗಂಟೆಗೆ ನೀವು ವೈಯಕ್ತಿಕವಾಗಲಿ ಅಥವಾ ನಿಮ್ಮ ವಕೀಲರ ಮೂಲಕ ವಾಗಲಿ ಹಾಜರಾಗಿ ತಕರಾರು ಏನಾದರೂ ಇದ್ದರೂ ಸಲ್ಲಿಸಬಹುದು ಇಲ್ಲದಿದ್ದಲ್ಲಿ ನಿಮ್ಮ ಪರವಾಗಿ ಏಕತರ್ಫಿ ಅಂತಾ ಆದೇಶ ಮಾಡಲಾಗುವುದು ಅಂತಾ ಕೊಟ್ಟ ನೋಟಿಸು.
ಕುಂದಗೋಳ
ದಿನಾಂಕ :16/06/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಶಿರಸ್ತೇದಾರರು
ಹಿರಿಯ ದಿವಾಣಿ ನ್ಯಾಯಾಧೀಶರು ಕುಂದಗೋಳ
ಸಹಿ/–ಎಮ್.ಬಿ.ಬೂದಿಹಾಳ ವಾದಿಯರ ಪರ ವಕೀಲರು

ಕ್ರಿಮಿ ಅರ್ಜಿ ನಂ:– 35/2026
ಮಾನ್ಯ ದಿವಾಣಿ ನ್ಯಾಯಾಧೀಶರು (ಕಿ.ವಿ) & ಜೆ.ಎಮ್.ಎಫ್.ಸಿ ಕುಂದಗೋಳ ಇವರ ನ್ಯಾಯಾಲಯದಲ್ಲಿ
ಅರ್ಜಿದಾರ:–ಫಕ್ಕೀರಗೌಡ ತಂದೆ ಮಲ್ಲನಗೌಡ ಪಾಟೀಲ, ವಯಾ:47 ವರ್ಷ,ಉದ್ಯೋಗ:ಶೇತ್ಕಿ ಸಾ॥ ಸುಲ್ತಾನಪೂರ ತಾ॥ ಕುಂದಗೋಳ ಜಿ॥ ಧಾರವಾಡ.
ವಿರುದ್ಧ
ಎದುರುಗಾರರು: 1)ಮಾನ್ಯ ತಹಶೀಲ್ದಾರರು ಕುಂದಗೋಳ(ಜನನ–ಮರಣನೊಂದಣಾಧಿಕಾರಿಗಳು 2)ಗ್ರಾಮ ಲೆಕ್ಕಾಧಿಕಾರಿಗಳು ಹರಲಾಪೂರ.
ನೋಟಿಸು
ಈ ಮೂಲಕ ಯಾವತ್ತೂ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ
ಮೇಲ್ಕಂಡ ಅರ್ಜಿದಾರನ ತಾಯಿಯವರಾದ ಶ್ರೀಮತಿ ನೀಲಮ್ಮ ಕೋಂ ಮಲ್ಲನಗೌಡ ಪಾಟೀಲ" ಇವರು ಕುಂದಗೋಳ ತಾಲೂಕಿನ ಹರಲಾಪೂರ ಗ್ರಾಮ ಪಂಚಾಯತ ವ್ಯಾಪ್ತಿಯ ಸುಲ್ತಾನಪೂರ ಗ್ರಾಮದ ನಮ್ಮ ಮನೆಯಲ್ಲಿ ದಿನಾಂಕ:17/04/2021ರಂದು ಫೋತಿಯಾಗಿದ್ದು ಇರುತ್ತದೆ. ಸದರಿ ಅರ್ಜಿದಾರನು ತನ್ನ ಫೋತಿ ತಾಯಿಯ ಮರಣ ನೋಂದಣಿಯನ್ನು ಎದುರುಗಾರರ ಮರಣ ನೊಂದಣಿ ಪುಸ್ತಕದಲ್ಲಿ ದಾಖಲ ಮಾಡುವ ಕುರಿತು ಸೂಕ್ತ ಆದೇಶ ಪಡೆದುಕೊಳ್ಳಲು ಮೇಲ್ಕಂಡ ಅರ್ಜಿ ದಾಖಲ ಮಾಡಿದ್ದು ಇರುತ್ತದೆ. ಕಾರಣ ಮೇಲ್ಕಂಡ ವಿಷಯದಲ್ಲಿ ಯಾರಾದರೂ ಹಕ್ಕು, ಹಿತಾಸಕ್ತಿ, ವಗೈರೆ, ಇದ್ದಲ್ಲಿ ಅವರು ದಿನಾಂಕ:09/07/2026 ರಂದು ಮುಂಜಾನೆ 10:30ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಖುದ್ದಾಗಿ ಅಥವಾ ವಕೀಲರ ಮುಖಾಂತರ ಹಾಜರಾಗಿ ತಮ್ಮದೇನಾದರೂ ತಕರಾರು ಇದ್ದಲ್ಲಿ ಸದರಿ ಪ್ರಕರಣದಲ್ಲಿ ಸಲ್ಲಿಸಬೇಕು. ಇದಕ್ಕೆ ತಪ್ಪಿದಲ್ಲಿ ಸದರಿ ಪ್ರಕರಣವನ್ನು ನಿಕಾಲಿ ಮಾಡಲಾಗುವುದು ಅಂತಾ ತಿಳಿಯಿರಿ.
ಈ ಹೊತ್ತು ದಿನಾಂಕ:–17/06/2026 ರಂದು ನಮ್ಮ ಸಹಿ ಮಾಡಿ ನ್ಯಾಯಾಲಯದ ಮೊಹರು ಹಾಕಿ ಕೊಡಲ್ಪಟ್ಟಿತು.
ನ್ಯಾಯಾಲಯದ ಆಜ್ಞೆಯ ಮೇರೆಗೆ
ಸಹಿ/–ಶಿರಸ್ತೇದಾರರು ಜೆ.ಎಮ್.ಎಫ್.ಸಿ. ನ್ಯಾಯಾಲಯ
ಅರ್ಜಿದಾರನ ಪರ ವಕೀಲರು
sd/- S.M.MIYYANAVAR
M:9845629839

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು

ಮೈಸೂರು–ನಂಜನಗೂಡು ರಸ್ತೆ, ಬಂಡಿಪಾಳ್ಯ, ಮೈಸೂರು–570 025
ಇ–ಮೇಲ್: apmcmysore@rediffmail.com
ದೂ: 2482725, 2482389, ಫ್ಯಾಕ್ಸ್:(0821)2482389
apmcmys@gmail.com

ಸಂ.ಕೃಉಮಾಸ(ಮೈ)/ಆವಿ/292/2026–27 ದಿನಾಂಕ: 10.06.2026

ಇ–ಟೆಂಡರ್ ಪ್ರಕಟಣೆ

ಮೈಸೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಹೆಚ್ಚುವರಿ ಹಣ ರೂ.1.00 ಕೋಟಿ ಒಂದು ವರ್ಷ, ರೂ.2.00 ಕೋಟಿ ಒಂದು ವರ್ಷ ಹಾಗೂ ರೂ.4.00 ಕೋಟಿ ಒಂದು ವರ್ಷಕ್ಕೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸಲು ಇ–ಪೋರ್ಟಲ್ ಮೂಲಕ ಆಸಕ್ತ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಡ್ಡಿ ದರಗಳಿಗಾಗಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಇ–ಟೆಂಡರ್ ನಲ್ಲಿ ಭಾಗವಹಿಸಲು ಕೊನೆಯ ದಿ: 03.07.2027 ಆಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು https:// kppp.karnataka.gov.in ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

Auction Notice Number : -
APMC/2026-27/AUCTION118
APMC/2026-27/AUCTION119
APMC/2026-27/AUCTION120

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ.,ಮೈಸೂರು
ಸಹಿ/– ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ.,ಮೈಸೂರು

DIPR/DDMYS/339/KSMCA/232/2026-27

ಕರ್ನಾಟಕ ಸರ್ಕಾರ– ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಭದ್ರಾವತಿ ವಿಭಾಗ, ಭದ್ರಾವತಿ, –577301

Phone No.:08282 200723 E mail: dcfbdvt@yahoo.in

ಸಂಖ್ಯೆ:ಬಿ1.ಟಿಂಬರ್‌ಹರಾಜು.ಸಿಆರ್–1/2026–27 ದಿ: 15–06–2026.

ನಾಟಾ/ಸೌದೆ/ಬಿಲ್ಲೆಟ್/ಪೋಲ್/ಜೊಂಬು ಮುಂತಾದ ಅರಣ್ಯ ಉತ್ಪನ್ನಗಳನ್ನು ಇ–ಹರಾಜು ಮೂಲಕ ವಿಲೇ ಮಾಡುವ ಬಗ್ಗೆ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಭದ್ರಾವತಿ ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ ಬರುವ ತರೀಕೆರೆ ಸರ್ಕಾರಿ ನಾಟಾ ಸಂಗ್ರಹಾಲಯಗಳಲ್ಲಿ ಲಭ್ಯವಿರುವ ನಾಟಾ/ಸೌದೆ/ಬಿಲ್ಲೆಟ್/ಪೋಲ್/ಜೊಂಬು ಮುಂತಾದ ಅರಣ್ಯ ಉತ್ಪನ್ನಗಳನ್ನು ಇ–ಹರಾಜು ಮೂಲಕ ವಿಲೇಗೊಳಿಸಲು ದಿನಾಂಕ:09–07–2026ಕ್ಕೆ ನಿಗದಿಗೊಳಿಸಿದ್ದು, ಸದರಿ ಇ–ಹರಾಜು ಮಾರಾಟ ಪ್ರಕಟಣೆಯನ್ನು ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ:15–06–2026ರಲ್ಲಿ ಪ್ರಕಟಿಸಿದ್ದು, ಸದರಿ ಪ್ರಕಟಣೆಯಲ್ಲಿ ನಮೂದಿಸಿರುವ ಎಲ್ಲಾ ಷರತ್ತುಗಳಿಗೊಳಪಟ್ಟು ಇ–ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ. ಇ–ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಕುರಿತು ಪ್ರಕಟಣೆಯನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ ಸಂಖ್ಯೆ: www.aranya.gov.in ಮತ್ತು www.etimber.in ಮೂಲಕ ಪಡೆದು ಕೊಳ್ಳಬಹುದಾಗಿದೆ.

ಸಹಿ/– (ರವೀಂದ್ರಕುಮಾರ್.ಬಿ.ಎಂ. ಭಾಅಸೇ.,)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ,

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಬಿ/26–27/82/06/386

CHANGE OF NAME

I, **MUHAMMADGULAME MUSTAFA SIRKAZI** (Old Name) Resident of 203/E, Kanchagar Oni, Hanagal, Tq: Haveri 581104, have changed my name as **MUHAMMED GULAME MUSTAFA SIRKHAZI** (New Name) henceforth I will be called and recognized by new name for all future purposes, dated: 17/06/2026.

CHANGE OF NAME

I, NARAYAN ACHARYA, My Minor Son, **ANKIT ACHARYA** (Child's Old Name) as per his Old Passport and he R/o.Hubballi-580030, I have Changed My Minor Son name to **ANKIT NARAYAN ACHARYA** (Child's New Name) as per his SSLC & KYC Documents.Henceforth he will be recognised by his New Name as **ANKIT NARAYAN ACHARYA** for all Purposes, Vide Affidavit Sworn Before Notary V.H.Patil at Hubballi on 16/06/2026.

CHANGE OF NAME

I, **VENKATESH NARAYANASA MEHARAVADE** (Old Name) Resident of #18 19, Laxmi Nagar Gokul Road, Hubli, Dharwad, Karnataka, Pin Code: 580030, have changed my name as **VENKATESH MEHARWADE** (New Name) henceforth I will be called and recognized by new name for all future purposes, dated: 17/06/2026.

CHANGE OF NAME

I, **SHRINIVAS SUREBAN** (Old Name) **S/o. RANGANATH**, as per my Educational Documents and I, R/o.GADAG-582101, I have Changed My Name to **SHRINIVAS RANGANATH SUREBAN** (New Name) **S/o.RANGANATH SUREBAN**, as per my KYC Documents and I Shall Hereafter Be Known by New Name as **SHRINIVAS RANGANATH SUREBAN**, for all Purposes, Vide Affidavit Sworn Before Notary V.H.Patil at Hubballi on 16/06/2026

CHANGE OF NAME

I, **SAVITA NEKAR** (Old Name) Resident of #95/A, 1st Main Road, Badari Nagar, Keshwapur, Hubli Dharwad, Kamataka, Pin Code: 580023, have changed my name as **SAVITA SHANKARAPPA NEKAR** (New Name) henceforth I will be called and recognized by new name for all future purposes, dated: 17/06/2026.

CHANGE OF NAME

I, **JYOTHI** (Old Name) D/o. BABU SHETTY WADAWADAGI, (Before Marriage) and I, R/O.Gadag-582101, I have changed my name to **JYOTI SHRINIVAS SUREBAN** (New Name), **W/o. SHRINIVAS SUREBAN** (After Marriage). Henceforth I will be called and recognised by my New Name as **JYOTI SHRINIVAS SUREBAN**, for all Purposes, Vide Affidavit Sworn Before Notary V.H.Patil at Hubballi on 16/06/2026.

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಹಾಸನ

ಜಿಲ್ಲಾ ಪಂಚಾಯತ್, ಬಿ.ಎಂ.ರಸ್ತೆ, ಹಾಸನ–573201
ದೂರವಾಣಿ ಸಂಖ್ಯೆ: 08172–268794 ಜಾಲ ತಾಣ: **https://zphassan.karnataka.gov.in Mail ID: admsection95@gmail.com**

ಸಂ:ಜಿಪಂಹಾ/ಅಸಿ(14)ಜಿ.ಪಂ.ಕ.ಸ್ವಲೇ.ಸಾ.ಖ.ಟೆಂ/2026–27
ದಿನಾಂಕ:10.06.2026

ಇ–ಟೆಂಡರ್ ಅಧಿಸೂಚನೆ

ಹಾಸನ ಜಿಲ್ಲಾ ಪಂಚಾಯತ ಕಛೇರಿಯಲ್ಲಿ ವಿವಿಧ ಶಾಖೆಗಳ ದೈನಂದಿನ ಕೆಲಸಗಳಿಗೆ ಅಗತ್ಯವಿರುವ ಲೇಖನ ಮತ್ತು ಸ್ವಚ್ಛತಾ ಸಾಮಗ್ರಿಗಳ ಸರಬರಾಜಿಗಾಗಿ Fಇ–ಟೆಂಡರ್ ಪ್ರಕಟಣೆ. ಇ–ಟೆಂಡರ್ ಪ್ರಕಟಣೆ ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ ಜಿಪಂಹಾ/ಅಸಿ(14)ಜಿ.ಪಂ.ಕ.ಸ್ವಲೇ.ಸಾ.ಖ.ಟೆಂ/ 2026–27 ದಿನಾಂಕ: 10/06/2026 ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ 15/06/2026 ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ 15.00.000/ – ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 30/ 06/2026 KPPP ಪೋರ್ಟಲ್ ನಲ್ಲಿ ಸಂಜೆ 5.00 ರವರೆಗೆ ತಾಂತ್ರಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ, ದಿನಾಂಕ: 02/07/2026 ಬೆಳಗ್ಗೆ 11.00 ಗಂಟೆಗೆ, ಜಿಲ್ಲಾ ಪಂಚಾಯತ್ ಕಚೇರಿ, ಹಾಸನ (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) ಆರ್ಥಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ: ದಿನಾಂಕ: 10/07/2026 ಮದ್ಯಾಹ್ನ 11.00 ಗಂಟೆಗೆ, ಜಿಲ್ಲಾ ಪಂಚಾಯತ್ ಕಚೇರಿ, ಹಾಸನ. (ಸ್ಥಳ & ದಿನಾಂಕ ಬದಲಾವಣೆಗೆ ಒಳಪಟ್ಟಿರುತ್ತದೆ) ಟೆಂಡರ್ ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ 37,500/– ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಉಪ ಕಾರ್ಯದರ್ಶಿ (ಆಡಳಿತ) ಜಿಲ್ಲಾ ಪಂಚಾಯತ್, ಹಾಸನ ದೂರವಾಣಿ ಸಂಖ್ಯೆ: 08172–268824 ಟೆಂಡರಿನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು KPPP ಪೋರ್ಟಲ್‌ನಲ್ಲಿ ಪಡೆಯಬಹುದು.

ಸಹಿ/–ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಹಾಸನ.

ವಾಸಾಸಂಇ/ಹಿಸನಿ/ಹಾಸನ/242/ಕೆಎಸ್‌ಎಂಸಿಎ/2026–27

ನಗರಸಭಾ ಕಾರ್ಯಾಲಯ, ಮಂಡ್ಯ.

ಸಂಖ್ಯೆ:ನಸಮಂ/ಕಾಮಗಾರಿ ವಿಭಾಗ/ಟೆಂಡರ್–15/2026–27
ದಿನಾಂಕ : 11–06–2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2026–27ನೇ ಸಾಲಿನ ಸಾಮಾನ್ಯ ನಿಧಿ ಅಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು KTTP Act -1999 & 2000ರಂತೆ, ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ–ಪ್ರೊಕ್ಯೂರೆಂಟ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು KW–1 ರ ದಾಸ್ತಾವೇಜು ಮೂಲಕ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು https://kppp.karnataka.gov.in ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಕೊನೆಯ ದಿನಾಂಕ: 29.06.2026 ಅಪರಾಹ್ನ4.30 ಗಂಟೆಯೊಳಗೆ ಸಲ್ಲಿಸುವುದು. ಟೆಂಡರ್ ಪ್ರಕಟಣೆ ವಿವರವನ್ನು ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ www.mandyacity.mrc.gov.in ನಲ್ಲಿ ಪಡೆಯಬಹುದು.

ಕ್ರ ಸಂ : 01. ಇಂಡೆಂಟ್ ಸಂಖ್ಯೆ : DMA/2026-27/RD/WORK_INDENT59243. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 19.97. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 16.69. ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) : 50,000/-.

ಕ್ರ ಸಂ : 02. ಇಂಡೆಂಟ್ ಸಂಖ್ಯೆ : DMA/2026-27/RD/WORK_INDENT59244. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 19.71. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 16.92. ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) : 50,000/-.

ಸಹಿ/–ಪೌರಾಯುಕ್ತರು, ನಗರಸಭೆ, ಮಂಡ್ಯ

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿಎ/206/2025–26

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಕಾಶಿಪುರ ವೃತ್ತ, ಶಿವಮೊಗ್ಗ–577204

ಐ.ಎಫ್.ಟಿ ಸಂ : 06/2026–27 ದಿನಾಂಕ : 15.06.2026

ಸೆಕ್ಷನ್1: ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್ಮೆಂಟ್)– ಕೆಡಬ್ಲ್ಯೂ –3 & ಕೆಡಬ್ಲ್ಯೂ –4 ಮೂರನೇ/ ಎರಡನೇ ಕರೆ

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲ್ಯೂ–3/4 ಅನ್ವಯ ಕ್ರಮವಾಗಿ ಶಿವಮೊಗ್ಗ ಉಪವಿಭಾಗದ ವ್ಯಾಪ್ತಿಯಲ್ಲಿನ 01 ಕಾಮಗಾರಿಯ ಹಾಗೂ ಶಿಕಾರಿಪುರ ಉಪವಿಭಾಗದ ವ್ಯಾಪ್ತಿಯಲ್ಲಿನ 01 ಕಾಮಗಾರಿಯ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಮೊತ್ತ ರೂ.80.52 ಲಕ್ಷದಿಂದ ರೂ.120.55 ಲಕ್ಷಗಳು. ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್ಮೆಂಟ್ ವೆಬ್‌ಸೈಟ್ ವಿಳಾಸ:http:/kppp.karnataka.gov.in ನಲ್ಲಿ ದಿನಾಂಕ:15.06.2026 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ:29.06.2026, 17:15 ಗಂಟೆ. ಟೆಂಡರ್‌ಗಳನ್ನು ತೆರೆಯುವ ದಿನಾಂಕ:30.06.2026, 17:30 ಗಂಟೆ. ಇನ್ನುಳಿದಂತೆ ವೈಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/–
ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತುಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ.71–06/ ಝೇಂಕಾರ್/2026–27

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, (ಜಿಲ್ಲಾ ನಗರಾಭಿವೃದ್ಧಿ ಕೋಶ ಹಾವೇರಿ ಜಿಲ್ಲೆ, ಹಾವೇರಿ)

Ph : 08375-249097 Fax : 08375-249088
e-mail : dc_haveri@yahoo.co.in

ನಂ:ಪುಸ(04)/ವಹಿ– /2026–27 ದಿನಾಂಕ : 15–06–2026

ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

Providing clothing and equipment needed for the rainy season and winter For P servants at CMC Haveri, TMC Byadagi, TMC Savanur TMC Hangal and TP Rattihalli ಕಾಮಗಾರಿಯ ಬಗ್ಗೆ ಈ ಕೆಳಗಿನ ಇಂಡೆಂಟ್ ನಂಬರನ್ ಕಾಮಗಾರಿಗೆ ಐಟಂವಾರು ಟೆಂಡರನ್ನು ದ್ವಿ–ಲಕೋಟೆ ಪದ್ಧತಿ (Double Cover System) KG-3 ರ ನಿಬಂಧನೆಗಳೊಂದಿಗೆ ಕೆಪಿಪಿ ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ.	ಇಂಡೆಂಟ್‌ಗಳು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)
1	DMA/2026-27/IND6234	**64.50**	**1.36**

(1) ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **26–06–2026**, Time 5.30 PM (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **30–06–2026** Time 10.30 AM (3) ಆರ್ಥಿಕ ಬಿಡ್ ತೆರೆಯುವ ದಿನಾಂಕ : **02–07–2026** Time 10.30 AM

ಟಿಪ್ಪಣಿ : (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಸದರಿ ಟೆಂಡರಗಳ ಯಾವುದೆ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ http://kppp.karnataka.gov.in ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು.

ಸಹಿ/– ಕಾರ್ಯಾಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ ಹಾವೇರಿ.

ವಾಸಾಸಂಇ/ಹಾವೇರಿ/163/ಕೆಎಸ್‌ಎಂಸಿಎ/2026–27

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ : ಕಲಬುರಗಿ.

(ಸಂಚಾರ (ವಾಣಿಜ್ಯ) ಇಲಾಖೆ)

ಕಕರಸಾ:ಕೇಕ:ಸಂಚಾರ:ವಾಣಿಜ್ಯ: 1188: 26–27 ದಿನಾಂಕ:17–06–2026

ಟೆಂಡರ್ ಪ್ರಕಟಣೆ ಸಂಖ್ಯೆ:: 02 /2026 (ಇ–ಪೋರ್ಟಲ್ ಮೂಲಕ)

ಕ.ಕ.ರ.ಸಾ. ನಿಗಮದ ವ್ಯಾಪ್ತಿಯಲ್ಲಿನ ಸಾಮಾನ್ಯ, ವೇಗದೂತ ಹಾಗೂ ನಗರ ಸಾರಿಗೆ ವಾಹನಗಳು ಸೇರಿದಂತೆ ಒಟ್ಟು 1500 ಬಸ್ಸುಗಳ ಒಳ ಮತ್ತು ಹೊರ ಭಾಗದಲ್ಲಿ ಜಾಹೀರಾತು ಅಳವಡಿಸಲು ಐದು (5) ವರ್ಷಗಳ ಅವಧಿಗೆ ಪರವಾನಗಿ ಪಡೆಯಲು, ಆಸಕ್ತ ಮತ್ತು ಅರ್ಹ ಬಿಡ್‌ದಾರರಿಂದ ಇ–ಪೋರ್ಟಲ್ ವೆಬ್ ಸೈಟ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ಪ್ರತಿ ಬಸ್ಸಿಗೆ ನಿಗದಿತ ಮಿತವ್ಯಯ ಮಾಸಿಕ ಪರವಾನಗಿ ಶುಲ್ಕ ರೂ. 2044/– (ತೆರಿಗೆ ಹೊರತುಪಡಿಸಿ), 2. ಒಂದು ವರ್ಷದ ಪರವಾನಿಗೆ ಅವಧಿಯ ನಂತರ ಎರಡನೇ ವರ್ಷಕ್ಕೆ ಮಾಸಿಕ ಶುಲ್ಕದ ಮೇಲೆ ಶೇ.5 ರಷ್ಟು ಹೆಚ್ಚುವರಿ ಶುಲ್ಕ ಪಾವತಿಸುವುದು. ತದನಂತರ ಪ್ರತಿ ವರ್ಷ ಶೇ.10 ರಷ್ಟು ಮಾಸಿಕ ಶುಲ್ಕ ಹೆಚ್ಚಿಸುವುದು. 3. ಇ.ಎಂ.ಡಿ. ಮೊತ್ತ ರೂ. **20,00,000/–** (ಇಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ), 4. ನಿಗದಿತ ದಿನಾಂಕ ಮತ್ತು ಸಮಯ:

ವಿಷಯ	ದಿನಾಂಕ	ಸಮಯ
ಬಿಡದಾರರು ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ	08.07.2026	17:00
ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ & ಸಮಯ	10.7.2026	11:00
ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ & ಸಮಯ	14.7.2026	11:00

5. ತಾಂತ್ರಿಕ ಬಿಡ್‌ನಲ್ಲಿ ಅರ್ಹವಾಗುವ ಬಿಡ್‌ದಾರರುಗಳ ಆರ್ಥಿಕ ಬಿಡ್‌ನ್ನು ಮಾತ್ರ ತೆರೆಯಲಾಗುವುದು. 6. ಟೆಂಡರ್ ಸಂಬಂಧಿತ ದಾಖಲಾತಿಗಳು, ಷರತ್ತು & ನಿಬಂಧನೆಗಳು ಮತ್ತು ಇತರೆ ದಾಖಲಾತಿಗಳನ್ನು ಇ.ಪ್ರಕ್ಯೂರ್‌ಮೆಂಟ್‌ನ ವೆಬ್‌ಸೈಟ್ : www.eproc.karnataka.gov.in, ಮುಖೇನ ಪಡೆದುಕೊಳ್ಳಬಹುದಾಗಿರುತ್ತದೆ. 7. ಯಾವುದೇ ಕಾರಣ ನೀಡದೆ ಎಲ್ಲಾ ಟೆಂಡರ್‌ನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ. 8. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ, ಉಪ ಮುಖ್ಯ ಸಂಚಾರ ವ್ಯವಸ್ಥಾಪಕರು–7760909013 ವಿಭಾಗೀಯ ಸಂಚಾರ ಅಧಿಕಾರಿಗಳು –7760992024, ಇ–ಮೇಲ್ ವಿಳಾಸ: ctmnekrtcglb@gmail.com

ಸಹಿ/– ಮುಖ್ಯ ಸಂಚಾರ ವ್ಯವಸ್ಥಾಪಕರು
ಕೇಂದ್ರ ಕಛೇರಿ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/224/ಕೆ.ಎಸ್.ಎಂ.ಸಿ.&ಎ/2026–27

Miscellaneous No. 48/2024
(In OS No. 146/2023)

IN THE COURT OF THE I-ADDL SENIOR CIVIL JUDGE AND JMFC HUBBALLI AT: HUBBALLI.

Petitioners : 1) **Smt Basavva W/o Channappagouda Shiddanagoudra (Arrayed as Paravva W/o Channappagouda Shiddanagoudra in OS 146/2023) and others**

V/s.

Respondents :1. **Shiddanagouda S/o Goudappagouda Shiddangoudra and others.**

Respondent No. **2A. Smt Paravva W/o Mallanagouda Shiddangoudra,** Age: 68 years, Occupation: Agriculture, R/o: Noolvi, Tq:Hubballi, Dist: Dharwad

Respondent No. **2D. Kalmeshagouda S/o. Mallanagouda Shiddangoudra,** Age: 44 years, Occupation: Agriculture,R/o: Noolvi, Tq:Hubballi, Dist: Dharwad.

SUIT SUMMONS UNDER ORDER V RULE 20(1-A) OF CIVIL PROCEDURE CODE

Whereas the above named Petitioners has instituted the above Miscellaneous Petition for restoration of Original suit 146/2023 against you and others. You are hereby summoned, to appear before this court in person or through pleader on 6th day of July 2026 at 11 am, to answer the same, failing which the Miscellaneous petition will be disposed of ex-parte.

Given under my hand & seal of the court, this day of 17-06-2026.

COURT SEAL

By order of the Court
Sd/- Shirestedar
Principal Sr. Civil Judge & JMFC Hubballi

M. S Halemani.
Advocate for Petitioners

ಮಾನ್ಯ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ, ಶಿವಮೊಗ್ಗ

ಮಿಸ್.ನಂ : 22/2025

ಅರ್ಜಿದಾರರು : ರವಿ ವೆಂಕಟರಮಣ ಹೆಗ್ಡೆ ಮತ್ತು ಒಬ್ಬರು.

ವಿರುದ್ಧ

ಎದುರುದಾರರು : ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಕೂಡಲಿ ಶೃಂಗೇರಿ ಮಹಾಸಂಸ್ಥಾನ ದಕ್ಷಿಣ ಮಾನ್ಯ ಶ್ರೀ ಶಾರದಾ ಪೀಠಂ ಮತ್ತು ಇತರರು.

5 ಮತ್ತು 13ನೇ ಎದುರುದಾರರಿಗೆ ನೋಟೀಸು

ಎದುರುದಾರ 5 : ಶ್ರೀ ಕೇಶವ ಪ್ರಸಾದ್ ಹೆಚ್.ಎಸ್. ಬಿನ್ ಸುಬ್ಬರಾವ್ ಹೆಚ್.ಎಲ್. ಸುಮಾರು 44 ವರ್ಷ, ವಕೀಲರು. ವಾಸ: 407, ಶ್ರೀಮಾತಾ ಎನ್‌ಕ್ಲೇವ್, ಗೋಪಾಲಕೃಷ್ಣ ಲೇಔಟ್, ಸೂರ್ಪುರ, ಉತ್ತರಹಳ್ಳಿ, ಬೆಂಗಳೂರು–560061.

ಎದುರುದಾರ 13 : ಶ್ರೀಮತಿ ರಮ್ಯ ಅನಿಲ್‌ಕುಮಾರ್, ಕೋಂ ಅನಿಲ್‌ಕುಮಾರ್, ಸುಮಾರು 45 ವರ್ಷ, 4ನೇ ತಿರುವು, 7ನೇ ಮೈನ್, ಅಟ್ಟೂರು ಲೇಔಟ್, ಯಲಹಂಕ, ಬೆಂಗಳೂರು–560064.

★★★

ಎದುರುದಾರರಾದ ಮೇಲ್ಕಾಣಿಸಿದ 5 ಮತ್ತು 13ರವರಿಗೆ ಈ ಮೂಲಕ ತಿಳಿಸುವುದೇನೆಂದರೆ ಅರ್ಜಿದಾರರಾದ ರವಿ ವೆಂಕಟರಮಣ ಹೆಗ್ಡೆ ಮತ್ತು ಒಬ್ಬರು ಎದುರುದಾರರಾದ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಕೂಡಲಿ ಶೃಂಗೇರಿ ಮಹಾಸಂಸ್ಥಾನಂ ದಕ್ಷಿಣ ಮಾನ್ಯ ಶ್ರೀ ಶಾರದಾ ಪೀಠಂ ಕೂಡ್ಲಿ, ಶಿವಮೊಗ್ಗ ತಾಲ್ಲೂಕು, ಇದರ ವಹಿವಾಟು ಮತ್ತು ಆಡಳಿತಕ್ಕೆ ಸಂಬಂಧಪಟ್ಟಂತೆ ಮೇಲ್ಕಾಣಿಸಿದ ಪ್ರಕರಣವನ್ನು ದಾಖಲಿಸಲು ಅನುಮತಿ ಕೋರಿ ಮತ್ತು ಪರಿಹಾರ ಕೋರಿ ಸಿವಿಲ್ ಪ್ರಕ್ರಿಯಾ ಸಮಿತಿ ಕಲಂ 95ರ ಮೇರೆಗೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯ ವಿಚಾರಣೆಯು ತಮ್ಮ ಹಾಜರಾತಿಗೆಂದು ದಿನಾಂಕ:08-07-2026 ರಂದು ನಿಗದಿಯಾಗಿರುತ್ತದೆ. ಸದರಿ ದಿನಾಂಕದಂದು ತಾವಾಗಲಿ ಅಥವಾ ತಮ್ಮಿಂದ ನೇಮಿಸಲ್ಪಟ್ಟ ವಕೀಲರ ಮುಖಾಂತರವಾಗಲಿ ಮೇಲ್ಕಾಣಿಸಿದ ನ್ಯಾಯಾಲಯದ ಆವರಣದಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಜರಿದ್ದು, ತಮ್ಮ ತಕರಾರುಗಳೇನಾದರೂ ಇದ್ದಲ್ಲಿ ಸಲ್ಲಿಸಲು ಈ ಮೂಲಕ ತಿಳುವಳಿಕೆ ನೀಡಲಾಗಿದೆ.

ವೆಂಕಟರಾಮು ಎನ್.
ಅರ್ಜಿದಾರರ ಪರ ವಕೀಲರು
ಶಿವಮೊಗ್ಗ
ದಿನಾಂಕ:17-06-2026

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಮಾನ್ಯ ಜಿಲ್ಲಾ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009

ಸಂ: ಕೆಆರ್‌ಐಡಿಎಲ್/ಎಡಿಎಂ/ಟಿಎನ್‌ಡಿ/ಇನ್ಸುರೆನ್ಸ್/2026–27 ದಿನಾಂಕ: 16.06.2026

ಸಮೂಹ ಆರೋಗ್ಯ ವಿಮೆ ಮತ್ತು ಸಮೂಹ ವೈಯಕ್ತಿಕ ಅಪಘಾತ ವಿಮೆ ಒದಗಿಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕೆಆರ್‌ಐಡಿಎಲ್, ಈ ಕೆಳಗಿನ ವಿಷಯಗಳಲ್ಲಿ ಸಾಕಷ್ಟು ಅನುಭವ ಹೊಂದಿರುವ ಆಸಕ್ತ ಬಿಡ್‌ದಾರರು/ವೈದ್ಯಕೀಯ ವಿಮೆ ಒದಗಿಸುವವರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಿದೆ.

1. ಕೆಆರ್‌ಐಡಿಎಲ್‌ನ ಎಲ್ಲಾ ಖಾಯಂ ನೌಕರರು/ಅಧಿಕಾರಿಗಳು ಮತ್ತು ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ಸಮೂಹ ಆರೋಗ್ಯ ವಿಮಾ ಪಾಲಿಸಿ.
2. ಕೆಆರ್‌ಐಡಿಎಲ್‌ನ ಎಲ್ಲಾ ಖಾಯಂ ನೌಕರರು/ಅಧಿಕಾರಿಗಳಿಗೆ ಸಮೂಹ ವೈಯಕ್ತಿಕ ಅಪಘಾತ ವಿಮಾ ಪಾಲಿಸಿ.

ಟೆಂಡರ್‌ಗೆ ಇಡಲಾದ ಇಎಂಡಿ: ರೂ. **65,000/–**

ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳಿಗೆ ದಯವಿಟ್ಟು ಕೆಪಿಪಿ ಪೋರ್ಟಲ್: **www.kppp.karnataka.gov.in** ನಲ್ಲಿ ಪರಿವೀಕ್ಷಿಸಬಹುದು. ಸಹಾಯವಾಣಿ ಸಂಖ್ಯೆ: +91 92402 10000, +91 92402 14001.

- ವಿಚಾರಣೆಗೆ ಕೊನೆಯ **ದಿನಾಂಕ:24.06.2026, ಮಧ್ಯಾಹ್ನ 3.30 ಗಂಟೆ**
- ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 24.06.2026 ಸಂಜೆ 4.30 ಗಂಟೆವರೆಗೆ.**
- ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:29.06.2026 ಸಂಜೆ 4.30 ಗಂಟೆಗೆ.**
- ಆರ್ಥಿಕ ಬಿಡ್ ತೆರೆಯುವ **ದಿನಾಂಕ: 30.06.2026 ಸಂಜೆ 4.30 ಗಂಟೆಗೆ.**

ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ :
ಮುಖ್ಯ ಆಡಳಿತಾಧಿಕಾರಿ,
ಕೆಆರ್‌ಐಡಿಎಲ್, ಬೆಂಗಳೂರು–09. ದೂ.ಸಂಖ್ಯೆ: 080–28015607/9900531002

ಸಹಿ/– ಮುಖ್ಯ ಅಭಿಯಂತರರು (ಬೆಂಗಳೂರು)

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮಂಡ್ಯ–571401

Autonomous Medical Institution, Government of Karnataka)
Phone No: 08232-231003, 222086,231197, 224040, Fax-08232-231001
E-mail: mimsmandyaoffice@gmail.com, Website: www.mimsmandya@gmail.com

ಸಂಖ್ಯೆ:ಮಿಮ್ಸ್/ಸರಬ–ಡಿ/Biochem+Physio+Microಇ–ಟೆಂ/02/2026–27 ದಿನಾಂಕ:15.06.2026

ಇ–ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ **ಜೀವರಾಸಾಯನ ಶಾಸ್ತ್ರ, ಶರೀರ ಕ್ರಿಯಾ ಶಾಸ್ತ್ರ, ಮೈಕ್ರೋಬಯಾಲಜಿ, ವಿಭಾಗಗಳು ಸಾರ್ವಜನಿಕ ರೋಗಿಗಳ ವಿವಿಧ ಚಿಕಿತ್ಸೆಗಳಿಗಾಗಿ ಅವಶ್ಯವಿರುವ Lab Items** ಗಳನ್ನು (ಅಂದಾಜು ಮೊತ್ತ **ರೂ.75.00 ಲಕ್ಷಗಳು**) ಸರಬರಾಜು ಮಾಡಲು ಉತ್ಪಾದಕರವರಿಂದ / ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಮತ್ತಿತ್ತರ ವಿವರಗಳನ್ನು ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ

ವಾಸಾಸಂಇ/ಮಂಡ್ಯ/ಶಿರಡಿಸಾಯಿ/213/2026–27

ಕರ್ನಾಟಕ ಸರ್ಕಾರ

ರಾಯಚೂರು ಮಹಾನಗರ ಪಾಲಿಕೆ

E-mail:itstaff_ulb_raichurn@yahoo.com Website:-www.raichurcity.gov.in
Phone No:08532-226768 Fax No:08532-226316

ಸಂ.ರಾಮಪ/ತಾಂತ್ರಿಕ/ಮ.ನಿ/2026–27 ದಿನಾಂಕ:16–06–2026.

ಮರು ಟೆಂಡರ್ / ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ ಮರು ಟೆಂಡರ್ / ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಗುತ್ತಿಗೆದಾರರು WWW.KPPP. Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity. mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	2024–25 15ನೇ ಹಣಕಾಸು ಎನ್.ಎಂ.ಪಿ.ಸಿ ಅನುದಾನ	Procurement of 01 No Mechanical Street Sweeping Machine that uses Mechanical Conveyor for transfer of dirt tier-4 auxiliary engine, conveyor, dual and 02 side brooms, 01-Rear broom with 3.5 CUM Capacity Dirt Hopper with High raised and side ways dumping feature chassis minimum 11 ton Capacity BS-6 **Estimate Cost Rs.146,08,000/-**	DMA/2026-27/ IND6359
2	ಮಹಾನಗರ ಪಾಲಿಕೆ ಅನುದಾನದಲ್ಲಿ	Procurement of Vehicles for Official Use, Field Inspection, Monitoring and Administrative Functions of Various Departments of Raichur City Corporation. **Estimate Cost Rs.72,00,000/-**	DMA/2026-27/ IND6334
3	ಮಹಾನಗರ ಪಾಲಿಕೆ ಅನುದಾನದಲ್ಲಿ	Animal Birth Control ABC Surgery for Stray Dogs and ARV Vaccination Animal Birth Control Programme In Various Places Raichur City Corporation Limits **Estimate Cost Rs. 27,50,000/-**	DMA/2025-26/ SE7607 /CALL-2
4	2024–25, 2025–26 ಎಸ್.ಸಿ.ಪಿ ಕೆ.ಕೆ.ಆರ್.ಡಿ.ಬಿ ಅನುದಾನ.	Request for proposal (RFP) for Selection of an NGO for the Community Engagement and Awareness Campaign to Address The Problem of Synthetic Toddy Consumption in Harijanwada-1, Harijanwada 2, and Devinagar wards in Urban Raichur- 2 year programme **Estimate Cost Rs.1,02,47,600/-**	DMA/2025-26/ SE7491 /CALL-2

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.

DIP/RCR/128/KSMCA/130/2026-27

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ – 580025 ದೂರವಾಣಿ : 0836–2222392
ವೆಬ್‌ಸೈಟ್ : www.kslu.karnataka.gov.in ಇ–ಮೇಲ್ : kslu.registrar@gmail.com

ಸಂಖ್ಯೆ: ಕರಾಕಾವಿ/ಕು.ಸ/.ಟೆ.ಪ್ರ/2026–27/380 ದಿನಾಂಕ : 17.06.2026

ಮರು ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಾಗಿ "ಇ ಪ್ರೊಕ್ಯುರಮೆಂಟ್" ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ KW-2 ಮುಖಾಂತರ ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಕಾಮಗಾರಿಯ ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) (ಜಿಎಸ್‌ಟಿ ಹೊರತುಪಡಿಸಿ)	ಇಎಮ್‌ಡಿ ಮೊತ್ತ (ರೂ. ಗಳಲ್ಲಿ)	ಬಿಡ್ ಸಲ್ಲಿಸಲು ಅಂತಿಮ ದಿನಾಂಕ	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	ಆರ್ಥಿಕ ಬಿಡ್ ತೆರೆಯುವ ದಿನಾಂಕ
1.	Providing Parking facilities for Staff in the premises of New law school building, KSLU Navanagar, Hubli (KSLU/2024-25/BD/WORK_INDENT 15 CALL - 2)	**40.51**	**81,100.00**	**07/07/2026**	**08/07/2026**	**09/07/2026**

ಈ ಮೇಲ್ಕಂಡ ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ ಪ್ರೋಕ್ಯೂರಮೆಂಟ್" https://kppp.karnataka.gov.in ವೆಬ್‌ಸೈಟ್‌ನಲ್ಲಿ ವಿವರಗಳನ್ನು ದಿನಾಂಕ : **17/06/2026** ರ ಸಂಜೆ 5.30 ಗಂಟೆಯಿಂದ Download ಮಾಡಿಕೊಳ್ಳಬಹುದು. ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : **06/07/2026** (ಸಂಜೆ 5:30 ಗಂಟೆಯವರೆಗೆ) ಹಾಗೂ ಹೆಚ್ಚಿನ ವಿವರಗಳನ್ನು ಸ್ಥಾನಿಕ ಅಭಿಯಂತರರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ ಈ ವಿಭಾಗದಿಂದ ಮುಂಜಾನೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ (ರಜೆ ದಿನಗಳನ್ನು ಹೊರತುಪಡಿಸಿ) ಪಡೆದುಕೊಳ್ಳಬಹುದು.

ವಾಸಾಸಂಇ/ಧಾ/323/ಕೆಎಸ್‌ಎಂಸಿಎ/2026–27 ಸಹಿ/– ಕುಲಸಚಿವರು

ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು. ದೂರವಾಣಿ : 0816 – 2278387,
ಇ–ಮೇಲ್ : dhotumkur@gmail.com

ಸಂಖ್ಯೆ : ಜಿ.ಆ.ತು./ಸಿ(1)/08/2026–27 ದಿನಾಂಕ : 12–06–2026

ನೇಮಕಾತಿ ಪ್ರಕಟಣೆ

ಸರ್ಕಾರದ ಆದೇಶ ಸಂಖ್ಯೆ : ಆ.ಕು.ಕ. 619 ಹೆಚ್.ಎಸ್.ಹೆಚ್. 2022 ಬೆಂಗಳೂರು, ದಿನಾಂಕ : 17–01–2024 ಹಾಗೂ ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ : HFM/MOS/MIS/05/2026-27 ದಿನಾಂಕ : 08–06–2026 ರ ಆದೇಶನುಸಾರ ತುಮಕೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಅಧೀನದಲ್ಲಿನ 18 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಹಾಗೂ ಸಾರ್ವಜನಿಕ ಆಸ್ಪತ್ರೆಗಳಲ್ಲಿನ 17 ತಜ್ಞ ವೈದ್ಯರುಗಳ (ರೇಡಿಯಾಲಜಿಸ್ಟ್ – 04, ಮಕ್ಕಳ ತಜ್ಞರು – 07, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು – 01, ಚರ್ಮರೋಗ ತಜ್ಞರು – 01, ಅರವಳಿಕೆ – 03, ಜನರಲ್ ಸರ್ಜನ್ – 01), ಎದುರು ಹುದ್ದೆಗೆ ಎಂ.ಬಿ.ಬಿ.ಎಸ್. ವಿದ್ಯಾರ್ಹತೆ ಹೊಂದಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳಿಗೆ ಮಾಸಿಕ ರೂ. 60,000/–, ಹಾಗೂ ಸ್ನಾತಕೋತ್ತರ ಪದವಿ ಹೊಂದಿರುವ ತಜ್ಞ ವೈದ್ಯರುಗಳಿಗೆ ಮಾಸಿಕ ರೂ. 1,10,000/– ರಂತೆ ಸಂಚಿತ ವೇತನದಲ್ಲಿ ಗುತ್ತಿಗೆ ಆಧಾರದ ಮೇಲೆ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಒಂದು ವರ್ಷದ ಅವಧಿಗೆ Walk in Interview (ನೇರ ಸಂದರ್ಶನದ) ಮೂಲಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ದಿನಾಂಕ : 22–06–2026 ರ ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಆವರಣದಲ್ಲಿ ನೇರ ಸಂದರ್ಶನದ ಏರ್ಪಡಿಸಲಾಗಿದ್ದು, ಅರ್ಹ ಅಭ್ಯರ್ಥಿಗಳೂ ಬೆಳಿಗ್ಗೆ 10.00 ಗಂಟೆಗೆ ಹಾಜರಾಗಿ ಹೆಸರನ್ನು ನೊಂದಾಯಿಸಿಕೊಂಡು ಸಂದರ್ಶನಕ್ಕೆ ಹಾಜರಾಗಲು ಸೂಚಿಸಿದೆ. ಸಂದರ್ಶನದ ಸಮಯದಲ್ಲಿ ಎಲ್ಲಾ ಮೂಲ ದಾಖಲಾತಿಗಳನ್ನು, ಮತ್ತು ದೃಢೀಕೃತ ಜೆರಾಕ್ಸ್ ದಾಖಲಾತಿಗಳನ್ನು, ಮೀಸಲಾತಿ ಕೋರುವವರು ಮೀಸಲಾತಿ ಪ್ರಮಾಣ ಪತ್ರವನ್ನು ಸಂದರ್ಶನದ ಸಮಯದಲ್ಲಿ ಕಡ್ಡಾಯವಾಗಿ ಪರಿಶೀಲನೆಗೆ ಸಲ್ಲಿಸತಕ್ಕದ್ದು.

ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಮೊಬೈಲ್ ಸಂಖ್ಯೆ: 94498 43064.

ಸಹಿ/–ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು.

ಡಿಐಪಿಆರ್/ತುಮಕೂರು/38/ಮಣಿಪಾಲ್/2026–27

ಗುರುವಾರದ ಪಂದ್ಯ
- ಉಜ್ಬೇಕಿಸ್ತಾನ-ಕೊಲಂಬಿಯಾ (ಬೆಳಗ್ಗೆ 7:30)
- ಜೆಕ್-ದ.ಆಫ್ರಿಕಾ (ಬೆಳಗ್ಗೆ 9:30)

ಗುರುವಾರ ಮಧ್ಯ ರಾತ್ರಿ
- ಸ್ವಿಟ್ಜರ್ಲೆಂಡ್-ಬೋಸ್ನಿಯಾ ಮತ್ತು ಹರ್ಜೆಗೋವಿನಾ (12:30)
- ಕೆನಡಾ-ಕತಾರ್ (3:30)

• **ಕಾನ್ಸಾಸ್ ಸಿಟಿ:** ಜಗತ್ತಿನ ಫುಟ್‌ಬಾಲ್ ಅಭಿಮಾನಿಗಳಿಗೆ ಮಂಗಳವಾರದ ರಾತ್ರಿ ಹಬ್ಬ. ಒಂದು ಕಡೆ ಲಿಯೋನೆಲ್ ಮೆಸ್ಸಿ ಅಬ್ಬರವಾದರೆ ಮತ್ತೊಂದು ಕಡೆ ಎಂಬಾಪ್ಪೆಯ ಜಾದೂ. ಫಿಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಮನರಂಜನಾ ಅಬ್ಬರವೇ ನಡೆಯಿತು. ಬ್ಲಾಕ್‌ಬಸ್ಟರ್ ದಿನದಂದು ಮೊದಲ ಪಂದ್ಯದಲ್ಲಿ ಫ್ರಾನ್ಸ್ ಹಾಗೂ ಸೆನೆಗಲ್ ಎದುರಾಗಿದ್ದವು. ಅದರಲ್ಲಿ ಬಲಿಷ್ಠ ಫ್ರಾನ್ಸ್ ಗೆಲುವು ಸಾಧಿಸಿತು. ಎಂಬಾಪ್ಪೆ 2 ಗೋಲು ಗಳಿಸಿದರು. ಮತ್ತೊಂದು ಪಂದ್ಯದಲ್ಲಿ ಅಲ್ಜೀರಿಯಾ ಮತ್ತು ಅರ್ಜೆಂಟೀನಾ ಎದುರಾಗಿದ್ದವು. ಅದರಲ್ಲಿ ಗ್ರೇಟೆಸ್ಟ್ ಆಫ್ ಆಲ್ ಟೈಮ್ (ಗೋಟ್) ಮೆಸ್ಸಿ ಹ್ಯಾಟ್ರಿಕ್ ಗೋಲು ಬಾರಿಸಿ ದಾಖಲೆಗಳ ಸುರಿಮಳೆಗೈದರು. ಮೂರನೇ ಪಂದ್ಯದಲ್ಲಿ ಇರಾಕ್ ಮತ್ತು ನಾರ್ವೆ ಎದುರಾಗಿದ್ದವು. ಅಲ್ಲಿ ನಾರ್ವೆ 4-1ರಿಂದ ಗೆಲುವು ಸಾಧಿಸಿದೆ. ಜಾರ್ಡನ್ ತಂಡವನ್ನು ಎದುರಿಸಿದ್ದ ಆಸ್ಟ್ರಿಯಾ 3-1ರಿಂದ ಗೆಲುವು ಸಾಧಿಸಿದ ನಂತರ ಫಿಫಾ ವಿಶ್ವಕಪ್ ರೋಚಕತೆಯಲ್ಲೇ ಮುಳುಗಿತ್ತು.

ಲಿಯೋ ಹ್ಯಾಟ್ರಿಕ್ | ದ್ವಿಗೋಲು ಗಳಿಸಿದ ಫ್ರಾನ್ಸ್ ತಾರೆ
ಅರ್ಜೆಂಟೀನಾ, ಫ್ರಾನ್ಸ್, ನಾರ್ವೆ, ಆಸ್ಟ್ರೀಯಾಗೆ ಗೆಲುವು

ಮೆಸ್ಸಿ ಮ್ಯಾಜಿಕ್, ಎಲೈಟ್ ಎಂಬಾಪ್ಪೆ



ಅಬ್ಬಾ..! ಎಂಬಾಪ್ಪೆ

• **(ಅಮೆರಿಕಾ):** ಸ್ಟಾರ್ ಆಟಗಾರ ಕಿಲಿಯನ್ ಎಂಬಾಪ್ಪೆ ಅವರ ದ್ವಿಗೋಲು ಪ್ರದರ್ಶನದ ನೆರವಿನಿಂದ ಫ್ರಾನ್ಸ್ ತಂಡ ಐ ಗುಂಪಿನ ತನ್ನ ಮೊದಲ ಪಂದ್ಯದಲ್ಲಿ ಸೆನೆಗಲ್ ವಿರುದ್ಧ 3-1 ಅಂತರದ ಭರ್ಜರಿ ಗೆಲುವು ದಾಖಲಿಸಿತು. ಮೊದಲಾರ್ಧದಲ್ಲಿ ಎರಡೂ ತಂಡಗಳು ಗೋಲು ಗಳಿಸಲು ವಿಫಲವಾದವು. 66ನೇ ನಿಮಿಷದಲ್ಲಿ ಕಿಲಿಯನ್ ಎಂಬಾಪ್ಪೆ ಗೋಲು ಬಾರಿಸಿ ಫ್ರಾನ್ಸ್‌ಗೆ ಮುನ್ನಡೆ ಒದಗಿಸಿದರು. 82ನೇ ನಿಮಿಷದಲ್ಲಿ ಬದಲಿ ಆಟಗಾರ ಬ್ರಾಡ್ಲಿ ಬಾರ್ಕೋಲಾ ಗೋಲು ಗಳಿಸಿ ಮುನ್ನಡೆಯನ್ನು 2-0ಕ್ಕೆ ವಿಸ್ತರಿಸಿದರು. ಹೆಚ್ಚುವರಿ ವೇಳೆಯ 5ನೇ ನಿಮಿಷದಲ್ಲಿ ಇಬ್ರಾಹಿಂ ಮ್ಬಾಯೆ ಗೋಲು ಬಾರಿಸಿ ಸೆನೆಗಲ್‌ಗೆ ಆಸರೆಯಾದರು. ಆದರೆ ಒಂದು ನಿಮಿಷದ ಬಳಿಕ ಎಂಬಾಪ್ಪೆ ದೂರದ ಶಾಟ್ ಮೂಲಕ ಮತ್ತೊಂದು ಅದ್ಭುತ ಗೋಲು ದಾಖಲಿಸಿ ಫ್ರಾನ್ಸ್‌ನ ಗೆಲುವು ಖಚಿತಪಡಿಸಿದರು.

ಫ್ರಾನ್ಸ್ ಅಬ್ಬರ

ವಿಶ್ವಕಪ್ ಇತಿಹಾಸದಲ್ಲಿ 14ನೇ ಗೋಲು ದಾಖಲಿಸಿದ ಎಂಬಾಪ್ಪೆ, ಲಿಯೊನೆಲ್ ಮೆಸ್ಸಿ ಮತ್ತು ಪೀಲೆ ಅವರ ಸಾಧನೆಯನ್ನು ಹಿಂದಿಕ್ಕಿದರು.

ಫ್ರಾನ್ಸ್ 3-1 ಸೆನೆಗಲ್
- ಕಿಲಿಯನ್ ಎಂಬಾಪ್ಪೆ (66, 90+6)
- ಬ್ರಾಡ್ಲಿ ಬಾರ್ಕೋಲಾ (82)
- ಇಬ್ರಾಹಿಂ ಮ್ಬಾಯೆ (90+5): ಸೆನೆಗಲ್ ದಾಖಲೆ

- ಜರ್ಮನಿಯ ದಂತಕಥೆ ಗೆರ್ಡ್ ಮುಲ್ಲರ್ ಅವರ ವಿಶ್ವಕಪ್ ಗೋಲುಗಳ ದಾಖಲೆಯನ್ನು ಸರಿಗಟ್ಟಿದರು.
- ಬ್ರೆಜಿಲ್‌ನ ರೊನಾಲ್ಡೊ (15) ಮತ್ತು ಜರ್ಮನಿಯ ಮಿರೋಸ್ಲಾವ್ ಕ್ಲೋಸೆ (16) ಮಾತ್ರ ಈಗ ಎಂಬಾಪ್ಪೆಗಿಂತ ಮುಂದಿದ್ದಾರೆ.
- ಅಂತಾರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ 58ನೇ ಗೋಲು ಬಾರಿಸಿದ ಎಂಬಾಪ್ಪೆ, ಫ್ರಾನ್ಸ್ ಪರ ಅತಿ ಹೆಚ್ಚು ಗೋಲು ಗಳಿಸಿದ ಆಟಗಾರರ ಪಟ್ಟಿಯಲ್ಲಿ ಹೊಸ ದಾಖಲೆ ಬರೆದರು.

ಹಾಲಿ ಚಾಂಪಿಯನ್ನರ ಶುಭಾರಂಭ

• **ಕಾನ್ಸಾಸ್ ಸಿಟಿ:** ವಿಶ್ವಕಪ್‌ನ ಮೊದಲ ಪಂದ್ಯದಲ್ಲೇ ಮೆಸ್ಸಿ ಅಬ್ಬರ ಶುರುವಾಗಿದ್ದಾಯಿತು. ಮೈದಾನಕ್ಕಿಳಿದ ಕ್ಷಣವೇ ತಮ್ಮ ಅನುಭವದ ಮೂಲಕ ಚಮತ್ಕಾರಗಳನ್ನು ಮಾಡಲು ಶುರು ಮಾಡಿರುವ ಮೆಸ್ಸಿ ಹ್ಯಾಟ್ರಿಕ್ ಗೋಲು ಬಾರಿಸಿದರು. ಹಾಲಿ ಚಾಂಪಿಯನ್ ಅರ್ಜೆಂಟೀನಾ ತಂಡವು ತನ್ನ ವಿಶ್ವಕಪ್ ಅಭಿಯಾನವನ್ನು ಭರ್ಜರಿಯಾಗಿ ಆರಂಭಿಸಿದ್ದು, ಅಲ್ಜೀರಿಯಾವನ್ನು 3-0 ಗೋಲುಗಳಿಂದ ಮಣಿಸಿದೆ. ಈ ಪಂದ್ಯದಲ್ಲಿ ನಾಯಕ ಲಿಯೊನೆಲ್ ಮೆಸ್ಸಿ ಹ್ಯಾಟ್ರಿಕ್ ಸಾಧಿಸಿ ಇತಿಹಾಸ ನಿರ್ಮಿಸಿದರು.

ಮೆಸ್ಸಿ ಪಂದ್ಯದ ಆರಂಭದಲ್ಲೇ ಮೊದಲ ಗೋಲು ಬಾರಿಸಿ ಅರ್ಜೆಂಟೀನಾಗೆ ಮುನ್ನಡೆ ತಂದರು. ಎದುರಾಳಿಗೆ ಹೆಚ್ಚಿನ ಅವಕಾಶ ಸಿಗಲೇ ಇಲ್ಲ, ದ್ವಿತೀಯಾರ್ಧದ ಆರಂಭದಲ್ಲಿ ಮತ್ತೊಂದು ಗೋಲು ದಾಖಲಿಸಿ ಅಂತರ ಹೆಚ್ಚಿಸಿದರು. ಪಂದ್ಯ ಅಂತ್ಯದ ಕ್ಷಣಗಳಲ್ಲಿ ಮೂರನೇ ಗೋಲು ಬಾರಿಸಿ ವಿಶ್ವಕಪ್‌ನ ಮೊದಲ ಹ್ಯಾಟ್ರಿಕ್ ಪೂರ್ಣಗೊಳಿಸಿದರು. ಮೆಸ್ಸಿ ಇನ್ನೂ ಎರಡು ಬಾರಿ ಗೋಲು ಬಾರಿಸುವ ಅವಕಾಶ ಸೃಷ್ಟಿಸಿಕೊಂಡಿದ್ದರು. ಒಂದು ಗೋಲು ಆಫ್‌ಸೈಡ್ ಕಾರಣದಿಂದ ರದ್ದಾಯಿತು. ಅಲ್ಜೀರಿಯಾದ ಫಾರೆಸ್ ಚೈಬಿ ಆರಂಭದಲ್ಲೇ ಗೋಲು ಗಳಿಸಿದರೂ, ವೀಡಿಯೊ ಪರಿಶೀಲನೆಯಲ್ಲಿ ಆಫ್ ಸೈಡ್ ಎಂದು ತೀರ್ಪು ಬಂತು. ಮುಂದಿನ ಪಂದ್ಯದಲ್ಲಿಯೂ ಯಾವುದೇ ಗೋಲು ದಾಖಲಾಗಲೇ ಇಲ್ಲ. ಪರಿಣಾಮ ಪಂದ್ಯ ಅರ್ಜೆಂಟೀನಾ ಗೆದ್ದುಕೊಂಡಿತು.

ಇತಿಹಾಸ ಬರೆದ ಲೆಜೆಂಡ್: ಈ ಹ್ಯಾಟ್ರಿಕ್‌ನೊಂದಿಗೆ ಮೆಸ್ಸಿ ವಿಶ್ವಕಪ್ ಇತಿಹಾಸದಲ್ಲಿ 16 ಗೋಲುಗಳ ಸಾಧನೆ ಮಾಡಿ ಜರ್ಮನಿಯ ದಂತಕಥೆ ಮಿರೋಸ್ಲಾವ್ ಕ್ಲೋಸೆ ಅವರ ದಾಖಲೆಯನ್ನು ಸರಿಗಟ್ಟಿದರು. ಮೆಸ್ಸಿ ವಿಶ್ವಕಪ್‌ಗೆ ಪದಾರ್ಪಣೆ ಮಾಡಿದ ದಿನದಿಂದ ನಿಖರವಾಗಿ 20 ವರ್ಷಗಳ ನಂತರ ಈ ಸಾಧನೆ ಮಾಡಿದ್ದಾರೆ.

ಯಾರಿಗೆಷ್ಟು?
- ಅರ್ಜೆಂಟೀನಾ 3-0 ಅಲ್ಜೀರಿಯಾ
- ಲಿಯೊನೆಲ್ ಮೆಸ್ಸಿ 3 ಗೋಲುಗಳು (ಹ್ಯಾಟ್ರಿಕ್)
- 17ನೇ ನಿಮಿಷ
- 60ನೇ ನಿಮಿಷ
- 76ನೇ ನಿಮಿಷ

ನಾರ್ವೆಗೆ ಇರಾಕ್ ವಿರುದ್ಧ 4-1 ಜಯ

ನಾರ್ವೆ 4-1 ಇರಾಕ್



- ಎರ್ಲಿಂಗ್ ಹಾಲಾಂಡ್ (29, 45)
- ಲಿಯೋ ಒಸ್ಟಿಗಾರ್ಡ್ (76)
- ಕ್ರಿಸ್ಟಿಯನ್ ಥೋರ್ಸ್ಟ್‌ವೆಡ್ (90)
- ಐಮೆನ್ ಹುಸೇನ್(38), ಇರಾಕ್

• **ಫಾಕ್ಸ್‌ಬರೋ (ಅಮೆರಿಕ):** ಸ್ಟಾರ್ ಸ್ಟ್ರೈಕರ್ ಎರ್ಲಿಂಗ್ ಹಾಲಾಂಡ್ ಅವರ ದ್ವಿಗೋಲು ಹಾಗೂ ಒಂದು ಅಸಿಸ್ಟ್ ನೆರವಿನಿಂದ ನಾರ್ವೆ ತಂಡ ಐ' ಗುಂಪಿನ ಪಂದ್ಯದಲ್ಲಿ ಇರಾಕ್ ವಿರುದ್ಧ 4-1 ಅಂತರದ ಭರ್ಜರಿ ಗೆಲುವು ದಾಖಲಿಸಿತು. 29ನೇ ನಿಮಿಷದಲ್ಲಿ ಡೇವಿಡ್ ಮೊಲ್ಲರ್ ವೋಲ್ಫ್ ನೀಡಿದ ಕ್ರಾಸ್ ಅನ್ನು ಹಾಲಾಂಡ್ ನಾರ್ವೆಗೆ ಮುನ್ನಡೆ ತಂದರು. 38ನೇ ನಿಮಿಷದಲ್ಲಿ ಐಮೆನ್ ಹುಸೇನ್ ಹೆಡರ್ ಮೂಲಕ ಗೋಲು ಬಾರಿಸಿ ಇರಾಕ್‌ಗೆ ಸಮಬಲ ತಂದುಕೊಟ್ಟರು. ಮೊದಲಾರ್ಧದ ಅಂತ್ಯದ ವೇಳೆಗೆ ಇರಾಕ್ ರಕ್ಷಣಾ ವಿಭಾಗದ ತಪ್ಪನ್ನು ಬಳಸಿಕೊಂಡ ಹಾಲಾಂಡ್ ಮತ್ತೊಂದು ಗೋಲು ದಾಖಲಿಸಿ ನಾರ್ವೆಯನ್ನು ಮತ್ತೆ ಮುನ್ನಡೆಸಿದರು. 76ನೇ ನಿಮಿಷದಲ್ಲಿ ಮಾರ್ಟಿನ್ ಒಡೆಗಾರ್ಡ್ ಕಾರ್ನರ್ ಕಿಕ್‌ನಿಂದ ಲಿಯೋ ಒಸ್ಟಿಗಾರ್ಡ್ ಗೋಲು ಗಳಿಸಿದರು. ಅಂತಿಮ ಕ್ಷಣಗಳಲ್ಲಿ ಹಾಲಾಂಡ್ ನೀಡಿದ ಪಾಸ್ ಅನ್ನು ಕ್ರಿಸ್ಟಿಯನ್ ಥೋರ್ಸ್ಟ್‌ವೆಡ್ ಗೋಲಾಗಿ ಪರಿವರ್ತಿಸಿ ನಾರ್ವೆಯ ಗೆಲುವಿಗೆ ಹಾಕಿದರು.

- ಆಸ್ಟ್ರೀಯಾ 3-1 ಜಾರ್ಡನ್
- ರೋಮಾನೊ(ಆಸ್ಟ್ರೀಯಾ) 21ನೇ ನಿಮಿಷ
- ಒಲ್ವಾನ್(ಜಾರ್ಡನ್) 50ನೇ ನಿಮಿಷ
- ಮಾರ್ಕೋ(ಆಸ್ಟ್ರೀಯಾ) 90+11ನೇ ನಿಮಿಷ

ಆಸ್ಟ್ರೀಯಾ ಆರ್ಭಟ

ದಿನದ ಮತ್ತೊಂದು ಪಂದ್ಯದಲ್ಲಿ ಜಾರ್ಡನ್ ತಂಡವನ್ನು ಮಣಿಸಿರುವ ಆಸ್ಟ್ರೀಯಾ ವಿಶ್ವಕಪ್‌ನಲ್ಲಿ ಶುಭಾರಂಭ ಮಾಡಿತು. ಪಂದ್ಯದ 21ನೇ ನಿಮಿಷದ ವೇಳೆ ಆಸ್ಟ್ರೀಯಾದ ರೋಮಾನೊ ಗೋಲಿನೊಂದಿಗೆ ಮುನ್ನಡೆ ತಂದರು. 50ನೇ ನಿಮಿಷದಲ್ಲಿ ಜಾರ್ಡನ್‌ನ ಅಲಿ ಒಲ್ವಾನ್ ಗೋಲು ಗಳಿಸಿ ಸಮಬಲ ತಂದಿತ್ತರು. 76ನೇ ನಿಮಿಷದಲ್ಲಿ ಜಾರ್ಡನ್‌ನ ಯಝಾನ್ ಅಲ್-ಅರಬ್ ತಮ್ಮದೇ ಗೋಲು ಪೆಟ್ಟಿಗೆಗೆ ಬಾರಿಸಿ ಸೋಲು ಬರೆದರು. ಅಲ್ಲಿಗೆ ಆಸ್ಟ್ರೀಯಾ 2-1ರಿಂದ ಮುನ್ನಡೆ ಸಾಧಿಸಿತು. ಹೆಚ್ಚುವರಿ ಸಮಯದಲ್ಲಿ ಮಾರ್ಕೋ ಮತ್ತೊಂದು ಗೋಲು ಗಳಿಸಿದರು. ಅಲ್ಲಿಗೆ ಆಸ್ಟ್ರೀಯಾ 3-1ರಿಂದ ಪಂದ್ಯ ಗೆದ್ದು ಬೀಗಿತು.

- ತನ್ನದೇ ಗೋಲು ಪೆಟ್ಟಿಗೆ ಗೋಲು ಮಾಡಿದ ಜಾರ್ಡನ್!



ಆಫ್ಘನ್ ವಿರುದ್ಧ ಭಾರತಕ್ಕೆ 170ರನ್ ಭರ್ಜರಿ ಜಯ

• **ಲಖನೌ:** ನಾಯಕ ಶುಭಮನ್ ಗಿಲ್ 150 ರನ್ ಮತ್ತು ಇಶಾನ್ ಕಿಶನ್ ಅವರ ಶತಕದ ನೆರವಿಗೆ ಬೌಲರುಗಳ ಕರಾರುವಾಕ್ ದಾಳಿಯ ಸಾಥ್ ಸಿಕ್ಕ ನಂತರ ಭಾರತ ಅಫ್ಘಾನಿಸ್ತಾನ ವಿರುದ್ಧದ ಪಂದ್ಯದಲ್ಲಿ ಸರಳ ಗೆಲುವು ದಾಖಲಿಸಿ ಸರಣಿ ವಶಪಡಿಸಿಕೊಂಡಿದೆ.

ಬುಧವಾರದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿರುವ ಭಾರತ 49.5 ಓವರ್‌ಗಳಲ್ಲಿ 402 ರನ್‌ಗೆ ಆಲೌಟ್ ಆಯಿತು. ಗಿಲ್ 154, ಕಿಶನ್ 125 ರನ್ ಗಳಿಸಿದರು. ರೋಹಿತ್ ಶರ್ಮ 48 ರನ್ ಗಳಿಸಿದರು. ಅಫ್ಘಾನಿಸ್ತಾನ ಪರ ಕಾರೋಟೆ 4 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಅಫ್ಘಾನಿಸ್ತಾನ 44.3 ಓವರ್‌ಗಳಲ್ಲಿ 232 ರನ್‌ಗಳಿಗೆ ಆಲೌಟ್ ಆಯಿತು. ರೆಹಮತ್ ಶಾಹ್ 79 ರನ್ ಗಳಿಸಿದರು. ಭಾರತ ಪರ ಅರ್ಷದೀಪ್, ಗುರ್ನೂರ್ 3 ವಿಕೆಟ್ ಪಡೆದರೆ, ಪ್ರಿನ್ಸ್ ಯಾದವ್ 2, ಸುಂದರ್ 1 ವಿಕೆಟ್ ಕಿತ್ತರು.

ಅಫ್ಘಾನ್ ತತ್ತರ: ಗುರಿ ಬೆನ್ನತ್ತುವಾಗ ಅಫ್ಘಾನಿಸ್ತಾನ ತತ್ತಸಿತು. 21 ರನ್‌ಗಳಿಸಿದ ಜಾದ್ರನ್ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಅತಾಲ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಗುರ್ಬಾಜ್ ಯಾಥಾಸ್ಥಿತಿ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಅತಾಲ್ 42 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಮಧ್ಯಮ ಕ್ರಮಾಂಕ ಕುಸಿಯಿತು. ಭಾರತ ಪಂದ್ಯವನ್ನು ಅಲ್ಲೇ ಗೆದ್ದುಕೊಂಡಿತು. ಆದಾಗ್ಯೂ ರೆಹಮತ್ ಶಾಹ್ ಕೊನೆಯವರೆಗೂ ಉತ್ತಮ ಬ್ಯಾಟಿಂಗ್ ಮಾಡಿದರು. ಒಂದು ಬದಿಯಲ್ಲಿ ವಿಕೆಟ್ ಬಿದ್ದರೂ ಇನ್ನೊಂದು ಬದಿಯಲ್ಲಿ ಗಟ್ಟಿಯಾಗಿ ನಿಂತುಕೊಂಡರು. ಆದರೆ ಕೊನೆಯಲ್ಲಿ ಅಫ್ಘಾನಿಸ್ತಾನ ಗೆಲುವಿನ ಸನಿಹಕ್ಕೂ ಹೋಗಲಾಗಲಿಲ್ಲ.

ಗಿಲ್ ಅಬ್ಬರ: ಮೊದಲನೇ ಎಸೆತದಿಂದಲೂ ಶುಭಮನ್ ಗಿಲ್ ಸಮತೋಲನೆ ಪ್ರದರ್ಶಿಸಿದರು. ರೋಹಿತ್ ಸ್ಫೋಟಕ ಬ್ಯಾಟಿಂಗ್ ಮಾಡುವವರೆಗೂ ಅಷ್ಟೊಂದು ಪರಿಣಾಮಕಾರಿ ಬ್ಯಾಟಿಂಗ್ ಮಾಡದ ಅವರು, ರೋಹಿತ್ ವಿಕೆಟ್ ಬಿದ್ದಿದ್ದೇ ತಡ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 38 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಶುಭಮನ್ ಮುಂದೆ ಇನ್ನಷ್ಟು ಆಕ್ರಮಣಕಾರಿ ಬ್ಯಾಟಿಂಗ್ ಮಾಡಿ ಶತಕದತ್ತ ಸಾಗಿದರು. 77 ಬಾಲ್‌ಗಳಲ್ಲಿ ಶತಕ ಪೂರೈಸಿಕೊಂಡರು. 150 ರನ್ ಕೂಡ ಬಾರಿಸಿದರು. ಇದು ಅವರ 9ನೇ ಅಂತಾರಾಷ್ಟ್ರೀಯ ಶತಕವಾಗಿದೆ. 154 ರನ್ ಗಳಿಸಿದ್ದಾಗ ಅವರು ವಿಕೆಟ್ ಒಪ್ಪಿಸಿದರು.

ಕಿಶನ್ ಪಾರುಪತ್ಯ: ವಿರಾಟ್ ಕೊಹ್ಲಿ ಇಲ್ಲದ ಪರಿಣಾಮ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿರುವ ಇಶಾನ್ ಕಿಶನ್ ಅಬ್ಬರದ ಶತಕ ಬಾರಿಸಿದರು. ಮೊದಲಿಗೆ ಅಲ್ಪ ನಿಧಾನ ಬ್ಯಾಟಿಂಗ್ ಮಾಡಿದ ಕಿಶನ್ 50 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿ ಮುಂದೆ ಸಿಕ್ಸರ್, ಬೌಂಡರಿ ಅಬ್ಬರ ಶುರು ಮಾಡಿದರು. ಮುಂದಿನ 21 ಬಾಲ್‌ಗಳಲ್ಲಿ ಮತ್ತೊಮ್ಮೆ 50 ರನ್ ಬಾರಿಸಿ 71 ಎಸೆತದಲ್ಲಿ ಶತಕ ಬಾರಿಸಿದರು. 79 ಎಸೆತ ಎದುರಿಸಿದ ಕಿಶನ್ 125 ರನ್‌ಗಳಿಸಿ ಔಟಾದರು.

42 ರನ್‌ಗೆ 5 ವಿಕೆಟ್: ದೊಡ್ಡ ಸ್ಕೋರ್‌ನತ್ತ ಸಾಗಿದ್ದ ಭಾರತ ದಿಢೀರ್ ಕುಸಿತ ಕಂಡಿತು. ಕೊನೆಯ 42 ರನ್ ಗಳಿಸುಷ್ಟರಲ್ಲಿ 6 ವಿಕೆಟ್ ಕಳೆದುಕೊಂಡಿತು. ಒಂದು ಹಂತದಲ್ಲಿ 420 ದಾಟುವಂತೇ ಆಡಿದ ಭಾರತ 402 ರನ್‌ಗೆ ಪತನಗೊಂಡಿತು.



ಸಂಕ್ಷಿಪ್ತ ಸ್ಕೋರ್
- **ಭಾರತ 49.5 ಓವರ್‌ಗಳಲ್ಲಿ 402:** ಗಿಲ್ 154, ಕಿಶನ್ 125, ರೋಹಿತ್ 48; ಕಾರೋಟೆ 76/4
- **ಅಫ್ಘಾನಿಸ್ತಾನ 44.3 ಓವರ್‌ಗಳಲ್ಲಿ 232:** ರೆಹಮತ್ 79, ಅತಾಲ್ 42; ಅರ್ಶದೀಪ್ 45/3

ಭಾರತಕ್ಕೆ ಸತತ ಎರಡನೇ ಗೆಲುವು

• **ಲೀಡ್ಸ್:** ಮಂಧಾನ ಅವರ ಅಬ್ಬರದ ಬ್ಯಾಟಿಂಗ್ ಹಾಗೂ ಶ್ರೀ ಚಾರಣಿ ಅವರ ಕರಾರುವಾಕ್ ಬೌಲಿಂಗ್ ದಾಳಿ ಮತ್ತೆ ಜಾದೂ ಮಾಡಿದ್ದು, ಪ್ರತಿಷ್ಠಿತ ಮಹಿಳಾ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ಸತತ ಎರಡನೇ ಗೆಲುವು ಸಾಧಿಸಿದೆ. ನೆದರ್ಲೆಂಡ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಭಾರತ 80 ರನ್‌ಗಳ ದೊಡ್ಡ ಗೆಲುವು ಸಾಧಿಸಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಿತು. ಮಂಧಾನ 74, ಶೆಫಾಲಿ 55 ರನ್ ಗಳಿಸಿದರು. ನೆದರ್ಲೆಂಡ್ಸ್ ಪರ ಕಾರೋಲಿನ್ 32 ರನ್‌ಗೆ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ 17.3 ಓವರ್‌ಗಳಲ್ಲಿ 114 ರನ್‌ಗಳಿಗೆ ಆಲೌಟ್ ಆಯಿತು. ಲೀಡೆ 28 ರನ್ ಗಳಿಸಿದರು. ಭಾರತ ಪರ ಚಾರಣಿ 4, ಶಫಾಲಿ 3 ಮತ್ತು ನಂದಿನಿ 2 ವಿಕೆಟ್ ಪಡೆದರು.

ಮಿಂಚಿದ ಮಂಧಾನ: ಟಾಸ್ ಗೆದ್ದು ಬ್ಯಾಟಿಂಗ್‌ಗಿಳಿದ ಭಾರತಕ್ಕೆ ಸ್ಫೋಟಕ ಆರಂಭ ಸಿಕ್ಕಿತು. 34 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಶೆಫಾಲಿ ವರ್ಮಾ 54 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅಷ್ಟೊತ್ತಿಗಾಗಲೇ ಸೆಟ್ ಆಗಿದ್ದ ಸ್ಮೃತಿ ಮಂಧಾನ ಬಿರುಸಿನ ಬ್ಯಾಟಿಂಗ್ ಶುರು ಮಾಡಿದರು. 36 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಮೂರನೇ ಕ್ರಮಾಂಕದಲ್ಲಿ ರಾಡ್ರಿಗ್ಸ್ 19 ರನ್ ಮಾತ್ರ ಗಳಿಸಿ ವಿಕೆಟ್ ಒಪ್ಪಿಸಿದರು. ಮಂಧಾನ 47 ಬಾಲ್‌ಗಳಲ್ಲಿ 11 ಬೌಂಡರಿ, ಸಿಕ್ಸರ್‌ನೊಂದಿಗೆ 74 ರನ್ ಗಳಿಸಿ ಔಟಾದರು. ಯಸ್ತಿಕಾ 3 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಡೆತ್ ಓವರ್‌ಗಳಲ್ಲಿ ಘೋಷ್ ಮತ್ತೊಮ್ಮೆ ಬಿರುಸಿನ ಬ್ಯಾಟಿಂಗ್ ಮಾಡಿದರು. 8 ಬಾಲ್‌ಗಳಲ್ಲಿ 20 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಕೊನೆಯ 2 ಬಾಲ್‌ನಲ್ಲಿ ಬೌಂಡರಿ ಮತ್ತು ಸಿಕ್ಸರ್ ಬಾರಿಸಿದ ದೀಪ್ತಿ ಶರ್ಮ 10 ರನ್ ಗಳಿಸಿದರು. ಭಾರತ 209 ರನ್ ಗಳಿಸಿತು.



ಕುಸಿದ ನೆದರ್ಲೆಂಡ್ಸ್: ಹೀದರ್ 21, ಫೆಬೆ 15, ಕಾಲಿಸ್ 18 ರನ್‌ಗೆ ವಿಕೆಟ್‌ನೊಂದಿಗೆ ನೆದರ್ಲೆಂಡ್ಸ್ ನಿಧಾನಗತಿ ಆರಂಭ ಪಡೆಯಿತು. ನಾಯಕಿ ಲೀಡೆ ಒಂದು ಬದಿಯಲ್ಲಿ ನಿಂತರೂ ಯಾರೊಬ್ಬರೂ ಸಾಥ್ ಕೊಡಲೇ ಇಲ್ಲ. 28 ರನ್ ಗಳಿಸಿ ಲೀಡೆ ಕೂಡ ವಿಕೆಟ್ ಒಪ್ಪಿಸಿದರು ಮುಂದಿನ ಯಾವುದೇ ಬ್ಯಾಟರ್ ಕೂಡ ಎರಡಂಕಿ ದಾಟಲೇ ಇಲ್ಲ.

ಸಂಕ್ಷಿಪ್ತ ಸ್ಕೋರ್
- **ಭಾರತ 20 ಓವರ್‌ಗಳಲ್ಲಿ 209/5:** ಮಂಧಾನ 74, ಶೆಫಾಲಿ 55; ಕಾರೋಲಿನ್ 32/2
- **ನೆದರ್ಲೆಂಡ್ಸ್ 17.3 ಓವರ್‌ಗಳಲ್ಲಿ 114/10:** ಲೀಡೆ 28; ಚಾರಣಿ 19/4, ಶಫಾಲಿ 20/3

ಆಸೀಸ್‌ಗೆ 9 ವಿಕೆಟ್ ಜಯ

• **ಲೀಡ್ಸ್:** ಸಾಂಘಿಕ ಬೌಲಿಂಗ್ ದಾಳಿ ಸಂಘಟಿಸಿದ ಆಸ್ಟ್ರೇಲಿಯಾ ಮಹಿಳೆಯರ ತಂಡವು ಬಾಂಗ್ಲಾದೇಶದ ಮೇಲೆ ಹರಿಹಾಯ್ದಿದ್ದು, 9 ವಿಕೆಟ್‌ಗಳ ಬೃಹತ್ ಗೆಲುವು ಸಾಧಿಸಿದೆ. ಇದರೊಂದಿಗೆ ಎರಡನೇ ಸತತ ಗೆಲುವು ದಾಖಲಿಸಿರುವ ಆಸ್ಟ್ರೇಲಿಯನ್ನರು ವಿಶ್ವಕಪ್‌ನಲ್ಲಿ ಪಾರುಪತ್ಯ ಮುಂದುವರಿಸಿದ್ದಾರೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾವನ್ನು 77 ರನ್‌ಗೆ ಕಟ್ಟಿ ಹಾಕಿದ ಆಸೀಸ್ 9.3 ಓವರ್‌ಗಳಲ್ಲಿ ಹೊಡೆಯಿತು. ಬಾಂಗ್ಲಾ ಪರ ನಿಗಾ ಸುಲ್ತಾನ್ 47 ಬಾಲ್ ಎದುರಿಸಿ 27 ರನ್ ಮಾತ್ರ ಗಳಿಸಿದರು. ಇದೇ ಅವರ ತಂಡದಲ್ಲಿ ಆಟಗಾರ್ತಿ ಗಳಿಸಿದ್ದ ಅತಿ ಹೆಚ್ಚು ರನ್. ಆಸ್ಟ್ರೇಲಿಯಾ ಪರ ಪೆರ್ರಿ, ಸೋಫಿ ಮತ್ತು ಗ್ರಾತ್ 2 ವಿಕೆಟ್ ಕಿತ್ತರೆ, ಸುದರ್‌ಲೆಂಡ್ ಮತ್ತು ವಾರೇಹಮ್ 1 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ 9.3 ಓವರ್‌ಗಳಲ್ಲಿ 78 ರನ್ ಗುರಿ ತಲುಪಿತು. ತಂಡದ ಪರ ಜಾರ್ಜಿಯಾ ವಾಲ್ 45★ ರನ್ ಗಳಿಸಿದರು.

ಮಕಾವು ಓಪನ್: 3 ಭಾರತೀಯರು ಪ್ರಿ ಕ್ವಾರ್ಟರ್‌ಗೆ

• **ಹೊಸದಿಲ್ಲಿ:** ಇಲ್ಲಿ ನಡೆಯುತ್ತಿರು ಮಕಾವು ಓಪನ್ ಬ್ಯಾಡ್ಮಿಂಟನ್ ಸೂಪರ್-300 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತೀಯರು ಮಿಂಚುತ್ತಿದ್ದು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಅನ್ಮೋಲ್ ಖಾರ್ಬ್ ಸೇರಿದಂತೆ ಮೂವರು ಪ್ರಿ ಕ್ವಾರ್ಟರ್‌ಫೈನಲ್‌ಗೇರಿದ್ದಾರೆ. ಈ ಮೂಲಕ ಭಾರತದ ಪಾರುಪತ್ಯ ಮಕಾವುದತ್ತ ಸಾಗಿದೆ. ಇಂಡೋನೇಷ್ಯಾದ ಮುಟಿಯಾರಾ ಆಯು ಅವರನ್ನು ಎದುರಿಸಿದ್ದ ಅನ್ಮೋಲ್ 21-13, 21-16 ರಿಂದ ಗೆದ್ದರು. ರಕ್ಷಿತಾ ಶ್ರೀ ರಾಮರಾಜ್ ಮಲೇಷ್ಯಾದ ಕಿಸೋನಾ ಅವರನ್ನು 21-16, 24-22ರಿಂದ ಸೋಲಿಸಿದರು. ಏಳನೇ ಸೀಡ್‌ನ ಶ್ರೀಯಾಂಶಿ ವಾಲಿಶೆಟ್ಟಿ ಸ್ವದೇಶದ ತಸ್ನಿಮ್ ಮಿರ್ ಅವರೊಂದಿಗೆ 21-18, 19-21, 21-15ರಿಂದ ಗೆದ್ದು ಮುನ್ನಡೆದರು. ಇದರೊಂದಿಗೆ ಭಾರತೀಯರು ಪದಕ ನಿರೀಕ್ಷೆ ಹೆಚ್ಚಿಸಿದ್ದಾರೆ.


ಭಾರತ ಎ ಫೈನಲ್‌ಗೆ

• **ಡಂಬುಲ್ಲಾ:** ಸಾಂಘಿಕ ಬ್ಯಾಟಿಂಗ್ ಮತ್ತು ನಿಶಾಂತ್ ಸಂಧು ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ನಲುಗಿದ ಅಫ್ಘಾನಿಸ್ತಾನ ತಂಡವು ಭಾರತ ಎ ವಿರುದ್ಧ 101 ರನ್‌ಗಳ ದೊಡ್ಡ ಸೋಲನುಭವಿಸಿದೆ. ಇದರೊಂದಿಗೆ ತ್ರಿಕೋನ ಸರಣಿ ಫೈನಲ್‌ಗೇರಿದೆ.

ಸತತ ಎರಡು ಸೋಲಿನ ನಂತರ ಕಂಬ್ಯಾಕ್ ಮಾಡಿರುವ ತಿಲಕ್ ವರ್ಮಾ ನೇತೃತ್ವದ ಭಾರತ ಎ ತಂಡವು ದೊಡ್ಡ ಸ್ಕೋರ್ ಮಾಡಿದ್ದಲ್ಲದೆ ಅಫ್ಘಾನಿಸ್ತಾನ ಎ ತಂಡವನ್ನು ಆಲೌಟ್ ಮಾಡಿ ವಿಜಯ ಸಾಧಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 319 ರನ್ ಗಳಿಸಿತು. ಪ್ರಿಯಾಂಶ್ 58, ವೈಭವ್ 38, ಗಾಯಕ್ವಾಡ್ 30, ತಿಲಕ್ ವರ್ಮಾ 59, ಕುಮಾರ್ ಕುಶಾಗ್ರಾ 68 ಮತ್ತು ನಿಶಾಂತ್ ಸಂಧು 30 ರನ್ ಗಳಿಸಿದರು. ಗುರಿ ಬೆನ್ನತ್ತಿದ ಅಫ್ಘಾತನಿಸ್ತಾನ ಎ 36.5 ಓವರ್‌ಗಳಲ್ಲಿ 218 ರನ್‌ಗೆ ಆಲೌಟ್ ಆಯಿತು. ಬಾಹಿರ್ ಶಾಹ್ 57, ಫೈಸಲ್ 46 ರನ್ ಗಳಿಸಿದರು. ಭಾರತ ಪರ ನಿಶಾಂತ್ 4 ವಿಕೆಟ್ ಕಿತ್ತರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6018

ಎಡದಿಂದ ಬಲಕ್ಕೆ
1.ಸುರನಿಗೆ ಈ ನಡುವೆ ಕಂಡ ದೂತ (4)
3.ಪರ್ವತವನ್ನು ಹೊತ್ತವನು-ಕೃಷ್ಣ (4)
5.ಕೈ-ಕಾಲಿಗೆ ಹಾಕುವ ಬಳೆ (3)
6.ಅಂತರಂಗವಿಲ್ಲಿ ತಿರುಗಿದೆ (2)
8.ಲೋಹದ ತೆಳುವಾದ ಎಳೆ (2)
9.ರಾಜ-ಯುದ್ಧವೀರರ ವಾಹನವಿದು (2)
12.ಜನರು ಕುಳಿತು ನೋಡಿದ್ದು ಈ ಅಂಗಾರಕನನ್ನು (2)
14.ಒತ್ತಾಗಿರುವಿಕೆ-ನಿಬಿಡತೆಯಿದು (3)
15.ಶಂಕುಸ್ಥಾಪನೆಯ ಸಮಾನಪದ (4)
16.ಕೀಟಲೆ ಮಾಡಿ ರೇಗಿಸು (4)

ಮೇಲಿನಿಂದ ಕೆಳಕ್ಕೆ
1.ವಿಷ್ಣುವಿನ ಕೈಯಲ್ಲಿರುವ ಚಕ್ರಾಯುಧ (4)
2.ವಿಲಾಸಿತನದಿಂದ ಕೂಡಿರುವಿಕೆ (4)
3.ಗಾಳಿಗೆ ತಿರುಗುವ ಆಟದ ಚಕ್ರ (4)
4.ರಾಯರಿಗೆ ಪದ್ಧತಿ ತಿಳಿಸಿದ ಪವನ (4)
7.ಪ್ರೀತಿ-ಸೌಂದರ್ಯದ ದೇವತೆ (3)
8.ಹೊಗೆಸೊಪ್ಪನ್ನು ಹೀಗೂ ಹೇಳುತ್ತೇವೆ (3)
9.ಸೂರ್ಯ-ಚಂದ್ರ ಕೂಡಿ ಕಾಣುತ್ತಿದ್ದಾರೆ (4)
10.ಮುಗುಳುನಗೆಯ ಸಮಾನಪದ (4)
11.ನಮಸ್ಕರಿಸು ಎಂಬರ್ಥದ ನುಡಿಗಟ್ಟು (4)
13.ಎಲ್ಲವನ್ನು ಒಟ್ಟುಗೂಡಿಸುವಿಕೆ (4)

6017 ಉತ್ತರ

ಎಡದಿಂದ ಬಲಕ್ಕೆ:
1.ಸುಗ್ಗಿಕಾಲ 2.ಪ್ರತಿವಾದಿ
4.ಗಟ್ಟಿಗ 6.ನಕ್ಷತ್ತ
8.ಜಯಶಾಲಿ
10.ರಾಜಸ್ಥಾನ 12.ಅವಿರತ
14.ಗವುಳಿ 15.ಗೆರೆದಾಟು
16.ಪಾರಿಜಾತ

ಮೇಲಿನಿಂದ ಕೆಳಕ್ಕೆ
: 1.ಸುಲೋಚನ
3.ದಿನಗೂಲಿ 4.ಗತ 5.ಗಜ
7.ಖನಿಜ 9.ಶಾರೀರ
10.ರಾಗತೆಗೆ 11.ನಗ
12.ಅಳಿ 13.ತದುಪಾಂತ

ಕಿರುಸುದ್ದಿ

ಕಾಲುವೆ ದುರಸ್ತಿಗೊಳಿಸಿ ನೀರು ಒದಗಿಸಿ: ಉಮೇಶ

ನರಗುಂದ: ಕೊಣ್ಣೂರ ಭಾಗದಲ್ಲಿನ ಕೊಳಚೆ ಕಾಲುವೆಗಳು ಸ್ವಚ್ಛಗೊಳ್ಳದೇ ಕಸಕಡ್ಡಿ, ಮುಳ್ಳು ಜಾಲಿಕಂಟಿ, ಹುಲ್ಲುಗಿಡ್ಡಗಳಿಂದ ವಿಪರೀತ ಪ್ರಮಾಣದಲ್ಲಿ ತುಂಬಿಕೊಂಡಿದೆ. ಮುಂಗಾರು ಪ್ರಾರಂಭಗೊಂಡು ತಿಂಗಳು ಗತಿಸಿದೆ. ಕಾರಣ ಕೇಳಿದರೆ ಸರ್ಕಾರದಿಂದ ಅನುದಾನ ಬಂದಿಲ್ಲ ಎನ್ನುತ್ತಾರೆ. ಕಳೆದ ವರ್ಷವೂ ನೀರಾವರಿ ಇಲಾಖೆ ಕಾಲುವೆ ಸ್ವಚ್ಛಗೊಳಿಸಿಲ್ಲ, ಕಾಲುವೆಗಳ ಪರಿಸ್ಥಿತಿ ಈ ರೀತಿಯಾದರೆ, ಕೃಷಿ ಮಾಡಲು ರೈತರ ಜಮೀನುಗಳಿಗೆ ನೀರು ಬರೋದು ಯಾವಾಗ. ಅಧಿಕಾರಿಗಳು ಕೂಡಲೇ ಕಾಲುವೆ ದುರಸ್ತಿಗೊಳಿಸಿ ಜಮೀನುಗಳಿಗೆ ನೀರು ಒದಗಿಸಬೇಕೆಂದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕಿನ ಅಧ್ಯಕ್ಷ ಉಮೇಶ ಮರ್ಚಪ್ಪನವರ ಸರ್ಕಾರವನ್ನು ಆಗ್ರಹಿಸಿದರು.

ಬುಧವಾರ ಕರ್ನಾಟಕ ರಾಜ್ಯ ನೀರಾವರಿ ನಿಗಮ ಕಛೇರಿಯ ಸಹಾಯಕ ತಾಂತ್ರಿಕ ಅಧಿಕಾರಿ ಇಂದಿರಾ ಅವಾರಿ ಅವರಿಗೆ ಮನವಿ ಅರ್ಪಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಶಂಕರಗೌಡ ಶಿರಿಯಪ್ಪಗೌಡ್ರ, ಸುರೇಶ ಮರ್ಚಪ್ಪನವರ, ತಿಮ್ಮಣ್ಣ ವಾಸನ, ರಿಯಾಜ ಅಲ್ಲಿಬಾಯಿ, ಮಹಾಂತೇಶ ಲದ್ದಿ ಇತರರಿದ್ದರು.

2ಎ ಮೀಸಲಾತಿ ನೀಡಲಿ: ರುದ್ರೇಶ

ನರೆಗಲ್ಲ: ಉತ್ತರ ಕರ್ನಾಟಕ ಭಾಗದಲ್ಲಿ ಬಹುಸಂಖ್ಯಾತ ಸಮಾಜ ಹೊಂದಿದೆ. ನಮ್ಮ ಸಮಾಜದಲ್ಲಿ ಸುಮಾರು 11ಕಾಂಗ್ರೆಸ್ ಶಾಸಕರಿದ್ದು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವಧಿಯಲ್ಲಿ ಮೂರು ಜನ ಮಂತ್ರಿ ಸ್ಥಾನ ನೀಡಿದ್ದು ಅದ್ರೆ ಈ ಸಂಪುಟಗಳಲ್ಲಿ ಯಾರಿಗೂ ನೀಡಿಲ್ಲ ನಮಗೆ ಮಂತ್ರಿ ಸ್ಥಾನಕಂತ ಪಂಚಮಸಾಲಿ ಸಮಾಜ ಅತ್ಯಂತ ಹಿಂದುಳಿದ ಸಮಾಜವಾಗಿದ್ದ ಮುಂದಿನ ಮಕ್ಕಳ ಭವಿಷ್ಯದ ಹೇಳಿಗೆಗಾಗಿ 2ಎ ಮೀಸಲಾತಿ ಜಾರಿಗೊಳಿಸಬೇಕು ಕೂಡಲ ಸಂಗಮ ಪೀಠದ ಗುರುಗಳು ಮುರ್ತುಂಜಯ್ಯ ಮಹಾಸ್ವಾಮಿಗಳು ನೇತೃತ್ವದಲ್ಲಿ 741ಕಿ.ಮೀಟರ್ ಪಾದಯಾತ್ರೆ ಕೂಗೊಂಡಗಾ ನಮ್ಮ ಸಮಾಜದ ಶಾಸಕರು ವಿಜಯಾನಂದ ಕಾಶಪ್ಪನವರು ಹೋರಾಟದಲ್ಲಿ ಪಾಲ್ಗೊಂಡು ನಮ್ಮ ಸಮಾಜಕ್ಕೆ ಮೀಸಲಾತಿ ಕೊಡಬೇಕು ಎಂದರು. ನಮ್ಮ ಮನವು ಸರ್ಕಾರ ನಿರ್ಲಕ್ಷ್ಯ ಧೋರಣೆ ತೋರಿದರೆ ಮುಂದಿನ ಚುನಾವಣೆಯಲ್ಲಿ ತಕ್ಕಪಾಟ ಕಲಿಸೋದಾಗಿ ಹೆಚ್ಚರಿಸಿದರು. ಈ ವೇಳೆ ರುದ್ರೇಶ ಕೊಟಗಿ, ಶಿವಕುಮಾರ ಜಿರ್ಲ್, ಆನಂದ ಹಳಕೇರಿ, ರವಿ ಕಾಟಿ, ಅಪ್ಪಣ ಅಂಗಡಿ, ಬಸವರಾಜ ಮಾಡವಳ ಇದ್ದರು.



ನೌಕರರ ಮೇಲೆ ಹಲ್ಲೆ: ಕ್ರಮಕ್ಕೆ ಆಗ್ರಹ

ಗದಗ: ಚಿಕ್ಕಹಂದಿಗೋಳ ಗ್ರಾಪಂ ಪಿಡಿಒ ಶಶಿಧರ ಕಪ್ಪರದ ಹಾಗೂ ವಾಟರ್‌ಮ್ಯಾನ್ ಅರ್ಜುನ್ ಓಲೇಕಾರ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ತಕ್ಷಣವೇ ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ ಜಗದೀಶಗೆ ಮನವಿ ಸಲ್ಲಿಸಿದರು.

ಚಿಕ್ಕಹಂದಿಗೋಳ ಗ್ರಾಮ ಪಂಚಾಯತ ಪಿಡಿಒ ಶಶಿಧರ ಕಪ್ಪರದ ಹಾಗೂ ವಾಟರ್‌ಮ್ಯಾನ್ ಅರ್ಜುನ್ ಓಲೇಕಾರ ತಮ್ಮ ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ದುಂದೂರ ಗ್ರಾಮದ ಗಂಗಯ್ಯ ಗಣಾಚಾರಿ ಹಾಗೂ ಇತರರು ಮಾರಣಾಂತಿಕ ಹಲ್ಲೆ ನಡೆಸಿರುವುದು ಅತ್ಯಂತ ಖಂಡನೀಯ ಹಾಗೂ ದುಃಖಕರ ಸಂಗತಿಯಾಗಿದೆ ಎಂದು ಅಳಲು ತೋಡಿಕೊಂಡರು. ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಹಾಗೂ ಜಿಲ್ಲಾಧ್ಯಕ್ಷ ಡಾ. ಬಸವರಾಜ ಬಳ್ಳಾರಿ, ಮಾಜಿ ಅಧ್ಯಕ್ಷ ಡಾ. ರವಿ ಎಲ್. ಗುಂಜೀಕರ, ಡಿ.ಎಸ್. ತಳವಾರ, ಎಂ.ಎಂ. ನಿಟ್ಟಾಲಿ, ಎಂ.ವೈ. ಮಲಕಶೆಟ್ಟಿ, ರಾಜು ಕಂಟಿಗೊಣ್ಣವರ, ಸಿದ್ದಪ್ಪ ಲಿಂಗದಾಳ, ಎಸ್.ಎಸ್. ಪಾರ್ವತಿಮಠ, ಶಿವಪ್ಪ ಹದ್ಲಿ ಸೇರಿ ಮತ್ತಿತರರು ಇದ್ದರು.

ಗದಗ ಮಾರುಕಟ್ಟೆ ಧಾರಣೆ ಜ.1 2026

ಕಡಲೆಕಾಳು	4117-6145	ಕ್ವಿಂಟಲ್
ಧನಿಯಾ	4569-4569	ಕ್ವಿಂಟಲ್
ಅಲಸಂದೆ	7297-7297	ಕ್ವಿಂಟಲ್
ಬಟಾಣಿ	4600-5311	ಕ್ವಿಂಟಲ್
ಹೆಸರುಕಾಳು	5800-5800	ಕ್ವಿಂಟಲ್
ಜೋಳ	2977-5259	ಕ್ವಿಂಟಲ್
ಕುಸುಬೆ	4669-5086	ಕ್ವಿಂಟಲ್
ಸೂರ್ಯಕಾಂತಿ	1051-1051	ಕ್ವಿಂಟಲ್
ಗೋಧಿ	1619-3839	ಕ್ವಿಂಟಲ್



ನರಗುಂದ: ಕೊಣ್ಣೂರ ಭಾಗದಲ್ಲಿನ ಕೊಳಚೆ ಕಾಲುವೆಗಳು ಸ್ವಚ್ಛಗೊಳಿಸಿ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕಿನ ಅಧ್ಯಕ್ಷ ಉಮೇಶ ಮರ್ಚಪ್ಪನವರ ಸರ್ಕಾರವನ್ನು ಆಗ್ರಹಿಸಿದರು. ಬುಧವಾರ ಕರ್ನಾಟಕ ರಾಜ್ಯ ನೀರಾವರಿ ನಿಗಮ ಕಛೇರಿಯ ಸಹಾಯಕ ತಾಂತ್ರಿಕ ಅಧಿಕಾರಿ ಇಂದಿರಾ ಅವಾರಿ ಅವರಿಗೆ ಮನವಿ ಸಲ್ಲಿಸಿದರು.

ಜಿಎಸ್‌ಪಿಗೆ ಸಚಿವ ಸ್ಥಾನ ನೀಡಿ: ಪ್ರಶಾಂತ

ಗಜೇಂದ್ರಗಡ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೇತೃತ್ವದ ಸಚಿವ ಸಂಪುಟದಲ್ಲಿ ರೋಣ ಶಾಸಕ ಜಿ.ಎಸ್. ಪಾಟೀಲರಿಗೆ ಮಂತ್ರಿ ಸ್ಥಾನ ಲಭಿಸಲೆಂದು ಮಹಾರಾಷ್ಟ್ರದಲ್ಲಿನ ತುಳಜಾಪುರದ ತುಳಜಾಭವಾನಿ ದೇವಾಲಯದಲ್ಲಿ ಬಂಜಾರ ಸಮುದಾಯದವರು ವಿಶೇಷ ಪೂಜೆ ಸಲ್ಲಿಸಲಾಯಿತು.

ಬಳಿಕ ಬಂಜಾರ ಸಮುದಾಯದ ಪ್ರಶಾಂತ ರಾಠೋಡ ಮಾತನಾಡಿ, ಶಾಸಕ ಜಿ.ಎಸ್.ಪಾಟೀಲರು ಅವರ ಅಪಾರ ರಾಜಕೀಯ ಅನುಭವಕ್ಕೆ ಯಾವತ್ತೋ ಸಚಿವರಾಗಬೇಕಿತ್ತು. ಅವರು ಸದಾಕಾಲವು ಅಭಿವೃದ್ಧಿ ಚಿಂತನೆ, ದೂರದೃಷ್ಟಿ ಜನನಾಯಕ ಜಿ.ಎಸ್.ಪಾಟೀಲರಿಗೆ 2ನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡಬೇಕು. ಸು.4 ದಶಕಕ್ಕೂ ಅಧಿಕ ಕಾಲ ತಾಲೂಕಿನಲ್ಲಿ ಅಷ್ಟೇ ಅಲ್ಲದೆ, ಜಿಲ್ಲಾದ್ಯಂತ ಜನಮಾನಸರಾಗಿದ್ದಾರೆ. ಇಂತಹ ಹಿರಿಯ, ಅನುಭವಿ ನಾಯಕರಾದ ಶಾಸಕರಿಗೆ ಸಚಿವ ಸ್ಥಾನ ನೀಡಿದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಸಂಪುಟಕ್ಕೆ ಶೋಭೆ ಸಲ್ಲುತ್ತದೆ ಎಂದರು.

ಈ ವೇಳೆ ಪ್ರಶಾಂತ ರಾಠೋಡ. ರೇಣುಕಾ ರಾಠೋಡ. ಗಂಗೂಬಾಯಿ ರಾಠೋಡ. ಅಂದಪ್ಪ ರಾಠೋಡ. ಬಂಗಾರಪ್ಪ ರಾಠೋಡ. ಅನ್ನಪೂರ್ಣ ಬಂಗಾರಪ್ಪ ರಾಠೋಡ. ಉದಯಕುಮಾರ, ಸಂಜನಾ ರಾಠೋಡ. ಪ್ರಶಾಂತಸಿಂಹ ರಾಠೋಡ. ತೇಜಸ್ವಿನಿ ರಾಠೋಡ. ರಾಮು ಕಾರಭಾರಿ. ರೇಖಾ ಕಾರಭಾರಿ. ವಿನೋದ ಜಾಧವ. ರೂಪಾ ಜಾಧವ ಸೇರಿದಂತೆ ಅನೇಕರು ಇದ್ದರು.



ಗಜೇಂದ್ರಗಡ: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೇತೃತ್ವದ ಸಚಿವ ಸಂಪುಟದಲ್ಲಿ ರೋಣ ಶಾಸಕ ಜಿ.ಎಸ್. ಪಾಟೀಲರಿಗೆ ಮಂತ್ರಿ ಸ್ಥಾನ ಲಭಿಸಲೆಂದು ಮಹಾರಾಷ್ಟ್ರದಲ್ಲಿನ ತುಳಜಾಪುರದ ತುಳಜಾಭವಾನಿ ದೇವಾಲಯದಲ್ಲಿ ಬಂಜಾರ ಸಮುದಾಯದವರು ವಿಶೇಷ ಪೂಜೆ ಸಲ್ಲಿಸಲಾಯಿತು.

ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ | ಜಿಲ್ಲಾಧಿಕಾರಿ ಶ್ರೀಧರ ಸೂಚನೆ

ಜನನ ಮರಣ ನೋಂದಣಿ ತ್ವರಿತಗೊಳಿಸಿ

ಗದಗ: ಜನನ ಮತ್ತು ಮರಣ ನೋಂದಣಿ ಪ್ರಕ್ರಿಯೆಯನ್ನು ಸಮಯೋಚಿತವಾಗಿ ಹಾಗೂ ದೋಷರಹಿತವಾಗಿ ನಡೆಸುವುದು ಅತ್ಯಂತ ಮಹತ್ವದ್ದಾಗಿದ್ದು, ಯಾವುದೇ ಕಾರಣಕ್ಕೂ ವಿಳಂಬ ನೋಂದಣಿಗೆ ಅವಕಾಶ ನೀಡಬಾರದು ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.



ನಗರದ ಜಿಲ್ಲಾಡಳಿತ ಭವನದಲ್ಲಿ ಬುಧವಾರ ನಡೆದ ಜನನ-ಮರಣ ನೋಂದಣಿ ಪದ್ಧತಿಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಪ್ರಗತಿ ಪರಿಶೀಲನೆ ನಡೆಸಿದರು.

ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳು, ಜನನ ಮತ್ತು ಮರಣ ನೋಂದಣಿ ಸರಿಯಾದ ಸಂದರ್ಭದಲ್ಲಿ ನಡೆಯುವಂತೆ ಅಗತ್ಯ ಪೂರ್ವಸಿದ್ಧತೆ ಮಾಡಿಕೊಳ್ಳಬೇಕು. ನೋಂದಣಿ ಪ್ರಕ್ರಿಯೆಯಲ್ಲಿ ಎದುರಾಗುತ್ತಿರುವ ಅಡೆತಡೆಗಳನ್ನು ಶೀಘ್ರ ಪರಿಹಾರ ಕಂಡುಕೊಳ್ಳುವ ಮೂಲಕ ಪ್ರಗತಿ ಸಾಧಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಬಿ.ಎಸ್.ಪಾಟೀಲ ಮಾಹಿತಿ ನೀಡಿ, ಜಿಲ್ಲೆಯಲ್ಲಿನ 2 ಆಸ್ಪತ್ರೆಗಳು ನಿಗದಿತ ಅವಧಿಯೊಳಗೆ ಜನನ-ಮರಣ ನೋಂದಣಿ ಕಾರ್ಯ ಸಮರ್ಪಕವಾಗಿ ನಿರ್ವಹಿಸಿ ಉತ್ತಮ ಸಾಧನೆ ತೋರಿವೆ. ಜನವರಿಯಿಂದ ಮೇ 2026ರ ಅಂತ್ಯದ ಅಂಕಿ-ಅಂಶಗಳ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 6,994 ಜನನ ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 5,090 (72.78%) ಪ್ರಕರಣಗಳು ನಿಗದಿತ ಅವಧಿಯೊಳಗೆ ನೋಂದಣಿಯಾಗಿವೆ. ತಾಲೂಕುವಾರು ಪರಿಶೀಲನೆಯಲ್ಲಿ ಗದಗ ತಾಲೂಕು 76.43% ಹಾಗೂ ಮುಂಡರಗಿ ತಾಲೂಕು 76.56% ಸಮಯೋಚಿತ ನೋಂದಣಿಯೊಂದಿಗೆ ಉತ್ತಮ ಸಾಧನೆ ಮಾಡಿವೆ. ಶಿರಹಟ್ಟಿ ತಾಲೂಕು 73.68%, ಲಕ್ಷ್ಮೇಶ್ವರ 75.79%, ನರಗುಂದ 73.56% ಪ್ರಗತಿ ದಾಖಲಿಸಿವೆ. ರೋಣ ತಾಲೂಕು 47.11% ಸಾಧನೆಯೊಂದಿಗೆ ಹಿಂದುಳಿದಿದೆ ಎಂದು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಒಟ್ಟು 3,872 ಮರಣ ಪ್ರಕರಣಗಳು ದಾಖಲಾಗಿದ್ದು, ಅವುಗಳಲ್ಲಿ 2,830 (73.09%) ಪ್ರಕರಣಗಳು ನಿಗದಿತ ಅವಧಿಯೊಳಗೆ ನೋಂದಣಿಯಾಗಿವೆ. ತಾಲೂಕುವಾರು ಪರಿಶೀಲನೆಯಲ್ಲಿ ಗದಗ ತಾಲೂಕು 71.68% ಹಾಗೂ ಮುಂಡರಗಿ ತಾಲೂಕು 73.77%, ಶಿರಹಟ್ಟಿ ತಾಲೂಕು 79.51%, ಲಕ್ಷ್ಮೇಶ್ವರ 68.47% ಮತ್ತು ನರಗುಂದ 73.63%, ರೋಣ ತಾಲೂಕು 69.91% ಪ್ರಗತಿ ಸಾಧನೆ ಮಾಡಿವೆ.

> **ಜನನ ಮತ್ತು ಮರಣ ನೋಂದಣಿ ಪ್ರಕ್ರಿಯೆಯನ್ನು ಸಮಯೋಚಿತವಾಗಿ ಹಾಗೂ ದೋಷರಹಿತವಾಗಿ ನಡೆಸುವುದು ಅತ್ಯಂತ ಮಹತ್ವದ್ದಾಗಿದೆ. ಯಾವುದೇ ಕಾರಣಕ್ಕೂ ವಿಳಂಬ ನೋಂದಣಿಗೆ ಅವಕಾಶ ನೀಡಬಾರದು. ಎಲ್ಲಾ ಸರ್ಕಾರಿ ಆಸ್ಪತ್ರೆಗಳ ನೋಂದಣಿ ವೈದ್ಯಾಧಿಕಾರಿಗಳು ಕಡ್ಡಾಯವಾಗಿ ಡಿಜಿಟಲ್ ಕೀ ಹೊಂದಿರಬೇಕು. ನೋಂದಣಿ ಕಾರ್ಯದಲ್ಲಿ ನಿರೀಕ್ಷಿತ ಪ್ರಗತಿ ಕಾಣದಿದ್ದರೆ ಸಂಬಂಧಿಸಿದ ಅಧಿಕಾರಿಗಳೇ ಹೊಣೆಗಾರರಾಗುತ್ತಾರೆ.**
> ■ ಸಿ.ಎನ್.ಶ್ರೀಧರ, ಡಿಸಿ

ಈ ವೇಳೆ ಅಪರ ಜಿಲ್ಲಾಧಿಕಾರಿ ಡಾ.ದುರಗೇಶ ಕೆ.ಆರ್., ಜಿಪಂ ಮುಖ್ಯ ಯೋಜನಾಧಿಕಾರಿ ಎ.ಎ.ಕಂಬಾಳಿಮಠ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟೂರ, ಭೂದಾಖಲೆಗಳ ಉಪನಿರ್ದೇಶಕ ರುದ್ರಣ್ಣಗೌಡ ಜಿ.ಜೆ., ವಾರ್ತಾಧಿಕಾರಿ ವಸಂತ ಮಡ್ಲೂರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಎಸ್. ನೀಲಗುಂದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ರಾಧಾ ಮಣ್ಣೂರ, ಆನಂದ ಬದಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಸಮಸ್ಯೆ ತಕ್ಷಣ ಪರಿಹರಿಸುವಂತೆ ಪ್ರತಿಭಟನೆ

ಲಕ್ಷ್ಮೇಶ್ವರ: ಪಟ್ಟಣದ ವಾರ್ಡ್ ನಂ. 3ರಲ್ಲಿ ಉಂಟಾಗಿರುವ ಕುಡಿಯುವ ನೀರು, ಕಾಲುವೆ ಸ್ವಚ್ಛತೆ, ಬೀದಿ ದೀಪಗಳ ನಿರ್ವಹಣೆ ಹಾಗೂ ಸಾರ್ವಜನಿಕ ಶೌಚಾಲಯ ಸೇರಿದಂತೆ ವಿವಿಧ ಮೂಲಸೌಕರ್ಯ ಸಮಸ್ಯೆಗಳನ್ನು ತಕ್ಷಣ ಪರಿಹರಿಸುವಂತೆ ಆಗ್ರಹಿಸಿ ಸಾರ್ವಜನಿಕರು ಹಾಗೂ ಸಮಗ್ರ ರೈತ ಹೋರಾಟ ಸಮಿತಿ ಸದಸ್ಯರು ಬುಧವಾರ ಲಕ್ಷ್ಮೇಶ್ವರ ಪುರಸಭೆ ಮುಂದೆ ಪ್ರತಿಭಟನೆ ಮಾಡಿದರು.

ಪ್ರತಿಭಟನೆಯಲ್ಲಿ ಕುಂದಗೋಳ ಅಭಿನವಬಸವಣ್ಣ ಶ್ರೀಗಳು, ದುಮ್ಮವಾಡ ಸರ್ಪಭೂಷಣ ಶ್ರೀಗಳು ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿದರು.

ಪಟ್ಟಣದ ಕೆಂಚಲಾಪುರ ಓಣಿಯಿಂದ ಎತ್ತು, ಆಕಳು, ಕೊಡಪಾನ, ಚರಗಿ, ಪೊರಕೆ ಹಿಡಿದು ವಾದ್ಯಮೇಳದೊಂದಿಗೆ ಮುಖ್ಯ ಬಜಾರ್ ರಸ್ತೆಯ ಮೂಲಕ ಪುರಸಭೆಯ ವಿರುದ್ಧ ಘೋಷಣೆ ಕೂಗುತ್ತಾ, ಬಿತ್ತಿಪತ್ರ ಹಿಡಿದು ಪುರಸಭೆ ಮುಂದೆ ಘೋಷಣೆ ಕೂಗಿದರು. ಈ ವೇಳೆ ಆಕಳುಗಳನ್ನು ಪುರಸಭೆ ಕಂಪೌಂಡ್ ಒಳಗೆ ಬಿಡದಂತೆ ತಡೆ ಪೊಲೀಸರ ವಿರುದ್ಧ ಹೋರಾಟಗಾರರು ವಾಗ್ವಾದಕ್ಕಿಳಿದರು. ಬಳಿಕ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಸಮಗ್ರ ರೈತಪರ ಹೋರಾಟ ವೇದಿಕೆ ತಾಲೂಕಾಧ್ಯಕ್ಷ ಮಂಜುನಾಥ ಮಾಗಡಿ, ನಾಗರಾಜ ಚಿಂಚಲಿ ಮಾತನಾಡಿದರು.

ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾ ಯೋಜನಾ ನಿರ್ದೇಶಕ ಬಸನಗೌಡ ಕೊಟೂರ ಆಗಮಿಸಿದ ವೇಳೆ ಪ್ರತಿಭಟನಾ ನಿರತರು ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿ ಮನವಿ ಸಲ್ಲಿಸಲಾಯಿತು.ಮನವಿ ಸ್ವೀಕರಿಸಿದ



ಬಸನಗೌಡ ಕೊಟೂರ ಅವರು ನಾಲ್ಕೈದು ದಿನಗಳಲ್ಲಿ ಈ ಪ್ರದೇಶದಲ್ಲಿ ಹೊಸ ಬೋರವೆಲ್ ಕೊರೆಸಲಾಗುವುದು, ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಕ್ರಮ ಕಯಗೊಳ್ಳಲಾಗುವುದು ಎಂದರು.

ಈ ವೇಳೆ ಟಾಕಪ್ಪ ಸಾತಪುತೆ, ಮಲ್ಲಪ್ಪ ಅಂಕಲಿ, ದುಂಡಪ್ಪ ಕೋಟಗಿ, ಹೊನ್ನಪ್ಪ ವಡ್ಡರ, ಶಂಕರ ಬ್ಯಾಡಗಿ, ಶಿವಣ್ಣ ಕಟಗಿ, ಪ್ರಕಾಶ ಗುತ್ತಲ, ಫಕ್ಕೀರೇಶ ಭಜಂತ್ರಿ, ಮುತ್ತು ಬುರಡಿ, ಮಹಾಂತೇಶ ಉಮಚಗಿ, ಚಂದ್ರು ಮಾಗಡಿ, ಮಲ್ಲಿಕಾರ್ಜುನ ನೀರಾಲೋಟ, ಶಂಕ್ರಪ್ಪ ಬುರಡಿ, ಮಾರುದ್ರಪ್ಪ ಲಕ್ಕುಂಡಿ, ಫಕ್ಕೀರಪ್ಪ ರಾಯರ, ಸೋಮಣ್ಣ ಅಂಬಲಿ, ಹೇಮಣ್ಣ ಬುರಡಿ, ಶಿವಪ್ಪ ಹುಲಕೋಟಿ, ಗಂಗಾಧರ ಬೆಲ್ಲದ, ಮಂಜುನಾಥ ಸಂತಿ, ನಾಗಪ್ಪ ಮುಳಗುಂದ, ಮಂಜುನಾಥ ಗೊರವರ, ಭರಮಗೌಡ ಹೆಬ್ಬಾಳ, ಗಣೇಶ ನೂಲ್ವಿ, ರಾಜಪ್ಪ ಕಣವಿ, ಅರುಣಾ ಕಣವಿ, ಶಾಂತವ್ವ ಪಗಡಿ, ಗಿರಿಜಮ್ಮ ಕರೆಯತ್ತಿನ, ಶಿವಣ್ಣ ಪಾಣಿಗಟ್ಟಿ, ಗೌರಮ್ಮ ಅಂಗಡಿ, ನೀಲಮ್ಮ ಹಣಗಿ, ಲಲಿತವ್ವ ಭಜಂತ್ರಿ, ವಿಜಕ್ಕ ಭಜಂತ್ರಿ, ಶಂಕ್ರವ್ವ ಭಜಂತ್ರಿ, ನಾಮದೇವ ಮಾಂಡ್ರೆಇದ್ದರು. ಸಿಪಿಐ ಬಿ.ವಿ.ನ್ಯಾಮಗೌಡ್ರ ಮತ್ತು ಪಿಎಸ್‌ಐ ನಾಗರಾಜ ಗಡಾದ, ಟಿ.ಕೆ ರಾಠೋಡ ಪರಿಸ್ಥಿತಿ ನಿಭಾಯಿಸಿದರು.

ಸಚಿವ ಸ್ಥಾನ ಬಿಟ್ಟುಕೊಟ್ಟು ದೊಡ್ಡವರಾಗಿ: ಶ್ರೀಗಳು

ರೋಣ: ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗಲೆಲ್ಲ ಡಾ.ಎಚ್.ಕೆ.ಪಾಟೀಲರು ಮಂತ್ರಿಯಾಗುತ್ತಾ ಬಂದಿದ್ದಾರೆ. ಆದರೆ ಈ ಬಾರಿ ರೋಣ ಮತಕ್ಷೇತ್ರದ ಶಾಸಕ ಜಿ.ಎಸ್.ಪಾಟೀಲರಿಗೆ ಬಿಟ್ಟುಕೊಡುವ ಮೂಲಕ ದೊಡ್ಡವರಾಗಬೇಕು ಎಂದು ಪ್ರತಿಷ್ಠಿತ ಕುದರಿಮೋತಿ ವಿಜಯಮಹಾಂತ ಶ್ರೀಗಳು ಹೇಳಿದರು.

ಅವರು ಬುಧವಾರ ಪಟ್ಟಣದ ಯಾತ್ರಾನಿವಾಸದಲ್ಲಿ ತಾಲೂಕಾ ಜಂಗಮ ಕ್ಷೇಮಾಭಿವೃದ್ಧಿ ಸಂಘದಿಂದ ಜರುಗಿದ ಧರ್ಮ ಸಭೆಯ ನಂತರ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಡಾ.ಎಚ್.ಕೆ.ಪಾಟೀಲರು ಸಾಕಷ್ಟು ಬಾರಿ ಉನ್ನತ ಹುದ್ದೆ ಪಡೆದುಕೊಂಡಿದ್ದಾರೆ. ಆದರೆ ಈ ಬಾರಿ ರೋಣ ಮತಕ್ಷೇತ್ರಕ್ಕೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಸ್ವತಹ ಅವರೇ ಮುಂದಾಳತ್ವ ವಹಿಸಬೇಕು.ಇದರಿಂದ ಅವರ ಗೌರವ ಹೆಚ್ಚಾಗುತ್ತದೆ ಎಂದ ಅವರು ಶಾಸಕ ಜಿ.ಎಸ್.ಪಾಟೀಲರು ಸೌಮ್ಯ ಸ್ವಭಾವದ ಜನಪ್ರೀಯ ನಾಯಕರಾಗಿದ್ದು, ಅವರಲ್ಲಿ ಅಘಾದವಾದ ಶಕ್ತಿಯಿದೆ ಎಂಬುದನ್ನು ಯಾರು ಕೂಡ ಮರೆಯಬಾರದು ಎಂದರು.

ನರೆಗಲ್ಲ ಹಿರೇಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳು ಮಾತನಾಡಿ, ಸರ್ವಧರ್ಮದವರನ್ನು ತನ್ನ ಕುಟುಂಬದ ಸದಸ್ಯರುಗಳು ಎಂದು ನಂಬಿಕೆಯಿಟ್ಟುರ ನಾಯಕ ಜಿ.ಎಸ್.ಪಾಟೀಲರು ಅವರ ಧರ್ಮ ನಿಷ್ಠೆಯನ್ನು ಯಾರು ಪ್ರಶ್ನೆ ಮಾಡುವಂತಿಲ್ಲ. ಕಲುಷಿತಗೊಳ್ಳುತ್ತಿರುವ ವಾತವರಣದಲ್ಲಿ ಎಲ್ಲರನ್ನು ಕಟ್ಟಿಕೊಂಡು ಹೊಗುವ ವ್ಯಕ್ತಿಗೆ ಸಚಿವ ಸ್ಥಾನ ನೀಡುವುದು ಪಕ್ಷದ ನಿರ್ಧಾರವಾಗಿರಬೇಕು. ಜಿ.ಎಸ್.ಪಾಟೀಲರಿಗೆ ಸಚಿವ ನೀಡಿದರೆ ಆದರಿಂದ ಪಕ್ಷಕ್ಕೆ ಹೆಚ್ಚಿನ ಶಕ್ತಿ ಬರಲಿದ್ದು, ಪಕ್ಷದ ಹೈಕಮಾಂಡ್ ಸೂಕ್ತ ನಿರ್ಧಾರ ಕೈಗೊಂಡು ರೋಣ ಮತಕ್ಷೇತ್ರಕ್ಕೆ ಸಾಮಾಜಿಕ ನ್ಯಾಯ ಒದಗಿಸಬೇಕು ಎಂದರು.

ಡಾ.ಅಭಿನವ ಕೊಟ್ಟೂರೇಶ್ವರ ಶ್ರೀಗಳು ಮಾತನಾಡಿ, ಶಾಸಕ ಜಿ.ಎಸ್.ಪಾಟೀಲರು ಅವರೊಬ್ಬ ವ್ಯಕ್ತಿಯಲ್ಲ ಅವರೊಂದು ಶಕ್ತಿ. ರೋಣದ ಶಾಸಕರಾಗಿ ಸಚಿವ ಸ್ಥಾನ ನೀಡಬೇಕು ಎನ್ನುತ್ತಿರುವುದು ಸಹ ಕೇಳಿ ಬರುತ್ತಿದೆ. ಹೀಗಿರುವಾಗ ಕಾಂಗ್ರೆಸ್ ಪಕ್ಷ ಅವರ ಪ್ರಾಮಾಣಿಕ ಕೆಲಸಕ್ಕೆ ಕೂಲಿ ಕೊಡಬೇಕು ಎಂದರು. ಕೊತಬಾಳ ಅಂಕಲಿ ಮಠದ ಗಂಗಾಧರ ಶ್ರೀಗಳು, ಜಿಗೇರಿ ಮಠದ ಗುರುಶಿದ್ದ ಶಿವಾಚಾರ್ಯರು, ವೇ.ಮೂ.ರೇವಣಸಿದ್ದೇಶ್ವರ ಶ್ರೀಗಳು, ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವಿ.ಬಿ.ಸೋಮನಕಟ್ಟಿಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಸಮಸ್ಯೆ ನಿವಾರಿಸದಿದ್ದರೆ ಹೆದ್ದಾರಿ ಬಂದ್: ಕರವೇ ಎಚ್ಚರಿಕೆ

ಶಿರಹಟ್ಟಿ: ತಾಲೂಕಿನ ಗಡಿಭಾಗದ ಗ್ರಾಮಗಳಲ್ಲಿ ಎದುರಾಗಿರುವ ತೀವ್ರ ಬಸ್ ಸಮಸ್ಯೆ ಹಾಗೂ ಗ್ರಾಮೀಣ ವಿದ್ಯಾರ್ಥಿಗಳಿಗೆ ಬಸ್‌ಪಾಸ್ ವಿತರಿಸಲು ಸಾರಿಗೆ ಇಲಾಖೆ ತಾರತಮ್ಯ ಮಾಡುತ್ತಿರುವುದನ್ನು ಖಂಡಿಸಿ, ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ತಾಲೂಕು ಘಟಕದ ವತಿಯಿಂದ ತಹಶೀಲ್ದಾರ್ ಕೆ ರಾಘವೇಂದ್ರ ರಾವು ಅವರಿಗೆ ಮನವಿ ಸಲ್ಲಿಸಲಾಯಿತು.

ಗದಗ ನಗರದಿಂದ ಶಿರಹಟ್ಟಿ ಗಡಿಭಾಗದ ಹಳ್ಳಿಗಳ ವಿದ್ಯಾರ್ಥಿಗಳಿಗೆ ಸಾರಿಗೆ ಇಲಾಖೆಯು ಬಸ್ ಪಾಸ್ ನೀಡುತ್ತಿಲ್ಲ, ಅಲ್ಲದೆ ಗದಗ ಸಾರಿಗೆ ಅಧಿಕಾರಿಗಳು ಕೋಗನೂರು, ನಾಗರಮಡವು, ಅಂಕಲಿ ಹಾಗೂ ಇತರೆ ಕೊನೆಯ ಹಳ್ಳಿಗಳಿಗೆ ಬಸ್ ಪಾಸ್ ನೀಡುವುದಿಲ್ಲ ಎಂದು ಅಧಿಕೃತ ಸೂಚನಾ ಫಲಕ ಹಾಕಿರುವುದು ವಿದ್ಯಾರ್ಥಿಗಳ ಹಾಗೂ ಪೋಷಕರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಸಾರಿಗೆ ಅಧಿಕಾರಿಗಳ ಈ ಜನವಿರೋಧಿ ಧೋರಣೆ ಖಂಡಿಸಿದ ಕರವೇ ಕಾರ್ಯಕರ್ತರು, ತಕ್ಷಣವೇ ಆ ಸೂಚನಾ ಪತ್ರವನ್ನು ತೆರವುಗೊಳಿಸಿ ಎಲ್ಲ ವಿದ್ಯಾರ್ಥಿಗಳಿಗೆ ತಾರತಮ್ಯವಿಲ್ಲದೆ ಪಾಸ್ ವಿತರಿಸಬೇಕೆಂದು ಆಗ್ರಹಿಸಿದರು. ಮುಂದಿನ 7 ದಿನಗಳ ಒಳಗಾಗಿ ನಮ್ಮ ಎಲ್ಲ ಬೇಡಿಕೆ ಈಡೇರಿಸದಿದ್ದರೆ, ತಂಗೋಡದ ರಾಜ್ಯ ಹೆದ್ದಾರಿ ಸಂಪೂರ್ಣವಾಗಿ ಬಂದ್ ಮಾಡಿ ಸಾರಿಗೆ ಇಲಾಖೆಯ ವಿರುದ್ಧ ತೀವ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಕಾರ್ಯಕರ್ತರು ಎಚ್ಚರಿಕೆ ನೀಡಿದರು.



ಈ ವೇಳೆ ಕರವೇ ತಾಲೂಕು ಅಧ್ಯಕ್ಷ ಶಿವು ಮಠದ, ಶರಣಪ್ಪ ಪುರತಗಿರಿ, ರಾಕೇಶ್ ಬೂದಿಹಾಳ, ರಾಹುಲ್ ಮಡಿವಾಳರ, ಕಿರಣ ಚನ್ನೂರು, ನಾಗರಾಜ್ ಬೀರಬ್ಬಿ, ಸಂಜೀವ ಚೂರಿ, ಮಣಿಕಂಠ, ದುರಗಪ್ಪ ಸೇರಿದಂತೆ ಕರವೇ ಪದಾಧಿಕಾರಿಗಳು, ಸಾರ್ವಜನಿಕರು, ವಿದ್ಯಾರ್ಥಿಗಳು ಇದ್ದರು.

ಸೇವಾ ದೀಕ್ಷಾ ಸಮಾರಂಭ ಇಂದು

ಮುಂಡರಗಿ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ (ರಿ), ಮೈಸೂರು, ಗದಗ, ತಾಲೂಕು ಶರಣ ಸಾಹಿತ್ಯ ಷರಿಷತ್, ಕದಳಿ ಮಹಿಳಾ ವೇದಿಕೆ ಮುಂಡರಗಿ ಇವುಗಳ ಸಂಯುಕ್ತ ಆಶ್ರಯದಲ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್‌ನ ನೂತನ ಪದಾಧಿಕಾರಿಗಳಿಗೆ ಸೇವಾ ದೀಕ್ಷಾ ಸಮಾರಂಭವು ಜೂ.18ರಂದು ಸಂಜೆ 4.30ಕ್ಕೆ ಜಗದ್ಗುರು ಅನ್ನದಾನೀಶ್ವರ ಶಿಲಾ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕಾ ಶರಣ ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಪ್ರೊ.ಆರ್.ಎಲ್.ಪೊಲೀಸಪಾಟೀಲ ಹೇಳಿದರು.

ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಕಾರ್ಯಕ್ರಮದ ಸಾನ್ನಿಧ್ಯ ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳವರು ವಹಿಸುವರು. ನಿಕಟ ಪೂರ್ವ ಅಧ್ಯಕ್ಷ ಡಾ.ಸಂತೋಷ ಹಿರೇಮಠ ಅಧ್ಯಕ್ಷತೆ ವಹಿಸುವರು. ಉದ್ಘಾಟನೆ ಜಿಲ್ಲಾ ಶಸಾಪ ಅಧ್ಯಕ್ಷ ಕೆ.ಎ.ಬಳಿಗಾರ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಸುಧಾ ಹುಚ್ಚಣ್ಣವರ, ಎಂ.ಜಿ.ಗಚ್ಚಣ್ಣವರ, ಸೀತಾ ಬಸಾಪೂರ ಭಾಗವಹಿಸುವರು. ನಿಯೋಜಿತ ಅಧ್ಯಕ್ಷ ವೀರಣ್ಣ ಮಡಿವಾಳರ ಉಪಸ್ಥಿತರಿರುವರು. ನಿಯೋಜಿತ ಅಧ್ಯಕ್ಷ ವೀರಪ್ಪ ಮಡಿವಾಳರ ಮಾತನಾಡಿ, ಶರಣ ಸಾಹಿತ್ಯ ಪರಿಷತ್ತಿನಿಂದ ನಿರಂತರ ಶರಣ ಚಿಂತನೆ ಕಾರ್ಯಕ್ರಮಗಳನ್ನು ನಡೆಸಲಾಗುವುದು. ದತ್ತಿಗಳನ್ನು ಹೆಚು-ಹೆಚ್ಚು ಮಾಡುವ ಉದ್ದೇಶಹೊಂದಲಾಗಿದೆ. ಪ್ರತಿ 15 ದಿನಕ್ಕೊಮ್ಮೆ ಕಾರ್ಯಕಾರಿ ಮಂಡಳಿಯ ಸಭೆ ಕರೆದು ಕಾರ್ಯಕ್ರಮಗಳ ಕುರಿತು ಚರ್ಚೆ ಮಾಡಲಾಗುವುದು ಎಂದರು.



ಹಿರಿಯ ಎಸ್.ಆರ್.ಬಸಾಪೂರ, ಶೋಭಾ ಮೇಟಿ ಮಾತನಾಡಿದರು.

ಪತ್ರಿಕಾ ಕೋಷ್ಠಿಯಲ್ಲಿ ಎಂ.ಜಿ.ಗಚ್ಚಣ್ಣವರ, ಕಾಶಿನಾಥ ಶಿರಬಡಗಿ, ಬಸವರಾಜ ಹೆಬಲಿ, ಎಸ್.ಎಸ್.ಗಡ್ಡದ, ವಿ.ಜೆ.ಹಿರೇಮಠ, ಗಿರೀಶಗೌಡ ಪಾಟೀಲ ಇದ್ದರು.

ವಾಯುವಿಹಾರಿಗಳ ಮನಸೆಳೆಯುತ್ತಿದೆ ಸಾರ್ವಜನಿಕ ಉದ್ಯಾನವನ

ಉದ್ಯಾನವನಕ್ಕೆ ಹೊಸ ಕಳೆ

ಸೀತಲ ಓಲೇಕಾರ.

ದಿಗಂತ ವಿಶೇಷ

ಗಜೇಂದ್ರಗಡ: ಐತಿಹಾಸಿಕ ಕೋಟೆನಾಡು ಗಜೇಂದ್ರಗಡ ಪಟ್ಟಣಕ್ಕೆ ಈಗ ಹಸಿರಿನ ಹೊಸ ಆಕರ್ಷಣೆ ಸೇರ್ಪಡೆಯಾಗಿದೆ. ಪಟ್ಟಣದಲ್ಲಿನ ಕಿತ್ತೂರು ರಾಣಿ ಚನ್ನಮ್ಮ ಸಾರ್ವಜನಿಕ ಉದ್ಯಾನವನವು (ಪಾರ್ಕ್) ದಿನೇ ದಿನೇ ಸಾರ್ವಜನಿಕರನ್ನು ತನ್ನತ್ತ ಸೆಳೆಯುತ್ತಿದ್ದು, ವಾಯುವಿಹಾರಿಗಳಿಗೆ ನೆಮ್ಮದಿಯ ತಾಣವಾಗಿ ಮಾರ್ಪಟ್ಟಿದೆ. ಸ್ವಚ್ಛಂದ ಪರಿಸರದಲ್ಲಿ ಕಾಲ ಕಳೆಯಲು ಬರುವ ಜನರಿಗೆ ಈ ಉದ್ಯಾನವನವು ಕೈಬೀಸಿ ಕರೆಯುತ್ತಿದೆ.

ಹಸಿರು ಮಡಿಲಲ್ಲಿ ನಿರಾಳತೆ: ಕಾಂಕ್ರೀಟ್ ಕಾಡಿನ ನಡುವೆ ಹಸಿರಿನ ಸಿರಿ ಬಯಸುವ ಜನರಿಗೆ ಈ ಪಾರ್ಕ್ ವರದಾನವಾಗಿದೆ. ಉದ್ಯಾನವನದ ತುಂಬಾ ಬೆಳೆಸಿರುವ ಆಕರ್ಷಕ ಹಸಿರು ಹುಲ್ಲುಹಾಸು (ಲಾವನ್), ಸಾಲು ಸಾಲು ಅಲಂಕಾರಿಕ ಗಿಡಗಳು ಮತ್ತು ಕಣ್ಣಿಗೆ ತಂಪು ನೀಡುವ ಹೂವಿನ ಗಿಡಗಳು ಮನಸ್ಸಿಗೆ ಮುದ ನೀಡುತ್ತವೆ. ಮುಂಜಾನೆ ಹಕ್ಕಿಗಳ ಚಿಲಿಪಿಲಿ ನಾದದ ನಡುವೆ ಶುದ್ಧ ಗಾಳಿ ಸೇವಿಸುತ್ತಾ ವಾಕಿಂಗ್ ಮಾಡುವುದೆಂದರೆ ಇಲ್ಲಿನ ಜನರಿಗೆ



ಎಲ್ಲಿಲ್ಲದ ಸಡಗರ . ಸಾರ್ವಜನಿಕರ ಅನುಕೂಲಕ್ಕಾಗಿ ಅತ್ಯುತ್ತಮ ವಾಕಿಂಗ್ ಪಾತ್ ನಿರ್ಮಿಸಲಾಗಿದೆ. ಪೋಷಕರೊಂದಿಗೆ ಬರುವ ಪುಟಾಣಿ ಮಕ್ಕಳಿಗಾಗಿ ಜಾರುಬಂಡೆ, ಉಯ್ಯಾಲೆ ಸೇರಿದಂತೆ ವಿವಿಧ ಆಟದ ಸಾಮಗ್ರಿಗಳನ್ನು ಅಳವಡಿಸಲಾಗಿದ್ದು, ಮಕ್ಕಳ ನಗುವಿನ ಸದ್ದು ಉದ್ಯಾನವನದ ರಂಗನ್ನು ಮತ್ತಷ್ಟು ಹೆಚ್ಚಿಸಿದೆ.

ಸಾರ್ವಜನಿಕರ ಪ್ರಶಂಸೆ: ಪಟ್ಟಣದಲ್ಲಿ ಇಂತಹದೊಂದು ಸುಂದರ ಉದ್ಯಾನವನದ ಅಗತ್ಯವಿತ್ತು. ಪ್ರತಿದಿನ ಸಂಜೆ ಇಲ್ಲಿಗೆ ಬರುವುದರಿಂದ ಇಡೀ ದಿನದ ಆಯಾಸ ದೂರವಾಗುತ್ತದೆ ಎಂದು ಸ್ಥಳೀಯ ನಿವಾಸಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ, ಗಜೇಂದ್ರಗಡದ ಈ ಸಾರ್ವಜನಿಕ ಉದ್ಯಾನವನವು ಕೇವಲ ಒಂದು ಪ್ರೇಕ್ಷಣೀಯ ಸ್ಥಳವಾಗಿರದೆ, ಜನರ ಆರೋಗ್ಯ ಮತ್ತು ನೆಮ್ಮದಿಯನ್ನು ವೃದ್ಧಿಸುವ ಪ್ರಮುಖ ಕೇಂದ್ರವಾಗಿ ಹೊರಹೊಮ್ಮಿದೆ.

ಉದ್ಯಾನವನಕ್ಕೆ ಹೊಸ ಸ್ಪರ್ಶ

ಪಟ್ಟಣದಲ್ಲಿ ವಾಕಿಂಗ್ ಮಾಡಲು ಸೂಕ್ತ ಜಾಗ ಇದ್ದು, ಅದನ್ನು ಪುರಸಭೆ ನಿರ್ಲಕ್ಷ್ಯದಿಂದ ಕಳೆ ಕಳೆದುಕೊಂಡಿತ್ತು. ಇದೀಗ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ ಮುತುವರ್ಜಿಯಿಂದ ಪಾರ್ಕ್‌ನ ನಿರ್ವಹಣೆಗೆ ಮಂಜುನಾಥ ಅಬ್ಬಿಗೇರಿ ನೇಮಕ ಮಾಡಿದ್ದು, ಪಾಳುಕೊಂಪೆಯಂತೆ ಇದ್ದ ಉದ್ಯಾನವನಕ್ಕೆ ಹೊಸ ಸ್ಪರ್ಷ ನೀಡಿ ಇದನ್ನು ನೂತನ ಉದ್ಯಾನವನವಾಗಿಸಿದ್ದಾರೆ. ಇಲ್ಲಿನ ಹಸಿರು ಪರಿಸರ ಮತ್ತು ಶುದ್ಧ ಗಾಳಿ ಇಡೀ ದಿನದ ಒತ್ತಡವನ್ನು ಮರೆಸುತ್ತದೆ ಎಂದು ವಿನಾಯಕ ಜರತಾರಿ, ಪ್ರೇಮನಾಥ ದಲಬಂಜನ, ವಿರೂಪಾಕ್ಷ ಅಳವಂಡಿ ವಾಯುವಿಹಾರಿಗಳು ಸಂತಸ ಹಂಚಿಕೊಂಡರು.

> **ಪಟ್ಟಣದ ಜನತೆಗೆ ಉತ್ತಮ ಪರಿಸರ ಹಾಗೂ ಮಾನಸಿಕ ನೆಮ್ಮದಿ ನೀಡುವ ಉದ್ದೇಶದಿಂದ ಈ ಸುಂದರ ಉದ್ಯಾನವನವನ್ನು ಅಭಿವೃದ್ಧಿಪಡಿಸಲಾಗಿದೆ. ಸಾರ್ವಜನಿಕರು ಮತ್ತು ವಾಯುವಿಹಾರಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು. ಪಾರ್ಕ್‌ನಲ್ಲಿ ಪ್ಲಾಸ್ಟಿಕ್ ಬಳಕೆ ಮಾಡದೆ, ಗಿಡ-ಮೂಲಿಕೆಗಳಿಗೆ ಹಾನಿ ಮಾಡದಂತೆ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ಪುರಸಭೆಯೊಂದಿಗೆ ಸಾರ್ವಜನಿಕರು ಕೈಜೋಡಿಸಬೇಕು.**
> ■ ಬಸವರಾಜ ಬಳಗಾನೂರ, ಮುಖ್ಯಾಧಿಕಾರಿ

ಶಿಕ್ಷಕರನ್ನು ಅನ್ಯ ಕಾರ್ಯಗಳಿಂದ ಮುಕ್ತಿಗೊಳಿಸಿ

ಗದಗ: ಇತ್ತೀಚಿನ ವರ್ಷಗಳಲ್ಲಿ ಶಿಕ್ಷಕರು ಬೋಧನಾ ಕಾರ್ಯವನ್ನು ಬಿಟ್ಟು ಇತರೆ ಕಾರ್ಯಗಳಾದ ಬಿಸಿಯೂಟ ಹಂಚಿಕೆಗೆ ಬೇಕಾದ ಕಾಯಿಪಲ್ಯೆ ಖರೀದಿ, ಹಾಲು, ಮೊಟ್ಟೆ ವಿತರಣೆ, ಬಿಎಲ್‌ಒ, ಜಾನುವಾರು ಗಣತಿ, ಮುಂತಾದವುಗಳಿಗೆ ಸಮಯ ವ್ಯರ್ಥವಾಗಿ ಶಿಕ್ಷಣ ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ತೊಂದರೆ ಆಗಿರುವುದರಿಂದ ಶಿಕ್ಷಕರನ್ನು ಅನ್ಯ ಕಾರ್ಯಗಳಿಂದ ಮುಕ್ತಿಗೊಳಿಸಬೇಕೆಂದು ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ನಗರದ ಪ್ರವಾಸಿ ಮಂದಿರದಲ್ಲಿ ಆಯೋಜಿಸಲಾಗಿದ್ದ ಪದೋನ್ನತಿ ಪಡೆದ ಮುಖ್ಯೋಪಾಧ್ಯಾಯರು ಹಾಗೂ ಅವಿರೋಧವಾಗಿ ಆಯ್ಕೆ ಆದ ಪದವಿಪೂರ್ವ ಉಪನ್ಯಾಸಕರ ಸಂಘದ ಪದಾಧಿಕಾರಿಗಳನ್ನು ಸನ್ಮಾನಿಸಿ ಮಾತನಾಡಿ, ಸಮಾಜದ ಹಾಗೂ ದೇಶದ ಸುಧಾರಣೆಯಲ್ಲಿ ಶಿಕ್ಷಕರ ಪಾತ್ರ ಅಪಾರವಾದದ್ದು ಎಂದು ಹೇಳಿದರು.

ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಆರ್.ಎಸ್. ಬುರಡಿ ಅವರು ಮಾತನಾಡಿ ಶೈಕ್ಷಣಿಕ ಪ್ರಗತಿಗೆ ಮುಖ್ಯೋಪಾಧ್ಯಾಯರಾದವರು ಸಹುದ್ಯೋಗಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯ ನಿರ್ವಹಿಸಲು ಹೇಳಿದರು. ಸಹಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ ಬಿ.ಎಫ್.ಪೂಜಾರ ಮಾತನಾಡಿ, ಶಾಸಕ ಎಸ್.ವಿ. ಸಂಕನೂರ ಅವರು ಪದವೀಧರರು ಹಾಗೂ ಶಿಕ್ಷಕರ ಸಮಸ್ಯೆಗಳನ್ನು ವಿಧಾನ ಪರಿಷತ್ತಿನ ಅಧಿವೇಶನಗಳಲ್ಲಿ ಸಮರ್ಥವಾಗಿ ಪ್ರಸ್ತಾಪಿಸಿ



ಸರ್ಕಾರದ ಗಮನ ಸೆಳೆಯುವ ಮೂಲಕ ಪರಿಹಾರಕ್ಕೆ ಶ್ರಮಿಸುತ್ತಿರುವುದು ನಮ್ಮೆಲ್ಲರ ಭಾಗ್ಯ ಎಂದರು.

ಪದವಿಪೂರ್ವ ಉಪನಿರ್ದೇಶಕ ಎಮ್.ಎಸ್. ಮಸನಾಯಕ ಮಾತನಾಡಿ, ಸಂಘಟನೆಯ ಪದಾಧಿಕಾರಿಗಳು ಮತ್ತು ಪದೋನ್ನತಿ ಹೊಂದಿದ ಮುಖ್ಯೋಪಾಧ್ಯಪಕರು ಶಿಸ್ತಿನಿಂದ ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಲು ಮನವಿ ಮಾಡಿದರು.

ಎಸ್.ಎಸ್. ಸೋಮಣ್ಣವರ, ಮಂಜುನಾಥ ಕೊಕ್ಕರಗುಂದಿ, ಅಮನ್ ಗುಳೇದಗುಡ್ಡ, ಖಜಾಂಚಿಯಾಗಿ ಮಲ್ಲಿಕಾರ್ಜುನ ಕುಲಕರ್ಣಿ, ಫಕ್ಕಿರೇಶ ಬೆಳವಗಿ, ಹನಮರೆಡ್ಡಿ ಎನ್., ಎನ್.ಟಿ.ಮಾಳೋದೆ, ಶಶಿಕಾಂತ ನರಗುಂದ, ಶೇಖರಪ್ಪ ತೋಗುಣಶಿ ಅವರನ್ನು ಸನ್ಮಾನಿಸಲಾಯಿತು.

ಕೆ.ಎ.ಉಪ್ಪಿನ, ಗಿರೀಶ ದಾಸರ, ಜ್ಯೋತಿ ಶೆಟ್ಟರ, ಸಂಜೀವಿನಿ ಕಲಗುಡಿ, ಎಸ್.ಜಿ. ಕೋಲಕಾರ, ಎಸ್.ಎ. ಸಲೋಡ, ಶಾರದಾ ಮುಳಗುಂದಮಠ, ಸಂಜೋತಾ ಪಾಟೀಲ, ವಿಜಯಲಕ್ಷ್ಮೀ ಭಜಂತ್ರಿ, ಎಸ್.ಬಿ. ಹಾವೇರಿ, ಬಿ.ಎಸ್. ಗಿರಿತಮ್ಮಣ್ಣವರ, ಈರಣ್ಣ ಹಾದಿಮನಿ, ಉಪನ್ಯಾಸಕರಾದ ಎಸ್.ಐ. ಮೇಟಿ, ಶ್ರೀಶೈಲ ಬೀರಕಬ್ಬಿ, ಅಶೋಕ ಅಂಗಡಿ, ಎ.ಎಸ್. ಪಾಟೀಲ ಇದ್ದರು.

'ತುಂಗಭದ್ರಾ' ಜಲಾಶಯಕ್ಕೆ ಹೊಸಕಳೆ | ಜೂ.25ಕ್ಕೆ ಕ್ರಸ್ಟ್ ಗೇಟ್‌ಗಳ ಉದ್ಘಾಟನೆ

ಆಧುನೀಕರಣದತ್ತ ಜಲಾಶಯದ ಹೆಜ್ಜೆ

▸ ವೀರೇಂದ್ರ ನಾಗಲದಿನ್ನಿ

◆ **ವಿಜಯನಗರ:** ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯದ ಎಲ್ಲಾ 33 ಕ್ರಸ್ಟ್ ಗೇಟ್‌ಗಳನ್ನು ಹೊಸದಾಗಿ ಅಳವಡಿಕೆ ಮಾಡಲಾಗಿದೆ. ನೂತನ ಚೈನ್ ಅಳವಡಿಕೆ ಕಾರ್ಯ ಮುಕ್ತಾಯದ ಹಂತ ತಲುಪಿದ್ದು, ಜೂ.25 ರಂದು ದಕ್ಷಿಣ ಭಾರತದ ರಾಜಕೀಯ ಇತಿಹಾಸದಲ್ಲೇ ಅತ್ಯಂತ ಅಪರೂಪ ಹಾಗೂ ಬೃಹತ್ ಕಾರ್ಯಕ್ರಮಕ್ಕೆ ಟಿಬಿ ಡ್ಯಾಂ ಸಾಕ್ಷಿಯಾಗಲಿದೆ.

2024ರ ಆಗಸ್ಟ್ 10ರಂದು ಜಲಾಶಯದ 19ನೇ ಕ್ರಸ್ಟ್ ಗೇಟ್ ಕಿತ್ತು ಹೋಗಿತ್ತು. ಅಪಾರ ಪ್ರಮಾಣದ ನೀರು ನದಿಗೆ ಹರಿದುಹೋಗಿ ರೈತರಲ್ಲಿ ಆತಂಕ ಮೂಡಿಸಿತ್ತು. ಈ ಕುರಿತು ಸುದ್ದಿ ತಿಳಿಯುತ್ತಿದ್ದಂತೆ ಅಂದು ಜಲ ಸಂಪನ್ಮೂಲ ಖಾತೆ ಹೊಂದಿದ್ದ ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಳಗಾಗುತ್ತಿದ್ದಂತೆ ಟಿಬಿ ಡ್ಯಾಂ ಗೆ ಧಾವಿಸಿದ್ದರು. ಜಲಾಶಯದ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಹಾಗೂ ಇತರೆ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಸರ್ಕಾರ ಅಗತ್ಯ ನೆರವು ಒದಗಿಸಲಿದೆ ಎಂಬ ಅಂದಿನ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಯದ ಮಾತುಗಳು ಇಡೀ ತುಂಗಭದ್ರ ಮಂಡಳಿಗೆ ಹೊಸ ಚೈತನ್ಯ ತುಂಬಿತ್ತು. ಆನಂತ ಡ್ಯಾಂ ಗೆ ಭೇಟಿ ನೀಡಿದ್ದ ಆಂಧ್ರ ಪ್ರದೇಶದ ಸಚಿವರೂ ಇದನ್ನೇ ಪುನರುಚ್ಚರಿಸಿದ್ದರಿಂದ ಅಧಿಕಾರಿಗಳು ಹುರುಪಿನಿಂದ ಕೆಲಸದಲ್ಲಿ ತೊಡಗುವಂತೆ ಮಾಡಿತು.

ಮೊದಲಿಗೆ ಕೊಚ್ಚಿ ಹೋಗಿದ್ದ 19ನೇ ಕ್ರಸ್ಟ್ ಗೇಟ್ ಜಾಗಕ್ಕೆ ತಜ್ಞರ ತಂಡ ತಾತ್ಕಾಲಿಕ ಗೇಟ್ (ಸ್ಟಾಪ್ಲಗ್ ಗೇಟ್) ಅಳವಡಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿತ್ತು. 19ನೇ ಗೇಟ್ ಕಳಚಿ ಬಿದ್ದಿರುವುದನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರಗಳು, ತಜ್ಞರ ಸಮಿತಿಯ ಸಲಹೆಯಂತೆ ಜಲಾಶಯದ ಸುರಕ್ಷತೆಯ ದೃಷ್ಟಿಯಿಂದ ಎಲ್ಲಾ 33 ಕ್ರಸ್ಟ್‌ಗೇಟ್‌ಗಳನ್ನು ಸಂಪೂರ್ಣ ಆಧುನೀಕರಣಗೊಳಿಸಲು ತೀರ್ಮಾನಿಸಿದವು.

ಇದಕ್ಕಾಗಿ ಒಟ್ಟು 50.6 ಕೋಟಿ ರೂ. ವೆಚ್ಚವನ್ನು ಭರಿಸಿ, ಅತ್ಯಾಧುನಿಕ ಚೈನ್ ಅಳವಡಿಕೆ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಈ ಮೂಲಕ ಜಲಾಶದಯ ಆಯಸ್ಸನ್ನು ಮತ್ತೆ 30 ವರ್ಷಗಳಷ್ಟು ಹೆಚ್ಚಿಸಿರುವುದು ಗಮನಾರ್ಹ.



ಜಲಾಶಯದ ಎಲ್ಲಾ 33 ಕ್ರಸ್ಟ್ ಗೇಟ್‌ಗಳಿಗೆ ಈಗಾಗಲೇ ಆಕರ್ಷಕ ಬಣ್ಣ ಹಚ್ಚಲಾಗಿದ್ದು, ಪ್ರಮುಖ ಗೋಡೆಗಳಿಗೆ ಸುಣ್ಣಬಣ್ಣ ಬಳಿಯುವ ಕಾರ್ಯ ಆರಂಭವಾಗಿದೆ. ಮೂರು ರಾಜ್ಯಗಳ 8 ಜಿಲ್ಲೆಗಳ 17.33 ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ಶಾಶ್ವತ ನೀರಿನ ಭದ್ರತೆ ಸಿಕ್ಕಂತಾಗಿದೆ.

ದಕ್ಷಿಣದ ಮೂರು ರಾಜ್ಯಗಳ 'ಮಹಾ ಸಂಗಮ': ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ವಹಿಸಿಕೊಂಡ ನಂತರ ಹಮ್ಮಿಕೊಳ್ಳುತ್ತಿರುವ ಅತ್ಯಂತ ಬೃಹತ್ ಐತಿಹಾಸಿಕ ಕಾರ್ಯಕ್ರಮ ಇದು. ಜೂನ್ 25ರಂದು ನಡೆಯಲಿರುವ ಈ ಉದ್ಘಾಟನಾ ಸಮಾರಂಭಕ್ಕೆ ದಕ್ಷಿಣ ಭಾರತದ ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ನಾಯಕರು ಸಾಕ್ಷಿಯಾಗಲಿದ್ದಾರೆ. ಕೇಂದ್ರ ಸರ್ಕಾರ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್, ಕರ್ನಾಟಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ವಿವಿಧ ಸಚಿವರು, ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು, ಉಪಮುಖ್ಯಮಂತ್ರಿ ಪವನ್ ಕಲ್ಯಾಣ್, ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ, ಸೇರಿದಂತೆ ಮೂರೂ ರಾಜ್ಯಗಳ ಪ್ರಮುಖ ಸಚಿವರು, ಶಾಸಕರು ಹಾಗೂ ನೀರಾವರಿ ಇಲಾಖೆಯ ಉನ್ನತ ಅಧಿಕಾರಿಗಳು ಏಕಕಾಲಕ್ಕೆ ಭಾಗವಹಿಸಲಿದ್ದಾರೆ.

ಯುದ್ಧೋಪಾದಿಯಲ್ಲಿ ಸಿದ್ಧತೆ: ಅತಿಗಣ್ಯ ವ್ಯಕ್ತಿಗಳು ಒಟ್ಟಿಗೆ ಆಗಮಿಸುತ್ತಿರುವುದರಿಂದ ವಿಜಯನಗರ ಮತ್ತು ಕೊಪ್ಪಳ ಜಿಲ್ಲಾಡಳಿತಗಳು ಜಂಟಿಯಾಗಿ ಸಿದ್ಧತೆಗಳನ್ನು ಕೈಗೊಂಡಿವೆ. ವಿವಿಐಪಿಗಳ ಸುರಕ್ಷಿತ ಭೂಸ್ಪರ್ಶಕ್ಕಾಗಿ ಹತ್ತಿರದಲ್ಲೇ ಹೆಲಿಪ್ಯಾಡ್‌ಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಜಲಾಶಯದ ಆವರಣದಲ್ಲಿ ಬೃಹತ್ ವೇದಿಕೆ ಸಿದ್ಧಗೊಳ್ಳುತ್ತಿದೆ. ಹೊಸಪೇಟೆ ಮತ್ತು ಕೊಪ್ಪಳ ನಗರಗಳಿಂದ ತುಂಗಭದ್ರಾ ಜಲಾಶಯಕ್ಕೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳ ದುರಸ್ತಿ ಕಾರ್ಯ ಚುರುಕಾಗಿ ನಡೆಯುತ್ತಿದೆ.

> **ಐತಿಹಾಸಿಕ ಕಾರ್ಯಕ್ರಮಕ್ಕೆ ದಕ್ಷಿಣದ ಮೂರು ರಾಜ್ಯಗಳ ಮುಖ್ಯಮಂತ್ರಿಗಳು**
>
> ಟಿಬಿ ಡ್ಯಾಂ ಕ್ರಸ್ಟ್‌ಗಳ ಬದಲಾವಣೆ ಹಾಗೂ ಚೈನ್‌ಗಳ ಅಳವಡಿಕೆ ಬಹುತೇಕ ಮುಕ್ತಾಯಗೊಂಡಿದೆ. ಜೂ.25 ರಂದು ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಆಗಮಿಸಲಿದ್ದಾರೆ. ಬೃಹತ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ವಿಜಯನಗರ ಮತ್ತು ಕೊಪ್ಪಳ ಜಿಲ್ಲಾಡಳಿತ ಅಗತ್ಯ ಸಿದ್ಧತೆ ನಡೆಸಿದೆ.
>
> ■ ಕವಿತಾ ಎಸ್.ಮನ್ನಿಕೇರಿ, ವಿಜಯನಗರ ಜಿಲ್ಲಾಧಿಕಾರಿ

ದಿಗಂತ ವಿಶೇಷ

ಕಾರಲ್ಲಿ ಹಿಂದು ಯುವತಿ ಕರೆದೊಯ್ಯುತ್ತಿದ್ದ ಮುಸ್ಲಿಂ ಯುವಕ ಪ್ರಶ್ನಿಸಿದವರ ಮೇಲೆ ಪ್ರಕರಣ ದಾಖಲು | ಠಾಣೆ ಎದುರು ಧರಣಿ

ಪ್ರಕರಣ ವಾಪಸ್‌ಗೆ ಗಡುವು

◆ **ಭಟ್ಕಳ:** ಮುಸ್ಲಿಂ ಯುವಕನೊಬ್ಬ ಹಿಂದು ಯುವತಿಯನ್ನು ಭಟ್ಕಳ ಪಟ್ಟಣದಿಂದ ಸಾಗರ ರಸ್ತೆಯ ಕಡೆಗೆ ಕಾರಿನಲ್ಲಿ ಕರೆದೊಯ್ಯುತ್ತಿರುವುದನ್ನು ಪ್ರಶ್ನಿಸಿದ ಹಿಂದು ಕಾರ್ಯಕರ್ತರ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದನ್ನು ಖಂಡಿಸಿ ಹಿಂದು ಸಂಘಟನೆ ಮತ್ತು ಬಿಜೆಪಿ ಕಾರ್ಯಕರ್ತರು ಭಟ್ಕಳ ನಗರ ಠಾಣೆ ಎದುರು ಬುಧವಾರ ರಾತ್ರಿ ಧರಣಿ ನಡೆಸಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪಶ್ಚಿಮ ಘಟ್ಟಗಳ ಕಾರ್ಯಪಡೆಯ ಮಾಜಿ ಅಧ್ಯಕ್ಷ ಗೋವಿಂದ ನಾಯ್ಕ ಈ ಕುರಿತು ಠಾಣೆ ಮುಂದೆ ತೀವ್ರ ಆಕ್ರೋಶ ವ್ಯಕ್ತಪಡಿಸಿ, ಘಟನೆ ನಡೆದ ತಕ್ಷಣ ಆರೋಪಿ ಮೇಲೆ ಪ್ರಕರಣ ದಾಖಲಿಸುವುದನ್ನು ಬಿಟ್ಟು ಹಿಂದೂ ಯುವತಿ ರಕ್ಷಣೆಗೆ ಹೋದವರ ಮೇಲೆ ಪ್ರಕರಣ ದಾಖಲಿಸಿಕೊಂಡಿರುವ ತೀವ್ರ ಖಂಡನೀಯ. ಹಿಂದೂ ಸಂಘಟನೆಯ ಕಾರ್ಯಕರ್ತರ ಮೇಲೆ ಪ್ರಕರಣ ದಾಖಲಿಸಲು ಯಾರ ಒತ್ತಡವಿದೆ. ಭಟ್ಕಳದಲ್ಲಿ ಸುಮಾರಷ್ಟು ಪ್ರಕರಣ ನಡೆದಿದ್ದರೂ ಸರಿಯಾದ ಸಾಕ್ಷ್ಯ ಇಲ್ಲದೇ ಇಷ್ಟು ದಿನ ಸುಮ್ಮನಿದ್ದೆವು. ಆದರೆ, ಬುಧವಾರ ಬೆಳಗ್ಗೆ ಮುಸ್ಲಿಂ ಯುವಕ ಹಿಂದೂ ಯುವತಿಯನ್ನು ಕಾರಿನಲ್ಲಿ ಕರೆದೊಯ್ಯುವಾಗ ರೆಡ್ ಹ್ಯಾಂಡ್ ಆಗಿ ಸಿಕ್ಕಿ ಬಿದ್ದಿದ್ದು, ಪೊಲೀಸರು ಸ್ಥಳಕ್ಕೆ ಆಗಮಿಸಿ ಘಟನೆ ಬಗ್ಗೆ ತಿಳಿದುಕೊಂಡಿದ್ದರೂ ಸಹ ಹಿಂದೂ ಯುವತಿ ರಕ್ಷಣೆಗೆ ಹೋದ ಹಿಂದೂ ಕಾರ್ಯಕರ್ತರ ಮೇಲೆ ಪ್ರಕರಣ ದಾಖಲಿಸಿದ್ದೀರಿ. ಸ್ಥಳದಲ್ಲಿ ಗ್ರಾಮೀಣ ಠಾಣೆಯ 'ಇನ್ಸ್‌ಪೆಕ್ಟರ್' ಪಿಎಸ್ಐ ಇದ್ದರೂ ಯಾಕೆ ಆರೋಪಿ ಮೇಲೆ ಕ್ರಮ ಕೈಗೊಂಡಿಲ್ಲ, ಆರೋಪಿಯಿಂದ ತಕ್ಷಣವೇ ದೂರು ಪಡೆದು ಪ್ರಕರಣ ದಾಖಲಿಸಿಕೊಂಡು, ನಮ್ಮಿಂದ ಪ್ರಕರಣ ದಾಖಲಿಸಿಕೊಳ್ಳಲು ವಿಳಂಬ ಮಾಡಿರುವುದು ಯಾಕೆ ಎಂದು ಖಾರವಾಗಿ ಪ್ರಶ್ನಿಸಿದರು.

ಹಿಂದು ಕಾರ್ಯಕರ್ತರ ಮೇಲೆ ಪ್ರಕರಣ ದಾಖಲಿಸಿದ್ದನ್ನು ಉಪಸ್ಥಿತರಿದ್ದ ಮಾಜಿ ಸಚಿವ ಶಿವಾನಂದ ನಾಯ್ಕ, ಮುಖಂಡರಾದ ಈಶ್ವರ ಎನ್. ನಾಯ್ಕ, ಸುಬ್ರಾಯ ದೇವಾಡಿಗ, ಕೃಷ್ಣನಾಯ್ಕ ಆಸರಕೇರಿ ಮುಂತಾದವರು ಖಂಡಿಸಿ, ಪ್ರಕರಣ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಡಿವೈಎಸ್ಪಿ ಗಿರೀಶ ಅವರು ಗುರುವಾರ ಬೆಳಗ್ಗೆ ಪ್ರಕರಣ ಇತ್ಯರ್ಥ ಪಡಿಸಲಾಗುವುದು ಎಂದರು. ಜಿಲ್ಲಾ ಹೆಚ್ಚುವರಿ ಎಸ್ಪಿ ಕೃಷ್ಣಮೂರ್ತಿ ಭಟ್ಕಳಕ್ಕೆ ಆಗಮಿಸಿ ಘಟನೆಯ ಮಾಹಿತಿ ಪಡೆದಿದ್ದಾರೆ.

ಪ್ರತಿಭಟನೆಯಲ್ಲಿ ಹಿಂದೂ ಜಾಗರಣ ವೇದಿಕೆಯ ಸಂಚಾಲ ಜಯಂತ ನಾಯ್ಕ, ರಾಮಕೃಷ್ಣ ನಾಯ್ಕ, ಬಿಜೆಪಿಯ ಶ್ರೀಕಾಂತ ನಾಯ್ಕ, ಶ್ರೀನಿವಾಸ ನಾಯ್ಕ, ಶ್ರೀನಿವಾಸ ನಾಯ್ಕ ಹನುಮಾನ ನಗರ ಸೇರಿದಂತೆ ಹಲವರಿದ್ದರು.

> **ಯುವಕನಿಂದ ದೂರು**
>
> ನನ್ನನ್ನು ಅಡ್ಡಗಟ್ಟಿ ಹೊಡೆದಿದ್ದಾರೆ ಎಂದು ಮೂವರು ಹಿಂದೂ ಕಾರ್ಯಕರ್ತರ ಮೇಲೆ ಮುಸ್ಲಿಂ ಯುವಕ ಬುಧವಾರ ಬೆಳಗ್ಗೆ ಠಾಣೆಯಲ್ಲಿ ದೂರು ದಾಖಲಿಸಿದ್ದಾನೆ.

> **ಯುವತಿಯಿಂದಲೂ ಯುವಕನ ಮೇಲೆ ದೂರು**
>
> ಹಿಂದು ಯುವತಿಯೂ ಸಹ ಮುಸ್ಲಿಂ ಯುವಕನ ಮೇಲೆ ಸಂಜೆ ದೂರು ನೀಡಿದ್ದಾಳೆ. ದೂರಿನಲ್ಲಿ ಏನು ತಿಳಿಸಿದ್ದಾಳೆ ಎನ್ನುವುದು ಇನ್ನೂ ಸ್ಪಷ್ಟ ಆಗಿಲ್ಲ.



> **ಭಟ್ಕಳ ಚಲೋ?**
>
> ಹಿಂದೂ ಯುವತಿಯನ್ನು ಕಾರಿನಲ್ಲಿ ಕರೆದೊಯ್ದ ಆರೋಪಿಯನ್ನು ತಕ್ಷಣ ಬಂಧಿಸಬೇಕು. ಈತ ಈ ಹಿಂದೆ ಇಂತಹ ಕೃತ್ಯ ಎಷ್ಟು ಎಸಗಿದ್ದಾನೆ ಎನ್ನುವುದನ್ನು ತನಿಖೆ ನಡೆಸಬೇಕು. ಹಿಂದೂ ಕಾರ್ಯಕರ್ತರ ಮೇಲಿನ ಕೇಸನ್ನು ವಾಪಾಸ್ ಪಡೆಯದೇ ಇದ್ದಲ್ಲಿ ಭಟ್ಕಳ ಚಲೋಗೆ ಕರೆ ನೀಡಬೇಕಾದೀತು ಎಂದು ಪಶ್ಚಿಮ ಘಟ್ಟಗಳ ಕಾರ್ಯಪಡೆಯ ಮಾಜಿ ಅಧ್ಯಕ್ಷ ಗೋವಿಂದ ನಾಯ್ಕ ಎಚ್ಚರಿಕೆ ನೀಡಿದರು.

- ಜೂ.18ರೊಳಗೆ ಹಿಂದು ಕಾರ್ಯಕರ್ತರ ಮೇಲೆ ಹಾಕಿದ ಪ್ರಕರಣ ವಾಪಾಸ್ ಪಡೆಯದೇ ಇದ್ದಲ್ಲಿ ಭಟ್ಕಳ ಬಂದ್‌ಗೆ ಕರೆ ಕೊಡುವುದಾಗಿ ಬಿಜೆಪಿ ಮತ್ತು ಹಿಂದೂ ಸಂಘಟನೆಯ ಮುಖಂಡರು ಎಚ್ಚರಿಕೆ
- ತಡರಾತ್ರಿ ಠಾಣೆ ಎದುರು ಹಿಂದು ಸಂಘಟನೆಗಳ ಆಕ್ರೋಶ
- ಭಟ್ಕಳದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್

ಕಿರುಸುದ್ದಿ

ಅಪಘಾತ: ಚಿರತೆ ಸಾವು

◆ **ವಿಜಯನಗರ:** ರಸ್ತೆ ದಾಟುತ್ತಿದ್ದ 5-7 ವರ್ಷದ ಗಂಡು ಚಿರತೆಗೆ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ಹೊಸಪೇಟೆ ತಾಲೂಕಿನ ತಿಮ್ಮಲಾಪುರ ಟೋಲ್ ಪ್ಲಾಜಾ ಬಳಿ ಗಿಣಿಗೇರಾ ಹಳ್ಳಿ ಕ್ರಾಸ್ ರಾಷ್ಟ್ರೀಯ ಹೆದ್ದಾರಿ 50- ರಲ್ಲಿ ಮಂಗಳವಾರ ರಾತ್ರಿ ನಡೆದಿದೆ. ಈ ಕುರಿತು ಸುದ್ದಿ ತಿಳಿಯುತ್ತಿದ್ದಂತೆ ತಹಶೀಲ್ದಾರ್ ಎಂ. ಶ್ರುತಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕವಿತಾ ಈರಣ್ಣನವರ, ವಲಯ ಅರಣ್ಯಾಧಿಕಾರಿ ಕೌಶಿಕ್ ದಳವಾಯಿ, ಚಿಲಕನಹಟ್ಟಿ ಪಶು ವೈದ್ಯಾಧಿಕಾರಿ ಡಾ. ಕಾರ್ತಿಕ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಅಪಘಾತದಲ್ಲಿ ಮೃತಪಟ್ಟ ಚಿರತೆಯ ಮರಣೋತ್ತರ ಪರೀಕ್ಷೆ ನಡೆಸಿ, ದಹನ ಮಾಡಲಾಯಿತು. ಘಟನೆ ಕುರಿತು ತನಿಖೆ ನಡೆಯುತ್ತಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದರು.

ವಿದ್ಯಾರ್ಥಿಗೆ ಕಿರುಕುಳ ಆರೋಪ: ಕವಿವಿ ಗೈಡ್ ಡಾ.ದೇವರಾಜ ಅಮಾನತು

◆ **ಧಾರವಾಡ:** ಸಂಶೋಧನಾ ವಿದ್ಯಾರ್ಥಿನಿ ಜೊತೆಗೆ ಅನೈತಿಕ ಸಂಬಂಧ ಹಾಗೂ ಸಂಶೋಧನಾ ವಿದ್ಯಾರ್ಥಿಗೆ ಕಿರುಕುಳ ನೀಡಿದ ಆರೋಪದಡಿ ಪ್ರಾಧ್ಯಾಪಕ ಡಾ. ದೇವರಾಜ ತಂಗುದೊರೆ ಅಮಾನತುಗೊಳಿಸಿ ಕುಲಪತಿಗಳು ಬುಧವಾರ ಆದೇಶ ಹೊರಡಿಸಿದ್ದಾರೆ. ಪ್ರೊ.ದೇವರಾಜ ಅವರ ಅಮಾನತಿಗೆ ಆಗ್ರಹಿಸಿ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಕರ್ನಾಟಕ ವಿಶ್ವವಿದ್ಯಾಲಯ ಕಚೇರಿ ಮುಂಭಾಗದಲ್ಲಿ ಬುಧವಾರ ಕೈಗೊಂಡ ಧರಣಿ ಸತ್ಯಾಗ್ರಹಕ್ಕೆ ಮಣಿದ ಕುಲಪತಿ, ಈ ಕಠಿಣ ಕ್ರಮ ಕೈಗೊಂಡಿದ್ದರು.

ಗಾಂಜಾ ಸೇವನೆ: ಓರ್ವನ ಬಂಧನ

◆ **ಅಂಕೋಲಾ:** ನಿಷೇಧಿತ ಮಾದಕ ವಸ್ತು ಗಾಂಜಾ ಸೇವಿಸುತ್ತಿದ್ದ ಯುವಕನನ್ನು ಅಂಕೋಲಾ ಪೊಲೀಸರು ಬಂಧಿಸಿದ್ದಾರೆ. ಅಜ್ಜಿಕಟ್ಟಾ ನಿವಾಸಿ ಅಕ್ಬರ್ ಅಲ್ಲಾಭಕ್ಷ ಶೇಖ(32) ಬಂಧಿತ ಆರೋಪಿಯಾಗಿದ್ದು ಈತ ಪಟ್ಟಣದ ಅಜ್ಜಿಕಟ್ಟಾ ಕ್ರಾಸ್ ಬಳಿ ಸಾರ್ವಜನಿಕ ರಸ್ತೆಯಲ್ಲಿ ಮಾದಕ ವಸ್ತು ಸೇವನೆ ಮಾಡಿರುವುದು ಅಂಕೋಲಾ ತಾಲೂಕು ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಯಿಂದ ದೃಢಪಟ್ಟಿರುವದರಿಂದ ಪಿ.ಎಸ್.ಐ ಗುರುನಾಥ ಹಾದಿಮನಿ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಆರ್‌ಎಸ್‌ಎಸ್ ಬಗ್ಗೆ ಮಾತನಾಡುವ ನೈತಿಕತೆ ಖರ್ಗೆಗಿಲ್ಲ: ಜಿಗಜಿಣಗಿ

◆ **ವಿಜಯಪುರ:** ಆರ್‌ಎಸ್‌ಎಸ್ ಕುರಿತು ಮಾತನಾಡುವ ನೈತಿಕತೆ ಸಚಿವ ಪ್ರಿಯಾಂಕ್ ಖರ್ಗೆಗಿಲ್ಲ, ರಾಜ್ಯದಲ್ಲಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ 55 ಅಭ್ಯರ್ಥಿಗಿಂತಲೂ ಹೆಚ್ಚಿನ ಸೀಟು ಗೆಲ್ಲಲು ಸಾಧ್ಯವಿಲ್ಲ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 55 ಸೀಟಿಗಿಂತ ಒಂದೇ ಒಂದು ಹೆಚ್ಚಿನ ಸ್ಥಾನ ಗೆದ್ದರೆ, ನೀವು ಹೇಳಿದಂತೆ ಕೇಳಲು ನಾನು ಸಿದ್ಧ. ರಾಜ್ಯ ಸರ್ಕಾರ ಇಲ್ಲಿವರೆಗೂ ಒಂದೇ ಒಂದು ಅಭಿವೃದ್ಧಿ ಕಾಮಗಾರಿಗೆ ಅಡಿಗಲ್ಲು ಹಾಕಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಚಿವ ಪ್ರಿಯಾಂಕ್ ಖರ್ಗೆ ಅವರ ತಂದೆ ಮಲ್ಲಿಕಾರ್ಜುನ ಖರ್ಗೆ ಅವರ ಕೃಪಾಕಟಾಕ್ಷದಿಂದ ಮಂತ್ರಿಯಾಗಿದ್ದಾರೆ ಹೊರತು, ಅವರದೇನೂ ರಾಜಕೀಯ ಸಾಧನೆಯಿಲ್ಲ. ಆರ್‌ಎಸ್‌ಎಸ್ ಬಗ್ಗೆ ಮಾತನಾಡುವುದನ್ನು ಬಿಟ್ಟು ಅವರು ರಾಜ್ಯದ ಭದ್ರತೆಯ ಬಗ್ಗೆ ಯೋಚನೆ ಮಾಡಲಿ ಎಂದು ದೂರಿದರು.

ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ, ಮಾಜಿ ಶಾಸಕ ರಮೇಶ ಭೂಸನೂರ, ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಮುಖಂಡರಾದ ಸಂದೀಪ ಪಾಟೀಲ, ಸಾಬು ಮಾಶ್ಯಾಳ, ಈರಣ್ಣ ರಾವೂರ, ಸಂದೀಪ ಪಾಟೀಲ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಬನಶಂಕರಿದೇವಿಗೆ ಬೆಳ್ಳಿರಥ ಸಮರ್ಪಣೆ

◆ **ಬಾದಾಮಿ:** ಸಮೀಪದ ಶ್ರೀ ಬನಶಂಕರಿದೇವಿಗೆ ಬುಧವಾರ 106 ಕೆಜಿ ಮೌಲ್ಯದ ನೂತನ ಬೆಳ್ಳಿರಥವನ್ನು ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಸಮರ್ಪಣೆ ಮಾಡಲಾಯಿತು.

ಭಕ್ತರ ಹಾಗೂ ಅರ್ಚಕರ ಬಹುದಿನಗಳ ಆಶಯದಂತೆ ದೇವಸ್ಥಾನದಲ್ಲಿ ಭಕ್ತರ ಸಹಕಾರ ಮತ್ತು ಪ್ರೇರಣೆಯಿಂದ ಭಕ್ತರ ದೇಣಿಗೆಯಿಂದ ಬೆಳ್ಳಿ ಲೇಪನ ರಥವನ್ನು ನಿಪ್ಪಾಣಿಯ ಸುರೇಶ ಶೆಟ್ಟಿಯವರು ನಿರ್ಮಾಣ ಮಾಡಿದ್ದು, ಪೂಜಾ ಕಾರ್ಯಕ್ರಮಗಳ ನಂತರ ವಿವಿದ ಸಂಗೀತ ವಾದ್ಯಗಳ ಮೂಲಕ ಬುಧವಾರ ಮಧ್ಯಾಹ್ನ 12.45 ಕ್ಕೆ ಸಮರ್ಪಣೆ ಮಾಡಲಾಯಿತು. ಕುಮಟಾದಲ್ಲಿ ಸಾಗವಾನಿ ರಥ ಮಾಡಿಸಿ ಅದರ ಮೇಲೆ 106 ಕೆಜಿಯ ಶುದ್ಧ ಬೆಳ್ಳಿಯ ಲೇಪನ ಮಾಡಲಾಗಿದೆ. ಸುಮಾರು 15 ಲಕ್ಷ ತಯಾರಿಕೆ ಮಜೂರಿ ನೀಡಿ ನೂತನ ಬೆಳ್ಳಿ ರಥದ ದೇವಿಯ ಉತ್ಸವ ಮೂರ್ತಿಯನ್ನು ರಥದಲ್ಲಿ ಸ್ಥಾಪಿಸಿ ರಥೋತ್ಸವವನ್ನು ಸ್ಥಾಪಿಸಲಾಯಿತು. ಸಿಂಹದ ಲಾಂಛನ ಮತ್ತು ಅಷ್ಟ ಲಕ್ಷ್ಮೀಯರ ಚಿತ್ರ ರಚಿಸಲಾಗಿದೆ. ಸುಮಾರು 5 ರಿಂದ 6 ಕೋಟಿ ವೆಚ್ಚದಲ್ಲಿ ಬೆಳ್ಳಿರಥವನ್ನು ನಿರ್ಮಿಸಲಾಗಿದೆ. ಬೆಳಿಗ್ಗೆಯಿಂದ ನಡೆದ ವಿವಿದ ಧಾರ್ಮಿಕ ಮತ್ತು ಪೂಜಾ ಕಾರ್ಯಕ್ರಮಗಳ ನಂತರ ಮಧ್ಯಾಹ್ನ



12.45 ಗಂಟೆಗೆ ನಡೆದ ಕಾರ್ಯಕ್ರಮದಲ್ಲಿ ಶ್ರೀ ಬನಶಂಕರಿ ದೇವಿಗೆ ಬೆಳ್ಳಿ ರಥ ಸಮರ್ಪಣೆ ಬೃಹತ್ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಮುಖಂಡರಾದ ಶೇಖರಗೌಡ ಪಾಟೀಲ, ಹನಮಂತ ಮಾವಿನಮರದ, ಬನಶಂಕರಿದೇವಸ್ಥಾನ ಟ್ರಸ್ಟ್ ಕಮಿಟಿ ಚೇರಮನ್ ವೆಂಕಟೇಶ ಪೂಜಾರ ಮತ್ತು ಪೂಜಾರಮನೆತನಕುಟುಂಬಸ್ಥರಾದಮಹೇಶ, ಮಹಾಂತೇಶ, ವಿದ್ಯಾನಂದ, ಶಂಕರ, ಲಕ್ಷ್ಮಣ, ಚಿದಂಬರ, ಕಿರಣ, ರಮೇಶ, ಶ್ರೀನಿವಾಸ, ಶ್ರೀರಂಗ, ಉದಯ ಸೇರಿದಂತೆ ಸಹಸ್ರಾರು ಜನ ಭಕ್ತರು ಇತರರು ಉಪಸ್ಥಿತರಿದ್ದರು.

ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ

ಪಾಲಿಕೆ ಠರಾವಿಗೆ ಕಾನೂನು ತೊಡಕಿಲ್ಲ: ಕಾತರಕಿ



◆ **ಬೆಳಗಾವಿ:** ಇಲ್ಲಿನ ಮಹಾನಗರ ಪಾಲಿಕೆ ಕರ್ನಾಟಕದ ವ್ಯಾಪ್ತಿಯಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದು, ಬೆಳಗಾವಿಯನ್ನು ಕರ್ನಾಟಕದ ಅವಿಭಾಜ್ಯ ಅಂಗವೆಂದು ಘೋಷಿಸುವ ಅಥವಾ ಅದಕ್ಕೆ ಸಂಬಂಧಿಸಿದ ಠರಾವು ಅಂಗೀಕರಿಸುವುದಕ್ಕೆ ಯಾವುದೇ ಕಾನೂನು ತೊಡಕಿಲ್ಲ ಎಂದು ಸುಪ್ರೀಂ ಕೋರ್ಟ್ ಹಿರಿಯ ನ್ಯಾಯವಾದಿ ಮೋಹನ್ ಕಾತರಕಿ ತಿಳಿಸಿದರು.

ಬುಧವಾರ ಬೆಳಗಾವಿ ನಗರದ ಸರ್ಕಿಟ್ ಹೌಸ್ ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗಾವಿಯನ್ನು ಕರ್ನಾಟಕದಲ್ಲೇ ಉಳಿಸುವ ನಿರ್ಧಾರವನ್ನು ಸಂಸತ್ತು ಈಗಾಗಲೇ ಕೈಗೊಂಡಿದ್ದು, ಮಹಾನಗರ ಪಾಲಿಕೆಯೂ ಭಾರತೀಯ ಮುನ್ಸಿಪಲ್ ಕಾನೂನಿನಡಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಕರ್ನಾಟಕದ ಪರವಾಗಿ ಠರಾವು ಅಂಗೀಕರಿ ಸುವುದು ಕಾನೂನು ಬದ್ಧವಾಗಿದೆ ಎಂದರು.

ಕರ್ನಾಟಕದ ಪರವಾಗಿ ಮಹಾನಗರ ಪಾಲಿಕೆಯಲ್ಲಿ ಠರಾವು ಅಂಗೀಕರಿಸುವುದರಿಂದ ಜನರಲ್ಲಿ ಜಾಗೃತಿ ಮೂಡುತ್ತದೆ ಹಾಗೂ ಈ ಹಿಂದೆ ಮರಾಠಿಗರ ಪರವಾಗಿ ಅಂಗೀಕರಿಸಲಾದ ನಿರ್ಣಯಗಳನ್ನು ಪ್ರಶ್ನಿಸಲು ಸಹ ನೆರವಾಗುತ್ತದೆ'' ಎಂದು ಹೇಳಿದರು.

ಮಹಾನಗರಪಾಲಿಕೆಕರ್ನಾಟಕಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಕರ್ನಾಟಕದ ವಿರುದ್ಧ ನಿರ್ಣಯ ಕೈಗೊಂಡಿರುವುದು ಸರಿಯಲ್ಲ, ಇದೇ ಕಾರಣಕ್ಕಾಗಿ ಹಿಂದೆ ಮಹಾನಗರ ಪಾಲಿಕೆಯನ್ನು ವಿಸರ್ಜಿಸಲಾಗಿತ್ತು ಎಂದು ಅವರು ನೆನಪಿಸಿದರು. ಕರ್ನಾಟಕದಪರವಾಗಿ ಠರಾವು ಅಂಗೀಕರಿಸಿದರೆ ಬೆಳಗಾವಿಗೆ ಯಾವುದೇ ರೀತಿಯ ಕಾನೂನುಬದ್ಧ ಅಥವಾ ಆಡಳಿತಾತ್ಮಕ ತೊಂದರೆ ಉಂಟಾಗುವುದಿಲ್ಲ ಎಂದರು.

ಈ ವೇಳೆ ಕನ್ನಡಪರ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ್ ಚಂದರಗಿ, ಶ್ರೀನಿವಾಸ್ ತಾಳೂಕರ, ವಾಜೀದ್ ಹಿರೇಕುಂಡಿ, ಗಡಿನಾಡು ಕನ್ನಡಿಗ ರಾಜ್ಯಾಧ್ಯಕ್ಷ ಬಲರಾಮ್ ಮಾಸೇನಟ್ಟಿ, ಸೇರಿದಂತೆ ಹಲವು ಕನ್ನಡಪರ ಮುಖಂಡರು ಕಾರ್ಯಕರ್ತರು ಪಾಲ್ಗೊಂಡಿದ್ದರು.

> **ಬೆಳಗಾವಿ ಎಂದೆಂದಿಗೂ ನಮ್ಮದೇ!**
>
> ◆ **ಸುರೇಬಾನ:** ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಬೆಳಗಾವಿ ಕರ್ನಾಟಕದ್ದೆ ಎನ್ನುವಂತೆ ಇಲ್ಲಿಯವರೆಗೂ ಅಧಿಕೃತವಾಗಿ ಠರಾವು ಅಂಗೀಕಾರವಾಗದಿರುವುದು ದುರ್ದೈವದ ಸಂಗತಿ ಎಂದು ಬೈರನಹಟ್ಟಿ-ಶಿರೋಳ ದೊರೆಸ್ವಾಮಿ ವಿರಕ್ತಮಠ ಶಾಂತಲಿಂಗ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು. ಅವರು ಸಮೀಪದ ಕಲ್ಲೂರ ಶ್ರೀ ಸಿದ್ಧೇಶ್ವರ ದೇವಸ್ಥಾನದಲ್ಲಿ ಪೂಜ್ಯ ಶಾಂತಲಿಂಗ ಸ್ವಾಮೀಜಿಗಳು ಕೈಗೊಂಡಿದ್ದ 31 ದಿನಗಳ ಮೌನಲಿಂಗಾನುಷ್ಠಾನ ಮಂಗಲೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, 1924ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮಾ ಗಾಂಧೀಜಿಯವರು ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವಾಗಿದೆ ಎಂದು ಹೇಳಿದ್ದರು. ಇಷ್ಟಾದರೂ ಒಂದೇ ಒಂದು ಠರಾವು ಪಾಸ್ ಮಾಡಲು ಹರಸಾಹಸ ಮಾಡಬೇಕಿದೆ. ಬೆಳಗಾವಿ ಎಂದೆಂದಿಗೂ ನಮ್ಮದೇ ಎಂದರು. ಇತ್ತೀಚೆಗೆ ಈ ವಿಷಯವಾಗಿ ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದಲ್ಲಿ ಜಗದ್ಗುರು ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಮಾರ್ಗದರ್ಶನದಲ್ಲಿ ಡಾ. ಅಲ್ಲಮಪ್ರಭು ಮಹಾಸ್ವಾಮಿಗಳು ಎಲ್ಲ ಮಠಾಧೀಶರನ್ನು ಕನ್ನಡಪರ ಸಂಘಟನೆಗಳನ್ನು ಒಂದೇ ವೇದಿಕೆಯಲ್ಲಿ ಕರೆತಂದು ಜಾಗೃತಿ ಮೂಡಿಸಿ ಜನಾಂದೋಲನ ಮಾಡಿದ್ದು ಐತಿಹಾಸಿಕ ಕಾರ್ಯವಾಗಿದೆ. ಈ ವಿಷಯವಾಗಿ ಕೂಡಲೇ ನಾಡಿನ ಜನಪ್ರತಿನಿಧಿಗಳು ಮೌನ ಮುರಿದು ಪಕ್ಷಾತೀತವಾಗಿ ಹೋರಾಟ ಮಾಡುವುದರ ಮೂಲಕ ಕರ್ನಾಟಕದ ಹೃದಯ ಬೆಳಗಾವಿಯನ್ನು ಮಹಾನಗರ ಪಾಲಿಕೆಯಲ್ಲಿ ಅಧಿಕೃತವಾಗಿಸುವಂತೆ ಪ್ರಯತ್ನ ಮಾಡಬೇಕಾಗಿದೆ ಎಂದು ಒತ್ತಾಯಿಸಿದ್ದಾರೆ.

ಗುಮ್ಮಟ ನಗರದಲ್ಲಿ ಧಾರಾಕಾರ ಮಳೆ

◆ **ವಿಜಯಪುರ:** ಗುಮ್ಮಟ ನಗರದಲ್ಲಿ ಬುಧವಾರ ಸಂಜೆ ಧಾರಾಕಾರ ಮಳೆಯಾಗಿದ್ದು, ಬಿರು ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ತಂಪೆರೆಯುವಂತಾಗಿದೆ. ಬೆಳಗ್ಗೆಯಿಂದ ಪ್ರಖರ ಬಿಸಿಲಿನಿಂದ ಕೂಡಿದ್ದ ವಾತಾವರಣ ಸಂಜೆ ವೇಳೆಗೆ ಮೋಡ ಕವಿದು, ಕೆಲ ಹೊತ್ತು ಜೋರಾಗಿ ಮಳೆ ಸುರಿಯಿತು.

ಧಾರಾಕಾರ ಸುರಿದ ವರ್ಷಧಾರೆಗೆ ಜನಜೀವನ ಅಸ್ತವ್ಯಸ್ತಗೊಂಡರೆ, ಇನ್ನು ನಗರದ ರಸ್ತೆಗಳಲ್ಲಿ ಮಳೆ ನೀರು ಮಡುಗಟ್ಟಿ ನಿಂತು, ವಾಹನ ಸಂಚಾರಕ್ಕೆ ಸಂಚಕಾರ ತಂದಿತು.

ಮುಂಗಾರು ಆರಂಭದ ಬಳಿಕ ಜೋರಾಗಿ ಮಳೆಯಾಗಿದ್ದು, ಮಳೆ ನಿರೀಕ್ಷೆಯಲ್ಲಿದ್ದ ರೈತರ ಮೊಗದಲ್ಲಿ ನಗು ಮೂಡುವಂತಾಗಿದೆ.

ಜಿಲ್ಲೆಯ ಹಲವು ಭಾಗದಲ್ಲಿ ಮೋಡಕವಿದ ವಾತಾವರಣವಿತ್ತು.



ಲೋಕಾ ದಾಳಿ | 20 ತೊಲೆಗೂ ಹೆಚ್ಚು ಬಂಗಾರ ಪತ್ತೆ

ಲಾಕರ್‌ನಲ್ಲಿತ್ತು 9 ಲಕ್ಷ ಮೌಲ್ಯದ ಹಳೆಯ ನೋಟು!

◆ **ಕಲಬುರಗಿ:** ಆದಾಯಕ್ಕಿಂತ ಹೆಚ್ಚಿನ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ನಡೆಸಿದ ಪರಿಶೀಲನೆ ವೇಳೆ ನಿವೃತ್ತ ಪಿಡಬ್ಲ್ಯೂಡಿ ಎಂಜಿನಿಯರ್ ಮಾಣಿಕ್ ಕನಕಟ್ಟಿ ಅವರಿಗೆ ಸೇರಿದ ಬ್ಯಾಂಕ್ ಲಾಕರ್‌ನಿಂದ ಸುಮಾರು 9 ಲಕ್ಷ ಮೌಲ್ಯದ ಅಮಾನ್ಯೀಕೃತ 1000 ಮುಖಬೆಲೆಯ ಹಳೆಯ ನೋಟುಗಳು ಹಾಗೂ 20 ತೊಲೆಗೂ ಅಧಿಕ ಬಂಗಾರದ ಆಭರಣಗಳು ಪತ್ತೆಯಾಗಿವೆ.





ಲೋಕಾಯುಕ್ತ ಕಲಬುರಗಿ ಪೊಲೀಸ್ ಅಧೀಕ್ಷಕ ಸಿದ್ಧರಾಜು ಸಿ., ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ಮುಂದುವರಿದಿದೆ. ಮಂಗಳವಾರ ಗೊದುತಾಯಿ ನಗರದಲ್ಲಿನ ನಿವಾಸ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಪರಿಶೀಲನೆ ನಡೆಸಿದ್ದ ಲೋಕಾಯುಕ್ತ ತಂಡ ಬುಧವಾರ ನಗರದ ಎನ್.ವಿ. ಕಾಲೇಜು ಸಮೀಪದ ಎಸ್‌ಬಿಐ ಬ್ಯಾಂಕ್‌ನಲ್ಲಿರುವ ಲಾಕರ್‌ನ್ನು ಪರಿಶೀಲಿಸಿತು.

ಪರಿಶೀಲನೆ ವೇಳೆ ನೋಟು ಅಮಾನ್ಯೀಕರಣಗೊಂಡ ಬಳಿಕ ಬಳಕೆಗೆ ಬಾರದ 1000 ಮುಖಬೆಲೆಯ ನೂರಾರು ನೋಟುಗಳು ಪತ್ತೆಯಾಗಿದ್ದು, ಅವುಗಳ ಒಟ್ಟು ಮೌಲ್ಯ ಸುಮಾರು 9 ಲಕ್ಷ ಎಂದು ಅಂದಾಜಿಸಲಾಗಿದೆ.

ಇದೇ ವೇಳೆ ಬಂಗಾರದ ಉಂಗುರಗಳು ಸೇರಿದಂತೆ ವಿವಿಧ ಆಭರಣಗಳು ಲಾಕರ್‌ನಲ್ಲಿ ಪತ್ತೆಯಾಗಿದ್ದು, ಸುಮಾರು 20 ತೊಲೆಗೂ ಅಧಿಕ ಬಂಗಾರದ ಆಭರಣಗಳನ್ನು ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ಕಾರ್ಯಾಚರಣೆ ವೇಳೆ ಡಿವೈಎಸ್ಪಿ ಬಸವರಾಜ್, ಪೊಲೀಸ್ ಇನ್ಸ್‌ಪೆಕ್ಟರ್ ಅರುಣ್ ಕುಮಾರ್ ರಾಜಶೇಖರ ಬಡದೇಸಾರ ಹಾಗೂ ಇತರೆ ಲೋಕಾಯುಕ್ತ ಪೊಲೀಸ್ ಸಿಬ್ಬಂದಿ ಉಪಸ್ಥಿತರಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದಿನ ತನಿಖೆಯನ್ನು ಲೋಕಾಯುಕ್ತ ಅಧಿಕಾರಿಗಳು ಮುಂದುವರಿಸಿದ್ದಾರೆ.

ಪಹಣಿ ತಿದ್ದುಪಡಿಗೆ 1.10 ಲಕ್ಷ ರೂ. ಲಂಚ ಸ್ವೀಕಾರ

ಎಫ್‌ಡಿಎ ಮತ್ತವರ ಪುತ್ರ ಲೋಕಾಯುಕ್ತ ಬಲೆಗೆ

◆ **ಸಿರುಗುಪ್ಪ:** ಜಮೀನಿನ ಪಹಣಿಯಲ್ಲಿ 'ಇನಾಮ್' ನಮೂದನ್ನು ರದ್ದುಪಡಿಸಿ 'ಪಟ್ಟಾ' ಎಂದು ದಾಖಲಿಸಲೂ ಲಂಚದ ಬೇಡಿಕೆ ಇಟ್ಟಿದ್ದ ಆರೋಪದ ಮೇಲೆ ಸಿರುಗುಪ್ಪ ತಹಶೀಲ್ದಾರ ಕಚೇರಿಯ ಎಫ್‌ಡಿಎ ಸುವರ್ಣ ಹಾಗೂ ಪುತ್ರ ದೀಪಕ್ ಅವರು ಲೋಕಾಯುಕ್ತ ಪೊಲೀಸರಿಗೆ ಮಂಗಳವಾರ ಸಂಜೆ ಲಂಚದ ಹಣ ಸಮೇತ ಸಿಕ್ಕಿ ಬಿದ್ದಿದ್ದಾರೆ.



ಬೈರಾಪುರ ಗ್ರಾಮದ ಗೋವಿಂದ ಕೆ. ಅವರು ನೀಡಿದ ದೂರಿನ ಮೇರೆಗೆ ಬಳ್ಳಾರಿ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು. ಸರ್ವೆ ನಂ.57/1ಡಿ, 7 ಎಕರೆ 68 ಸೆಂಟ್ಸ್ ಜಮೀನಿನ ಪಹಣಿಯಲ್ಲಿ ನಮೂದಾಗಿದ್ದ 'ಇನಾಮ್' ದಾಖಲೆಯನ್ನು ತೆಗೆದು 'ಪಟ್ಟಾ' ಎಂದು ನಮೂದಿಸಲು ಸುವರ್ಣ ಅವರು 1.60 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿತ್ತು. ಈ

ದೂರಿನ ಅನ್ವಯ ಲೋಕಾಯುಕ್ತ ಅಧಿಕಾರಿಗಳು ಮಂಗಳವಾರ ಸಂಜೆ ದಾಳಿ ನಡೆಸಿ ನಗರದ ನೇತಾಜಿ ಕಾಂಪ್ಲೆಕ್ಸ್ ಎದುರು, ಲಂಚದ ಹಣ 1.10 ಲಕ್ಷ ರೂ. ಪುತ್ರ ದೀಪಕ್ ಗೆ ನೀಡುವಂತೆ ತಿಳಿಸಿದ ಹಿನ್ನೆಲೆ ಪುತ್ರ ಹಣ ಪಡೆಯುವಾಗ ಅಧಿಕಾರಿಗಳ ಕೈಗೆ ಸಿಕ್ಕಿ ಬಿದ್ದಿದ್ದಾರೆ. ದೀಪಕ್ ಹಾಗೂ ಸುವರ್ಣ ಅವರನ್ನೂ ವಶಕ್ಕೆ ಪಡೆದಿದ್ದಾರೆ. ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎನ್. ವಾಸುದೇವರಾಮ ಅವರ ಮಾರ್ಗದರ್ಶನದಲ್ಲಿ, ಲೋಕಾಯುಕ್ತ ಡಿವೈಎಸ್ಪಿ ಸಿದ್ದಪ್ಪ ಎಸ್. ಬೀಳಗಿ ಹಾಗೂ ಪೊಲೀಸ್ ನಿರೀಕ್ಷರಾದ ಗುರಣ್ಣ ಎಸ್. ಹೆಬ್ಬಾಳ್ ಮತ್ತು ಸುರೇಶ್ ಎಂ. ಭಾವಿಮನಿ ನೇತೃತ್ವದಲ್ಲಿ ದಾಳಿ ನಡೆದಿದೆ.

ಕಾರ್ಯಾಚರಣೆಯಲ್ಲಿ ಚಂದ್ರಶೇಖರ್, ಮಮತಾ ಕೆ., ವಸಂತಕುಮಾರ, ಅರವಿಂದ, ಅಂಜಿನಪ್ಪ, ಹನುಮಂತಪ್ಪ, ಪ್ರಕಾಶ್ ಎಂ., ನಜೀಮ್ ಶೇಖ್, ಗೊಲ್ಲರ ದಾಸಪ್ಪ, ಹೊನ್ನೂರಪ್ಪ ಕೆ.ಟಿ. ಹಾಗೂ ಹರೀಶ್ ವಿ. ಸೇರಿದಂತೆ ಸಿಬ್ಬಂದಿಗಳು ಇದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಪೌರಕಾರ್ಮಿಕರಿಗೆ ಸುರಕ್ಷಾ ಪರಿಕರಗಳ ವಿತರಣೆ

ದಾಂಡೇಲಿ : ನಗರ ಸಭೆಯ ಪೌರಕಾರ್ಮಿಕರಿಗೆ ಸಮವಸ್ತ್ರ ಹಾಗೂ ವಿವಿಧ ಸುರಕ್ಷಾ ಪರಿಕರಗಳನ್ನು ಮಂಗಳವಾರ ನಗರಸಭೆಯ ಆವರಣದಲ್ಲಿ ವಿತರಿಸಲಾಯಿತು.ಒಟ್ಟು 74 ಪೌರಕಾರ್ಮಿಕರಿಗೆ ಸಮವಸ್ತ್ರ, ಗಂಬೂಟ್, ಕನ್ನಡಕ, ಹೆಲ್ಮೆಟ್, ಎಫ್ರಾನ್, ಮಾಸ್ಕ್, ರೈನ್ ಕೋಟ್, ಕಿವಿ ಗ್ಲೌಸ್ ಗಳನ್ನು ಪೌರಾಯುಕ್ತ ವಿವೇಕ ಬನ್ನೆ ಅವರ ನಿರ್ದೇಶನದಲ್ಲಿ ಆರೋಗ್ಯ ನಿರೀಕ್ಷಕ ವಿಲಾಸ್ ಅವರು ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ವಿಲಾಸ್ ಅವರು, ಪೌರಕಾರ್ಮಿಕರಿಗೆ ಆರೋಗ್ಯದ ಹಿತ ದೃಷ್ಟಿಯಿಂದ ಸುರಕ್ಷಾ ಪರಿಕರಗಳನ್ನು ವಿತರಿಸಲಾಗಿದೆ. ಪೌರಕಾರ್ಮಿಕರು ಪ್ರತಿದಿನವೂ ಸಮವಸ್ತ್ರ ಹಾಗೂ ಸುರಕ್ಷಾ ಪರಿಕರಗಳನ್ನು ಧರಿಸಿಕೊಂಡು ಕರ್ತವ್ಯಕ್ಕೆ ಹಾಜರಾಗಬೇಕೆಂದು ಸೂಚನೆಯನ್ನು ನೀಡಿದರು. ನಗರದ ಸ್ವಚ್ಛತೆಯ ಜೊತೆಗೆ ತಮ್ಮ ಆರೋಗ್ಯದ ಕಡೆಗೂ ಪೌರಕಾರ್ಮಿಕರು ಆದ್ಯತೆಯನ್ನು ನೀಡಬೇಕೆಂದು ಸಲಹೆ ನೀಡಿದರು.ಈ ಸಂದರ್ಭದಲ್ಲಿ ನಗರಸಭೆಯ ಆದಿನಾರಾಯಣ ಹಾಗೂ ಪೌರಕಾರ್ಮಿಕರು ಉಪಸ್ಥಿತರಿದ್ದರು.

ಜುಲೈ 1ಕ್ಕೆ ಕಡಮೆ ಬಂಡಿಹಬ್ಬ



ಗೋಕರ್ಣ : ಇಲ್ಲಿಯ ಬಂಕಿಕೊಡ್ಲ ಕಡಮೆಯ ಬೀರ ದೇವರ ಬಂಡಿಹಬ್ಬ ಜೂನ್ 24ಕ್ಕೆ ನಡೆಯ ಬೇಕಾಗಿತ್ತು. ಅದನ್ನು ಅನಿವಾರ್ಯ ಕಾರಣಗಳಿಂದಾಗಿ ಜುಲೈ 1ಕ್ಕೆ ಮುಂದೂಡಲಾಗಿದೆ. ಈ ದಿನ ಶ್ರೀ ದೇವರ ಸಮಸ್ತ ಭಕ್ತಾದಿಗಳು ಆಗಮಿಸಿ, ಹರಕೆ ಕಾಣಿಕೆ ಸಲ್ಲಿಸಿ ದೇವರ ಕೃಪೆಗೆ ಪಾತ್ರರಾಗಬೇಕಾಗಿ ದೇವಸ್ಥಾನದ ಮೊಕ್ತೆಸರರಾದ ವಿವೇಕ ನಾಡಕರ್ಣಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಸನ್ಮಾನ

ಭಟ್ಕಳ : ಪಟ್ಟಣದ ಆನಂದಾಶ್ರಮ ಪ್ರೌಢಶಾಲೆಯಲ್ಲಿ ಜೂ.18ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಮತ್ತು ಭಟ್ಕಳ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 2024-25ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯಲ್ಲಿ ಪ್ರತಿಶತ 100 ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭ ಜರುಗಲಿದೆ . ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ ನಾಯಕ ಉದ್ಘಾಟಿಸಲಿದ್ದು, ಉಕ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಎನ್. ವಾಸರೆ ಅಧ್ಯಕ್ಷತೆ ವಹಿಸಲಿದ್ದಾರೆ. ಆನಂದಾಶ್ರಮ ಪ್ರೌಢಶಾಲೆಯ ಪ್ರಾಂಶುಪಾಲೆ ಸಿಸ್ಟರ್ ವಿನುತ ಡಿಸೋಜ ಅವರು ಅಭಿನಂದನಾ ಪತ್ರ ಪ್ರದಾನಿಸಲಿದ್ದಾರೆ.ಕಾರ್ಯಕ್ರಮದಲ್ಲಿ ಉಕ ಜಿಲ್ಲಾಗೌರವಕಾರ್ಯದರ್ಶಿ ಪಿ.ಆರ್. ನಾಯ್ಕ, ಸಹಕಾರಿ ಧುರೀಣ ಹಾಗೂ ಕಸಾಪ ಹಿರಿಯ ಆಜೀವ ಸದಸ್ಯ ಡಿ.ಬಿ. ನಾಯ್ಕ, ಸಾಹಿತಿ ಮಾನಾಸುತ ಶಂಭು ಹೆಗಡೆ, ಸಾಹಿತಿ ನಾರಾಯಣ ಯಾಜಿ ಶಿರಾಲಿ, ಸ್ಪಂದನ ಸಂಸ್ಥೆಯ ಅಧ್ಯಕ್ಷ ರಾಘವೇಂದ್ರ ನಾಯ್ಕ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಉಮೇಶ ಕೆರೆಕಟ್ಟೆ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ಎನ್. ನಾಯಕ್, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಂಜುನಾಥ ನಾಯಕ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಗಣಪತಿ ಶಿರೂರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಈ ಬಾರಿ ಕನ್ನಡ ಭಾಷೆಯಲ್ಲಿ ಶೇಕಡಾ 100 ಅಂಕ ಪಡೆದ 99 ವಿದ್ಯಾರ್ಥಿಗಳು ಹಾಗೂ ಅವರ ಸಾಧನೆಗೆ ಮಾರ್ಗದರ್ಶನ ನೀಡಿದ ಕನ್ನಡ ಭಾಷಾ ಶಿಕ್ಷಕರನ್ನು ಗೌರವಿಸಿ ಅಭಿನಂದಿಸಲಾಗುವುದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಗಂಗಾಧರ ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	59005	68001
ಬಿಳಿಗೋಟು	25699	36099
ಕೆಂಪುಗೋಟು	25099	36011
ಚಿಟ್ಟೆ	31900	46899
ರಾಶಿ	49050	52299
ಚಾಲಿ	44000	48815
ಬಿ.ಕಾಳುಮೆಣಸು	80000	89569



ದಾಂಡೇಲಿ : ನಗರ ಸಭೆಯ ಪೌರಕಾರ್ಮಿಕರಿಗೆ ಸಮವಸ್ತ್ರ ಹಾಗೂ ವಿವಿಧ ಸುರಕ್ಷಾ ಪರಿಕರಗಳನ್ನು ಮಂಗಳವಾರ ನಗರಸಭೆಯ ಆವರಣದಲ್ಲಿ ವಿತರಿಸಲಾಯಿತು. ಈ ಸಂದರ್ಭದಲ್ಲಿ ನಗರಸಭೆಯ ಆದಿನಾರಾಯಣ ಹಾಗೂ ಪೌರಕಾರ್ಮಿಕರು ಉಪಸ್ಥಿತರಿದ್ದರು.

ರೋಗ ಹರಡದಂತೆ ಕ್ರಮ ಕೈಗೊಳ್ಳಿ

ಮುಂಡಗೋಡ: ತಾಲೂಕಿನ ಮಳಗಿ ಗ್ರಾಪಂ ಕಾರ್ಯಾಲಯದಲ್ಲಿ ಹಿರಿಯ ತೋಟಗಾರಿಕೆ ಸಹಾಯಕ ನಿರ್ದೇಶಕ ಆಡಳಿತಾಧಿಕಾರಿ ಕೃಷ್ಣಾ ಕುಳ್ಳೂರ ಅಧ್ಯಕ್ಷತೆಯಲ್ಲಿ ಬುಧವಾರ ಮುಂಗಾರು ಪೂರ್ವ ಸಭೆ ನಡೆಸಲಾಯಿತು. ಈ ವೇಳೆ ಮಾತನಾಡಿದ ಅವರು ಮೊಟ್ಟಮೊದಲು ಯಾವುದೇ ರೋಗರುಜಿನ ಹರಡದಂತೆ ಗ್ರಾಮಗಳ ಎಲ್ಲ ಚರಂಡಿಗಳನ್ನು ಸ್ವಚ್ಛಗೊಳಿಸಬೇಕು. ರೈತರು ತಮ್ಮ ಕೆಲಸ ಕಾರ್ಯಗಳಿಗೆ ಕಾರ್ಯಾಲಯಕ್ಕೆ ಬಂದಾಗ ಸಿಬ್ಬಂದಿಗಳು ಸ್ಪಂದಿಸುವ ಮೂಲಕ ಅಭಿವೃದ್ಧಿ ಕುಂಠಿತವಾಗದಂತೆ ನೋಡಿಕೊಳ್ಳಬೇಕು. ಅಧ್ಯಕ್ಷರು ಇಲ್ಲ ಮತ್ತು ಸದಸ್ಯರು ಇಲ್ಲ ಎಂಬ ಕೊರತೆ ಜನಸಾಮಾನ್ಯರಲ್ಲಿ ನೀಗಿಸಬೇಕು. ಮಳೆಗಾಲ ಮುಗಿಯುವವರೆಗೂ ತಮ್ಮ ಅನುಮತಿ ಇಲ್ಲದೆ ಯಾವ ಸಿಬ್ಬಂದಿಯೂ ರಜಾ ತೆಗೆದುಕೊಳ್ಳಬಾರದು. ಆಡಳಿತಾಧಿಕಾರಿ ಅನುಮತಿ ತೆಗೆದುಕೊಂಡು ರಜಾ ಪಡೆಯಬೇಕು. ಆ ನಿಟ್ಟಿನಲ್ಲಿ ಎಲ್ಲರೂ ಕೆಲಸ ಮಾಡಬೇಕು. ಹಳೆಯ ಅಂಗನವಾಡಿ ಅಥವಾ ಶಾಲಾ ಕಟ್ಟಡಗಳ ಆವರಣದಲ್ಲಿರುವ ಆತಂಕಕಾರಿ ಗಿಡಗಳನ್ನು ಸರ್ವೆ ಮಾಡಿ ಅನಾಹುತ ಆಗುವ ಮುನ್ನವೇ ಅವುಗಳನ್ನು ತೆರವು ಮಾಡಿಸಬೇಕು ಮತ್ತು ವಿದ್ಯುತ್ ತಂತಿಗಳ ಮೇಲೆ ಯಾವುದಾದರೂ ಗಿಡಗಳು ಬೀಳುವ ಹಂತದಲ್ಲಿ ಇದ್ದರೆ ಅವುಗಳನ್ನು ಕಟಾವು ಮಾಡಿಸಬೇಕು.ಕೆರೆಗಳಿಗೆ ಈಜಾಡಲು ಯಾರೂ ಹೋಗದಂತೆ ದಂಡೆ ಮೇಲೆ ಫಲಕ ಅಳವಡಿಸುವುದು. ಒಟ್ಟಿನಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮಳೆಗಾಲದ ಪೂರ್ವ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವಂತೆ ಸಿಬ್ಬಂದಿಗೆ ಸೂಚಿಸಿದರು. ಈ ವೇಳೆ ಗ್ರಾಪಂ ಕಾರ್ಯದರ್ಶಿ ಜಯಶ್ರೀ ಹಜಾರೆ, ವಾಟರ್ ಮನ್‌ಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.



ಮುಂಡಗೋಡ: ತಾಲೂಕಿನ ಮಳಗಿ ಗ್ರಾಪಂ ಕಾರ್ಯಾಲಯದಲ್ಲಿ ಹಿರಿಯ ತೋಟಗಾರಿಕೆ ಸಹಾಯಕ ನಿರ್ದೇಶಕ ಆಡಳಿತಾಧಿಕಾರಿ ಕೃಷ್ಣಾ ಕುಳ್ಳೂರ ಅಧ್ಯಕ್ಷತೆಯಲ್ಲಿ ಬುಧವಾರ ಮುಂಗಾರು ಪೂರ್ವ ಸಭೆ ನಡೆಯಿತು.

ಆರೋಗ್ಯ ತಪಾಸಣಾ ಶಿಬಿರ | ಡಾ. ದಿಲೀಷ್ ಶಶಿ ಹೇಳಿಕೆ

ಆರೋಗ್ಯದಿಂದ ಕೆಲಸದಲ್ಲಿ ಉತ್ಸಾಹ

ಕಾರವಾರ: ಸರ್ಕಾರಿ ನೌಕರರು ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತಮ ರೀತಿಯಲ್ಲಿ ಕಾಪಾಡಿಕೊಳ್ಳುವುದರಿಂದ, ಕಚೇರಿಯ ದೈನಂದಿನ ಕರ್ತವ್ಯಗಳನ್ನು ಮತ್ತಷ್ಟು ಉತ್ಸಾಹ ಮತ್ತು ದಕ್ಷತೆಯಿಂದ ಮಾಡಲು ಸಾಧ್ಯವಾಗುತ್ತದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ಹೇಳಿದರು.

ಅವರು ಬುಧವಾರ ಜಿಲ್ಲಾ ಪಂಚಾಯತ್ ಆವರಣದಲ್ಲಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ, ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಆಯೋಜಿಸಿದ್ದ ಜಿಲ್ಲಾ ಮಟ್ಟದ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಸರ್ಕಾರಿ ನೌಕರರು ದಿನನಿತ್ಯದ ಹಲವು ಒತ್ತಡಗಳಿಂದ ತಮ್ಮ ಆರೋಗ್ಯದ ಕಡೆ ಗಮನ ನೀಡದಿದ್ದಲ್ಲಿ ಸಾರ್ವಜನಿಕರಿಗೆ ಗುಣಮಟ್ಟದ ಸೇವೆಯನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯದ ಕಡೆಗೆ ಹೆಚ್ಚು ಆದ್ಯತೆ ನೀಡಿ, ನಿಯಮಿತವಾಗಿ ತಪಾಸಣೆಗಳನ್ನು ಮಾಡಿಸಿಕೊಳ್ಳುವಂತೆ ತಿಳಿಸಿದರು.

ಶಿಬಿರದಲ್ಲಿ ಅಧಿಕಾರಿ ಮತ್ತು ನೌಕರರಿಗೆ, ರಕ್ತದೊತ್ತಡ, ಮಧುಮೇಹ, ಕಿವಿ, ಮೂಗು, ಗಂಟಲು, ಕಣ್ಣು, ದಂತ, ಮೂಳೆ, ಚರ್ಮ, ಕ್ಷಯರೋಗ, ಹೃದಯದ ಆರೋಗ್ಯ, ಮಾನಸಿಕ ಆರೋಗ್ಯ, ಸ್ತ್ರೀ ರೋಗಗಳ ಬಗ್ಗೆ ತಜ್ಞ ವೈದ್ಯರಿಂದ ತಪಾಸಣೆ ಮತ್ತು ಎಕ್ಸ್ ರೇ ಮತ್ತು ಇ.ಸಿ.ಜಿ ಪರೀಕ್ಷೆಗಳನ್ನು ನಡೆಸಲಾಯಿತು.



> ನೌಕರರಿಗೆ ಎಲ್ಲಾ ಅಗತ್ಯ ಆರೋಗ್ಯ ಸೇವೆಗಳು ಒಂದೇ ಕಡೆ ದೊರಕಿಸುವ ಉದ್ದೇಶದಿಂದ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಿದ್ದು ಇದರ ಸಂಪೂರ್ಣ ಪ್ರಯೋಜನ ಪಡೆಯುವಂತೆ ತಿಳಿಸಿದರು.
> ■ ಡಾ.ದಿಲೀಷ್ ಶಶಿ,ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

- ದೈಹಿಕ ಮತ್ತು ಮಾನಸಿಕ ಆರೋಗ್ಯದ ಕಡೆಗೆ ಹೆಚ್ಚು ಆದ್ಯತೆ ನೀಡಿ
- ಶಿಬಿರದಲ್ಲಿ ಹೃದಯದ ಆರೋಗ್ಯ, ಮಾನಸಿಕ ಆರೋಗ್ಯ, ಸ್ತ್ರೀ ರೋಗಗಳ ಬಗ್ಗೆ ತಜ್ಞ ವೈದ್ಯರಿಂದ ತಪಾಸಣೆ ಮತ್ತು ಎಕ್ಸ್ ರೇ ಮತ್ತು ಇ.ಸಿ.ಜಿ ಪರೀಕ್ಷೆ
- ಉತ್ತಮ ಆರಗದಿಂದ ದೈನಂದಿನ ಕರ್ತವ್ಯಗಳನ್ನು ಮತ್ತಷ್ಟು ಉತ್ಸಾಹ ಮತ್ತು ದಕ್ಷತೆಯಿಂದ ಮಾಡಲು ಸಾಧ್ಯ

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ಅವರು ಮಧುಮೇಹ, ರಕ್ತದೊತ್ತಡ ಮತ್ತು ಎಕ್ಸ್ ರೇ ಪರೀಕ್ಷೆಗಳನ್ನು ಮಾಡಿಸಿಕೊಂಡರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶಂಕರ ರಾವ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಅಲ್ಲಾ ಭಕಾಷ್, ಮುಖ್ಯ ಯೋಜನಾಧಿಕಾರಿ ಸೋಮಶೇಖರ್ ಮೇಸ್ತಾ, ಮುಖ್ಯ ಲೆಕ್ಕಾಧಿಕಾರಿ ಆನಂದ್ ಸಾ ಹಬೀಬ್, ಜಿಲ್ಲಾ ಆರ್.ಸಿ.ಹೆಚ್, ಅಧಿಕಾರಿ ಡಾ.ನಟರಾಜ್, ಡಾ.ಹರ್ಷಾ , ಆರೋಗ್ಯ ಶಿಕ್ಷಣಾಧಿಕಾರಿ ಬಸವರಾಜ ಮತ್ತಿತರರು ಇದ್ದರು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ

ಅಂಕೋಲಾ: ರಾಜ್ಯದಲ್ಲಿ ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ಪ್ರಯತ್ನಗಳು ನಡೆಯುತ್ತಿರುವುದನ್ನು ವಿರೋಧಿಸಿಹೆಸ್ಕಾಂ ಕಚೇರಿ ಎದುರು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಹೆಸ್ಕಾಂ ನೌಕರರ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಶಾಂತಾರಾಮ ನಾಯಕ ಮಾತನಾಡಿ, ವಿದ್ಯುತ್ ಕ್ಷೇತ್ರದ ಖಾಸಗೀಕರಣದಿಂದ ಸಂಸ್ಥೆಯ ಉದ್ಯೋಗಿಗಳು,ರೈತರು,ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕಲಿದ್ದು, ಖಾಸಗೀಕರಣ ನೀತಿಯ ವಿರುದ್ಧ ಪ್ರತಿಯೊಬ್ಬರೂ ಧ್ವನಿ ಎತ್ತಬೇಕಿದೆ ಎಂದರು.

ವಿದ್ಯುತ್ ಕ್ಷೇತ್ರದ ಖಾಸಗೀಕರಣದಿಂದ ರೈತರಿಗೆ, ಜನಸಾಮಾನ್ಯರಿಗೆ ದೊರಕುವ ಸೌಲಭ್ಯಗಳು ನಿಲ್ಲಲಿದ್ದು, ವಿದ್ಯುತ್ ದರಗಳಲ್ಲಿ ಹೆಚ್ಚಳ ಆಗಲಿದೆ ಎಂದ ಅವರು ಟಾಟಾ ಪವರ್ ಕಂಪನಿಯಿಂದ ಉತ್ತರ ಕನ್ನಡ ಸೇರಿದಂತೆ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಗೆ ಪರವಾನಗಿ ಕೋರಿ ಅರ್ಜಿ ಸಲ್ಲಿಸಲಾಗಿದೆ, ಲೈನ್ ಮನ್ ನಿಂದ ಇಂಜಿನೀಯರವರೆಗೆ ಎಲ್ಲ ನೌಕರರು ಸೇರಿ ವಿದ್ಯುತ್ ಕ್ಷೇತ್ರದ ಖಾಸಗೀಕರಣ ವಿರೋಧಿಸಬೇಕು ಎಂದು ಹೇಳಿದರು.

ಕರ್ನಾಟಕ ವಿದ್ಯುತ್ ನೌಕರರ ಸಂಘದ ಕೇಂದ್ರ ಸಮಿತಿ ಸದಸ್ಯ ರಾಘವೇಂದ್ರ ನಾಯ್ಕ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಪ್ರವೀಣ ನಾಯ್ಕ ಮಾತನಾಡಿದರು. ರೈತ ಸಂಘದ ತಾಲೂಕು ಅಧ್ಯಕ್ಷ ಗೌರೀಶ ನಾಯಕ, ಕಾರ್ಯದರ್ಶಿ ಸಂತೋಷ ನಾಯ್ಕ, ಸಹ ಕಾರ್ಯದರ್ಶಿ ಗಣೇಶ ಪಟಗಾರ, ವೆಂಕಟರಮಣ ಗೌಡ, ವಿದ್ಯುತ್ ನೌಕರರ ಸಂಘದ ತಾಲೂಕು ಅಧ್ಯಕ್ಷ ಉದಯ ನಾಯ್ಕ, ಕಾರ್ಯದರ್ಶಿ ಸತೀಶ ನಾಯ್ಕ, ಸಂತೋಷ ನಾಯ್ಕ ಸಂಸ್ಥೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಆಕ್ಷೇಪಣೆ ಸಲ್ಲಿಕೆ

ವಿದ್ಯುತ್ ಕ್ಷೇತ್ರದ ಖಾಸಗೀಕರಣಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ಉತ್ತರ ಕನ್ನಡ ಜಿಲ್ಲಾ ಘಟಕದ ವತಿಯಿಂದ ಆಕ್ಷೇಪಣೆ ಸಲ್ಲಿಸಲಾಗಿದೆ ಎಂದು ಜಿಲ್ಲಾ ಅಧ್ಯಕ್ಷ ಶಾಂತಾರಾಮ ನಾಯಕ ತಿಳಿಸಿದ್ದಾರೆ. ರಾಜ್ಯದಲ್ಲಿ ವಿದ್ಯುತ್ ವಿತರಣೆಗೆ ಅರ್ಜಿ ಸಲ್ಲಿಸಿರುವ ಟಾಟಾ ಪವರ್ ಕಂಪನಿಯ ಅರ್ಜಿಯನ್ನು ತಿರಸ್ಕರಿಸಬೇಕು. ಕರ್ನಾಟಕ ರಾಜ್ಯದಲ್ಲಿ ರೈತರು ಹಲವು ಬೆಳೆಗಳನ್ನು ಬೆಳೆಯುತ್ತಿದ್ದು 40 ಲಕ್ಷಕ್ಕೂ ಹೆಚ್ಚು ನೀರಾವರಿ ಪಂಪ್ ಸೆಟ್ ಬಳಸುತ್ತಿದ್ದಾರೆ ವಿದ್ಯುತ್ ಕ್ಷೇತ್ರದ ಖಾಸಗೀಕರಣದಿಂದ ರೈತರಿಗೆ ತೊಂದರೆ ಆಗಲಿದ್ದು ನೌಕರರ ಉದ್ಯೋಗ ಭದ್ರತೆಗೆ ಕಂಟಕವಾಗಲಿದೆ ಎಂದು ಆಕ್ಷೇಪಣೆಯಲ್ಲಿ ವಿವರಿಸಲಾಗಿದೆ ಎಂದು ಶಾಂತಾರಾಮ ನಾಯಕ ತಿಳಿಸಿದ್ದಾರೆ.



ಬಾರ್ಜ ನಿಲ್ಲಿಸಲು ಸೂಕ್ತ ಕ್ರಮ ಕೈಗೊಳ್ಳಿ

ಗೋಕರ್ಣ: ತದಡಿ-ಅಘನಾಶಿನಿ ನಡುವೆ ಸಂಚರಿಸುವ ಬಾರ್ಜ ಕಳೆದ ಎರಡು ದಿನಗಳಿಂದ ಬಂದ ಆಗಿದ್ದು, ನಿತ್ಯ ಸಂಚರಿಸುವ ಜನರು ಪರದಾಡುತ್ತಿದ್ದಾರೆ.

ಕಡಲಕೊರತೆ ಇಲಾಖೆಯಿಂದ ಅಘನಾಶಿನಿ ಭಾಗದಲ್ಲಿ ಜಟ್ಟಿ ಕಟ್ಟುತ್ತಿದ್ದು, ಇದರಿಂದ ಬಾರ್ಜ ನಿಲ್ಲಿಸಿ ಪ್ರಯಾಣಿಕರ ಹತ್ತಿಸಲು ಆಗುತ್ತಿಲ್ಲ ಎಂದು ಬಾರ್ಜ ನಡೆಸುವವರು ಹೇಳುತ್ತಿದ್ದಾರೆ ಎಂದು ಬಂದರು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ಮಳೆಗಾಲದಲ್ಲಿ ನದಿ ಸಮುದ್ರ ಸೇರುವ ಜಾಗದಲ್ಲಿ ಜಟ್ಟಿ ನಿರ್ಮಾಣ ಪೂರ್ಣ ಮಾಡಲು ಸಾಧ್ಯವೇ ಎಂದು ಜನರು ಪ್ರಶ್ನಿಸುತ್ತಿದ್ದಾರೆ.

ಸಾರ್ವಜನಿಕರಿಗೆ ಯಾವುದೇ ಮಾಹಿತಿ ಅಥವಾ ಪ್ರಕಟಣೆ ಮೂಲಕ ತಿಳಿಸದೆ ಏಕಾಏಕಿ ಬಂದ್ ಮಾಡಿರುವುದಕ್ಕೆ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸ್ಥಳೀಯರು ಪ್ರವಾಸಿಗರು ಸೇರಿದಂತೆ ನೂರಾರು ಜನರು ಗೋಕರ್ಣದಿಂದ ತದಡಿಗೆ ಬಂದು ಬಾರ್ಜ ಏರಿ ಅಘನಾಶಿನಿ ತಲುಪಿ ಅಲ್ಲಿಂದ ಕುಮಟಾ ತೆರಳುತ್ತಿದ್ದರು. ಇದಲ್ಲದೇ ಬಾಡದಲ್ಲಿರುವ ವಿವಿಧ ರೆಸಾರ್ಟ, ಹೊಟೇಲ್ ಗಳಿಗೆ ಪ್ರವಾಸಿಗರು ಇಲ್ಲಿಂದ ತೆರಳುತ್ತಿದ್ದರು. ಪ್ರಸ್ತುತ ಪ್ರವಾಸಿಗರು ಸಂಖ್ಯೆಯು ಇಳಿಮುಖಗೊಂಡಿರುವುದರಿಂದ, ಜನ ಕಡಿಮೆ ಎಂದು ಸಂಚಾರ ಸ್ಥಗಿತಗೊಳಿಸುವ ನಿರ್ಧಾರಕ್ಕೆ ಬಂದಿದ್ದು, ಈಗ ಜಟ್ಟಿ ನಿರ್ಮಾಣದ ಕಾರ್ಯದ ಕಾರಣ ಬಾರ್ಜ ನಡೆಸುವ ಗುತ್ತಿಗೆದಾರರಿಗೆ ಸಂಚಾರ ನಿಲ್ಲಿಸಲು ಪೂರಕವಾಗಿದೆ ಎಂದು ಸ್ಥಳೀಯರು ಹೇಳಿದ್ದಾರೆ. ಬೇಸಿಗೆಯಲ್ಲಿ ಬಾಜ್ ನವರು ಪ್ರವಾಸಿಗರಿಂದ ನಿಗದಿಪಡಿಸಿದ ದರಕ್ಕಿಂತ ದುಪ್ಪಟ್ಟು ಹಣ ಪಡೆಯುತ್ತಿದ್ದು, ಈ ಬಗ್ಗೆ ಬಂದರು ಇಲಾಖೆ ಜನರು ದೂರು ಸಲ್ಲಿಸಿದ್ದರು. ಆದರೆ ಯಾವುದೇ ಕ್ರಮವಾಗಿರಲಿಲ್ಲ.

ಈ ಬಗ್ಗೆ ಶಾಸಕರು ಅಥವಾ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಜಟ್ಟಿ ನಿರ್ಮಾಣದ ಪ್ರದೇಶದಲ್ಲಿ ಬಾರ್ಜ ನಿಲ್ಲಿಸಲು ಸೂಕ್ತ ಕ್ರಮ ತೆಗೆದುಕೊಂಡು ಜನರಿಗೆ ಅನುಕೂಲತೆ ಒದಗಿಸಕೊಡಬೇಕಿದೆ.



ಶಾಂತಿ, ನೆಮ್ಮದಿಗೆ ಧ್ಯಾನ ಅವಶ್ಯ

ಅಂಕೋಲಾ: ಇಲ್ಲಿಯ ಕಲಾಭಾರತಿ ಟ್ರಸ್ಟ್ ಇದರ ಆಶ್ರಯದಲ್ಲಿ ಎರಡನೇ ಬ್ಯಾಚ್ ಧ್ಯಾನ ತರಬೇತಿ ಜೂನ್ 15 ರಿಂದ ಆರಂಭಗೊಂಡಿತು.

ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಮಹೇಶ್ ನಾಯಕ ಹಿಚ್ಕಡ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಮನಸ್ಸಿನ ಶಾಂತಿ ನೆಮ್ಮದಿಗಾಗಿ ಎಲ್ಲೆಡೆ ಹುಡುಕುವ ಮನಸ್ಸುಗಳಿಗೆ ಧ್ಯಾನ ನೆಮ್ಮದಿ ತರುವುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ ಕನ್ನಡ ವೈಶ್ಯ ವಿದ್ಯಾನಿಧಿಯ ನೂತನ ನಿರ್ದೇಶಕರಾದ ಜಗದೀಶ ಶೆಟ್ಟಿ ಯವರು ಕಲಾಭಾರತಿ ಟ್ರಸ್ಟ್ ಮಾಡುತ್ತಿರುವ ಈ ಕಾರ್ಯಕ್ರಮದ ಉಪಯೋಗ ಹೆಚ್ಚು ಹೆಚ್ಚು ಜನಗಳು ಪಡೆಯುವಂತಾಗಲಿ ಎಂದರು.

ಮುಖ್ಯ ಅತಿಥಿ ಗಳಾಗಿ ಕರಾವಳಿ ಮುಂಜಾವು ಪತ್ರಕರ್ತ ವಾಸುದೇವ ಗುನಗಾ ಮಾತನಾಡಿ, ಇದೊಂದು ಒಳ್ಳೆಯ ಕಾರ್ಯಕ್ರಮ ಇಂತಹ ಕಾರ್ಯಕ್ರಮಗಳಿಗೆ ಸದಾ ನನ್ನ ಸಹಕಾರವಿದೆ ಎಂದರು.

ವರ್ಷಿಣಿ ಶೆಟ್ಟಿ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಧ್ಯಾನ ತರಬೇತುದಾರರಾದ ಸುಧಾ ಶೆಟ್ಟಿ ಪ್ರಾಸ್ತಾವಿಕ ಮಾತನಾಡಿ, ಧ್ಯಾನ ತರಬೇತಿಯ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು. ಟ್ರಸ್ಟ್‌ನ ಅಧ್ಯಕ್ಷರು ಸರ್ವರನ್ನೂ ಸ್ವಾಗತಿಸಿ ವಂದಿಸಿದರು. ಉಪಸ್ಥಿತರಿದ್ದ ಅಂಕೋಲಾದ ಹಲವು ಧ್ಯಾನಾಸಕ್ತರು ಇದರಲ್ಲಿ ಪಾಲ್ಗೊಂಡಿದ್ದರು.

ಈ ತರಬೇತಿಯು 21 ದಿನಗಳವರೆಗೆ ನಡೆಯಲಿದ್ದು ಬೆಳಗ್ಗೆ 6 ರಿಂದ 7ರ ವರೆಗೆ ನರಸಿಂಹ ಬಿಗ್ ಬಜಾರ್ ಮೇಲಿನ ಸಭಾಭವನದಲ್ಲಿ ಹಾಗೂ ಸಂಜೆ 5.30 ರಿಂದ 6.30 ರವರೆಗೆ ಆರ್ಯಾ ಮೆಡಿಕಲ್ ಸೆಂಟರ್‌ನ ಹಿಂಬಾಗದಲ್ಲಿರುವ 'ಶಮ್ಯ' ಕಟ್ಟಡದಲ್ಲಿ ನಡೆಯಲಿದೆ ಸಾರ್ವಜನಿಕರು ಇದರ ಕುರಿತು ಹೆಚ್ಚಿನ ಮಾಹಿತಿಗಾಗಿ 8073992382 ನಂಬರ್‌ನ್ನು ಸಂಪರ್ಕಿಸಲು ಸಂಘಟಕರು ಕೋರಿರುತ್ತಾರೆ.



ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಸನ್ಮಾನ

ಅಂಕೋಲಾ: ಕಳೆದ ಶೈಕ್ಷಣಿಕ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ನೂರು ಪ್ರತಿಶತ ಅಂಕಗಳನ್ನು ಪಡೆದ 40 ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯ ಪರಿಷತ್ ಉತ್ತರ ಕನ್ನಡ ಜಿಲ್ಲಾ ಘಟಕ ಮತ್ತು ಅಂಕೋಲಾ ತಾಲೂಕು ಘಟಕದ ವತಿಯಿಂದ ಗೌರವಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಮಂಗಳಲಕ್ಷ್ಮೀ ಪಾಟೀಲ ಮಾತನಾಡಿ, ವಿದ್ಯಾರ್ಥಿಗಳ ಸಾಧನೆಯಲ್ಲಿ ಅವರ ಪ್ರಯತ್ನ, ಪರಿಶ್ರಮದ ಜೊತೆಗೆ ಶಿಕ್ಷಕರು ಮತ್ತು ಪಾಲಕರ ಪಾತ್ರವೂ ಅಪಾರವಿದೆ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವ ಕೆಲಸ ಪ್ರತಿವರ್ಷ ನಡೆಯುತ್ತಿರುವುದು ಸಂತಸದ ವಿಚಾರ ಎಂದರು.

ಪ್ರಶಸ್ತಿಪತ್ರ ಪ್ರದಾನ ಮಾಡಿದ ಸೇಂಟ್ ಮಿಲಾಗ್ರಿಸ್ ಸಂಸ್ಥೆಯ ಅಧ್ಯಕ್ಷ ಜಾರ್ಜ್ ಫರ್ನಾಂಡೀಸ್ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇಂಗ್ಲಿಷ್ ಕಲಿಕೆಯ ಒಂದು ಭಾಗವಾಗಿದ್ದು ಮಾತೃಭಾಷೆಯಾದ ಕನ್ನಡಕ್ಕೆ ಅಪಚಾರ ಆಗದಂತೆ ನೋಡಿಕೊಳ್ಳಬೇಕಿದೆ ಎಂದರು.

ಕಸಾಪ ಅಂಕೋಲಾ ಘಟಕದ ಅಧ್ಯಕ್ಷ ಗೋಪಾಲಕೃಷ್ಣ ನಾಯಕ ಮಾತನಾಡಿ, ಕನ್ನಡ ಸಾಹಿತ್ಯದ ಮೇಲಿನ ಒಲವು ಕನ್ನಡ ಭಾಷೆಯ ಮೇಲಿನ ಅಭಿಮಾನ ವಿದ್ಯಾರ್ಥಿಗಳಲ್ಲಿ ಸದಾ ಇರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾಧ್ಯಕ್ಷ ಬಿ.ಎನ್.ವಾಸರೆ ಮಾತನಾಡಿ, ಕನ್ನಡ ಭಾಷೆಯನ್ನು ಸಾಯಿಸುವಷ್ಟು ಮಟ್ಟದಲ್ಲಿ ಇಂಗ್ಲಿಷ್ ವ್ಯಾಮೋಹ ಬೇಡ ಎಂದರು.ಕೌಟುಂಬಿಕ ಸಲಹೆಗಾರ ತಿಮ್ಮಣ್ಣ ಭಟ್ಟ, ವಕೀಲ ಬಿ.ಡಿ.ನಾಯ್ಕ, ಪತ್ರಕರ್ತ ನಾಗರಾಜ ಮಂಜಗುಣಿ, ಕಸಾಪ ಹಿರಿಯ ಸದಸ್ಯೆ ಶಾಂತಿ ಆಗೇರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಂಜುನಾಥ ನಾಯಕ ಮಾತನಾಡಿದರು. ಕಸಾಪ ಪದಾಧಿಕಾರಿಗಳಾದ ರಫೀಕ ಶೇಖ್, ನಾಗೇಂದ್ರ ತೊರ್ಕೆ, ಎಂ ಬಿ.ಆಗೇರ ಉಪಸ್ಥಿತರಿದ್ದರು.ಹಿರಿಯ ಕತೆಗಾರ ಡಾ.ರಾಮಕೃಷ್ಣ ಗುಂದಿ ಅವರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.ಸಾಹಿತಿ ಜೆ.ಪ್ರೇಮಾನಂದ ಸ್ವಾಗತಿಸಿದರು,ಮಹಾಂತೇಶ ರೇವಡಿ ಕಾರ್ಯಕ್ರಮ ನಿರ್ವಹಿಸಿದರು,ಸುಜೀತ ನಾಯ್ಕ ವಂದಿಸಿದರು.



ಅಧ್ಯಯನ ಪ್ರವಾಸ ಕಾರ್ಯಕ್ರಮ



ಶಿರಸಿ: ತಾಲೂಕಿನ ದೊಡ್ನಳ್ಳಿ ಗ್ರಾಮದ ಜ್ಞಾನಶ್ರೀ ಹಾಗೂ ವೀರಾಂಜನೇಯ ಮಹಿಳಾ ಜ್ಞಾನ ವಿಕಾಸ ಕೇಂದ್ರದ ಸದಸ್ಯರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದ ಅಡಿಯಲ್ಲಿ ಸ್ಥಳೀಯ ಸರ್ಕಾರಿ ಇಲಾಖೆ ಮಾದರಿ ಜ್ಞಾನವಿಕಾಸ ಕೇಂದ್ರಗಳ ಭೇಟಿಯ ಅಧ್ಯಯನ ಪ್ರವಾಸ ಕಾರ್ಯಕ್ರಮ ಬುಧವಾರ ಹಮ್ಮಿಕೊಳ್ಳಲಾಯಿತು.

ಶಿರಸಿಯ ಹೊಸ ಮಾರುಕಟ್ಟೆ ಪೊಲೀಸ್ ಠಾಣೆ, ಅಗ್ನಿ ಶಾಮಕ ಠಾಣೆ, ಮಹಿಳಾ ಸಾಂತ್ವನ ಕೇಂದ್ರ, ಮಾದರಿ ಜ್ಞಾನವಿಕಾಸ ಕೇಂದ್ರ ಭೇಟಿ ಮಾಡಿ ಕಛೇರಿಯ ಅಧಿಕಾರಿಗಳಿಂದ ಇಲಾಖೆಯ ಕುರಿತು ಸಂಪೂರ್ಣ ಮಾಹಿತಿ ಪಡೆದುಕೊಂಡರು.

ಈ ಸಂಧರ್ಭದಲ್ಲಿ ಮಹಿಳಾ ಜ್ಞಾನವಿಕಾಸ ಕೇಂದ್ರದ ತಾಲ್ಲೂಕು ಸಮನ್ವಯಾಧಿಕಾರಿ ಮಲ್ಲಿಕಾ ಶೆಟ್ಟಿ, ಸೇವಾ ಪ್ರತಿನಿಧಿ ಸುನಂದಾ ಹಾಗೂ ಮಹಿಳಾ ಜ್ಞಾನವಿಕಾಸ ಕೇಂದ್ರದ ಸದಸ್ಯರು ಉಪಸ್ಥಿತರಿದ್ದರು.

ವಿದ್ಯಾಭಾರತಿ ಶಾಲೆಯಲ್ಲಿ ಅಕ್ಷರಾಭ್ಯಾಸ

ಭಟ್ಕಳ : ಇಲ್ಲಿಯ ವಿದ್ಯಾಭಾರತಿ ಶಾಲೆಯಲ್ಲಿ ಪೂರ್ವ ಪ್ರಾಥಮಿಕ ಮಕ್ಕಳಿಗೆ ವಿದ್ಯಾರ್ಜನೆಯ ಪ್ರಾರಂಭದಲ್ಲಿ ನೀಡುವ ಸಂಸ್ಕಾರದ ಅಂಗವಾಗಿ ಅಕ್ಷರಾಭ್ಯಾಸ ಕಾರ್ಯಕ್ರಮ ನಡೆಸಲಾಯಿತು.

ವೈದಿಕ ಸಚಿನ್ ಭಟ್ ಹಾಗೂ ತಂಡದವರು ಮಕ್ಕಳಿಗೆ ಅಕ್ಷರಾಭ್ಯಾಸದ ವಿಧಿ ವಿಧಾನವನ್ನು ಪೋಷಕರ ಸಮಕ್ಷಮದಲ್ಲಿ ನೆರವೇರಿಸಿಕೊಟ್ಟರು. 62 ಮಕ್ಕಳು ಶಾಸ್ತ್ರೋಕ್ತವಾಗಿ ಅಕ್ಷರಾಭ್ಯಾಸ ಮಾಡಿಸಿಕೊಂಡರು. ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದ ಬೈಲೂರಿನ ಲಕ್ಷ್ಮೀನರಸಿಂಹ ದೇವಸ್ಥಾನದ ಅರ್ಚಕ ಗಣೇಶ ಭಟ್ಟ ಅವರು ವಿದ್ಯಾಭಾರತಿ ಶಾಲೆಯಲ್ಲಿ ಪೂರ್ವಪ್ರಾಥಮಿಕ ಮಕ್ಕಳಿಗೆ ಅಕ್ಷರಾಭ್ಯಾಸವನ್ನು ಮಾಡಿಸುತ್ತಿರುವುದು ಉತ್ತಮ ಕಾರ್ಯವಾಗಿದೆ. ಮಕ್ಕಳಿಗೆ ಚಿಕ್ಕವರಿರುವಾಗಲೇ ಸಂಸ್ಕಾರ ಕಲಿಸಬೇಕು ಎಂದರು.

ಭಟ್ಕಳ ಎಜ್ಯುಕೇಶನ್ ಟ್ರಸ್ಟಿನ ಟ್ರಸ್ಟಿ ರಮೇಶ ಖಾರ್ವಿ, ಮುಖ್ಯ ಶಿಕ್ಷಕಿ ರೂಪಾ ಖಾರ್ವಿ ಶಿಕ್ಷಕ ವೃಂದದವರು, ಪಾಲಕರು ಉಪಸ್ಥಿತರಿದ್ದರು.



ಉಚಿತ ಟೈಲರಿಂಗ್ ತರಬೇತಿ ಶಿಬಿರ



ಜೊಯಿಡಾ: ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟ್ ಸಂಸ್ಥೆ ಹಳಿಯಾಳ ವಿಸ್ತರಣಾ ಶಾಖೆ ಜೋಯಿಡಾ ಹಾಗೂ ಶೋದಾ ಮೋಟರ್ಸ್ ಪ್ರೈವೇಟ್ ಲಿಮಿಟೆಡ್ ಹುಬ್ಬಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ಡಿಸೈನಿಂಗ್ ಆಫ್ ಫ್ಯಾಶನ್ ಬ್ಲೌಸ್ ಟ್ರೈನಿಂಗ್ ತರಬೇತಿಯನ್ನು ಉಳವಿ ಗ್ರಾಪಂಯ ಕಡಗರ್ಣಿ ಗ್ರಾಮದಲ್ಲಿ ಆಯೋಜಿಸಲಾಗಿತ್ತು .

ಕಾರ್ಯಕ್ರಮವನ್ನು ಮಂಜುನಾಥ ಮೋಕಾಶಿ ನಿಕಟ ಪೂರ್ವ ಗ್ರಾಪಂ ಅಧ್ಯಕ್ಷರು ಉಳವಿ ಇವರು ಉದ್ಘಾಟಿಸಿ ಟೈಲರಿಂಗ್ ತರಬೇತಿ ಎನ್ನುವುದು ಹೆಣ್ಣು ಮಕ್ಕಳಿಗೆ ಒಳ್ಳೆಯ ಉದ್ಯೋಗ ಅದರಲ್ಲಿ ಬ್ಲೌಸ್ ಡಿಸೈನ್ ತರಬೇತಿ ಬಹಳಷ್ಟು ಮುಖ್ಯ ತರಬೇತಿಯಾಗಿದೆ. ಈ ಉದ್ಯೋಗದಿಂದ ಹೆಚ್ಚಿನ ಹಣವನ್ನು ಗಳಿಸಲು ಸಾಧ್ಯವಾಗುತ್ತದೆ ಎಂದುರು.ಊರಿನ ಹಿರಿಯ ನಾಗರಿಕರು ಗುರು ಗಾಳಕರ್, ಶಿವ ಗಾಳಕರ್, ಓಂಕಾರ್, ರಂಜಿನಾ ದೇವಳಿ ಜಲ್ಮೇಶ್ವರ ಸಂಘದ ಅಧ್ಯಕ್ಷರು ಶ್ವೇತಾ ಗಾಳಕರ್ ಮತ್ತು ಲಲಿತಾ ದಾತೋಡ್ಕರ್ ಮಾಜಿ ಗ್ರಾಪಂ ಉಪಾಧ್ಯಕ್ಷರು ಉಪಸ್ಥಿತರಿದ್ದರು.ಕಾರ್ಯಕ್ರಮವನ್ನು ಅಶೋಕ್ ಸೂರ್ಯವಂಶಿ ಯೋಜನಾಧಿಕಾರಿಗಳು ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ ಜೋಯಿಡಾ ಆಯೋಜಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ 27 ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ.

ಉತ್ತರವಿಲ್ಲದ ಉತ್ತರ ಕನ್ನಡ ಪುಸ್ತಕ ಲೋಕಾರ್ಪಣೆ

ಹೊನ್ನಾವರ: ಬರವಣಿಗೆಯು ದಾಖಲೆಯಾಗಿ ಉಳಿಯಲಿದ್ದು, ಜಿಲ್ಲೆಯ ಅಭಿವೃದ್ಧಿಗೆ ಹಲವರು ಲೇಖನ ಹಾಗೂ ಪುಸ್ತಕಗಳನ್ನು ಬರೆದರೂ, ಜಿಲ್ಲೆಯು ಇಂದಿಗೂ ಅಭಿವೃದ್ಧಿ ಕಾಣದಾಗಿದೆ ಎಂದು ಹಿರಿಯ ಪತ್ರಕರ್ತಕ ಜಿ.ಯು. ಭಟ್ ಹೇಳಿದರು.

ಅವರು ತಾಲೂಕಿನ ಕಡತೋಕಾದ ಜನತಾ ವಿದ್ಯಾಲಯ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ದಿ. ಶಿವರಾಮ ಶಾಸ್ತ್ರಿ ಸ್ಮಾರಕ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಮಾರಂಭದಲ್ಲಿ, ಹಿರಿಯ ಲೇಖಕ ಡಾ. ಜಿ.ವಿ. ಜೋಶಿ ಅವರು ರಚಿಸಿರುವ 'ಉತ್ತರವಿಲ್ಲದ ಉತ್ತರ ಕನ್ನಡ ಜಿಲ್ಲೆ' ಸೇರಿದಂತೆ ಮೂರು ಪ್ರಮುಖ ಪುಸ್ತಕಗಳನ್ನು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ನೂರಾರು ಮಹನೀಯರ ತ್ಯಾಗ ಮತ್ತು ಹೋರಾಟಗಳ ಹೊರತಾಗಿಯೂ ಉಕ ಜಿಲ್ಲೆ ಇಂದಿಗೂ ಅಭಿವೃದ್ಧಿಯತ್ತ ಸಾಗದೆ, ತನ್ನ ಸಮಸ್ಯೆಗಳಿಗೆ 'ಉತ್ತರ' ಕಂಡುಕೊಳ್ಳದ ಜಿಲ್ಲೆಯಾಗಿಯೇ ಉಳಿದುಹೋಗಿದೆ. ಜಿಲ್ಲೆಯ ರಾಜಕೀಯ ಪರಿಸ್ಥಿತಿ ಹಾಗೂ ಜನಪ್ರತಿನಿಧಿಗಳ ಕಾರ್ಯವೈಖರಿಯ ಕುರಿತು ಅಸಮಾಧಾನ ವ್ಯಕ್ತಪಡಿಸಿದರು. ಅರ್ಥಶಾಸ್ತ್ರದಲ್ಲಿ ಒಳಗೊಳ್ಳುವಿಕೆಯ ಅಭಿವೃದ್ಧಿಗಾಗಿ ಒಂದು ಶೋಧ ಎಂಬ ಪುಸ್ತಕವನ್ನು ಲೋಕಾರ್ಪಣೆಗೊಳ್ಳಿಸಿದ ಉದ್ಯಮಿ ಮುರುಳಿಧರ ಪ್ರಭು ಮಾತನಾಡಿದರು.

ಸೈದ್ಧಾಂತಿಕ ಮತ್ತು ವಲಯ ಆಧಾರಿತ ಅರ್ಥಶಾಸ್ತ್ರ ಪುಸ್ತಕವನ್ನು ಲೋಕಾರ್ಪಣೆಗೊಳಿಸಿದ ನಿವೃತ್ತ ಪ್ರಾಚಾರ್ಯ ಡಾ. ಡಿ.ಎಲ್. ಹೆಬ್ಬಾರ್ ಮಾತನಾಡಿ, ಗುರುವಿನ ವಿಚಾರವನ್ನು ಮುಂದಿನ ತಲೆಮಾರಿಗೆ ತಲುಪಿಸುವುದೇ ಶಿಷ್ಯ ನೀಡುವ ದೊಡ್ಡ ಕಾಣಿಕೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ಶಂಭು ಭಟ್ ವಹಿಸಿದ್ದರು. ನ್ಯಾಯವಾದಿ ಅಮಿತಾ ಭಾಗವತ್, ಕೊಂಕೇರಿ ಪ್ರತಿನಿಧಿ ಅನಸೂಯಾ ಭಟ್, ಯಕ್ಷಗಾನ ಅರ್ಥಧಾರಿ ಜಿ.ವಿ. ಹೆಗಡೆ, ನಿವೃತ್ತ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತ ಎಸ್.ಜಿ. ಹೆಗಡೆ ಹಾಗೂ ಚಿಂತನಾಶೀಲ ಬರಹಗಾರ ಶಂಕರ ನಾರಾಯಣ ಭಟ್ ಉಪಸ್ಥಿತರಿದ್ದರು.ಕಾರ್ಯಕ್ರಮದ ಆರಂಭದಲ್ಲಿ ಲೇಖಕ ಡಾ. ಜಿ.ವಿ ಜೋಶಿ ಪ್ರಾಸ್ತಾವಿಕವಾಗಿ ಜಿಲ್ಲೆಯ ಪ್ರಸುತ್ತ ಪರಿಸ್ಥಿತಿಯ ಕುರಿತು ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ ವಿಷಯದ ಕುರಿತು ಮಾತನಾಡಿದರು. ಪ್ರಾಚಾರ್ಯೆ ದುರ್ಗಮ್ಮ ಪಿ.ಎಚ್. ಸ್ವಾಗತಿಸಿದರು. ಪ್ರೌಢಶಾಲಾ ವಿಭಾಗದ ಮುಖ್ಯ ಶಿಕ್ಷಕ ಡಿ.ಎನ್. ವೈದ್ಯ ವಂದಿಸಿದರು. ಶಿಕ್ಷಕ ಪ್ರದೀಪ ಖರ್ವಾ ಕಾರ್ಯಕ್ರಮ ನಿರೂಪಿಸಿದರು.



ಕಿರುಸುದ್ದಿ

ನವೋದಯ: 11ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹಾವೇರಿ: ಜಿಲ್ಲೆಯ ಹಾನಗಲ್ ತಾಲೂಕು ಮಹಾರಾಜಪೇಟೆ ಬಳಿಯ ಜವಾಹರ ನವೋದಯ ವಿದ್ಯಾಲಯದಲ್ಲಿ 2026-27ನೇ ಸಾಲಿಗೆ 11ನೇ ತರಗತಿ ವಿಜ್ಞಾನ ವಿಷಯದ (ಪಿಸಿಎಂಬಿ, ಪಿಸಿಎಂಸಿ, ಪಿಸಿಬಿ) ಖಾಲಿ ಇರುವ ಸ್ಥಾನಗಳಿಗೆ ನೇರ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಯು ಹಾವೇರಿ ಜಿಲ್ಲೆಯ ನಿವಾಸಿಯಾಗಿರಬೇಕು, 2025-26ನೇ ಸಾಲಿನಲ್ಲಿ 10ನೇ ತರಗತಿ ಉತ್ತೀರ್ಣರಾಗಿರಬೇಕು. ಗಣಿತ ಮತ್ತು ವಿಜ್ಞಾನ ವಿಷಯದಲ್ಲಿ ಕನಿಷ್ಠ ಶೇ.60 ಅಂಕ ಪಡೆದಿರಬೇಕು. 2009 ಜೂ.1ರಿಂದ 2011 ಜು.31ರ ಅವಧಿಯಲ್ಲಿ ಜನಿಸಿರಬೇಕು. ಅರ್ಹ ಆಸಕ್ತ ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಿದ್ಯಾಲಯದ ಕಾರ್ಯಾಲಯಕ್ಕೆ ಭೇಟಿ ನೀಡಿ ಅಗತ್ಯ ದಾಖಲೆಗಳೊಂದಿಗೆ ಜೂ.26ರೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಜವಾಹರ ನವೋದಯ ವಿದ್ಯಾಲಯದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯೋಗ ತರಬೇತಿ ಶಿಬಿರಕ್ಕೆ ಚಾಲನೆ

ಸಿದ್ದಾಪುರ: ಸ್ಥಳೀಯ ರಾಘವೇಂದ್ರಮಠದಲ್ಲಿ ಪತಂಜಲಿ ಯೋಗ ಸಮಿತಿ ಮತ್ತು ಮಹಿಳಾಪತಾಂಜಲಿ ಯೋಗ ಸಮಿತಿ ಸಹಯೋಗದಲ್ಲಿ ಬುಧವಾರದಿಂದ ಪ್ರಾರಂಭವಾದ 25 ದಿನಗಳ ಅಡ್ವಾನ್ಸ್ ಯೋಗ ಸರ್ಟಿಫಿಕೇಟ್ ತರಬೇತಿಗೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಇಂದಿನ ಶಿಕ್ಷಕರಾಗಿ ಭಾರತ್ ಸ್ವಾಭಿಮಾನ್ ಟ್ರಸ್ಟ್‌ನ ರಾಜ್ಯ ಸಹಪ್ರಭಾರಿಗಳಾದ ಬಾಲಚಂದ್ರ ಶರ್ಮಾಜಿ, ಪತಂಜಲಿ ರಾಜ್ಯ ಸಹಕಾರ್ಯದರ್ಶಿಗಳಾದ ರಘುರಾಮ ಹೆಗಡೆ, ಕಾರವಾರ ಜಿಲ್ಲಾ ಪ್ರಭಾರಿಗಳಾದ ಶ್ರೀನಾಥ, ಸಿದ್ದಾಪುರ ತಾಲೂಕ ಪ್ರಭಾರಿಗಳಾದ ಮಂಜುನಾಥ ನಾಯ್ಕ, ಮಹಿಳಾ ಪ್ರಭಾರಿ ವೀಣಾ ಆನಂದ ಶೇಟ್, ಶಿರಸಿ ಪ್ರಭಾರಿಗಳಾದ ಸೋಮಪ್ರಕಾಶ ಶೇಟ್, ಸದಸ್ಯರಾದ ಶ್ರೀಕಂಠ ಶಾಸ್ತ್ರಿ, ಆನಂದ ನಾಯ್ಕ, ರಾಜಯೋಗಿನಿ ಬಿ.ಕೆ.ದೇವಕಿ ಇತರರು ಉಪಸ್ಥಿತರಿದ್ದರು.

ಸಚಿವ ಸ್ಥಾನ ಬಿಟ್ಟುಕೊಟ್ಟು ದೊಡ್ಡವರಾಗಿ: ಶ್ರೀಗಳು



ರೋಣ: ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗಲೆಲ್ಲ ಡಾ.ಎಚ್.ಕೆ.ಪಾಟೀಲರು ಮಂತ್ರಿಯಾಗುತ್ತಾ ಬಂದಿದ್ದಾರೆ. ಆದರೆ ಈ ಬಾರಿ ರೋಣ ಮತಕ್ಷೇತ್ರದ ಶಾಸಕ ಜಿ.ಎಸ್.ಪಾಟೀಲರಿಗೆ ಬಿಟ್ಟುಕೊಡುವ ಮೂಲಕ ದೊಡ್ಡವರಾಗಬೇಕು ಎಂದು ಪ್ರತಿಷ್ಠಿತ ಕುದರಿಮೋತಿ ವಿಜಯಮಹಾಂತ ಶ್ರೀಗಳು ಹೇಳಿದರು. ಅವರು ಬುಧವಾರ ಪಟ್ಟಣದ ಯಾತ್ರಾನಿವಾಸದಲ್ಲಿ ತಾಲೂಕಾ ಜಂಗಮ ಕ್ಷೇಮಾಭಿವೃದ್ಧಿ ಸಂಘದಿಂದ ಜರುಗಿದ ಧರ್ಮ ಸಭೆಯ ನಂತದ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಡಾ.ಎಚ್.ಕೆ.ಪಾಟೀಲರು ಸಾಕಷ್ಟು ಬಾರಿ ಉನ್ನತ ಹುದ್ದೆ ಪಡೆದುಕೊಂಡಿದ್ದಾರೆ. ಆದರೆ ಈ ಬಾರಿ ರೋಣ ಮತಕ್ಷೇತ್ರಕ್ಕೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಸ್ವತಹ ಅವರೇ ಮುಂದಾಳತ್ವ ವಹಿಸಬೇಕು. ಇದರಿಂದ ಅವರ ಗೌರವ ಹೆಚ್ಚಾಗುತ್ತದೆ ಎಂದ ಅವರು ಶಾಸಕ ಜಿ.ಎಸ್.ಪಾಟೀಲರು ಸೌಮ್ಯ ಸ್ವಭಾವದ ಜನಪ್ರೀಯ ನಾಯಕರಾಗಿದ್ದು, ಅವರಲ್ಲಿ ಅಘಾದವಾದ ಶಕ್ತಿಯಿದೆ ಎಂಬುದನ್ನು ಯಾರು ಕೂಡ ಮರೆಯಬಾರದು ಎಂದರು. ನರೇಗಲ್ಲ ಹಿರೇಮಠದ ಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳು ಮಾತನಾಡಿ, ಸರ್ವಧರ್ಮದವರನ್ನು ತನ್ನ ಕುಟುಂಬದ ಸದಸ್ಯರುಗಳು ಎಂದು ನಂಬಿಕೆಯಿಟ್ಟುರ ನಾಯಕ ಜಿ.ಎಸ್.ಪಾಟೀಲರು ಅವರ ಧರ್ಮ ನಿಷ್ಠೆಯನ್ನು ಯಾರು ಪ್ರಶ್ನೆ ಮಾಡುವಂತಿಲ್ಲ. ಕಲುಷಿತಗೊಳ್ಳುತ್ತಿರುವ ವಾತವರಣದಲ್ಲಿ ಎಲ್ಲರನ್ನು ಕಟ್ಟಿಕೊಂಡು ಹೊಗುವ ವ್ಯಕ್ತಿಗೆ ಸಚಿವ ಸ್ಥಾನ ನೀಡುವುದು ಪಕ್ಷದ ನಿರ್ಧಾರವಾಗಿರಬೇಕು. ಜಿ.ಎಸ್.ಪಾಟೀಲರಿಗೆ ಸಚಿವ ನೀಡಿದರೆ ಆದರಿಂದ ಪಕ್ಷಕ್ಕೆ ಹೆಚ್ಚಿನ ಶಕ್ತಿ ಬರಲಿದ್ದು, ಪಕ್ಷದ ಹೈಕಮಾಂಡ್ ಸೂಕ್ತ ನಿರ್ಧಾರ ಕೈಗೊಂಡು ರೋಣ ಮತಕ್ಷೇತ್ರಕ್ಕೆ ಸಾಮಾಜಿಕ ನ್ಯಾಯ ಒದಗಿಸಬೇಕು ಎಂದರು. ಡಾ.ಅಭಿನವ ಕೊಟ್ಟೂರೇಶ್ವರ ಶ್ರೀಗಳು ಮಾತನಾಡಿ, ಶಾಸಕ ಜಿ.ಎಸ್.ಪಾಟೀಲರು ಅವರೊಬ್ಬ ವ್ಯಕ್ತಿಯಲ್ಲ ಅವರೊಂದು ಶಕ್ತಿ. ರೋಣದ ಶಾಸಕರಾಗಿ ಸಚಿವ ಸ್ಥಾನ ನೀಡಬೇಕು ಎನ್ನುತ್ತಿರುವುದು ಸಹ ಕೇಳಿ ಬರುತ್ತಿದೆ. ಹಿಗಿರುವಾಗ ಕಾಂಗ್ರೆಸ್ ಪಕ್ಷ ಅವರ ಪ್ರಾಮಾಣಿಕ ಕೆಲಸಕ್ಕೆ ಕೂಲಿ ಕೊಡಬೇಕು ಎಂದರು. ಕೊತಬಾಳ ಅಂಕಲಿ ಮಠದ ಗಂಗಾಧರ ಶ್ರೀಗಳು, ಜಿಗೇರಿ ಮಠದ ಗುರುಶಿದ್ಧ ಶಿವಾಚಾರ್ಯರು, ವೇ.ಮೂ. ರೇವಣಸಿದ್ದೇಶ್ವರ ಶ್ರೀಗಳು, ಜಂಗಮ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವಿ.ಬಿ.ಸೋಮನಕಟ್ಟಿಮಠ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಸಿದ್ದಾಪುರ: ವಿದ್ಯುತ್ ಇಲಾಖೆಯ ಖಾಸಗೀಕರಣವನ್ನು ವಿರೋಧಿಸಿ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು. ಈ ವೇಳೆ ತಹಶೀಲ್ದಾರರಿಗೆ ಮನವಿ ಸಲ್ಲಿಸಿ ಉತ್ತರ ಕನ್ನಡ ರೈತ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವೀರಭದ್ರ ನಾಯ್ಕ ಮಾತನಾಡಿದರು.

ವಿದ್ಯುತ್ ಖಾಸಗೀಕರಣ ವಿರೋಧಿಸಿ ಪ್ರತಿಭಟನೆ

ಸಿದ್ದಾಪುರ: ನಮ್ಮನ್ನು ಆಳುವ ನಾಯಕರು ಅವರ ಆಡಳಿತ ವೈಫಲ್ಯದಿಂದ ಹಿರಿಯರು ಹುಟ್ಟುಹಾಕಿದ ಸರ್ಕಾರದ ಇಲಾಖೆಗಳನ್ನು ಖಾಸಗೀಕರಣ ಮಾಡುತ್ತಿದ್ದಾರೆ ಎಂದು ಉತ್ತರ ಕನ್ನಡ ರೈತ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ವೀರಭದ್ರ ನಾಯ್ಕ ಹೇಳಿದರು.

ವಿದ್ಯುತ್ ಇಲಾಖೆಯ ಖಾಸಗೀಕರಣವನ್ನು ವಿರೋಧಿಸಿ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿ ಬುಧವಾರ ಅವರು ಮಾತನಾಡಿದರು. ಖಾಸಗಿ ಕಂಪನಿಯವರು ಜನರ ಸಹಾಯಕ್ಕೆ ಯಾವುದೇ ಕೆಲಸ ಮಾಡುವುದಿಲ್ಲ. ಅವರು ಹಣ ಮಾಡಿಕೊಳ್ಳಲು ಈ ಹುನ್ನಾರ ನಡೆಸಿದ್ದಾರೆ. ವಿದ್ಯುತ್ ಇಲಾಖೆಯ ಸಿಬ್ಬಂದಿಗಳು ಹಗಲು ರಾತ್ರಿ ಎನ್ನದೇ ಶ್ರಮಿಸುತ್ತಿದ್ದಾರೆ. ಮುಖ್ಯಮಂತ್ರಿಗಳು ಯಾವುದೇ ಕಾರಣಕ್ಕೂ ಖಾಸಗೀಕರಣಕ್ಕೆ ಅನುಮತಿ ನೀಡಬಾರದು ಎಂದರು. ಇದು ಕೇವಲ ಸಾಂಕೇತಿಕ ಪ್ರತಿಭಟನೆ ಆಗಿದ್ದು, ನಮ್ಮ ಹೋರಾಟಕ್ಕೆ ನ್ಯಾಯ ಸಿಗದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟದ ಅನಿವಾರ್ಯತೆ ಎದುರಾಗುತ್ತದೆ ಎಂದರು. ಕೆಪಿಟಿಸಿಎಲ್ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಆಂಥೋನಿ ಮಾತನಾಡಿದರು.

ತಾಲೂಕು ಕಸಾಪ ಅಧ್ಯಕ್ಷ ಚಂದ್ರಶೇಖರ ನಾಯ್ಕ ಕುಂಬ್ರಿಗದ್ದೆ, ಕರವೇ ಜನಧ್ವನಿಯ ಹೇಮಂತ ಗೋಳಗೊಡು, ರವಿ ಕೊಠಾರಿ, ಉತ್ತರ ಕನ್ನಡ ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ವಿಠ್ಠಲ ನಾಯ್ಕ, ಹೊಳಿಯಪ್ಪ ಕೆ., ಪಿ.ಬಿ.ಹೊಸೂರು ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು, ಪದಾಧಿಕಾರಿಗಳು, ಹೆಸ್ಕಾಂ ಸಿಬ್ಬಂದಿ ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು.



ಸಿದ್ದಾಪುರ: ಸ್ಥಳೀಯ ರಾಘವೇಂದ್ರಮಠದಲ್ಲಿ ಪತಂಜಲಿ ಯೋಗ ಸಮಿತಿ ಮತ್ತು ಮಹಿಳಾ ಪತಾಂಜಲಿ ಯೋಗ ಸಮಿತಿ ಸಹಯೋಗದಲ್ಲಿ ಬುಧವಾರದಿಂದ ಪ್ರಾರಂಭವಾದ 25 ದಿನಗಳ ಅಡ್ವಾನ್ಸ್ ಯೋಗ ಸರ್ಟಿಫಿಕೇಟ್ ತರಬೇತಿಗೆ ಚಾಲನೆ ನೀಡಲಾಯಿತು.

ಜಿಲ್ಲಾ ಜಾಗೃತಿ ಸಮಿತಿ ಸಭೆ | ಡಿಸಿ ಡಾ.ವಿಜಯಮಹಾಂತೇಶ ಸೂಚನೆ

ತೆರಿಗೆ ಹಣದಲ್ಲಿ ಪೌರಕಾರ್ಮಿಕರ ವೇತನ ಪಾವತಿಸಿ

ಹಾವೇರಿ: ತೆರಿಗೆ ವಸೂಲಿ ಹಣದಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರ ವೇತನ ಪಾವತಿಗೆ ಮೊದಲ ಆದ್ಯತೆ ನೀಡಬೇಕು. ಜೊತೆಗೆ ಕರ ವಸೂಲಿಗೆ ಮುಂದಾಗಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಜನರ ಮೇಲಿನ ದೌರ್ಜನ್ಯ ನಿಯಂತ್ರಣ ಹಾಗೂ ಜಿಲ್ಲಾ ಜಾಗೃತಿ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಗುತ್ತಲ ಪಟ್ಟಣ ಪಂಚಾಯತಿಯ ಪೌರಕಾರ್ಮಿಕರ ವೇತನ ಬಾಕಿ ಕುರಿತು ಮಾಹಿತಿ ಪಡೆದ ಅವರು, ಪೌರಕಾರ್ಮಿಕರ ವೇತನ ವಿಳಂಬವಾಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಸಮಿತಿಯ ಅಧಿಕಾರೇತರ ನಾಮನಿರ್ದೇಶಿತ ಸದಸ್ಯರು, ವಿವಿಧ ಬ್ಯಾಂಕ್‌ಗಳಲ್ಲಿ ಗ್ಯಾರಂಟಿ, ನರೇಗಾ ಯೋಜನೆ ಹಾಗೂ ಸಾಮಾಜಿಕ ಭದ್ರತಾ ಯೋಜನೆಯ ಹಣ ಸಾಲಕ್ಕೆ ಜಮೆ ಮಾಡಿಕೊಳ್ಳಲಾಗುತ್ತಿದೆ. ಸರ್ಕಾರದ ವಿವಿಧ ಯೋಜನೆಗಳಡಿ ಅರ್ಜಿ ಸಲ್ಲಿಸುವ ಫಲಾನುಭವಿಗಳಿಗೆ ಈಗಾಗಲೇ ಗುರಿ ಸಾಧಿಸಲಾಗಿದೆ ಎಂದು ಹಲವಾರು ಕಾರಣಗಳನ್ನು ನೀಡಿ, ಸಾಲ ಮಂಜೂರಾತಿ ಮಾಡುತ್ತಿಲ್ಲ. ಬ್ಯಾಂಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬ್ಯಾಂಕ್ ಸಿಬ್ಬಂದಿಗೆ ಕನ್ನಡ ಬಾರದ ಹಿನ್ನೆಲೆಯಲ್ಲಿ ಗ್ರಾಹಕರಿಗೆ ಸಮಸ್ಯೆಯಾಗಿದೆ. ಬ್ಯಾಂಕಿಗೆ ಬರುವ ಗ್ರಾಹಕರಿಗೆ ಸರಿಯಾದ ಮಾಹಿತಿ ನೀಡುತ್ತಿಲ್ಲ ಎಂಬ ಕುರಿತು ಡಿಸಿಗೆ ಮನವಿ ಮಾಡಿಕೊಂಡರು.

ಸ್ಪಂದಿಸಿದ ಜಿಲ್ಲಾಧಿಕಾರಿಗಳು, ವಿವಿಧ ನಿಗಮಗಳ ಹಾಗೂ ಇಲಾಖೆಗಳ ಅಧಿಕಾರಿಗಳು ಜಿಲ್ಲಾ ಲೀಡ್ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಇಂತಹ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು. ಸಾಲಕ್ಕೆ ವಿವಿಧ ಯೋಜನೆಗಳ ಹಣ ಜಮೆ ಮಾಡಿಕೊಳ್ಳದಂತೆ ಬ್ಯಾಂಕ್‌ಗಳಿಗೆ ಸೂಚನೆ ನೀಡುವಂತೆ ಜಿಲ್ಲಾ ಲೀಡ್ ಬ್ಯಾಂಕ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ವೈದ್ಯಕೀಯ ಕಾಲೇಜಿನಲ್ಲಿ ನಿಗದಿತ ಸಂಖ್ಯೆಗಿಂತ ಅಧಿಕ ಸಿಬ್ಬಂದಿ ಹೊರಗುತ್ತಿಗೆ ಮೂಲಕ ಭರ್ತಿ ಮಾಡಿಕೊಳ್ಳಲಾಗಿದ್ದು, ಅದರಲ್ಲಿ ಎಷ್ಟು ಪರಿಶಿಷ್ಟರನ್ನು ನೇಮಕ ಮಾಡಿಕೊಳ್ಳಲಾಗಿದೆ ಹಾಗೂ ಎಷ್ಟು ಪರಿಶಿಷ್ಟರಿಗೆ ನ್ಯಾಯಬೆಲೆ ನೀಡಲಾಗಿದೆ ಎಂದು ಅಧಿಕಾರೇತರ ನಾಮನಿರ್ದೇಶಿತರು ಸಭೆಯ ಗಮನಕ್ಕೆ ತಂದರು. ರೋಸ್ಟರ್ ಅನುಸಾರ ಹೊರಗುತ್ತಿಗೆ ಸಿಬ್ಬಂಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ವೈದ್ಯಕೀಯ ಕಾಲೇಜಿನ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ಜಿಪಂ ಸಿಇಒ ದಲ್ಜಿತ್ ಕುಮಾರ, ಎಸಿ ಕಲ್ಯಾಣಿ ಕಾಂಬ್ಳೆ, ಜಿಲ್ಲಾ ಸರ್ಕಾರಿ ಅಭಿಯೋಜಕರಾದ ಸರೋಜಾ ಕೂಡಲಮಠ, ಅಧಿಕಾರೇತರ ನಾಮನಿರ್ದೇಶಿತ ಸದಸ್ಯರಾದ ಬಸವರಾಜ ಹೆಡಿಗ್ಗೊಂಡ, ಸಂಜಯಗಾಂಧಿ ಸಂಜೀವಣ್ಣನವರ, ಎನ್.ಎಂ. ಗಾಳೆಮ್ಮನವರ, ರಮೇಶ ಕೊರವರ, ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ತಹಶೀಲ್ದಾರಗಳು ಇತರರು ಇದ್ದರು.

ಹೊಸ ನ್ಯಾಯಬೆಲೆ ಅಂಗಡಿಗೆ ಆದ್ಯತೆ

ಜಿಲ್ಲೆಯಲ್ಲಿ 465 ನ್ಯಾಯ ಬೆಲೆ ಅಂಗಡಿಗಳಿದ್ದು, ಈ ಪೈಕಿ 24 ಅಂಗಡಿಗಳು ಪರಿಶಿಷ್ಟರಿಗೆ ಸೇರಿವೆ. ನಿಯಮಾನುಸಾರ 84 ನೀಡಲಾಗುವುದು. ಮುಂಬರುವ ದಿನಗಳಲ್ಲಿ ಹೆಚ್ಚಿನ ಪಡಿತರ ಚೀಟಿ ಹೊಂದಿರುವ ಗ್ರಾಮಗಳಲ್ಲಿ ಹೊಸ ನ್ಯಾಯ ಬೆಲೆ ಅಂಗಡಿಗಳ ಮಂಜೂರಾತಿಯಲ್ಲಿ ಆದ್ಯತೆ ನೀಡಲಾಗುವುದು ಎಂದು ಆಹಾರ ನಾಗರಿಕರ ಸರಬರಾಜು ಇಲಾಖೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

> ಏಪ್ರಿಲ್ -2026 ರಿಂದ ಜೂನ್ ಮಾಹೆವರೆಗೆ 16 ಪ್ರಕರಣಗಳು ದಾಖಲಾಗಿದ್ದು, ಪರಿಶಿಷ್ಟ ಜಾತಿಯ 11 ಹಾಗೂ ಪರಿಶಿಷ್ಟ ಪಂಗಡದ 9 ಸಂತ್ರಸ್ಥರು ಸೇರಿ 20 ಜನರಿಗೆ ರೂ.ಐದು ಲಕ್ಷ ಪರಿಹಾರ ಮಂಜೂರ ಮಾಡಲಾಗಿದೆ.
>
> ■ ಪ್ರಶಾಂತ ವರಗಪ್ಪನವರ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ

ಸಚಿವ ಸ್ಥಾನ ನೀಡಲು ಕ್ಷತ್ರಿಯ ಒಕ್ಕೂಟ ಒತ್ತಾಯ

ಹಾವೇರಿ: ರಾಜ್ಯ ಸಚಿವ ಸಂಪುಟದಲ್ಲಿ ಕ್ಷತ್ರಿಯ ಸಮಾಜಕ್ಕೆ ಪ್ರಾತಿನಿಧ್ಯ ನೀಡಬೇಕು ಹಾಗೂ ಶಾಸಕ ಶ್ರೀನಿವಾಸ ಮಾನೆ ಮತ್ತು ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ಕಲ್ಪಿಸಬೇಕು ಎಂದು ಕರ್ನಾಟಕ ಕ್ಷತ್ರಿಯ ಒಕ್ಕೂಟದ ಹಾವೇರಿ ಜಿಲ್ಲಾ ಘಟಕ ಒತ್ತಾಯಿಸಿದೆ.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ಕ್ಷತ್ರಿಯ ಒಕ್ಕೂಟದ ಜಿಲ್ಲಾ ಗೌರವಾಧ್ಯಕ್ಷ ನಾಗರಾಜ ಜೋರಾಪುರಿ, ಹಾವೇರಿ ಜಿಲ್ಲೆಯಲ್ಲಿ ಸುಮಾರು 1.15 ಲಕ್ಷ ಕ್ಷತ್ರಿಯ ಸಮಾಜದ ಜನಸಂಖ್ಯೆ ಇದ್ದರೂ ಸಚಿವ ಸಂಪುಟದಲ್ಲಿ ಸಮಾಜಕ್ಕೆ ಪ್ರಾತಿನಿಧ್ಯ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಲಮಾಣಿ ಸಮುದಾಯವೂ ಕ್ಷತ್ರಿಯ ಸಮಾಜದ ಭಾಗವಾಗಿದ್ದು, ರಾಜ್ಯದಲ್ಲಿ ಕ್ಷತ್ರಿಯ ಸಮಾಜದ ಯಾವುದೇ ಶಾಸಕರಿಗೆ ಸಚಿವ ಸ್ಥಾನ ನೀಡದಿರುವುದು ಬೇಸರದ ಸಂಗತಿ ಎಂದರು. ಮುಂದಿನ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ನೀಡುವುದಾಗಿ ಈ ಹಿಂದೆ ಸಿಎಂ ಡಿ.ಕೆ. ಶಿವಕುಮಾರ ಡಿಸಿಎಂ ಆಗಿದ್ದಾಗ ಸೂರಗೊಂಡನಕೊಪ್ಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭರವಸೆ ನೀಡಲಾಗಿತ್ತು. ಆದ್ದರಿಂದ ನೀಡಿದ ಮಾತಿನಂತೆ ಶ್ರೀನಿವಾಸ ಮಾನೆ ಹಾಗೂ ರುದ್ರಪ್ಪ ಲಮಾಣಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ಕ್ಷತ್ರಿಯ ಒಕ್ಕೂಟವು 39 ಸಮುದಾಯಗಳ ಒಕ್ಕೂಟವಾಗಿದ್ದು, ರಾಜ್ಯದಲ್ಲಿ ಸುಮಾರು 2 ಕೋಟಿ ಕ್ಷತ್ರಿಯ ಸಮುದಾಯದ ಜನರಿದ್ದಾರೆ. ಇಷ್ಟೊಂದು ದೊಡ್ಡ ಸಮುದಾಯಕ್ಕೆ ಸೂಕ್ತ ಸ್ಥಾನಮಾನ ಮತ್ತು ರಾಜಕೀಯ ಪ್ರಾತಿನಿಧ್ಯ ದೊರೆಯಬೇಕು. ಕನಿಷ್ಠ ಐದು ಜನ ಕ್ಷತ್ರಿಯ ಸಮಾಜದ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆಯಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಕ್ಷತ್ರೀಯ ಒಕ್ಕೂಟದ ಜಿಲ್ಲಾಧ್ಯಕ್ಷ ಶಂಕರ ಮೆಹರವಾಡೆ, ಪ್ರಮೋದ ನವಲೆ, ಮಹಾವೀರ ಗಣಾತೆ, ಉದಯ ತಾಂದಳೆ, ರಮೇಶ ಮಾಳೋದೆ, ಭಾಗ್ಯಾಶ್ರೀ ಮೋರೆ, ಅಶೋಕಸಿಂಗ್ ರಜಪೂತ, ಮೋಹನ್ ಸಿಂಗ ರಜಪೂತ, ಚಂದ್ರಶೇಖರ ಜಾಧವ, ನಾಗೇಂದ್ರಪ್ಪ ಕೋಳಿಕಟ್ಟಿ, ಯಲ್ಲಪ್ಪ ಲದ್ವಾ, ಪ್ರಕಾಶ ಮಾಳದಕರ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಶಾಸಕ ಪ್ರಸಾದ ಅಬ್ಬಯ್ಯಗೆ ಸಚಿವ ಸ್ಥಾನ ನೀಡಿ: ಕಮಲರತ್ನ

ಹಾವೇರಿ: ಶೋಷಿತ ಸಮುದಾಯದ ಧ್ವನಿಯಾಗಿರುವ ಹುಬ್ಬಳ್ಳಿ-ಧಾರವಾಡ ಪೂರ್ವ ಕ್ಷೇತ್ರದ ಶಾಸಕ ಪ್ರಸಾದ ಅಬ್ಬಯ್ಯ ಅವರು ಯುವ ನಾಯಕರಾಗಿದ್ದು, ರಾಜ್ಯ ಮಟ್ಟದಲ್ಲಿ ಓಡಾಡಿ ತಳಮಟ್ಟದಿಂದ ಕಾಂಗ್ರೆಸ್ ಪಕ್ಷ ಬಲ ಪಡಿಸುವ ಸಾಮರ್ಥ್ಯ ಹೊಂದಿದ್ದಾರೆ. ಡಿ.ಕೆ.ಶಿವಕುಮಾರ ನಾಯಕತ್ವದ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ಸ್ಥಾನಮಾನ ನೀಡಬೇಕೆಂದು ಬಳ್ಳಾರಿಯ ಬುದ್ಧ ವಿಹಾರದ ಕಮಲರತ್ನ ಬಂತೇಜಿ ಸರಕಾರಕ್ಕೆ ಒತ್ತಾಯಿಸಿದರು.

ಇಲ್ಲಿಯ ರಾಜೇಂದ್ರ ನಗರದಲ್ಲಿರುವ ಅಶೋಕ ಮೌರ್ಯ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಶಾಸಕ ಪ್ರಸಾದ ಅಬ್ಬಯ್ಯ ಅವರು ಸತತ ಮೂರು ಬಾರಿ ಆಯ್ಕೆಯಾಗಿದ್ದಾರೆ. ಬಿಜೆಪಿ ಭದ್ರಕೋಟೆಯಾದ ಧಾರವಾಡ ಜಿಲ್ಲೆಯಲ್ಲಿ ಜನರ ಪ್ರೀತಿ, ವಿಶ್ವಾಸ ಗಳಿಸಿ ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ವಿಶ್ವಾಸ ಗಳಿಸುವ ಮೂಲಕ ಈ ಭಾಗದ ಎಲ್ಲಾ ವರ್ಗದ ಜನರಿಗೆ ಅಚ್ಚುಮೆಚ್ಚಿನ ನಾಯಕರಾಗಿದ್ದಾರೆ.

ಕಳೆದ ಲೋಕಸಭೆ ಚುನಾವಣೆಯಲ್ಲಿ ಮುಂಬೈ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ದುಡಿಯುವ ಮೂಲಕ ಶೇಕಡಾವಾರು ಮತದಾನ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಹಾಗಾಗಿ ಸರ್ವಜನಾಂಗದ ಹಿತ ಕಾಯುವ ಶಾಸಕ ಪ್ರಸಾದ ಅಬ್ಬಯ್ಯರಿಗೆ ಮಂತ್ರಿ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್‌ನ ಹೈಕಮಾಂಡ ನಾಯಕರಾದ ಸಿಎಂ ಡಿಕೆ ಶಿವಕುಮಾರ, ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ರಣದೀಪ್‌ಸಿಂಗ್ ಸುರ್ಜೆವಾಲಾ, ಕೆ.ಸಿ. ವೇಣುಗೋಪಾಲ ಅವರಿಗೆ ಒತ್ತಾಯಿಸಿದರು.

ಈ ವೇಳೆ ಹಾವೇರಿ ಜಿಲ್ಲಾ ಪ್ರಸಾದ ಅಬ್ಬಯ್ಯ ಅಭಿಮಾನಿ ಬಳಗದ ಮುಖಂಡರಾದ ಚೆನ್ನಮ್ಮ ಕೆ.ವಿ., ನಿರ್ಮಲಾ ಅಂಟಗಣಿ, ಶಾಂತಾ ಹೊಸೂರು, ಉಳುವೆಪ್ಪ ಕಲಾದಗಿ, ಗುಡ್ಡಪ್ಪ ಹೊಸೂರು, ಶಿವಲೀಲಾ ಹೊಸೂರು, ಕರಿಯಪ್ಪ , ಕಾಂತೇಶ ಹೊಳೆಯಪ್ಪನವರ, ದುರ್ಗವ್ವ ಪೂಜಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಹೊಲಿಗೆ ತರಬೇತಿ ಶಿಬಿರದ ಸದುಪಯೋಗ ಪಡಿಸಿಕೊಳ್ಳಿ: ಜೋಯ್ಸ

ಹಾನಗಲ್ಲ: ಔದ್ಯೋಗಿಕ ಅವಕಾಶಗಳೊಂದಿಗೆ ಮಹಿಳೆಯರ ಸಬಲೀಕರಣಕ್ಕೆ ಆದ್ಯತೆ ನೀಡಿದಲ್ಲಿ ಕುಟುಂಬದ ಸೌಖ್ಯ, ಆರ್ಥಿಕ ಹಿತವೂ ಸೇರಿ ಸಮಾಜಲ್ಲಿ ನಿರುದ್ಯೋಗ ಸಮಸ್ಯೆಗಳನ್ನು ಪರಿಹರಿಸಿದಂತಾಗುತ್ತದೆ ಎಂದು ಲೋಯಲಾ ವಿಕಾಸ ಕೇಂದ್ರದ ನಿರ್ದೇಶಕ ವಿನ್ಸಂಟ್ ಜೋಯ್ಸ ಹೇಳಿದರು.



ಇಲ್ಲಿನ ಲೋಯಲಾ ವಿಕಾಸ ಕೇಂದ್ರದಲ್ಲಿ ಹ್ಯುಮ್ಯಾನಿಟಿ ಫೌಂಡೇಶನ್‌ನ ಪರಿವರ್ತನ ಕಲಿಕಾ ಕೇಂದ್ರ ಆಯೋಜಿಸಿದ್ದ ಹೊಲಿಗೆ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಸ್ವಯಂ ಉದ್ಯೋಗಕ್ಕೆ ಈಗ ಪಕ್ವವಾದ ಕಾಲವಾಗಿದೆ. ದುಡಿಯುವವರು ಮತ್ತು ಪರಿಶ್ರಮಿಸುವವರು ಮಾತ್ರ ಉತ್ತಮ ಆದಾಯ ಕಂಡುಕೊಳ್ಳಬಹುದಾಗಿದೆ. ಕಲಿಕೆಗಾಗಿ ಬಂದವರಿಗೆ ಉತ್ಸಾಹ, ಉತ್ತಮ ಉದ್ದೇಶವಿರಲಿ. ಶಿಬಿರದ ಸದುಪಯೋಗ ಪಡೆಸಿಕೊಳ್ಳಿ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪರಿವರ್ತನ ಕಲಿಕಾ ಕೇಂದ್ರದ ಆಡಳಿತಾಧಿಕಾರಿ ಮಾತನಾಡಿದ ಪ್ರೊ.ಮಾರುತಿ ಶಿಡ್ಲಾಪೂರ, ಆರೀ ಕಲೆ, ಬ್ಯೂಟಿಶಿಯನ್, ಟೈಲ್‌ರಿಂಗ್ ಸೇರಿದಂತೆ ಮಹಿಳೆಯರಿಗಾಗಿ ಪರಿವರ್ತನ ಕಲಿಕಾ ಕೇಂದ್ರ ನಿರಂತರ ಉಚಿತ ತರಬೇತಿ ಶಿಬಿರಗಳನ್ನು ನಡೆಸುತ್ತಿದೆ. ವಿಶೇಷವಾಗಿ ಶಾಲೆ, ಕಾಲೇಜು ವಿದ್ಯಾರ್ಥಿಗಳಿಗೆ ಹತ್ತು, ಹಲವು ಶೈಕ್ಷಣಿಕ ತರಬೇತಿ, ಉದ್ಯೋಗಾವಕಾಶಕ್ಕಾಗಿ ಐಎಸ್, ಕೆಎಎಸ್, ವಿವಿಧ ಸರ್ಕಾರಿ ಉದ್ಯೋಗಗಳಿಗಾಗಿ ತರಬೇತಿ, ಉದ್ಯೋಗ ಮಾರ್ಗದರ್ಶನ ನಿರಂತರವಾಗಿ ನಡೆಯುತ್ತಿವೆ. ಸಾವಿರಾರು ಯುವಕ, ಯುವತಿಯರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಹಳ್ಳಿ, ಹಳ್ಳಿಗಳಲ್ಲಿ ಆರೀ ಕಲೆ ಮತ್ತು ಬ್ಯೂಟಿಶಿಯನ್ ತರಬೇತಿ ನೀಡುವ ಉದ್ದೇಶ ನಮ್ಮ ಸಂಸ್ಥೆಗಿದೆ ಎಂದರು.

ಟೈಲರಿಂಗ್ ತರಬೇತುದಾರರಾದ ವೀಣಾ ಕೊರಿಶೆಟ್ಟರ, ಶೀಲಾವತಿ ಹೆಗಡೆ ವೇದಿಕೆಯಲ್ಲಿದ್ದರು. ಲೋಹಿತ ಕಾಟಣ್ಣನವರ ಸ್ವಾಗತಿಸಿದರು. ಶೋಭಾ ಗರಡೇರ ನಿರೂಪಿಸಿದರು. ರಮೇಶ ಬಾರ್ಕಿ ವಂದಿಸಿದರು.

ಸೇವಾವಧಿಯಲ್ಲಿ ಉತ್ತಮ, ಪ್ರಾಮಾಣಿಕ ಸೇವೆ ಸಲ್ಲಿಸಿ

ಬ್ಯಾಡಗಿ: ಸರ್ಕಾರಿ ನೌಕರರರಿಗೆ ನಿವೃತ್ತಿ ಮತ್ತು ವರ್ಗಾವಣೆಗಳು ಅನಿವಾರ್ಯವಾಗಿದ್ದು, ತಮ್ಮ ಸೇವಾ ಅವಧಿಯಲ್ಲಿ ಉತ್ತಮ ಸೇವೆ ಸಲ್ಲಿಸುವತ್ತ ನಿರಂತರ ಪ್ರಾಮಾಣಿಕ ಪ್ರಯತ್ನ ಮಾಡುವಂತೆ ತಾಲೂಕ ಸರ್ಕಾರಿ ಆಸ್ಪತ್ರೆ ಆಡಳಿತಧಿಕಾರಿ ರಾಘವೇಂದ್ರ ಸ್ವಾಮಿ ಹೇಳಿದರು.



ಮಂಗಳವಾರ ಅವರು ಪಟ್ಟಣದ ಸರ್ಕಾರಿ ಆಸ್ಪತ್ರೆಯ ಸಭಾಭವನದಲ್ಲಿ ವರ್ಗಾವಣೆಗೊಂಡ ವೈದ್ಯರು ಹಾಗೂ ಸಿಬ್ಬಂದಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ, ವೈದ್ಯ ವೃತ್ತಿ ಅಮೂಲ್ಯವಾದದ್ದು, ಸೇವಾವಧಿಯಲ್ಲಿ ಉತ್ತಮ ಸೇವೆ ಸಲ್ಲಿಸುವ ಮೂಲಕ ರೋಗಿಗಳನ್ನು ಉತ್ತಮವಾಗಿ ನೋಡಿಕೊಂಡು ಜನಸಾಮಾನ್ಯರು ತಮ್ಮನ್ನು ಬಯುಸುವಂತೆ ಮುಂದುವರಿಯಬೇಕೆಂದರು.

ಅವರ ಸೇವೆ ಅನನ್ಯ ವಾದುದಾಗಿದ್ದು, ಅವರು ವರ್ಗಾವಣೆಗೊಂಡು ಹೋಗುವ ಸ್ಥಳದಲ್ಲಿಯೂ ಇವರ ಜೀವನ ಸುಖಮಯವಾಗಿರಲೆಂದು ಹಾರೈಸಿದರು.

ಹಾವೇರಿಯ ಸರ್ಕಾರಿ ವೈದ್ಯ ಡಾ. ಪುಟ್ಟರಾಜ ಮಾತನಾಡಿ, ಉತ್ತಮ ಆರೋಗ್ಯ ಸೇವೆ ನೀಡಲು ವೈದ್ಯರ ಪಾತ್ರ ಪ್ರಮುಖ. ಇವರುಗಳೇ ಆರೋಗ್ಯ ಇಲಾಖೆಯ ಬೆನ್ನೆಲುಬು ಎಂದರು.

ಈ ಸಂದರ್ಭದಲ್ಲಿ ಅರಿವಳಿಕೆ ತಜ್ಞ ಡಾ. ನಾಗರಾಜ. ಹಿರಿಯ ತಜ್ಞ ವೈದ್ಯ ಡಾ. ವೀರೇಶ ಹೊಸಮನಿ. ನರ್ಸ್ ವಿಭಾಗದ ಪ್ರಕಾಶ. ಅಮಿತಾ ರಾಯಕರ. ರೇಷ್ಮಾ ಇವರನ್ನು ವಿವಿಧ ಆಸ್ಪತ್ರೆಗಳಿಗೆ ಇಲಾಖೆ ವರ್ಗಾವಣೆ ಮಾಡಿದ ನಿಮಿತ್ಯ ಆಸ್ಪತ್ರೆ ಸಿಬ್ಬಂದಿಗಳು ಸನ್ಮಾನ ಮಾಡಿ ಬೀಳ್ಕೊಟ್ಟರು. ವೇದಿಕೆಯಲ್ಲಿ ವೈದ್ಯರಾದ ಡಾ. ಸುರೇಶ ಗುಂಡಪಲ್ಲಿ, ಮಹೇಶ ಭಜಂತ್ರಿ, ಡಾ. ಮಣ್ಣಾಪುರ ಹಾಗೂ ಡಾ. ನಾಗರಾಜ, ಡಾ. ವೀರೇಶ ಹೊಸಮನಿ, ಡಾ. ಚಂದ್ರಕಾಂತ ಇದ್ದರು.

ಲೋಕ್ ಅದಾಲತ್: ಪ್ರಯೋಜನ ಪಡೆದುಕೊಳ್ಳಿ

ಹಾನಗಲ್ಲ: ಜುಲೈ 11ರಂದು ನಡೆಯಲಿರುವ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ರಾಜಿ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡಲಾಗಿದ್ದು, ಇದರ ಸದುಪಯೋಗ ಪಡೆಸಿಕೊಳ್ಳುವಂತೆ ಹಾನಗಲ್ಲ ನ್ಯಾಯಾಲಯದ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು ಮತ್ತು ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಮಹೇಶಎಸ್. ಪಾಟೀಲ ತಿಳಿಸಿದರು.



ಪಟ್ಟಣದ ನ್ಯಾಯಾಲಯದಲ್ಲಿ ಲೋಕ್‌ಅದಾಲತ್ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಲೋಕ್ ಅದಾಲತ್ ಕೇವಲ ಸಾಮಾನ್ಯ ಕಾರ್ಯಕ್ರಮವಾಗದೇ ಆದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಇತ್ಯರ್ಥವಾಗುವಂತೆ ಸಂಬಂಧಿತರು ಮತ್ತು ಇಲಾಖೆಗಳು, ಬ್ಯಾಂಕ್ ಮತ್ತಿತರ ಹಣಕಾಸು ಸಂಸ್ಥೆಗಳು ಹೆಚ್ಚಿನ ರಿಯಾಯತಿ ನೀಡುವ ಮೂಲಕ ಪ್ರಕರಣಗಳು ಇತ್ಯರ್ಥವಾಗಲು ಸಹಕರಿಸಬೇಕು. ರಾಷ್ಟ್ರೀಯ ಲೋಕ ಅದಾಲತ್ ಕುರಿತಂತೆ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಅಮೋಲ ಜಿ ಹಿರಿಕುಡೆ ಮಾತನಾಡಿ, ಆಸ್ತಿಗೆ ಸಂಬಂಧಿಸಿದ, ಕೌಟುಂಬಿಕ ಕಲಹಗಳಿಗೆ ಸಂಬಂಧಿಸಿದ, ಮೋಟಾರ್ ವಾಹನ ಕಾಯ್ದೆಗೆ ಸಂಬಂಧಿಸಿದ, ರಾಜೀ ಆಗಬಹುದಾದ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಲು ನ್ಯಾಯವಾದಿಗಳು ಕಕ್ಷಿದಾರರ ಮನವೊಲಿಸಬೇಕೆಂದು ಹೇಳಿದರು.

ಹಾನಗಲ್ಲ ನ್ಯಾಯಾಲಯದ ಕಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿ ಐಶ್ವರ್ಯ ಚಿದಾನಂದ ಪಟ್ಟಣಶೆಟ್ಟಿ ಮಾತನಾಡಿ, ರಾಜೀ ಸಂಧಾನದ ಮೂಲಕ ಪ್ರಕರಣ ಇತ್ಯರ್ಥ ಪಡಿಸಿಕೊಂಡಲ್ಲಿ, ಕಕ್ಷಿದಾರನ ಸಮಯ ಮತ್ತು ಹಣ ಉಳಿತಾಯವಾದಂತಾಗುತ್ತದೆ. ಕಾರಣ ಈ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಹೆಚ್ಚಿನ ಜನರು ಇದರ ಪ್ರಯೋಜನ ಪಡೆದುಕೊಳ್ಳುವಂತಾಗಬೇಕು ಎಂದು ತಿಳಿಸಿದರು.

ಸಭೆಯಲ್ಲಿ ನ್ಯಾಯವಾದಿಗಳ ಸಂಘದ ಪದಾಧಿಕಾರಿಗಳು, ಸಹಾಯಕ ಸರಕಾರಿ ಅಭಿಯೋಜಕರು, ನ್ಯಾಯವಾದಿಗಳು ಹಾನಗಲ್ಲದ ವಿವಿಧ ಇಲಾಖೆಗಳ ಅಧಿಕಾರಿಗಳು, ಎಲ್ಲಾ ಬ್ಯಾಂಕ್ ಮ್ಯಾನೇಜರ್ ಗಳು ಹಾಗೂ ನ್ಯಾಯಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ಜೂ.21ರಿಂದ ವಿಶೇಷ ವೇಗದೂತ್ ವಾಹನ ವ್ಯವಸ್ಥೆ

ಹಾವೇರಿ: ಪ್ರತಿ ಭಾನುವಾರ ಹಾಗೂ ಸಾರ್ವತ್ರಿಕ ರಜಾ ದಿನಗಳಂದು ಹಾವೇರಿ ಮತ್ತು ರಾಣೇಬೆನ್ನೂರು ನಗರಗಳಿಂದ ಶಿವಮೊಗ್ಗ ಜಿಲ್ಲೆಯ ವಿಶ್ವ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳವಾದ ಜೋಗ್ ಫಾಲ್ಸ್ ಹಾಗೂ ಸಿಗಂದೂರು ಶ್ರೀ ಚೌಡೇಶ್ವರಿ ದೇವಸ್ಥಾನಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಭಕ್ತಾಧಿಗಳು, ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳು ವೀಕ್ಷಣೆಗಾಗಿ ತೆರಳಲು ಜೂ.21ರಿಂದ ಹಾವೇರಿ ಮತ್ತು ರಾಣೇಬೆನ್ನೂರು ಬಸ್ ನಿಲ್ದಾಣಗಳಿಂದ ಜೋಗ್‌ಫಾಲ್ಸ್ ಮತ್ತು ಸಿಗಂದೂರು ಶ್ರೀ ಚೌಡೇಶ್ವರಿ ದೇವಸ್ಥಾನಕ್ಕೆ ವಿಶೇಷ ವೇಗದೂತ ವಾಹನಗಳ ಕಾರ್ಯಾಚರಣೆ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಹಾವೇರಿಯಿಂದ ಜೋಗ್ ಫಾಲ್ಸ್ ಬೆಳಗ್ಗೆ 8 ಗಂಟೆಯಿಂದ ಸಿದ್ದಾಪುರ ಮಾರ್ಗವಾಗಿ ಶಿರಸಿಯ ಶ್ರೀ ಮಾರಿಕಾಂಬಾ ದೇವಿಯ ದರ್ಶನ ಮಾಡಿಸಿಕೊಂಡು ಜೋಗ್ ಫಾಲ್ಸ್ ಕಾರ್ಯಾಚರಣೆ ಮಾಡಲಾಗುತ್ತದೆ. ಪುನಃ ಜೋಗ್‌ಫಾಲ್ಸ್‌ನಿಂದ ಸಂಜೆ 4 ಗಂಟೆಗೆ ನಿರ್ಗಮಿಸಿ, ಹಾವೇರಿಗೆ ಸಾಯಂಕಾಲ 7.30 ಕ್ಕೆ ತಲುಪುವುದು. ಜೋಗ್ ಫಾಲ್ಸ್ ವೀಕ್ಷಣೆಗೆ 4 ಗಂಟೆಗಳ ಕಾಲಾವಕಾಶ ಇದೆ.

ಹಾವೇರಿಯಿಂದ ಸಿಗಂದೂರು ಶ್ರೀ ಚೌಡೇಶ್ವರಿ ದೇವಸ್ಥಾನಕ್ಕೆ ಬೆಳಗ್ಗೆ 7.30 ಗಂಟೆಗೆ ಆಡೂರು, ಅಕ್ಕಿಆಲೂರು, ನಾಲ್ಕರ ಕ್ರಾಸ್. ಗೊಂದಿ. ಆನವಟ್ಟಿ. ಉಳವಿ, ಸಾಗರ ಮಾರ್ಗವಾಗಿ ಕಾರ್ಯಚರಣೆ ಮಾಡಲಾಗುತ್ತದೆ. ಪುನಃ ಮಧ್ಯಾಹ್ನ 3.30 ಗಂಟೆಗೆ ಸಿಗಂದೂರು ಶ್ರೀ ಚೌಡೇಶ್ವರಿ ದೇವಸ್ಥಾನದಿಂದ ನಿರ್ಗಮಿಸಿ ಸಂಜೆ 7.30ಕ್ಕೆ ಹಾವೇರಿಗೆ ತಲುಪುವುದು.

ಆಪ್ ಮುಖಂಡ ಎಂ.ಎನ್.ನಾಯಕ ಆರೋಪ

ಶಾಲಾ ಕಾಮಗಾರಿ ಹೆಸರಿನಲ್ಲಿ ಅಕ್ರಮ

ಹಾವೇರಿ: ತಾಲೂಕಿನ ಕನವಳ್ಳಿ ಗ್ರಾಮದಲ್ಲಿ ಇರುವ ಮೌಲಾನಾ ಆಜಾದ ಮಾದರಿ ಶಾಲೆಗೆ ಶೌಚಾಲಯ ನಿರ್ಮಾಣ ಹಾಗೂ ದುರಸ್ಥಿ ಕಾರ್ಯದ ಕಾಮಗಾರಿಯ ಹೆಸರಿನಲ್ಲಿ ಅಕ್ರಮ ನಡೆದಿದೆ ಎಂದು ಆಮ್ ಆದ್ಮಿ ಪಾರ್ಟಿಯ ಮುಖಂಡ ಎಂ.ಎನ್. ನಾಯಕ ಆರೋಪಿಸಿದರು.

ನಗರದ ಜಿಲ್ಲಾ ಪತ್ರಿಕಾಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿಮಾತನಾಡಿದಅವರು,ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಮೌಲಾನಾ ಆಜಾದ ಮಾದರಿ ಶಾಲೆ ಆರಂಭಿಸಲು ಮಂಜೂರಾತಿ ನೀಡಿದ್ದು, ಸ್ವಂತ ಕಟ್ಟಡ ಸಿದ್ಧವಾಗುವವರೆಗೂ ತಾಲೂಕಿನ ಕನವಳ್ಳಿ ಗ್ರಾಮದಲ್ಲಿ ಇರುವ ಸರ್ಕಾರಿ ಉರ್ದು ಪ್ರೌಢಶಾಲೆಯಲ್ಲಿ ಮೂರು ಕೊಠಡಿ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ. ಆದರೆ ಉರ್ದು ಪ್ರೌಢಶಾಲೆಯಲ್ಲಿ ಶೌಚಾಲಯ ನಿರ್ಮಾಣ ಹಾಗೂ ದುರಸ್ಥಿ ಕಾರ್ಯ ಕೈಗೊಂಡ ಕಾಮಗಾರಿಯ ಜಿಪಿಎಸ್ ಪೋಟೋ ಬಳಸಿಕೊಂಡು ಅಕ್ರಮ ಎಸಗಿದ್ದಾರೆ ಎಂದು ದೂರಿದರು.

2025ರಲ್ಲಿ ತಾಪಂ ಅನುದಾನದಲ್ಲಿ ನಿರ್ಮಾಣಗೊಂಡ ಉರ್ದು ಪ್ರೌಢಶಾಲೆಯಲ್ಲಿ ಶೌಚಾಲಯ ನಿರ್ಮಾಣ ಹಾಗೂ ದುರಸ್ಥಿ ಕಾರ್ಯದ ಕಾಮಗಾರಿಯನ್ನು ಶಾಸಕರು ಉದ್ಘಾಟನೆ ಮಾಡಿದ್ದು, ಇದೀಗ ಅದೇ ಕಟ್ಟಡಕ್ಕೆ ಸುಣ್ಣ-ಬಣ್ಣ ಮಾಡುವ ಮೂಲಕ ಅಕ್ರಮ ಎಸಗಲಾಗಿದೆ. ಕಾಮಗಾರಿ ಹೆಸರಿನಲ್ಲಿ ಸುಮಾರು 22.50ಲಕ್ಷ ರೂ.ಗಳನ್ನು ದುರುಪಯೋಗ ಆಗಿದೆ. ಕಾಮಗಾರಿ ಅಂದಾಜು ವೆಚ್ಚ ರೂ.21ಲಕ್ಷ ಇದ್ದಾಗಲೂ ಹೆಚ್ಚುವರಿ ಹಣದ ಮಂಜೂರಾತಿ ಪಡೆದಿದ್ದು, ಕಾಮಗಾರಿಯನ್ನೇ ಮಾಡದೇ, ಬೇರೆ ಕಾಮಗಾರಿಯ ಜಿಪಿಎಸ್ ಪೋಟೋ ಬಳಸಿಕೊಂಡು ಅಕ್ರಮ ಎಸಗಲಾಗಿದೆ. ಈ ಕುರಿತು ಜಿಲ್ಲಾ ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಅಧಿಕಾರಿ ಮತ್ತು ನಿರ್ಮಿತಿ ಕೇಂದ್ರದ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆ ಜಿಲ್ಲಾ ಅಧಿಕಾರಿಗಳು ಸೇರಿಕೊಂಡು ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆ ಎಂದು ದೂರಿದರು.

ಈ ಕುರಿತು, ಸಂಬಂಧಿಸಿದ ಅಧಿಕಾರಿಗಳಿಂದ ಮಾಹಿತಿ ಕೇಳಿದರೆ ಮಾಹಿತಿ ಕೊಡುತ್ತಿಲ್ಲ, ಇದರಲ್ಲಿ ಜಿಲ್ಲಾಮಟ್ಟದ ದೊಡ್ಡ ದೊಡ್ಡ ಅಧಿಕಾರಿಗಳು ಮತ್ತು ಕೆಲ ಗುತ್ತಿಗೆದಾರರು ಸೇರಿಕೊಂಡು ಅಕ್ರಮ ಎಸಗುತ್ತಿದ್ದು, ನಾವು ಮಾಹಿತಿ ಕೇಳಿದ ಮೇಲೆ ಇಡೀ ದಾಖಲೆಯ ಕಡತವನ್ನೇ ಬದಲಾಯಿಸಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೂ ಸಹ ದೂರು ನೀಡಿದ್ದೇನೆ, ಅವರೂ ಸಹ ಕ್ರಮಕ್ಕೆ ಮುಂದಾಗಿಲ್ಲ. ಈ ಬಗ್ಗೆ ಜಿಲ್ಲೆಯ ವಿವಿಧ ಹಂತದ ಅಧಿಕಾರಿಗಳ ವಿರುದ್ಧ ಅಧಿಕಾರ ದುರ್ಬಳಕೆ, ಅಕ್ರಮಕ್ಕೆ ಸಾಥ್ ನೀಡಿದ ಕುರಿತು ಲೋಕಾಯುಕ್ತಕ್ಕೂ ದೂರು ಸಲ್ಲಿಸಿದ್ದೇನೆ ಎಂದರು.

ಕಿರುಸುದ್ದಿ

ಇಂದಿನಿಂದ ನೀರು ಸರಬರಾಜಿನಲ್ಲಿ ವ್ಯತ್ಯಯ

• ಬೆಳಗಾವಿ: ಹಿಡಕಲ್ ಡ್ಯಾಂ ನಲ್ಲಿ ಹಸ್ಗಾಂ ನವರು 10 ಎಂವಿಎ 110/33 ಕೆವಿ ಟ್ರಾನ್ಸಮಿಷನ್ ಲೈನ್ ನಲ್ಲಿ ಜೂನ್ ದಿ.18ರಂದು ಕಡ್ಡಾಯ ತೈ ಮಾಸಿಕ ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಇಡೀ ಬೆಳಗಾವಿ ನಗರಕ್ಕೆ, ಪ್ರಾತ್ಯಕ್ಷಿಕ ವಲಯ ಸೇರಿದಂತೆ ಮುಂದಿನ ಎರಡು ದಿನ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಇಂತಹ ಅನಿವಾರ್ಯ ಸಮಯದಲ್ಲಿ ಮೇ ಎಲ್ ಮತ್ತು ಟಿ ಯೊಂದಿಗೆ ಸಹಕರಿಸಲು ಮಹಾನಗರ ಪಾಲಿಕೆ ಮತ್ತು ಕೆ.ಯು.ಐ.ಡಿ.ಎಫ್.ಸಿ ಪರವಾಗಿ ಯೋ.ಅ.ಫ, ಕುಸ್ಗಾಂಪ್-ಕೆ.ಯು.ಐ.ಡಿ.ಎಫ್.ಸಿ, ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಶೇ.50ರಷ್ಟು ರಿಯಾಯಿತಿ

• ಬೆಳಗಾವಿ: ಸಾರಿಗೆ ಇಲಾಖೆಯ ಡಿಎಸ್ಎ ಪ್ರಕರಣಗಳಿಗೆ ಒಟ್ಟು ದಂಡದ ಮೊತ್ತದ ಶೇ.50ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ಸಾರಿಗೆ ಇಲಾಖೆಯಲ್ಲಿ 1991-92ರಿಂದ 2021-2022(31-03-2022) ಅವಧಿಯಲ್ಲಿ ದಾಖಲಾಗಿ ಪಾವತಿಗೆ ಬಾಕಿಯಿರುವ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ನೀಡಲಾಗಿದೆ. ಜೂ.21ರಿಂದ ಜು.10ರವರೆಗೆ ರಿಯಾಯಿತಿಯಲ್ಲಿ ದಂಡ ಪಾವತಿಸಲು ಕಾಲಾವಕಾಶವಿರುತ್ತದೆ. ಸಾರ್ವಜನಿಕರು, ವಾಹನದ ಮಾಲೀಕರು ಇದರ ಸದುಪಯೋಗ ಪಡೆದುಕೊಳ್ಳಲು ಬೆಳಗಾವಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಕ್ಷ್ಮೀದೇವಿ ಜಾತ್ರೆ: ಕೋಣ ಬಿಡುವ ಕಾರ್ಯಕ್ರಮ



• ಯಮಕನಮರಡಿ: ಸಮೀಪದ ಆರ್‌ಸಿ ಯಮಕನಮರಡಿ ಗ್ರಾಮದ ಶ್ರೀ ಲಕ್ಷ್ಮೀದೇವಿ ಜಾತ್ರೆ ಅಂಗವಾಗಿ ಜೂ. 16ರಂದು ಕೋಣ ಬಿಡುವ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು. ಕಾರ್ಯಕ್ರಮದಲ್ಲಿ ದೇವಸ್ಥಾನದ ಆಡಳಿತ ಮಂಡಳಿ ಸರ್ವ ಸದಸ್ಯರು ಉಪಸ್ಥಿತರಿದ್ದು, ಹಿಂದೂ ಧರ್ಮದ ಸಂಪ್ರದಾಯದಂತೆ ಶ್ರೀ ದೇವತೆಗೆ ಪೂಜೆ ಅಲಂಕಾರ ನೆರವೇರಿಸಿ ದೀಪಾರ್ಚನೆ ಮಾಡಿ ಶ್ರೀ ಲಕ್ಷ್ಮೀದೇವಿ ದೇವಸ್ಥಾನದ ಹಕ್ಕುದಾರರ ಮನೆಯಿಂದ ಕೋಣವನ್ನು ವಾದ್ಯ ಮೇಳದೊಂದಿಗೆ ಕರೆ ತಂದು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಸಂಚರಿಸಿ ಶ್ರೀ ಲಕ್ಷ್ಮೀದೇವಿ ಮಂದಿರಕ್ಕೆ ಕರೆತಂದು ಶಾಸ್ತ್ರೋಕ್ತವಾಗಿ ಕೋಣವನ್ನು ಬಿಡಲಾಯಿತು. ಆರ್ ಸಿ ಯಮಕನಮರಡಿ ಗ್ರಾಮದ ಎಲ್ಲ ಭಕ್ತಾದಿಗಳು ಉಪಸ್ಥಿತರಿದ್ದರು.

ಹುಬ್ಬಳ್ಳಿಯಲ್ಲಿ ರಾಜ್ಯಮಟ್ಟದ ಸಮ ಸಮಾಜ ಸಮಾವೇಶ



• ಖಾನಾಪುರ: ರಾಜ್ಯದ ವಾಣಿಜ್ಯ ನಗರಿ ಹುಬ್ಬಳ್ಳಿಯಲ್ಲಿ ಬರುವ 2026ರ ಜನವರಿ ತಿಂಗಳಲ್ಲಿ ರಾಜ್ಯಮಟ್ಟದ ಸಮ ಸಮಾಜ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ಕನ್ನಡ ಚಲನಚಿತ್ರ ನಟ ಹಾಗೂ ಚಿಂತಕ ಚೇತನ್ ಮಾಹಿತಿ ನೀಡಿದರು.

ಪಟ್ಟಣದಲ್ಲಿ ಮಂಗಳವಾರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಬಲಿಷ್ಠ ಮತ್ತು ಸಾಂವಿಧಾನಿಕ ಸಮಾಜ ನಿರ್ಮಾಣಕ್ಕಾಗಿ ಎಲ್ಲ ಜಾತಿ-ಮತ-ಧರ್ಮಗಳ ಜನರನ್ನು ಒಂದುಗೂಡಿಸಬೇಕಾಗಿದೆ. ಬೆಂಗಳೂರಿಗೆ ಕೇಂದ್ರೀಕೃತವಾದ ರಾಜ್ಯದ ಆಡಳಿತವನ್ನು ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕಗಳ ಕಡೆಗೆ ಕರೆತಂದು ಇಲ್ಲಿಯ ಜನರ ಬವಣೆಗಳನ್ನು ಪರಿಹರಿಸುವ ಪ್ರಯತ್ನಗಳು ನಡೆಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಜನವರಿಯಲ್ಲಿ ರಾಜ್ಯಮಟ್ಟದ ಸಮಾವೇಶ ನಡೆಯಲಿದ್ದು, ಇದಕ್ಕೆ ಪೂರ್ವಭಾವಿಯಾಗಿ ಅಕ್ಟೋಬರ್ ತಿಂಗಳಲ್ಲಿ ಖಾನಾಪುರ ಪಟ್ಟಣದಲ್ಲಿ ತಾಲೂಕುಮಟ್ಟದ ಜನಜಾಗೃತಿ ಸಭೆಯನ್ನು ಆಯೋಜಿಸಲಾಗುತ್ತದೆ. ನಮ್ಮ ಈ ಸಮಾಜಮುಖಿ ಕೆಲಸದ ಯಶಸ್ಸಿಗೆ ಎಲ್ಲರೂ ಈಗಿನಿಂದಲೇ ಒಗ್ಗಟ್ಟಾಗಿ ದುಡಿಯಬೇಕು ಎಂದು ಅರಿವು ಮೂಡಿಸುವ ಉದ್ದೇಶದಿಂದ ಉತ್ತರ ಕರ್ನಾಟಕ ಪ್ರವಾಸ ಆಯೋಜಿಸಲಾಗಿದೆ'' ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ರಾಜು ಖಾತೇದಾರ, ಸಂದೀಪ ಚಲವಾದಿ, ಶ್ರೀದೇವಿ ಬೆಳವಡಿ ಮತ್ತಿತರರು ಇದ್ದರು.



ಸವದತ್ತಿ: ತಾಲೂಕಿನ ನವಿಲುತೀರ್ಥ ಡ್ಯಾಮ್‌ನಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಅವರು ನವಿಲುತೀರ್ಥ ಸರ್ಕಾರಿ ವಸತಿ ಗೃಹದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯನ್ನು ನಡೆಸಿದರು.

ತಾಲೂಕು ಮಟ್ಟದ ಅಧಿಕಾರಿಗಳ ಸಭೆ

• ಸವದತ್ತಿ: ತಾಲೂಕಿನ ನವಿಲುತೀರ್ಥ ಡ್ಯಾಮ್‌ನಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಅವರು ನವಿಲುತೀರ್ಥ ಸರ್ಕಾರಿ ವಸತಿ ಗೃಹದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯನ್ನು ನಡೆಸಿದರು.

ಸಭೆಯಲ್ಲಿ ಮಾತನಾಡಿದ ಅವರು, ಬೇಸಿಗೆ ರಜಾ ಅವಧಿಯಲ್ಲಿ ವಿದ್ಯಾರ್ಥಿಗಳ ಕಲಿಕೆಯನ್ನು ಬಲವರ್ಧಿಸುವ ಉದ್ದೇಶದಿಂದ ತಾಲೂಕಿನಲ್ಲಿ ರೂಪಿಸಿ, ಜಾರಿಗೊಳಿಸಿರುವ ಶೈಕ್ಷಣಿಕ ಸಾಹಿತ್ಯ ಮತ್ತು ಚಟುವಟಿಕೆ ಪುಸ್ತಕಗಳನ್ನು ವೀಕ್ಷಿಸಿ ಶ್ಲಾಘಿಸಿದರು.

ಜೊತೆಗೆ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ Foundational Literacy and Numeracy (FLN) ಗುರಿಗಳನ್ನು ಶೇ.100 ರಷ್ಟು ಸಾಧಿಸುವ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ಸವದತ್ತಿ ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎ. ಖಾಜಿ ಅವರಿಗೆ ಸೂಚನೆ ನೀಡಿದರು.

ಶಾಲಾ ಮಕ್ಕಳಿಗೆ ಉಚಿತ ಬಸ್ ಪಾಸ್ ಸೌಲಭ್ಯ, ಸಮವಸ್ತ್ರ ಹಾಗೂ ಪಠ್ಯಪುಸ್ತಕಗಳ ಸಮರ್ಪಕ ವಿತರಣೆಗೆ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಮತ್ತು ಶಾಲಾ ದಾಖಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು.ಈ ಸಂದರ್ಭದಲ್ಲಿ ತಾಲೂಕಿನ ತಹಶೀಲ್ದಾರ್ ಎಂ. ಎನ್. ಹೆಗ್ಗನ್ನವರ, ಗ್ರೇಡ್ 2 ತಹಶೀಲ್ದಾರ್ ಎಂ.ಎನ್. ಮಠದ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಆನಂದ ಬಡಕುಂದ್ರಿ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಸಂಕೇಶ್ವರ: ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ದಿ. ಗಿರಿಮಲ್ಲ ಬಾಳೇಶ ನಷ್ಠಿ ಅವರ ಕುಟುಂಬಕ್ಕೆ ಐಸಿಐಸಿಐ ಪ್ರುಡೆನ್ಷಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿಯ ಗ್ರೂಪ್ ಡೆತ್ ಇನ್ಶೂರೆನ್ಸ್ ಯೋಜನೆಯಡಿ 10 ಲಕ್ಷ ರೂ. ಮೊತ್ತದ ವಿಮಾ ಪರಿಹಾರ ವಿತರಿಸಲಾಯಿತು. ಕಾರ್ಖಾನೆಯ ಉಪಾಧ್ಯಕ್ಷ ಅಶೋಕ ಪಟ್ಟಣಶೆಟ್ಟಿ, ಕಾರ್ಯಾಲಯ ಅಧೀಕ್ಷಕ ಸುಭಾಷ್ ನಾಶಿಪುಡಿ, ಕಾರ್ಮಿಕ ಕಲ್ಯಾಣಾಧಿಕಾರಿ ಕೆ. ಎಂ. ಪಾಟೀಲ, ಸಮಯಪಾಲಕ ಎನ್. ಎಸ್. ಮರಬಸನ್ನವರ, ಸ್ಟೋರ್ ವಿಭಾಗದ ಶಂಕರ ನೇರ್ಲಿ, ಅತಿಥಿ ಗೃಹದ ಉಸ್ತುವಾರಿ ಶಿವಾನಂದ ಹಾಲಗಡಗಿ ಇತರರು ಇದ್ದರು.

ಶ್ಲೋಕ ಪಠಣದಿಂದ ಒತ್ತಡ ನಿವಾರಣೆ



• ಅಥಣಿ: ಇಂದಿನ ದಿನಮಾನಗಳಲ್ಲಿ ಒತ್ತಡ ನಿವಾರಣೆಗೆ ಹಾಗೂ ನೆಮ್ಮದಿಗಾಗಿ ಹಲವರು ಹಲವು ಮಾರ್ಗಗಳನ್ನು ಅನುಸರಿಸುವುದುಂಟು. ಆದರೂ ಮನಸ್ಸಿಗೆ ನೆಮ್ಮದಿ ಸಿಗದು ಆದರೆ ಸಂಸ್ಕೃತ ಶ್ಲೋಕಗಳನ್ನು ಪಠಿಸುವುದರಿಂದ ಮಾನಸಿಕ ಒತ್ತಡ ನಿವಾರಣೆ ಸಾಧ್ಯ ಎಂದು ಮಾತೃ ಮಂಡಳಿಯ ಅಧ್ಯಕ್ಷೆ ಅನುರಾಧಾ ದೇಶಪಾಂಡೆ ಅಭಿಪ್ರಾಯ ಪಟ್ಟರು.

ಅವರು ಪಟ್ಟಣದ ತಮ್ಮ ನಿವಾಸದಲ್ಲಿ ಮಾತೃಮಂಡಲ ಸಹಯೋಗದಿಂದ ಅಧಿಕಮಾಸದ ನಿಮಿತ್ತವಾಗಿ ಒಂದು ತಿಂಗಳವರೆಗೆ ಹಮ್ಮಿಕೊಳ್ಳಲಾಗಿದ್ದ ವಿಷ್ಣುಸಹಸ್ರನಾಮ ಪಠಣ, ಭಜನೆ, ಆರತಿ ಮತ್ತು ಅಕ್ಷತಾ ಕಾರ್ಯಕ್ರಮಗಳ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಥಣಿ ಪಟ್ಟಣದಲ್ಲಿ ಕಳೆದ 45 ವರ್ಷಗಳಿಂದ ಮಾತೃ ಮಂಡಳಿಯ ಮೂಲಕ ಭಗವದ್ಗೀತಾ ಶ್ಲೋಕಗಳ ಪಠಣ, ವಿಷ್ಣು ಸಹಸ್ರ ನಾಮ ಪಠಣ, ಕೃಷ್ಣ ರಾಮ ಮತ್ತು ಪಾಂಡುರಂಗನ ನಾಮಸ್ಮರಣೆಯ ಮೂಲಕ ಭಜನೆ ಇನ್ನಿತರ ಧಾರ್ಮಿಕ ಮತ್ತು ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುತ್ತಾ ಬಂದಿದ್ದೇವೆ. ಸಂಸ್ಕೃತ ಶ್ಲೋಕಗಳ ಪಠಣ ಮಾಡುವುದರಿಂದ ಪ್ರತಿಯೊಬ್ಬ ಹೆಣ್ಣು ಮಕ್ಕಳ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿ ದೊರೆಯುತ್ತದೆ. ಇದರ ಆರೋಗ್ಯವಂತ ಜೀವನ ಇಡೀ ಕುಟುಂಬದ ಮೇಲೆ ಪರಿಣಾಮ ಬೀರುವುದರ ಜೊತೆಗೆ ಕುಟುಂಬದ ಆರೋಗ್ಯ ವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ಜಯಶ್ರೀ ಬಿರಾದಾರ ಮತ್ತು ಸರಸ್ವತಿ ಹುನ್ನೂರ ಈ ಸಂದರ್ಭದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡು ಅನುರಾಧಾ ದೇಶಪಾಂಡೆ ಅವರ ನೇತೃತ್ವದಲ್ಲಿ ಜರುಗುತ್ತಿರುವ ಸಂಸ್ಕೃತ ಶ್ಲೋಕಗಳ ಪಠಣ, ಭಜನೆ ಮತ್ತು ಅಕ್ಷತಾ, ಆರತಿ ಕಾರ್ಯಕ್ರಮಗಳು ನಮ್ಮನ್ನ ಯಾವುದೋ ಧಾರ್ಮಿಕ ಕ್ಷೇತ್ರಕ್ಕೆ ಕರೆದುಕೊಂಡು ಬಂದಂತೆ ಭಾಸವಾಗುತ್ತದೆ. ಸಂಸ್ಕೃತ ಶ್ಲೋಕಗಳ ಪಠಣದಿಂದ ನಮ್ಮಲ್ಲಿ ಸಕಾರಾತ್ಮಕ ಭಾವನೆ ಮೂಡುವುದರ ಜೊತೆಗೆ ನಮ್ಮ ಆರೋಗ್ಯ ಸಮಸ್ಯೆಗಳು ದೂರವಾಗಿದ್ದು ನಮ್ಮ ಕುಟುಂಬದಲ್ಲಿ ಅನೇಕ ಬದಲಾವಣೆಗಳು ಸಕಾರಾತ್ಮಕವಾಗಿರುವುದು ಎಂದು ಸಂತಸ ವ್ಯಕ್ತಪಡಿಸಿದರು.

> ಸಂಸ್ಕೃತ ಶ್ಲೋಕಗಳ ಪಠಣ ಮತ್ತು ದೇವರ ನಾಮ ಸ್ಮರಣೆಯಿಂದ ನಮ್ಮಲ್ಲಿನ ನಾಡಿಶುದ್ಧಿಯಾಗಿ ಆರೋಗ್ಯ ಲಭಿಸುತ್ತದೆ. ಅಲ್ಲದೆ ಸಕಾರಾತ್ಮಕ ಆಲೋಚನೆಗಳು ಮೂಡಿ ನಕಾರಾತ್ಮಕ ಕಂಪನಗಳು ಹರಿದುಹೋಗುತ್ತವೆ.
>
> ■ **ಅರವಿಂದರಾವ್ ದೇಶಪಾಂಡೆ, ಆರ್‌ಎಸ್‌ಎಸ್ ಪ್ರಾಂತ ಕಾರ್ಯಕಾರಿಣಿ ಸದಸ್ಯ, ಅಥಣಿ**

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಕಾರ್ಯಕಾರಿಣಿ ಸದಸ್ಯ ಅರವಿಂದರಾವ್ ದೇಶಪಾಂಡೆ ಮಾತನಾಡಿ, ಭಾರತೀಯ ಸಂಸ್ಕೃತಿಯಲ್ಲಿ ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆ ವಿಶೇಷ ಮಹತ್ವವನ್ನ ಪಡೆದುಕೊಂಡಿವೆ. ಈ ಮಹಾ ಗ್ರಂಥಗಳಲ್ಲಿ ಬರುವ ಶ್ಲೋಕಗಳನ್ನು, ದೇವರ ನಾಮಸ್ಮರಣೆ ಮಾಡುವುದರಿಂದ ಹಿಂದುತ್ವ ಮತ್ತು ಭಾರತೀಯ ಸಂಸ್ಕೃತಿ ಇನ್ನಷ್ಟು ಗಟ್ಟಿಯಾಗುತ್ತದೆ. ಶ್ರೀ ರಾಮ, ಶ್ರೀಕೃಷ್ಣ ಮತ್ತು ಶ್ರೀ ವಿಷ್ಣುವಿನ ಸಾಮೂಹಿಕವಾಗಿ ಪಠ್ಠಣ ಮಾಡುವುದರಿಂದ ಮಾನಸಿಕ ನೆಮ್ಮದಿಯ ಜೊತೆಗೆ ಕುಟುಂಬದ ಸಹಬಾಳ್ವೆಗೆ ಬಹಳಷ್ಟು ಸಹಕಾರಿಯಾಗಿದೆ.

ಅಧಿಕಮಾಸದ ನಿಮಿತ್ತ ಸುಮಾರು 45ಕ್ಕೂ ಅಧಿಕ ಮಹಿಳೆಯರು ಸೇರಿಕೊಂಡು ಒಂದು ತಿಂಗಳ ಕಾಲ ವಿಷ್ಣು ಸಹಸ್ರ ನಾಮ ಪಠಣ ಮಾಡಿ, ಆರತಿ ಮತ್ತು ಅಕ್ಷತಾ ಕಾರ್ಯಕ್ರಮಗಳ ಮೂಲಕ ಸಂಗ್ರಹವಾದ ಅಕ್ಕಿಯನ್ನು ಪಟ್ಟಣದ ಸಿದ್ದೇಶ್ವರ ದೇವಸ್ಥಾನದಲ್ಲಿ ನಿರ್ಗತಿಕರಿಗೆ ನೀಡುವ ಮೂಲಕ ಸಮಾಜಮುಖಿ ಸೇವೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ವಿಷ್ಣು ನಾಮ ಪಠಣ, ಅಕ್ಷತಾ ಮತ್ತು ಆರತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ನಂತರ ಸಂಗ್ರಹವಾದ ಅಕ್ಕಿಯನ್ನು ನಿರ್ಗತಿಕರಿಗೆ ವಿತರಿಸಿದರು.ಈ ವೇಳೆ ಮಾತೃ ಮಂಡಳಿಯ ಸದಸ್ಯರು ಸೇರಿದಂತೆ ಅನೇಕ ಮಹಿಳೆಯರು ಉಪಸ್ಥಿತರಿದ್ದರು.

ಪ್ರಧಾನಿ ಮೋದಿ ಸುದೀರ್ಘಾವಧಿ ಆಡಳಿತ: ವಿವಿಧ ಸೇವಾ ಕಾರ್ಯಕ್ರಮ

• ಬೆಳಗಾವಿ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರವು 12 ವರ್ಷಗಳ ಯಶಸ್ವಿ ಆಡಳಿತವನ್ನು ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ವಿವಿಧ ಸೇವಾ ಮತ್ತು ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಇದರ ಅಂಗವಾಗಿ ವೃಕ್ಷಾರೋಪಣ, ಸ್ವಚ್ಛತಾ ಅಭಿಯಾನ, ಎಣ್ಣೆ ರಹಿತ (ನೋ ಆಯಿಲ್) ಅಡುಗೆ ತರಬೇತಿ ಶಿಬಿರ ಹಾಗೂ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮದ ಮೂಲಕ ಪರಿಸರ ಸಂರಕ್ಷಣೆ, ಸ್ವಚ್ಛತೆಯ ಮಹತ್ವ, ಆರೋಗ್ಯಕರ ಆಹಾರ ಪದ್ಧತಿ ಹಾಗೂ ಯೋಗದ ಮೂಲಕ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಯಿತು. ''ಸೇವೆಯೇ ಸಂಘಟನೆ'' ಎಂಬ ಧ್ಯೇಯದೊಂದಿಗೆ ಸಮಾಜಮುಖಿ ಚಟುವಟಿಕೆಗಳನ್ನು ಮತ್ತಷ್ಟು ಬಲಪಡಿಸುವ ಸಂಕಲ್ಪವನ್ನು ಕಾರ್ಯಕರ್ತೆಯರು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಹಿಳಾ ಮೋರ್ಚಾ ಕರ್ನಾಟಕ ರಾಜ್ಯ ಕಾರ್ಯದರ್ಶಿ ಡಾ. ಸೋನಾಲಿ ಸರನೋಬತ್, ಜಿಲ್ಲಾ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಪ್ರಿಯಾಂಕಾ ಅಜರೇಕರ್, ಗ್ರಾಮೀಣ ಮಹಿಳಾ ಮೋರ್ಚಾ ಅಧ್ಯಕ್ಷೆ ಸಂಧ್ಯಾ ಪಾಟೀಲ, ಜಿಲ್ಲಾ ಮಹಿಳಾ ಮೋರ್ಚಾ ಕಾರ್ಯದರ್ಶಿ ಭಾಗ್ಯಶ್ರೀ ಕೋಕಿಟ್ಕರ್ ಸೇರಿದಂತೆ ಮಹಿಳಾ ಮೋರ್ಚಾದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದವರು ಸ್ವಚ್ಛ, ಹಸಿರು ಮತ್ತು ಆರೋಗ್ಯಪೂರ್ಣ ಸಮಾಜ ನಿರ್ಮಾಣಕ್ಕೆ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು.



ಎನ್‌ಎಸ್‌ಎಸ್ ಶಿಬಿರ: ಉಚಿತ ನೇತ್ರ ತಪಾಸಣೆ

• ಬೆಳಗಾವಿ: ವಿದ್ಯಾರ್ಥಿಗಳಲ್ಲಿ ಸಮಾಜಸೇವೆ ಮತ್ತು ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಬೆಳಗಾವಿಯ ಕೆಎಲ್‌ಎಸ್ ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯದ ಎನ್‌ಎಸ್‌ಎಸ್ ಘಟಕವು ಮಾರಿಹಾಳ ಗ್ರಾಮದಲ್ಲಿ ವಿಶೇಷ ಎನ್‌ಎಸ್‌ಎಸ್ ಶಿಬಿರವನ್ನು ಆಯೋಜಿಸಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಮಾರಿಹಾಳ ಗ್ರಾಮ ಪಂಚಾಯತಿಯ ಪಿಡಿಓ ಪರಶುರಾಮ ಮೊಲ್ಲೆನ್ನವರ ಅವರು ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯ ಮಹತ್ವವನ್ನು ಒತ್ತಿ ಹೇಳಿದರು.

ಗ್ರಾಮೀಣ ಜೀವನವನ್ನು ಅರ್ಥಮಾಡಿಕೊಳ್ಳುವುದು, ಸಮಾಜಸೇವೆಯಲ್ಲಿ ತೊಡಗಿಸಿಕೊಳ್ಳುವುದು ಹಾಗೂ ಸಮುದಾಯದ ಕಲ್ಯಾಣಕ್ಕೆ ಕೊಡುಗೆ ನೀಡುವಲ್ಲಿ ಎನ್‌ಎಸ್‌ಎಸ್ ಸ್ವಯಂಸೇವಕರ ಪಾತ್ರ ಮಹತ್ವದ್ದಾಗಿದೆ ಎಂದು ಅವರು ತಿಳಿಸಿದರು. ಗ್ರಾಮಸ್ಥರೊಂದಿಗೆ ನಿಕಟ ಸಂಪರ್ಕ ಬೆಳೆಸಿ ಅವರ ಜೀವನಮಟ್ಟ ಹಾಗೂ ಪರಿಸರದ ಸುಧಾರಣೆಗೆ ವಿದ್ಯಾರ್ಥಿಗಳು ಶ್ರಮಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಎ. ಎಚ್. ಹವಾಲ್ದಾರ ವಹಿಸಿದ್ದರು. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಅವರು ಎನ್‌ಎಸ್‌ಎಸ್ ಯೋಜನೆಯ ಇತಿಹಾಸ ಮತ್ತು ಉದ್ದೇಶಗಳ ಕುರಿತು ವಿವರಿಸಿ, 1969ರಲ್ಲಿ ಈ ಯೋಜನೆ ಆರಂಭಗೊಂಡಿತು ಎಂದು ತಿಳಿಸಿದರು. ಎನ್‌ಎಸ್‌ಎಸ್ ಸಂಯೋಜನಾ ಅಧಿಕಾರಿ ಪ್ರೊ. ಸತೀಶ್ ಅನಿಖಿಂಡಿ ಅವರ ಮಾರ್ಗದರ್ಶನದಲ್ಲಿ ಶಿಬಿರವನ್ನು ಆಯೋಜಿಸಲಾಗಿತ್ತು. ಒಟ್ಟು 50 ಎನ್‌ಎಸ್‌ಎಸ್ ಸ್ವಯಂಸೇವಕರು ಶಿಬಿರದಲ್ಲಿ ಭಾಗವಹಿಸಿ ವಿವಿಧ ಸಮಾಜಮುಖಿ ಚಟುವಟಿಕೆಗಳನ್ನು ನಡೆಸಿದರು. ಶಿಬಿರದ ಅಂಗವಾಗಿ ಬೆಳಗಾವಿಯ ನಂದಾದೀಪ ನೇತ್ರಾಲಯದ ಸಹಯೋಗದಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. 60ಕ್ಕೂ ಹೆಚ್ಚು ಗ್ರಾಮಸ್ಥರು ಈ ಸೌಲಭ್ಯದ ಪ್ರಯೋಜನ ಪಡೆದು ವೈದ್ಯಕೀಯ ಸೇವೆ ಪಡೆದರು.

ಗ್ರಾಮೀಣ ಜೀವನದ ನೈಜ ಅನುಭವವನ್ನು ವಿದ್ಯಾರ್ಥಿಗಳಿಗೆ ಒದಗಿಸುವುದರ ಜೊತೆಗೆ ಸಮಾಜ ಸೇವೆ ಮತ್ತು ಸಾಮಾಜಿಕ ಜವಾಬ್ದಾರಿಯ ಮನೋಭಾವ ಬೆಳೆಸುವಲ್ಲಿ ಈ ಶಿಬಿರ ಪರಿಣಾಮಕಾರಿ ವೇದಿಕೆಯಾಗಿ ಕಾರ್ಯನಿರ್ವಹಿಸಿತು.



ಮಾದಕ ವಸ್ತುಗಳ ಮಾರಾಟ, ಸಾಗಾಟ ಕಂಡು ಬಂದರೆ ಮಾಹಿತಿ ನೀಡಿ

• ಚನ್ನಮ್ಮನ ಕಿತ್ತೂರು: ಮಾದಕ ವಸ್ತುಗಳ ಮಾರಾಟ ಹಾಗೂ ಸಾಗಾಟ ಕಂಡು ಬಂದರೆ ತಕ್ಷಣ ನೀವು ಪೊಲೀಸರಿಗೆ ಮಾಹಿತಿಯನ್ನು ಒದಗಿಸಬೇಕೆಂದು ಸಿಪಿಐ ಶಿವಾನಂದ ಗುಡಗನಟ್ಟಿ ಹೇಳಿದರು.

ಸ್ಥಳೀಯ ಗುರು ಭವನದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಆದೇಶದ ಮೇರೆಗೆ ನಡೆದ ಮಾದಕ ವಸ್ತುಗಳು ಮತ್ತು ಅವುಗಳ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಅಭಿಯಾನ ಸಭೆಯಲ್ಲಿ ಮಾತನಾಡಿ, ಮಾದಕ ವಸ್ತುಗಳ ಮಾರಾಟಕ್ಕೆ ಕಡಿವಾಣ ಹಾಕಲು ಎಲ್ಲರ ಸಹಕಾರ ಅಗತ್ಯವೆಂದರು.

18 ವರ್ಷದ ಒಳಗಿನ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳಿಗೆ ಲೈಂಗಿಕ ದೌರ್ಜನ್ಯವಾದರೆ, ಮತ್ತು ಶಾಲಾ ಕಾಲೇಜಿಗೆ ಹೋಗುವಾಗ ತೊಂದರೆ, ಆತ್ಮ ಗೌರವಕ್ಕೆ ಧಕ್ಕೆ ಯಾಗುವ ರೀತಿಯಲ್ಲಿ ಯಾರಾದರೂ ಅಸಭ್ಯವಾಗಿ ವರ್ತಿಸಿದರೆ ಅವರ ಮೇಲೆ ಪೋಕ್ಸೋ ಕಾಯಿದೆ ಅಡಿಯಲ್ಲಿ ಪ್ರಕರಣವಾಗುತ್ತದೆ. ಇದರಡಿಯಲ್ಲಿ ಆರೋಪಿಗಳಾದವರಿಗೆ ಜೀವಾವಧಿ ಶಿಕ್ಷೆಗಳೇ ಆಗಿವೆ ಎಂದು ವಿವರಣೆ ನೀಡಿದರು. ನಿಮಗೆ ಹೇಳಲು ಮುಜುಗರವೆನಿಸಿದರೆ 1098 ಕ್ಕೆ ಕರೆ ಮಾಡಬೇಕು ನಿಮ್ಮ ಹೆಸರನ್ನು ಬಹಿರಂಗಪಡಿಸುವದಿಲ್ಲ ಮತ್ತು ಯಾವುದೇ ಅಹಿತಕರ ಘಟನೆಗಳು ನಡೆಯುತ್ತಿದ್ದರೆ ತಕ್ಷಣ 112ಕ್ಕೂ ಕರೆ ಮಾಡಬಹುದೆಂದು ಹೇಳಿ ಕಾನೂನಿನ ಸಮಗ್ರ ಮಾಹಿತಿಯನ್ನು ವಿದ್ಯಾರ್ಥಿನಿಯರಿಗೆ ತಿಳಿಸಿದರು.



ಪ್ರೌಢ ಶಾಲೆಯ ಮುಖ್ಯಾಧ್ಯಾಪಕ ಮಹೇಶ ಚನ್ನಂಗಿ, ಅಪರಾಧ ವಿಭಾಗದ ಪಿಎಸ್‌ಐ ಗಂಗಾಧರ ಹಂಪಣ್ಣವರ, ಎ ಎಸ್‌ಐ ಬಿ.ವೈ. ಉಪ್ಪಾರಟ್ಟಿ, ನಿಂಗರಾಜ ಗಳಗಿ ಸೇರಿದಂತೆ ಎಸ್‌ಬಿಎಮ್ ಸರ್ಕಾರಿ ಪ್ರೌಢ ಶಾಲೆಯ ಶಿಕ್ಷಕರು, ವಿದ್ಯಾರ್ಥಿನೀಯರು ಉಪಸ್ಥಿತರಿದ್ದರು.

ಯುವಜನತೆ ರಕ್ತದಾನ ಮಾಡಲು ಮುಂದಾಗಲಿ: ಶಿವಕುಮಾರ

• ಬೆಳಗಾವಿ: ಜಿಲ್ಲಾ ಆಡಳಿತ ಹಾಗೂ ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕು.ಕ. ಇಲಾಖೆ, ಬೆಳಗಾವಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಬೆಳಗಾವಿ ಕರ್ನಾಟಕ ರಾಜ್ಯ ರಕ್ತ ಚಾಲನ ಪರಿಷತ್ತು ಬೆಂಗಳೂರು, ಜಿಲ್ಲಾಏಡ್ಸ್ ನಿರೋಧಕ ಮತ್ತು ನಿಯಂತ್ರಣ ಘಟಕ, ಎಸ್.ಬಿ.ಜಿ ಆಯುರ್ವೇದಿಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬೆಳಗಾವಿ ರಕ್ತ ಕೇಂದ್ರ, ಬೆಳಗಾವಿ ಇವರ ಸಂಯುಕ್ತಾಶ್ರಾಯದಲ್ಲಿ ಮಂಗಳವಾರ ಎಸ್.ಬಿ.ಜಿ ಆಯುರ್ವೇದಿಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ವಿಶ್ವ ರಕ್ತದಾನಿಗಳ ದಿನಾಚರಣೆ ಕಾರ್ಯಕ್ರಮ ಜರುಗಿತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳಾದ ಕೆ ಎನ್ ಶಿವಕುಮಾರ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ತದ ನಂತರ ಮಾತನಾಡಿದ ಅವರು ರಕ್ತಕ್ಕೆ ಪರ್ಯಾಯವಾದ ವಸ್ತುವಿಲ್ಲ ರಕ್ತವನ್ನು ಕೃತಕವಾಗಿ ಉತ್ಪಾದಿಸಲು ಸಾಧ್ಯವಿಲ್ಲ, ಆದ್ದರಿಂದ ಆರೋಗ್ಯವಂತ ಯುವಕ, ಯುವತಿಯರು ನಿಯಮಿತವಾಗಿ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವಂತೆ ಕರೇ ನೀಡಿದರು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿಗಳು ಡಾ: ಚಾಂದನಿ ಜಿ ದೇವಡಿ, ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಯಂ ಪ್ರೇರಿತ ರಕ್ತ ದಾನವು ರಕ್ತ ಮತ್ತು ರಕ್ತ ಉತ್ಪನ್ನಗಳ ವರ್ಗಾವಣೆಯು ಪ್ರತಿ ವರ್ಷ ಲಕ್ಷಾಂತರ ಜೀವಗಳನ್ನು ಉಳಿಸಲು ಸಹಾಯ ಮಾಡುತ್ತದೆ ಎಂದರು.

ಎಸ್.ಬಿ.ಜಿ ಆಯುರ್ವೇದಿಕ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಅಡಿವೇಶ ಅರಕೇರಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆಶ್ರಿತ ರೋಗವಾಹಕ ನಿಯಂತ್ರಣಾಧಿಕಾರಿ ಡಾ.ವಿವೇಕ ಹೊನ್ನಳ್ಳಿ, ರಕ್ತ ಕೇಂದ್ರ ನಿರ್ದೇಶಕ ಗಿರೀಶ ಬುಡರಕಟ್ಟಿ, ವೈದ್ಯಾಧಿಕಾರಿ ಡಾ. ಬಿ.ಎನ್.ತುಕ್ಕಾರ, ರೋಗ ನಿಧಾನ ವಿಭಾಗದ ಉಪನ್ಯಾಸಕರಾದ ಡಾ: ಸಾಗರ.ಎಸ್, ಉಪನ್ಯಾಸಕರಾದ ಡಾ. ನವೀನ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಅತೀ ಹೆಚ್ಚು ಬಾರೀ ರಕ್ತ ದಾನ ಮಾಡಿದ 5 ರಕ್ತದಾನಿಗಳಾದ ಡಿ.ಬಿ. ಪಾಟೀಲ, ವಿಕ್ರಮಕುಮಾರಜೈನ್, ಪ್ರಕಾಶಕಲಘಟಕರ, ವೆಂಕಟೇಶ ಬೋಸಲೆ, ಅರುಣ ಹಾವೀನಾಳ ಇವರಿಗೆ ಸನ್ಮಾನ ಮಾಡಲಾಯಿತು.

ಕಪಿಲೇಶ್ವರ ದೇವಸ್ಥಾನದಲ್ಲಿ ವಸ್ತ್ರನೀತಿ ಜಾರಿ

• ಬೆಳಗಾವಿ: ಇಲ್ಲಿನ 'ದಕ್ಷಿಣ ಕಾಶಿ' ಎಂದೇ ಪ್ರಸಿದ್ಧವಾಗಿರುವ ಕಪಿಲೇಶ್ವರ ದೇವಸ್ಥಾನದಲ್ಲಿ ಇನ್ಮುಂದೆ ಭಕ್ತರ ಉಡುಗೆ ಕುರಿತು ಕಟ್ಟುನಿಟ್ಟಿನ ವಸ್ತ್ರನೀತಿ ಜಾರಿಗೊಳಿಸಲಾಗಿದೆ. ದೇವಸ್ಥಾನದ ಪಾವಿತ್ರ್ಯ ಹಾಗೂ ಧಾರ್ಮಿಕ ವಾತಾವರಣವನ್ನು ಕಾಪಾಡುವ ಉದ್ದೇಶದಿಂದ ದೇವಸ್ಥಾನ ಸಮಿತಿ ಈ ಕ್ರಮ ಕೈಗೊಂಡಿದೆ.

ಹೊಸ ನಿಯಮದ ಪ್ರಕಾರ, ಪುರುಷರು ಹಾಫ್ ಪ್ಯಾಂಟ್ ಧರಿಸಿ ಹಾಗೂ ಮಹಿಳೆಯರು ನೈಟಿ, ಗೌನ್ ಅಥವಾ ಅತಿಯಾದ ಫ್ಯಾನ್ಸಿ ಹಾಗೂ ತುಂಡು ಉಡುಗೆಗಳನ್ನು ತೊಟ್ಟು ದೇವಸ್ಥಾನ ಪ್ರವೇಶಿಸಲು ಅವಕಾಶ ಇರುವುದಿಲ್ಲ. ಮಹಿಳೆಯರು ಸೀರೆ ಹೊರತುಪಡಿಸಿ ಬೇರೆ ಉಡುಗೆ ಧರಿಸಿದ್ದರೆ ದುಪ್ಪಟ್ಟಾ ಕಡ್ಡಾಯವಾಗಿ ಇರಬೇಕು ಎಂದು ದೇವಸ್ಥಾನ ಆಡಳಿತ ಮಂಡಳಿ ಸೂಚಿಸಿದೆ. ಈ ಕುರಿತ ಮಾಹಿತಿ ಫಲಕವನ್ನು ದೇವಸ್ಥಾನದ ಪ್ರವೇಶ ದ್ವಾರದಲ್ಲಿ ಅಳವಡಿಸಲಾಗಿದೆ.

ದೇವಸ್ಥಾನಕ್ಕೆ ಪ್ರತಿನಿತ್ಯ ಸಾವಿರಾರು ಭಕ್ತರು ಭೇಟಿ ನೀಡುತ್ತಿದ್ದು, ಸೋಮವಾರ ಹಾಗೂ ಶಿವರಾತ್ರಿಯಂತಹ ವಿಶೇಷ ಸಂದರ್ಭಗಳಲ್ಲಿ ಲಕ್ಷಾಂತರ ಭಕ್ತರು ದರ್ಶನ ಪಡೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಕೆಲ ಭಕ್ತರು ಪಾಶ್ಚಿಮಾತ್ಯ ಉಡುಗೆಗಳಲ್ಲಿ ದೇವಸ್ಥಾನಕ್ಕೆ ಆಗಮಿಸುವುದು ಹಾಗೂ ದೇವಸ್ಥಾನ ಆವರಣದಲ್ಲಿ ರೀಲ್ಸ್ ಮತ್ತು ವಿಡಿಯೋ ಚಿತ್ರೀಕರಣ ಮಾಡುವ ಪ್ರವೃತ್ತಿ ಹೆಚ್ಚಾಗಿರುವುದನ್ನು ಆಡಳಿತ ಮಂಡಳಿ ಗಂಭೀರವಾಗಿ ಪರಿಗಣಿಸಿದೆ.

ಈ ಹಿನ್ನೆಲೆಯಲ್ಲಿ ಕಳೆದ ಏಪ್ರಿಲ್ 1ರಿಂದ ಪ್ರಾಯೋಗಿಕವಾಗಿ ವಸ್ತ್ರನೀತಿ ಜಾರಿಗೆ ತರಲಾಗಿದ್ದು, ಇದೀಗ ಅದನ್ನು ಇನ್ನಷ್ಟು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ದೇವಸ್ಥಾನದ ಸಂಪ್ರದಾಯ, ಶಿಸ್ತು ಮತ್ತು ಧಾರ್ಮಿಕ ಮೌಲ್ಯಗಳನ್ನು ಕಾಪಾಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

ನಶಾ ಮುಕ್ತ ಭಾರತ ಅಭಿಯಾನ ಸಪ್ತಾಹಕ್ಕೆ ಚಾಲನೆ

• ಬೆಳಗಾವಿ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆ, ಜಿಲ್ಲಾ ಎನ್.ಎಸ್., ಹಾಗೂ ಅನ್ನಪೂರ್ಣ ಮದ್ಯ ವ್ಯಸನಿಗಳ ಸಮಗ್ರ ಪುನರ್ವಸತಿ ಕೇಂದ್ರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಬುಧವಾರ ನಗರದ ಸರ್ದಾರ ಪಿ.ಯು. ಕಾಲೇಜಿನ ಆವರಣದಲ್ಲಿ ನಶಾ ಮುಕ್ತ ಭಾರತ ಅಭಿಯಾನ'' ಸಪ್ತಾಹಕ್ಕೆ ಚಾಲನೆ ನೀಡಲಾಯಿತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಕೆ.ಎನ್. ಶಿವಕುಮಾರ ಅವರು ಸಸಿ ನೆಡುವುದರ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಪ್ರೊಬೇಷನರಿ ಐ.ಎ.ಎಸ್. ಅಧಿಕಾರಿ ರೋಹಿತ್ ಸಿಂಗ್, ಕಾಲೇಜಿನ ಪ್ರಾಚಾರ್ಯರಾದ ವೈ. ಎಂ. ಪಾಟೀಲ, ಜಿಲ್ಲಾ ಎನ್.ಎಸ್.ಎಸ್. ಪ್ರೊಗ್ರಾಂ ಅಧಿಕಾರಿ ಎಂ.ಎ. ಮುಲ್ಲಾ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ನಾಮದೇವ ಬೀಲ್ಕರ್ ಸೇರಿದಂತೆ ಕಾಲೇಜು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಜೂ.17 ರಿಂದ ಜೂ.26ರ ವರೆಗೆ ನಶಾ ಮುಕ್ತ ಭಾರತ ಅಭಿಯಾನ ಸಪ್ತಾಹ ಜರುಗಲಿದೆ.



ವಸತಿ ನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

• ಬೆಳಗಾವಿ: ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ- ಅರೆಅಲೆಮಾರಿ ವಿದ್ಯಾರ್ಥಿಗಳಿಂದ, 2026-27ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ ''ಮೆಟ್ರಿಕ್-ನಂತರದ ವಿದ್ಯಾರ್ಥಿ ವೇತನ, ಅಲೆಮಾರಿ/ಅರೆಅಲೆಮಾರಿ ಜನಾಂಗದ ಮೆಟ್ರಿಕ್ ನಂತರದ ಅರ್ಹತಾ ವಿದ್ಯಾರ್ಥಿ ವೇತನ, ''ಶುಲ್ಕ ಮರುಪಾವತಿ'', ಮತ್ತು ''ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆ'' ಸೌಲಭ್ಯಕ್ಕಾಗಿ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾದ ವೆಬ್ಸೈಟ್ ವಿಳಾಸ https://ssp.postmatric.karnataka.gov.in/ ವಾಗಿದ್ದು, ಅರ್ಜಿ ಸಲ್ಲಿಸಲು ಜೂನ್ 31 ಕೊನೆಯ ದಿನಾಂಕವಾಗಿದೆ. ಅರ್ಹ ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ.

ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ಈ ವೆಬ್ಸೈಟ್ https://bcwd.karnataka.gov.in/ ಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿ ದೂರವಾಣಿ ಸಂಖ್ಯೆ 8050770004, ಇಮೇಲ್: bcwdhelpline@gmail.com ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ಸಹಾಯವಾಣಿ ಇಮೇಲ್ postmatric help @karnataka.gov.in ಹಾಗೂ 1902 ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಮಶಾನ ಭೂಮಿ ಗೋಡೆ ಎತ್ತರಿಸಲು ಮನವಿ



• ಕಬ್ಬೂರ: ಪಟ್ಟಣದ ಪರಿಶಿಷ್ಟ ಜಾತಿ ಕಾಲೋನಿಯ ಹತ್ತಿರದ ಸ್ಮಶಾನ ಭೂಮಿ ಅಭಿವೃದ್ಧಿ ಕಾಮಗಾರಿಯು ಮುಖ್ಯಮಂತ್ರಿ ಅಮೃತ ನಗರೋತ್ಥಾನ 4ನೇ ಹಂತದ ನಡೆಯುತ್ತಿರುವ ಕಾಮಗಾರಿಯಲ್ಲಿ ಗೋಡೆಯ ಎತ್ತರ ಕೇವಲ 2,1/2ಪೂಟ ಮಾತ್ರವಿದೆ, ಮತ್ತು ಗ್ರೀಲ್ ಕಾಮಗಾರಿ ಹೊಂದಿದೆ. ಆ ಗ್ರೀಲ್ ಕಾಮಗಾರಿ ರದ್ದುಪಡಿಸಿ ಅದಕ್ಕೆ 7 ಪೂಟಕ್ಕೆ ಸ್ಮಶಾನ ಗೋಡೆಯನ್ನು ಎತ್ತರಿಸಬೇಕೆಂದು ಪರಿಶಿಷ್ಟ ಜಾತಿ ಕಾಲೋನಿಯ ಪ್ರಮುಖರು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಯ ಮೂಲಕ ತಹಶೀಲ್ದಾರ್‌ಗೆ ಮಂಗಳವಾರ ಮನವಿ ಸಲ್ಲಿಸಿದರು. ಕಾಲೋನಿಯ ಪ್ರಮುಖರು ಸ್ಮಶಾನ ಗೋಡೆಯನ್ನು ಎತ್ತರಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಅಪ್ಪಾಸಾಹೇಬ ಅಗಸಿಮನಿ, ಶ್ರೀಕಾಂತ ಪೀರಪ್ಪಗೋಳ, ಮಂಜುನಾಥ ಮುರಾಳೆ, ದುಂಡಪ್ಪಾ ಸೂರ್ಯವಂಶಿ, ಸಚೀನ ಶಿವಾಯಗೋಳ, ಸುನಿಲ ಗಂಗಾಯಗೋಳ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಕಿರುಸುದ್ದಿ

ಇಂದು ಸಾಧಕರಿಗೆ ಪ್ರಶಸ್ತಿ ಪ್ರದಾನ



• **ಗೋಕಾಕ:** ಸಾಧಕರಿಗೆ ಪ್ರಶಸ್ತಿ ಸಮಾರಂಭವನ್ನು ಜೂ.18ರಂದು ಹಮ್ಮಿಕೊಳ್ಳಲಾಗಿದೆ ಎಂದು ಮಾಲತಶ್ರೀ ಮೈಸೂರು ಹೇಳಿದರು.

ನಗರದಲ್ಲಿ ಹಮ್ಮಿಕೊಂಡ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಆಶಾಕಿರಣ ಕಲಾ ಟ್ರಸ್ಟ್ ಗೋಕಾಕ, ಬೆಂಗಳೂರು, ಇವರ ಆಶ್ರಯದಲ್ಲಿ ಮರೆಯದ ಮಾಣಿಕ್ಯ ಪ್ರಶಸ್ತಿ-2026 ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ನಗರದ ರೋಟರಿ ರಕ್ತ ಭಂಡಾರದಲ್ಲಿ ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮದ ಸಾನಿಧ್ಯವನ್ನು ನಗರದ ಶ್ರೀ ಶೂನ್ಯ ಸಂಪಾದನ ಮಠದ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ವಹಿಸುವರು. ಕಾರ್ಯಕ್ರಮವನ್ನು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಉದ್ಘಾಟಿಸುವರು. ಚಲನಚಿತ್ರ ನಟ ಅನಿರುದ್ಧ ಜತಕರ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸುವರು. ಮುಖ್ಯ ಅತಿಥಿಗಳಾಗಿ ತಹಶೀಲ್ದಾರ್ ಡಾ.ಮೋಹನ ಭಸ್ಮೆ, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಪರಶುರಾಮ ಗಸ್ತೆ, ಮಹಾಂತೇಶ ತಾಂವಶಿ, ರಜನಿ ಜೀರಗ್ಯಾಳ ಭಾಗವಹಿಸುವರು. ಕಾರಣ ನಗರದ ಎಲ್ಲಾ ಕಲಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಈಶ್ವರಚಂದ್ರ, ಬೇಟಗೇರಿ, ರಜನಿ ಜೀರಗ್ಯಾಳ, ಜಯಾ ಚುನಮರಿ ಉಪಸ್ಥಿತರಿದ್ದರು.

ಆರ್.ಬಿ. ತಿಮ್ಮಾಪೂರಗೆ ಸಚಿವ ಸ್ಥಾನ ನೀಡಿ



• **ಬೀಳಗಿ:** ಬಾಗಲಕೋಟೆ ಜಿಲ್ಲೆ ಹಿರಿಯ ಕಾಂಗ್ರೆಸ್ ಮುಖಂಡ, ಮುಧೋಳ ಮತಕ್ಷೇತ್ರದ ಶಾಸಕ ಆರ್.ಬಿ. ತಿಮ್ಮಾಪೂರಗೆ ರಾಜ್ಯ ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನಮಾನ ನೀಡಬೇಕು ಎಂದು ಕೆಪಿಸಿಸಿ ಪ.ಜಾ ರಾಜ್ಯ ಕಾಂಗ್ರೆಸ್ ಸಂಚಾಲಕರು ಅಥಣಿ ಪುರಸಭೆ ಮಾಜಿ ಅಧ್ಯಕ್ಷರು ಹಾಲಿ ಸದಸ್ಯರಾದ ರಾವಸಾಬ ಐಹೊಳೆ ಅವರು ಆಗ್ರಹಿಸಿದ್ದಾರೆ.


ಈ ಕುರಿತು ಬೀಳಗಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್.ಬಿ. ತಿಮ್ಮಾಪೂರ ಅವರು ತಮ್ಮ ರಾಜಕೀಯ ಜೀವನದುದ್ದಕ್ಕೂ ರೈತರ ಪರವಾಗಿ ಕಾರ್ಯನಿರ್ವಹಿಸಿದ್ದು, ವಿಶೇಷವಾಗಿ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ. ಇತ್ತೀಚೆಗೆ ನಡೆದ ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯ ಗೆಲುವಿಗೆ ತಿಮ್ಮಾಪೂರ ಅವರ ಸಂಘಟನಾ ಸಾಮರ್ಥ್ಯ ಹಾಗೂ ನಾಯಕತ್ವ ಮಹತ್ವದ ಕೊಡುಗೆ ನೀಡಿದೆ. ಪಕ್ಷದ ಬಲವರ್ಧನೆ ಹಾಗೂ ಜನಪರ ಸೇವೆಯನ್ನು ಪರಿಗಣಿಸಿ ಅವರಿಗೆ ಸಚಿವ ಸ್ಥಾನ ನೀಡುವುದು ಸೂಕ್ತ ಎಂದು ರಾವಸಾಬ ಐಹೊಳೆ ಅಭಿಪ್ರಾಯಪಟ್ಟರು.

ರಾಜ್ಯ ಸರ್ಕಾರ ಹಾಗೂ ಪಕ್ಷದ ನಾಯಕತ್ವವು ತಿಮ್ಮಾಪೂರ ಅವರ ಅನುಭವ, ಸಂಘಟನಾ ಶಕ್ತಿ ಮತ್ತು ಜನಸೇವೆಯನ್ನು ಪರಿಗಣಿಸಿ ಸಚಿವ ಸಂಪುಟದಲ್ಲಿ ಅವಕಾಶ ಕಲ್ಪಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ನಿಧನಸುದ್ದಿ

ಕಲ್ಲಮ್ಮ ದೇಯಣ್ಣವರ

• **ಗೋಕಾಕ:** ತಾಲೂಕಿನ ಬೆಟಗೇರಿ ಗ್ರಾಮದ ನಿವಾಸಿ, ಲಿಂಗಾಯತ ಸಮಾಜದ ಹಿರಿಯರಾದ ಕಲ್ಲಮ್ಮ ಗುರುಲಿಂಗಪ್ಪ ದೇಯಣ್ಣವರ(63) ಅವರು ಜೂ.16ರಂದು ನಿಧನರಾದರು.



ಮೃತರಿಗೆ ಪತಿ, ಬೆಟಗೇರಿ ಪಿಕೆಪಿಎಸ್ ಸಂಘದ ಲೆಕ್ಕಿಗ ಮುತ್ತೆಪ್ಪ ಗುರುಲಿಂಗಪ್ಪ ದೇಯಣ್ಣವರ ಸೇರಿದಂತೆ ಇಬ್ಬರು ಪುತ್ರರು, ಮೂರು ಜನ ಪುತ್ರಿಯರು, ಸೊಸೆಯಂದಿರು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂದು-ಬಳಗ ಇದ್ದಾರೆ.

ಶಿವಪ್ಪ ಕುರಬೇಟ

• **ಕಬ್ಬೂರು:** ಪಟಣದ ಸೇರಿಕೋಡಿ ನಿವಾಸಿ ಶಿವಪ್ಪ ಲಗಮಪ್ಪಾ ಕುರಬೇಟ.(83) ಸೋಮವಾರ ನಿಧನರಾದರು.



ಮೃತರಿಗೆ ನಾಲ್ಕು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಬಳಗ ಇದ್ದಾರೆ.



ಬೆಳಗಾವಿ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆ, ಜಿಲ್ಲಾ ಎನ್.ಎಸ್., ಹಾಗೂ ಅನ್ನಪೂರ್ಣ ಮದ್ಯ ವ್ಯಸನಿಗಳ ಸಮಗ್ರ ಪುನರ್ವಸತಿ ಕೇಂದ್ರ ಇವರುಗಳ ಸಂಯುಕ್ತ ಆಶ್ರಯದಲ್ಲಿ ಬುಧವಾರ ನಗರದ ಸರ್ದಾರ ಪಿ.ಯು. ಕಾಲೇಜಿನ ಆವರಣದಲ್ಲಿ ನಶಾ ಮುಕ್ತ ಭಾರತ ಅಭಿಯಾನ'' ಸಪ್ತಾಹಕ್ಕೆ ಚಾಲನೆ ನೀಡಲಾಯಿತು.

ಜೂ.21ರಂದು ಓಪನ್ ಹೌಸ್ ಕಾರ್ಯಕ್ರಮ

• **ಹುಬ್ಬಳ್ಳಿ:** ಇಲ್ಲಿಯ ಗೋಕುಲ ರಸ್ತೆಯಲ್ಲಿರುವ ಕೆಎಲ್ಇ ತಾಂತ್ರಿಕ ವಿಶ್ವವಿದ್ಯಾಲಯ ದಲ್ಲಿ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಎರಡು ಹೊಸ ಕೋರ್ಸ್‌ಗಳ ಆರಂಭಿಸಲಾಗುತ್ತಿದ್ದು, ಜೂ.21ರಂದು ಓಪನ್ ಹೌಸ್ ಕಾರ್ಯಕ್ರಮ ನಡೆಯಲಿದೆ. ಅಂದು ಬೆಳಗ್ಗೆ 10ಕ್ಕೆ ವಿದ್ಯಾನಗರದ ಬಿ.ವಿ.ಭೂಮರಡ್ಡಿ ಕ್ಯಾಂಪಸ್‌ನಲ್ಲಿ ಆಯೋಜಿಸಿದೆ. ಕಾನೂನು ಅಧ್ಯಯನ ಶಾಲೆ (ಬಿಬಿಎ ಹಾಗೂ ಎಲ್‌ಎಲ್‌ಬಿ 3 ವರ್ಷ) ಹಾಗೂ ಹೋಟೆಲ್ ಮ್ಯಾನೇಜಮೆಂಟ್ ಹಾಗೂ ಕ್ಯಾಟರಿಂಗ್ ಟೆಕ್ನಾಲಜಿ ವಿಭಾಗ(ಬಿಎಸ್‌ಸಿ 3 ವರ್ಷ) ಪ್ರಾರಂಭಿಸುತ್ತಿದೆ. ಈ ಎರಡು ಕೋರ್ಸ್‌ಗಳ ಸ್ಥಾಪನೆಯೊಂದಿಗೆ ವಿಶ್ವವಿದ್ಯಾಲಯ ತನ್ನ ಶೈಕ್ಷಣಿಕ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿಕೊಳ್ಳುತ್ತಿದೆ. ಎಲ್‌ಎಸ್‌ಬಿ ಮೂರು ವರ್ಷ ಪದವಿ, ಬಿಬಿಎ ಎಲ್‌ಎಲ್‌ಬಿ ಐದು ವರ್ಷ ಸಮಗ್ರ ಪದವಿ ಹಾಗೂ ಎಲ್‌ಎಲ್‌ಎಂ ಎರಡು ವರ್ಷ ಸ್ನಾತಕೋತ್ತರ ಅಧ್ಯಯನವಾಗಿದೆ.

ಈ ಕಾರ್ಯಕ್ರಮದಲ್ಲಿ ಪಠ್ಯಕ್ರಮ, ಪ್ರವೇಶ ಪ್ರಕ್ರಿಯೆ, ಶುಲ್ಕ ರಚನೆ, ವಿದ್ಯಾರ್ಥಿವೇತನ ಸೌಲಭ್ಯಗಳು, ದ್ಯೋಗಾವಕಾಶಗಳು ಹಾಗೂ ಭವಿಷ್ಯದ ವೃತ್ತಿಜೀವನದ ಕುರಿತು ವಿವರವಾದ ಮಾಹಿತಿ ನೀಡಲಾಗುತ್ತದೆ. ವಿದ್ಯಾರ್ಥಿಗಳು ಮತ್ತು ಪೋಷಕರು ವಿಷಯ ತಜ್ಞರೊಂದಿಗೆ ನೇರವಾಗಿ ಸಂವಾದ ನಡೆಸುವ ಅವಕಾಶವೂ ಕಲ್ಪಿಸಲಾಗಿದೆ. ಸ್ಕೂಲ್ ಆಫ್ ಲೀಗಲ್ ಸ್ಟಡೀಸ್ ಕುರಿತ ಓಪನ್ ಹೌಸ್ ಕಾರ್ಯಕ್ರಮಕ್ಕೆ ಕೆಎಲ್ಇ ಕಾನೂನು ಮಹಾವಿದ್ಯಾಲಯ ಪ್ರಾಧ್ಯಾಪಕ ಡಾ.ಮನೋಜಕುಮಾರ ಹಿರೇಮಠ ಆಗಮಿಸಲಿದ್ದಾರೆ. ಹೋಟೆಲ್ ಮ್ಯಾನೇಜ್‌ಮೆಂಟ್ ಬಗ್ಗೆ ಸಹಾಯಕ ಪ್ರಾಧ್ಯಾಪಕ ಅಮಲನ್ ಇ ಅವರು ನಡೆಸಿಕೊಡಲಿದ್ದಾರೆ. ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಸಂಸ್ಥೆ ವಿನಂತಿಸಿಕೊಂಡಿದೆ. ಪ್ರವೇಶ ಉಚಿತವಿದೆ.



ಹುಬ್ಬಳ್ಳಿ: ನಗರದ ಸರ್. ಸಿದ್ದಪ್ಪ ಕಂಬಳಿ ರಸ್ತೆಯಲ್ಲಿ ಟ್ರಾಫಿಕ್ ಪೊಲೀಸ್ ಸಿಬ್ಬಂದಿ ನಿಯೋಜಿಸಬೇಕು ಎಂದು ಆಗ್ರಹಿಸಿ ದಲಿತ ಕಾರ್ಮಿಕ ಅಸಂಘಟಿತ ಒಕ್ಕೂಟದ ಸದಸ್ಯರು ಸಂಚಾರಿ ಎಸಿಪಿ ವೀರೇಶ ಪಾಟೀಲಗೆ ಮನವಿ ಸಲ್ಲಿಸಿದರು. ಯಾವುದೇ ಅವಘಡಗಳು ನಡೆದಂತೆ ಮುಂಜಾಗ್ರತ ಕ್ರಮವಾಗಿ ಸಂಚಾರಿ ಸಿಬ್ಬಂದಿ ನಿಯೋಜಿಸಬೇಕು ಎಂದು ಒತ್ತಾಯಿಸಿದರು. ಒಕ್ಕೂಟ ಸದಸ್ಯ ವಿಜಯ ಕರಾ, ಸೋಮಶೇಖರ, ಎಸ್.ಎ. ಮುಲ್ಲಾ ಇದ್ದರು.

ಎಸ್ಐಆರ್ ವಿಶೇಷ ಸಭೆ | ಶಾಸಕ ರಮೇಶ ಜಾರಕಿಹೊಳಿ ಸಲಹೆ

ಮತದಾನದ ಹಕ್ಕಿನಿಂದ ಅರ್ಹ ಮತದಾರರು ವಂಚಿತರಾಗದಿರಲಿ

• **ಗೋಕಾಕ:** ಅರ್ಹ ಮತದಾರರು ತಮ್ಮ ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಎಲ್ಲರೂ ಜಾಗರೂಕರಾಗಿ ಕಾರ್ಯನಿರ್ವಹಿಸಬೇಕು. ಬಿಎಲ್ಒ-2 ಕಾರ್ಯಕರ್ತರುತಮ್ಮ ವ್ಯಾಪ್ತಿಯ ಪ್ರತಿಯೊಬ್ಬ ಮತದಾರರ ಮಾಹಿತಿಯನ್ನು ಸಮರ್ಪಕವಾಗಿ ಪರಿಶೀಲಿಸಿ, ಅಗತ್ಯ ತಿದ್ದುಪಡಿಗಳನ್ನು ಮಾಡಿಸಬೇಕು ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಅವರು, ನಗರದ ನಗರಸಭೆ ಸಮುದಾಯ ಭವನದಲ್ಲಿ ಬಿಜೆಪಿ ನಗರ ಹಾಗೂ ಗ್ರಾಮೀಣ ಮಂಡಲದಿಂದ ಮತದಾರರ ಪಟ್ಟಿಯನ್ನು ಪರಿಷ್ಕರಿಸಲು ಕರೆಯಲಾಗಿದ್ದ ಎಸ್ಐಆರ್ ವಿಶೇಷ ಸಭೆಯನ್ನುದ್ದೇಶಿಸಿ ಮಾತನಾಡಿ, ಪ್ರತಿ ಬೂತ್ ಮಟ್ಟದಲ್ಲಿ ನೇಮಕ ಗೊಂಡಿರುವ ಬಿಎಲ್ಎ-2 ಕಾರ್ಯಕರ್ತರು ಒಂದೇ ಹೆಸರಿನ ಅನೇಕ ವ್ಯಕ್ತಿಗಳು ಒಂದೇ ಗ್ರಾಮ ಅಥವಾ ಪ್ರದೇಶದಲ್ಲಿ ವಾಸಿಸುವ ಸಂದರ್ಭಗಳಲ್ಲಿ ಹೆಸರು, ತಂದೆಯ ಹೆಸರು, ವಿಳಾಸ ಸೇರಿದಂತೆ ಅಗತ್ಯ ಮಾಹಿತಿಗಳನ್ನು ಸರಿಯಾಗಿ ದಾಖಲಿಸದಿದ್ದರೆ ಮತದಾರರ ಪಟ್ಟಿಯಲ್ಲಿ ಗೊಂದಲ ಉಂಟಾಗುವ ಸಾಧ್ಯತೆಗಳಿದ್ದು ಪ್ರತಿಯೊಬ್ಬ ಅರ್ಹ ಮತದಾರನ ಹೆಸರು ಮತದಾರರ ಪಟ್ಟಿಯಲ್ಲಿ ಸಮರ್ಪಕವಾಗಿ ದಾಖಲಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಪಕ್ಷ ನೀಡಿದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಬೇಕು ಎಂದರು.

ಪ್ರಜಾಪ್ರಭುತ್ವದಲ್ಲಿ ಮತದಾನವು ಪ್ರತಿಯೊಬ್ಬ ಭಾರತೀಯ ನಾಗರಿಕನ ಅಮೂಲ್ಯ ಹಕ್ಕಾಗಿದೆ.



» ಪ್ರತಿಯೊಬ್ಬ ಅರ್ಹ ಮತದಾರನ ಹೆಸರು ಮತದಾರರ ಪಟ್ಟಿಯಲ್ಲಿ ಸಮರ್ಪಕವಾಗಿ ದಾಖಲಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಪಕ್ಷ ನೀಡಿದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಲು ಶಾಸಕ ರಮೇಶ ಜಾರಕಿಹೊಳಿ ಸಲಹೆ

ಯಾವುದೇ ಕಾರಣಕ್ಕೂ ಅರ್ಹ ಮತದಾರರು ತಮ್ಮ ಹಕ್ಕಿನಿಂದ ವಂಚಿತರಾಗದಂತೆ ಎಲ್ಲರೂ ಜಾಗೃತಿಯಿಂದ ಕಾರ್ಯನಿರ್ವಹಿಸಬೇಕೆಂದು ಶಾಸಕರು ಮನವಿ ಮಾಡಿದರು.

ಎಸ್ಐಆರ್‌ನ್ನು ಕಾಂಗ್ರೆಸ್ ಹಾಗೂ ಅದರ ಮಿತ್ರ ಪಕ್ಷಗಳು ವಿರೋಧಿಸಿದವು. ನಮ್ಮ ಬಿಜೆಪಿ ಪಕ್ಷದ ವರಿಷ್ಠರು ಗಂಭೀರವಾಗಿ ತೆಗೆದುಕೊಂಡಿದ್ದರ ಪರಿಣಾಮವಾಗಿ ಪಶ್ಚಿಮ ಬಂಗಾಲದಲ್ಲಿ ಬಿಜೆಪಿ ದಿಗ್ವಿಜಯ ಸಾಧಿಸಿತು. ಅದರಂತೆ ಬರುವ 2028ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತದೆ ಎಂದರು.

ವಿಭಾಗ ಪ್ರಭಾರಿ ಸಂಜಯ ಪಾಟೀಲ, ಬಿಜೆಪಿ ರಾಷ್ಟ್ರೀಯ ಓಬಿಸಿ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಲಕ್ಷ್ಮಣ ತಪಶಿ, ಗ್ರಾಮೀಣ ಮಂಡಲ ಅಧ್ಯಕ್ಷ ರಾಜೇಂದ್ರ ಗೌಡಪ್ಪಗೋಳ, ನಗರ ಮಂಡಲ ಅಧ್ಯಕ್ಷ ಭೀಮಶಿ ಭರಮಣ್ಣವರ, ಬಿಎಲ್ಒ-1 ಮಾಣಿಕ ಹಿರಟ್ಟಿ, ಜಿಲ್ಲಾ ಮಹಿಳಾ ಪ್ರಧಾನ ಕಾರ್ಯದರ್ಶಿ ರಾಜಶ್ರೀ ಒಡೆಯರ್, ಜಿಲ್ಲಾ ಯುವ ಮೋರ್ಚ ಪ್ರಧಾನ ಕಾರ್ಯದರ್ಶಿ ಆನಂದ್ ಅತ್ತುಗೋಳ, ಬಿಜೆಪಿ ಮುಖಂಡ ಪ್ರಮೋದ ಜೋಶಿ, ಡಾ.ಕೆ ವಿ ಪಾಟೀಲ್, ಸುರೇಶ್ ಪಾಟೀಲ್, ಸುರೇಶ್ ಪತ್ತಾರ್ ಸೇರಿದಂತೆ ಹಲವಾರು ಪ್ರಮುಖರು, ಪದಾಧಿಕಾರಿಗಳು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸ್ಮಶಾನ ಭೂಮಿಗಾಗಿ ಆಗ್ರಹಿಸಿ ಪ್ರತಿಭಟನೆ

• **ಸಂಕೇಶ್ವರ:** ಸಮೀಪದ ಅಮ್ಮಿನಬಾವಿ ಗ್ರಾಮದಲ್ಲಿ ಸ್ಮಶಾನ ಭೂಮಿಗಾಗಿ ಆಗ್ರಹಿಸಿ ಗ್ರಾಮಸ್ಥರು ನಡೆಸುತ್ತಿರುವ ಪ್ರತಿಭಟನೆಯು ಎರಡನೇ ದಿನಕ್ಕೆ ಕಾಲಿಟ್ಟಿದ್ದು, ಸ್ಥಳಕ್ಕೆ ಹುಕ್ಕೇರಿ ತಹಶೀಲ್ದಾರ್ ಬಲರಾಮ ಕಟ್ಟಿಮನಿ ಅವರು ಭೇಟಿ ನೀಡಿ ಸಮಸ್ಯೆ ಪರಿಹಾರಕ್ಕೆ ಭರವಸೆ ನೀಡಿದರೂ ಪ್ರತಿಭಟನಾಕಾರರು ತಮ್ಮ ಹೋರಾಟವನ್ನು ಹಿಂಪಡೆಯದೆ ಮುಂದುವರೆಸಿದ್ದಾರೆ.

ಸ್ಮಶಾನ ಭೂಮಿ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿ ಗ್ರಾಮಸ್ಥರು ಮಂಗಳವಾರದಿಂದ ಪ್ರತಿಭಟನೆ ಆರಂಭಿಸಿದ್ದು, ಬುಧವಾರ ತಹಶೀಲ್ದಾರ್ ಗ್ರಾಮಕ್ಕೆ ಭೇಟಿ ನೀಡಿ ಪರಿಸ್ಥಿತಿಯ ಪರಿಶೀಲನೆ ನಡೆಸಿದರು. ಈ ವೇಳೆ ಎಸಿ ಹಾಗೂ ಡಿಸಿ ಸೇರಿದಂತೆ ಸಂಬಂಧಿತ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದರು.

ಜೂ.18ರಂದು ಬೆಳಗ್ಗೆ 11 ಗಂಟೆಗೆ ಅಧಿಕಾರಿಗಳ ಸಭೆ ಕರೆಯಲಾಗುವುದು ಎಂದು ತಹಶೀಲ್ದಾರ್ ತಿಳಿಸಿದರೂ, ಸಭೆಯನ್ನು ಸ್ಥಳದಲ್ಲಿಯೇ ನಡೆಸಬೇಕು ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು. ಸಮಸ್ಯೆಗೆ ತಕ್ಷಣವೇ ಸ್ಪಷ್ಟ ನಿರ್ಧಾರ ಪ್ರಕಟಿಸಬೇಕೆಂದು ಒತ್ತಾಯಿಸಿದ ಗ್ರಾಮಸ್ಥರು, ಯಾವುದೇ ಕಾರಣಕ್ಕೂ ಹೋರಾಟ ಹಿಂಪಡೆಯುವುದಿಲ್ಲ ಎಂದು ಘೋಷಿಸಿದರು. ಗ್ರಾಮಸ್ಥರೊಂದಿಗೆ ಮಾತುಕತೆ ನಡೆಸಿ ಮನವೊಲಿಸಲು ತಹಶೀಲ್ದಾರ್ ಪ್ರಯತ್ನಿಸಿದರೂ ಅದು ಫಲಕಾರಿ ಯಾಗಲಿಲ್ಲ. ಹೀಗಾಗಿ ಅವರು ಸಂಜೆ ವೇಳೆ ಸ್ಥಳದಿಂದ ವಾಪಸ್ಸಾದರು.

ಸಾರ್ವಜನಿಕರ ಅಸಮಾಧಾನ

ಈ ಹಿಂದೆ ಗ್ರಾಪಂನ ವಿಶೇಷ ಸಭೆಯಲ್ಲಿ 6.31 ಎಕರೆ ವಕ್ಫ್ ಆಸ್ತಿಯಾಗಿ ದಾಖಲಾಗಿರುವ ಜಮೀನನ್ನು ವಿವಿಧ ಸಮುದಾಯಗಳ ಸ್ಮಶಾನ ಭೂಮಿಗಾಗಿ ಹಂಚಿಕೆ ಮಾಡಲು ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ ವರ್ಷಗಳು ಕಳೆದರೂ ಪ್ರಕ್ರಿಯೆ ಪೂರ್ಣಗೊಳ್ಳದಿರುವುದು ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ. ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯುವವರೆಗೆ ಹೋರಾಟ ಮುಂದುವರಿಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.



ನೂತನ ಅಂಗನವಾಡಿ ಕಟ್ಟಡಕ್ಕೆ ಭೂಮಿಪೂಜೆ



• **ಕಾಗವಾಡ:** ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಚಿಕ್ಕ ಮಕ್ಕಳಿಗೆ ಲಾಲನೆ, ಪಾಲನೆ, ಪೋಷಣೆ ಅಂಗನವಾಡಿ ಕೇಂದ್ರದಲ್ಲಿ ಅತಿಮುಖ್ಯವಾಗಿದೆ. ಆದ್ದರಿಂದ ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಕಾಂಗ್ರೆಸ್ ಪಕ್ಷದ ಯುವ ನಾಯಕ ಚಿದಾನಂದ ಸವದಿ ಹೇಳಿದರು.

ಸಮೀಪದ ತಂಗಡಿ ಗ್ರಾಮದ ಶಿವಾಜಿ ನಗರದ ಬಾರಿಗಡ್ಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ವತಿಯಿಂದ 12 ಲಕ್ಷ ರೂ.ಹಾಗೂ ನರೇಗಾ ಯೋಜನೆಯಡಿ 8 ಲಕ್ಷ ರೂ.ಒಟ್ಟು 20 ಲಕ್ಷ ರೂ ಗಳ ಅನುದಾನದಲ್ಲಿ ಮಂಜೂರಾದ ನೂತನ ಅಂಗನವಾಡಿ ಕಟ್ಟಡಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು,

ಮಕ್ಕಳ ಮನಸ್ಸು ಬಹಳ ಸೂಕ್ಷ್ಮ. ಅವರ ಮನಸ್ಸಿನಲ್ಲಿ ಯಾವ ರೀತಿ ಬದಲಾವಣೆ ತರಬೇಕೆಂಬ ದೃಷ್ಟಿ ಇಟ್ಟುಕೊಂಡು ಪಾಠ ಮಾಡಬೇಕು. ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ವಿದ್ಯಾಭ್ಯಾಸ ನೀಡುವ ಅಂಗನವಾಡಿ ಕೇಂದ್ರ ದೇವಸ್ಥಾನವಿದ್ದಂತೆ ಆದರಿಂದ ಕೂಡಲೇ ಸಂಬಂಧಿಸಿದ ಅಧಿಕಾರಿ ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಬೇಕು. ಯಾವುದೇ ಲೋಪ ದೋಷಗಳು ಉಂಟಾಗದ ರೀತಿಯಲ್ಲಿ ಕಾಮಗಾರಿ ಕೈಗೊಳ್ಳಬೇಕು ಎಂದರು.

ತಂಗಡಿ ಗ್ರಾಮದ ರಮೇಶ ಹರಿ ಪಾಟೀಲ ಸಣ್ಣ ರೈತ ಆದರೆ ದೊಡ್ಡ ಮನಸ್ಸು ಮಾಡಿ ಅಂಗನವಾಡಿ ಶಾಲೆ ಬೀಳುವ ಹಂತದಲ್ಲಿರುವ ಅಂಗನವಾಡಿಯಲ್ಲಿ ಚಿಕ್ಕ ಮಕ್ಕಳು ಹೇಗೆ ಕಲಿಯುತ್ತೇವೆ ಎಂದು ಮನಗಂಡು ತನ್ನ ಜಮೀನಿನಲ್ಲಿ ಜಾಗ ನೀಡಿದಲ್ಲದೆ ಸ್ವಂತ ಖರ್ಚಿನಿಂದ ಪತ್ರಾಸ ಶೇಡನಲ್ಲಿ ಅಂಗನವಾಡಿ ನಿರ್ಮಿಸಿರುವುದನ್ನು ಕಂಡು ಯುವ ನಾಯಕ ಚಿದಾನಂದ ಸವದಿ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಇಒ ವಿರಣ್ಣಾ ವಾಲಿ, ಭೂದಾನಿ ರಮೇಶ ಪಾಟೀಲ ಗ್ರಾಪಂ ಸದಸ್ಯ ಚೇತನ ಗಾಯಕವಾಡ, ಭರತ ಪಾಟೀಲ, ಕಿರಣ ಪಾಟೀಲ, ಶ್ರೀಕಾಂತ ಪಾಟೀಲ, ದಿಲೀಪ್ಪ ಪಾಟೀಲ, ಪರಶುರಾಮ ಸಾಳುಂಕೆ, ಸಾಗರ ಪಾಟೀಲ, ಅಣ್ಣಾಸಾಬ ಚೌಗಲಾ ಆಸ್ಕರ ಪಠಾಣ, ಮಹಿಬೂಬ ಇನಾಮದಾರ, ಪಿಂಟು ಮಗದುಮ್ಮ, ವಸಂತ ಮೋರೆ, ಬಾಳಕೃಷ್ಣ ಪಾಟೀಲ, ಮಲ್ಲಪ್ಪಾ ನಾಯಿಕ, ಗುತಿಗೆದಾರ ಬಸಗೌಡಾ ಪಾಟೀಲ,ಅಂಗನವಾಡಿ ಶಿಕ್ಷಕಿ ಜೆ.ಎನ್. ಇನಾಮದಾರ ಸೇರಿದಂತೆ ಇತರರು ಇದ್ದರು.

ಉತ್ತರಾಧಿಕಾರಿಯಾಗಿ ಶ್ರೀ ಸಿದ್ಧಾನಂದ ಭಾರತಿ ಸ್ವಾಮಿಗಳು ನೇಮಕ

• **ಗೋಕಾಕ:** ನಗರದ ಅಂಬಿಗೇರ ಗಲ್ಲಿಯ ಶ್ರೀ ಶಾಮಾನಂದ ಆಶ್ರಮದ ಶ್ರೀ ಆತ್ಮಾನಂದ ಮಹಾಸ್ವಾಮಿಗಳ ಅನುಮತಿಯ ಮೇರೆಗೆ ಉತ್ತರಾಧಿಕಾರಿಯಾಗಿ ಶ್ರೀ ಸಿದ್ಧಾನಂದ ಭಾರತಿ ಮಹಾಸ್ವಾಮಿಗಳನ್ನು ಮಂಗಳವಾರದಂದು ನೇಮಕ ಮಾಡಲಾಯಿತು.

ಶ್ರೀ ಶಾಮಾನಂದ ಆಶ್ರಮದಲ್ಲಿ ಮಂಗಳವಾರದಂದು ಕರೆದ ಸಭೆಯಲ್ಲಿ ಶ್ರೀ ಆತ್ಮಾನಂದ ಮಹಾಸ್ವಾಮಿಗಳ ಮಾರ್ಗದರ್ಶನದಂತೆ ಸಭೆಯ ಸಾನ್ನಿಧ್ಯವನ್ನು ವಹಿಸಿದ್ದ ಕಾಡರಕೊಪ್ಪದ ಶ್ರೀ ದಯಾನಂದ ಸರಸ್ವತಿ ಮಹಾಸ್ವಾಮಿಗಳು, ಮಹಾಲಿಂಗಪೂರದ ಶ್ರೀ ಸಹಜಾನಂದ ಮಹಾಸ್ವಾಮಿಗಳು, ಹುಣಶ್ಯಾಳದ ಶ್ರೀ ನಿಜಗುಣದೇವರು, ತುಳಸಿಗಿರಿಯ ಶ್ರೀ ರಾಮಾನಂದ ಸ್ವಾಮಿಗಳು, ತಳಕಟ್ನಾಳದ ಶ್ರೀ ಆತ್ಮಾನಂದ ಸ್ವಾಮಿಗಳು, ಮೆಟಗುಡ್ಡದ ಶ್ರೀ ಚನ್ನಯ್ಯ ಸ್ವಾಮಿಗಳು ಸಮ್ಮುಖದಲ್ಲಿ ಉತ್ತರಾಧಿಕಾರಿಯಾಗಿ ಶ್ರೀ ಸಿದ್ಧಾನಂದ ಭಾರತಿ ಮಹಾಸ್ವಾಮಿಗಳನ್ನು ನೇಮಕ ಮಾಡಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಹುಬ್ಬಳ್ಳಿಯ ಸಿದ್ಧಾರೂಢ ಮಠದ ಧರ್ಮದರ್ಶಿ ಶಾಮಾನಂದ ಪೂಜೇರಿ ವಹಿಸಿದ್ದರು. ಈ ಸಂದರ್ಭದಲ್ಲಿ ಹುಬ್ಬಳ್ಳಿಯ ಸಿದ್ಧಾರೂಢ ಮಠದ ಉಪಾಧ್ಯಕ್ಷ ಭೀಮಪ್ಪ ಬಾಗೇವಾಡಿ, ಗುರುನಾಥ ಮಲ್ಲಾಪೂರ, ಜಯಸಿಂಗ ಖಾಖಂಡಕಿ, ಪರಪ್ಪಾ ಹುದ್ದಾರ, ಲಚ್ಚಪ್ಪಾ ಜುಂಜರಕೊಪ್ಪ, ಲಗಮಪ್ಪ ನಾಯಕ, ಮಲ್ಲಪ್ಪ ಹುಚ್ಚನಟ್ಟಿ, ಶ್ಯಾಮ ನರಗುಂದ, ಭಗವಂತ ಪತ್ತಾರ, ವಿಲಾಸ ಕಾವರೆ, ವಿಜಯಕುಮಾರ ದೇಸಾಯಿ, ಶ್ರೀಶೈಲ ಪೂಜೇರಿ ಸೇರಿದಂತೆ ಶ್ರೀ ಶಾಮಾನಂದ ಆಶ್ರಮದ ಮತ್ತು ಸಿದ್ಧಾರೂಢ ಮಠದ ಭಕ್ತರು ಉಪಸ್ಥಿತರಿದ್ದರು.





ಚಿಕ್ಕೋಡಿ: ನಿಪ್ಪಾಣಿ ನಗರದ ಗುರುವಾರ ಪೇಟೆಯಲ್ಲಿ ಚಿಕ್ಕೋಡಿಯ ಸಿದ್ಧಿವಿನಾಯಕ ಸೌಹಾರ್ದ ಸಹಕಾರಿ ಸಂಘದ ನಿಪ್ಪಾಣಿ ಶಾಖೆಯನ್ನು ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಅವರು ಉದ್ಘಾಟಿಸಿದರು. ಸಿದ್ಧಿವಿನಾಯಕ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಸಂಜಯ ಅಡಕೆ, ನಿಪ್ಪಾಣಿಯ ಸಮಾಧಿಮಠದ ಪ್ರಾಣಲಿಂಗ ಸ್ವಾಮೀಜಿ, ಅಪ್ಪಾಸಾಹೇಬ ಚವ್ಹಾಣ, ಸುಜೀತ ದೀಕ್ಷಿತ, ಕಲ್ಲಪ್ಪ ಗಣೇಶವಾಡಿ, ಸುನೀಲ ರಜಪೂತ, ಮಹಾಲಿಂಗಣ್ಣ ಕೋಠಿವಾಲೆ, ಪ್ರಣವ್ ಮಾನವಿ, ಶಾಹಿಲ್ ಶಹಾ, ಸಂತೋಷ ಕೋಠಿವಾಲೆ, ಪಂಕಜ ರಾಯಮಾನೆ, ಸುರೇಶ ಶೆಟ್ಟಿ ಇತರರು ಇದ್ದರು.

ಜೂ.25ಕ್ಕೆ ಭಾರತ ಸೇವಾದಳ ಕಾರ್ಯಕ್ರಮ

• **ಕಲಘಟಗಿ:** ಭಾರತ ಸೇವಾದಳ ತಾಲೂಕ ಸಮಿತಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ವತಿಯಿಂದ ಬುಧವಾರ ಬಿಇಒ ಕಚೇರಿಯಲ್ಲಿ ಹಮ್ಮಿಕೊಂಡ ಸಭೆಯಲ್ಲಿ 2026 -27ನೇ ಸಾಲಿನ ಭಾರತ ಸೇವಾದಳ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಯಿತು.

ಮೊದಲ ಕಾರ್ಯಕ್ರಮವಾದ ಪುನಶ್ಚೇತನ ಕಾರ್ಯಕ್ರಮವನ್ನು ಜೂ.25ರಂದು ಜಿ.ಜಿ.ಎಚ್.ಎಸ್ ಕಲಘಟಗಿಯಲ್ಲಿ ಕಾರ್ಯಕ್ರಮ ನಡೆಸಲು ತೀರ್ಮಾನಿಸಲಾಯಿತು.

ಕಲಘಟಗಿ ತಾಲೂಕು ದಾರವಾಡ ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ದ್ವಿತೀಯ ಸ್ಥಾನ ಗಳಿಸಿದ ಹಿನ್ನೆಲೆಯಲ್ಲಿ, ಕ್ಷೇತ್ರ ಶಿಕ್ಷಣಾಧಿಕಾರಿ ಗಾಯತ್ರಿದೇವಿ ಸಜ್ಜನರವರಿಗೆ ಭಾರತ ಸೇವಾದಳ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ತಾಲೂಕು ಸಮಿತಿ ಅಧ್ಯಕ್ಷಜಗದೀಶ್ ಕಮ್ಮಾರ್, ವಿಭಾಗ ಸಂಘಟಕ ಪ್ರಕಾಶ್ ಪಿ ಗೋಣಿ, ಕಾರ್ಯದರ್ಶಿ ಈಶ್ವರ ಜವಳಿ, ಎಸ್.ಎ.ಚಿಕ್ಕನರ್ತಿ, ಆರ್.ಎಂ.ಹೋಲ್ತಿಕೋಟಿ, ಬಸವರಾಜ ಹುಗ್ಗಿ, ಎಸ್.ಎಸ್.ಹಿರೇಮಠ, ಕಿರಣ ಮಿರ್ಜಿಯವರು ಉಪಸ್ಥಿತರಿದ್ದರು.

ಪುರಸಭೆ ಸದಸ್ಯರ ತುರ್ತು ಸಭೆ: ವಿವಿಧ ಕಾಮಗಾರಿಗಳ ಚರ್ಚೆ

• **ಮುಗಳಖೋಡ:** ಪುರಸಭೆ ಕಾರ್ಯಾಲಯದಲ್ಲಿ ಯುಸಿಎಫ್ ಯೋಜನೆಯ ಅನುದಾನ ಕುರಿತು ಸದಸ್ಯರ ತುರ್ತು ಸಭೆ ಕರೆದು, ವಿವಿಧ ಕಾಮಗಾರಿಗಳ ಬಗ್ಗೆ ಮಂಗಳವಾರ ಸದಸ್ಯರ ಸಭೆ ಕರೆಯಲಾಗಿತ್ತು. ಅಭಿವೃದ್ಧಿಯ ಕುರಿತು ಚರ್ಚೆ ನಡೆದರೆ, ಮತ್ತೊಂದು ಕಡೆ ಗೈರಾಗಿರುವ ಸದಸ್ಯರ ಸಂಖ್ಯೆ ಎದ್ದು ಕಾಣುತ್ತಿತ್ತು. ಈ ಸಭೆಯಲ್ಲಿ ಗಣ ತ್ಯಾಜ್ಯ ವಿಲೇವಾರಿ ಘಟಕದ 5 ಎಕರೆ ಇರುವ ಜಾಗವನ್ನು ಸಾರ್ವಜನಿಕರು ಒತ್ತುವರಿ, ಹಾಗೂ ವಾರ್ಡ್ ನಂಬರ್ 2ರಲ್ಲಿರುವ ಗಾಯರಾಣ ಜಾಗದಲ್ಲಿ ತಡೆಗೋಡೆ ತೆರವುಗೊಳಿಸಿರುವ ಕುರಿತು ಸದಸ್ಯರ ಮಧ್ಯ ಚರ್ಚೆಗಳು ನಡೆದವು .

ಪಟ್ಟಣದ ಮುಖ್ಯ ರಸ್ತೆಯಲ್ಲಿ ತಗ್ಗು ಗುಂಡಿಗಳು ಬಿದ್ದಿದ್ದು , ಶುದ್ಧ ಕುಡಿಯುವ ನೀರು, ಹೈಮಾಸ್ಕ್, ಚರಂಡಿ ಸೇರಿದಂತೆ ವಿವಿಧ ವಿಷಯಗಳ ಕುರಿತು ಧ್ವನಿ ಎತ್ತಿದ ಕೆಲ ಸದಸ್ಯರು ಒಂದುಕಡೆ ಯಾದರೆ. ಮನೆ ಹಂಚಿಕೆಯಲ್ಲಿ ಸದಸ್ಯರು ಹಣ ತೆಗೆದುಕೊಂಡಿದ್ದಾರೆಂಬ



ಆರೋಪಗಳು ಮತ್ತೊಂದು ಕಡೆ ಕೇಳಿ ಬರುತ್ತಿತ್ತು. ಈ ಹಿನ್ನೆಲೆಯಲ್ಲಿ ಸದಸ್ಯರ ಮಧ್ಯೆ ಯಾರು ಯಾರು ಎಂಬ ಸುದೀರ್ಘ ಚರ್ಚೆಯೊಂದಿಗೆ ಮನೆ ಹಂಚಿಕೆಯಲ್ಲಿ ಯಾರಿಂದಲೂ ಹಣ ತೆಗೆದುಕೊಳ್ಳುಬಾರದೆಂಬ ಕಡಖ ಎಚ್ಚರಿಕೆಯನ್ನು ಮತ್ತೆ ಕೆಲವು ಸದಸ್ಯರು ನೀಡಿದರು.

ಪುರಸಭೆ ಸಿಬ್ಬಂದಿ ಲಕ್ಕಪ್ಪ ಪೂಜಾರಿ ಸರಿಯಾದ ಕೆಲಸ ಮಾಡುತ್ತಿಲ್ಲ ಎಂಬ ಆರೋಪ ಮಾಡಿದ ಸದಸ್ಯರು ಮುಖ್ಯಾಧಿಕಾರಿಗಳು ಆತನಿಗೆ ನೋಟಿಸ್ ನೀಡಬೇಕೆಂದು ತಿಳಿಸಿದರು.

ಕರವಸೂಲಿ ಸಮಸ್ಯೆ ಮತ್ತು ಪರವಾನಿಗೆ ಹೊಂದಿದ, ಹೊಂದದಿರುವ ಅಂಗಡಿಗಳ ಸಂಖ್ಯೆ ಎಷ್ಟು ಎಂಬ ಪತ್ರಕರ್ತರ ಪ್ರಶ್ನೆಗೆ ಸಭೆ ಮೌನಕ್ಕೆ ಶರಣಾದರು .

ಸುದೀರ್ಘ ಚರ್ಚೆಯಲ್ಲಿ ತೊಡಗಿದ ಸದಸ್ಯರು ಪುರಸಭೆ ಪರವಾನಿಗೆ ಇಲ್ಲದೆ ಪಟ್ಟಣದಲ್ಲಿ ಮಳಿಗೆಗಳನ್ನು ತೆರೆಯಲು ಹೇಗೆ ಅವಕಾಶ ನೀಡಿದ್ದಿರಿ. ಪರವಾನಿಗೆ ಇಲ್ಲದ ಅಂಗಡಿ ಮುಗ್ಗಟ್ಟುಗಳನ್ನು ಭೇಟಿ ಮಾಡಿ ಕಡ್ಡಾಯವಾಗಿ ಪ್ರತಿಯೊಂದಕ್ಕೂ ಪರವಾನಿಗೆ ನೀಡಬೇಕು ಮತ್ತು ತೆರಿಗೆ ಸ್ವೀಕರಿಸಬೇಕು ಇದು ಪುರಸಭೆಯ ಕೆಲಸ ಎಂದು ಪುರಸಭೆ ಸಿಬ್ಬಂದಿಯನ್ನು ಸದಸ್ಯರು ತರಾಟೆಗೆ ತೆಗೆದುಕೊಂಡರು.

ನಂತರ ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ಮಹೇಂದ್ರ ಪಾವಡಿ ಶೆಟ್ಟಿ , ಈ ಹಿಂದೆ ಏನೂ ಆಗಿದೆ. ಈಗ ನನ್ನ ಗಮನಕ್ಕೆ ಬಂದ ನಂತರ ಪ್ರತಿ ಅಂಗಡಿಗಳಿಗೂ ಭೇಟಿ ನೀಡಿ ಪರವಾನಿಗೆ ಪರಿಶೀಲಿಸಿ ಇಲ್ಲದ ಅಂಗಡಿಗಳಿಗೆ ಕಡ್ಡಾಯವಾಗಿ ಪರವಾನಿಗೆ ತೆಗೆದುಕೊಳ್ಳಲು ಸೂಚಿಸುತ್ತೇನೆ ಹಾಗೂ ಅರ್ಧಕ್ಕೆನಿಂತ ಸ್ಥಳೀಯ ಕಾಮಗಾರಿಗಳು ಇನ್ನಿತರ ಸಮಸ್ಯೆಗಳನ್ನು ಗಮನಿಸಿ ಪುನರಾರಂಭಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷರಾದ ಶಾಂತವ್ವ ಗೋಕಾಕ, ಉಪಾಧ್ಯಕ್ಷ ಲಕ್ಷ್ಮೀಬಾಯಿ ಶೇಗುಣಿಸಿ, ಮುಖ್ಯಾಧಿಕಾರಿ ಮಹೇಂದ್ರ ಪಾವಡಿ ಶೆಟ್ಟಿ, ಇಂಜಿನಿಯರ್ ಎಸ್.ಆರ್.ಚೌಗಲಾ, ಪುರಸಭೆ ಸದಸ್ಯರಾದ ಸಂಜಯ ಕುಲಿಗೋಡ, ಪರಪ್ಪ ಖೇತಗೌಡರ, ರಮೇಶ ಯಡವನ್ನವರ, ಹಾಲಪ್ಪ ಶೇಗುಣಿಸಿ, ಚೇತನ ಯಡವನ್ನವರ, ರಾವಸಾಬ ಗೌಲತ್ತಿನವರ, ಮಹಾವೀರ ಕುರಾಡೆ, ಕೆಂಪಣ್ಣ ಅಂಗಡಿ ರಾಜಶೇಖರ್ ನಾಯಿಕ, ಅನುಸೂಯಾ ಲಮಾಣಿ, ಗಂಗವ್ವ ಬೆಳಗಲಿ, ನಾಮನಿರ್ದೇಶನ ಸದಸ್ಯರಾದ ಕರೆಪ್ಪ ಮಂಟೂರ, ಭರಮಪ್ಪ ಹಳಿಂಗಳಿ, ವಿಠ್ಠಲ ಯಡವಣ್ಣವರ, ಪುರಸಭೆ ಸಿಬ್ಬಂದಿ ಮತ್ತು ಪೌರಕಾರ್ಮಿಕರು ಇದ್ದರು.

ಅಧ್ಯಾತ್ಮ ಸಾಧನೆ, ಆತ್ಮಶುದ್ಧಿಯ ಮಾರ್ಗವೇ ಮೌನಲಿಂಗಾನುಷ್ಠಾನ

• **ಸುರೇಬಾನ:** ಅನುಷ್ಠಾನ ಅಧ್ಯಾತ್ಮಸಾಧನೆಮತ್ತು ಆತ್ಮಶುದ್ಧಿಯ ಒಂದು ಮಾರ್ಗವಾಗಿದೆ. ಮಾತನ್ನು ಹಾಗೂ ಆಹಾರವನ್ನು ನಿಯಂತ್ರಿಸುವುದರಿಂದ ಮನಸ್ಸಿನ ಏಕಾಗ್ರತೆ ಹಾಗೂ ಅಂತರ್ಮುಖಿ ಸಾಧನೆಯ ಜೊತೆಗೆ ಲೋಕಕಲ್ಯಾಣವನ್ನು ಮಾಡುವುದು ಮೌನಲಿಂಗಾನುಷ್ಠಾನದ ಪ್ರಮುಖ ಉದ್ದೇಶವಾಗಿದೆ ಎಂದು ಜಗದ್ಗುರು ಡಾ. ತೋಂಟದ ಸಿದ್ಧರಾಮ ಸ್ವಾಮೀಜಿ ಹೇಳಿದರು.

ಅವರು ಸಮೀಪದ ಕಲ್ಲೂರ ಶ್ರೀ ಸಿದ್ದೇಶ್ವರ ದೇವಸ್ಥಾನದಲ್ಲಿ ಪೂಜ್ಯ ಶಾಂತಲಿಂಗಸ್ವಾಮೀಜಿಗಳು ಕೈಗೊಂಡಿದ್ದ 31 ದಿನಗಳ ಮೌನಲಿಂಗಾನುಷ್ಠಾನ ಮಂಗಲೋತ್ಸವ ಸಮಾರಂಭದಲ್ಲಿ ಆಶೀರ್ವಚನ ನೀಡಿದರು. ಅನುಷ್ಠಾನಕ್ಕೆ ಎಲ್ಲವನ್ನೂ ನಿಗ್ರಹಿಸುವ ಶಕ್ತಿಯಿದೆ ಅಂತಹ ಶ್ರೇಷ್ಠ ವ್ರತವನ್ನು ಪೂಜ್ಯರು ಸುಮಾರು 17 ವರ್ಷಗಳಿಂದ ನಿರಂತರವಾಗಿ ಕೈಗೊಳ್ಳುತ್ತ ಈ ಭಾಗದಲ್ಲಿ ಭಕ್ತೋದ್ಧಾರ ಮಾಡುತ್ತಿದ್ದಾರೆ. ಅಪಾರ ಭಕ್ತಸಮೂಹವನ್ನು ಹೊಂದಿರುವ ಅವರು ಕನ್ನಡ ನೆಲ ಜಲ ಭಾಷೆಗಾಗಿ ಅವಿರತವಾಗಿ ಶ್ರಮಿಸುತ್ತಿದ್ದಾರೆ.

12 ನೇ ಶತಮಾನದಲ್ಲಿ ಕಲ್ಯಾಣ ಕ್ರಾಂತಿಯಾದಾಗ ವಚನ ಸಂರಕ್ಷಣೆಗಾಗಿ ವಚನ ಕಟ್ಟುಗಳನ್ನು ಸಾಗಿಸುವ ಸಂದರ್ಭದಲ್ಲಿ ಜ್ಞಾನನಿಧಿ ಚೆನ್ನಬಸವಣ್ಣನವರು ತಂಗಿ ಹೋದ ಪುಣ್ಯಸ್ಥಳವಾದ ಕಲ್ಲೂರು ಸಿದ್ದೇಶ್ವರ ದೇವಸ್ಥಾನ ಈ ಭಾಗದ ಆರಾಧ್ಯ ದೇವರಾಗಿದೆ ಎಂದು ಅವರು ಹೇಳಿದರು.



ಚಿಪ್ಪಲಕಟ್ಟಿ ಬೃಹನ್ಮಠದ ಸಿದ್ದಲಿಂಗ ಸ್ವಾಮೀಜಿ ಆಶೀರ್ವಚನ ನೀಡುತ್ತಾ, ಶ್ರೀಕ್ಷೇತ್ರ ಕಲ್ಲೂರ ಸಿದ್ದೇಶ್ವರ ದೇವಸ್ಥಾನ ಐತಿಹಾಸಿಕ ಪವಿತ್ರ ತಾಣವಾಗಿದೆ ಭಕ್ತರ ಇಷ್ಟಾರ್ಥಗಳನ್ನು ಪೂರೈಸುವ ಈ ಪುಣ್ಯಕ್ಷೇತ್ರದಲ್ಲಿ ಪೂಜ್ಯರು ಮೌನಲಿಂಗಾನುಷ್ಠಾನ ಕೈಗೊಂಡಿರುವುದು ನಮ್ಮೆಲ್ಲರ ಭಾಗ್ಯವಾಗಿದೆ ಎಂದು ಹೇಳಿದರು.

ಧಾರವಾಡದ ಹಿರೇಮಲ್ಲೂರ ಈಶ್ವರನ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಶಶಿಧರ ತೋಡಕರ, ಧಾರವಾಡದ ಮಾಜಿ ಜಿ ಪಂ ಸದಸ್ಯ ಎ ಎಂ ಮನ್ನಿ ಮಾತನಾಡಿದರು.

ಈ ಸಂದರ್ಭದಲ್ಲಿ ಖ್ಯಾತ ಉದ್ಯಮಿಗಳಾದ ಬಸವರಾಜ ಸಿಂದನೂರ ದಂಪತಿಗಳನ್ನು ಸನ್ಮಾನಿಸಲಾಯಿತು.

ವೇದಿಕೆ ಮೇಲೆ ಮುಳ್ಳೂರು ಹಿರೇಮಠ ಚಂದ್ರಶೇಖರ ಶಿವಾಚಾರ್ಯರ ಸ್ವಾಮೀಜಿ, ರಾಮದುರ್ಗ ಶಿವಮೂರ್ತೇಶ್ವರ ಮಠದ ಶಾಂತವೀರ ಸ್ವಾಮೀಜಿ, ಚಂದ್ರಶೇಖರ ಮಟ್ಟಿ, ಬಸವರಾಜ ಚಿಕ್ಕಮಠ, ಸುರೇಶ ಸಿ. ಪೂಜಾರ ಪ್ರಮುಖರು ಉಪಸ್ಥಿತರಿದ್ದರು. ಚಂದ್ರಶೇಖರ ಸೊಬರದ ಕಾರ್ಯಕ್ರಮ ನಿರ್ವಹಿಸಿದರು.

ಕಿರುಸುದ್ದಿ

ಇಂದು ರಕ್ತದಾನ ಶಿಬಿರ

ಬಾದಾಮಿ: ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಬೆಂಗಳೂರು, ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಏಡ್ಸ್ ಪ್ರತಿಬಂಧಕ ಹಾಗೂ ನಿಯಂತ್ರಣ ಘಟಕ, ಜಿಲ್ಲಾ ಆಸ್ಪತ್ರೆ, ರಕ್ತ ಕೇಂದ್ರ ಬಾಗಲಕೋಟೆ, ವೀರ ಪುಲಿಕೇಶಿ ಗ್ರಾಮೀಣ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಬಾದಾಮಿ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಸ್ವಯಂ ಪ್ರೇರಿತ ರಕ್ತದಾನಿಗಳ ದಿನಾಚರಣೆಯ ಅಂಗವಾಗಿ ಮಾನವೀಯತೆಯ ಒಂದು ಹನಿ ರಕ್ತ ನೀಡಿ ಜೀವಗಳನ್ನು ಉಳಿಸಿ ಘೋಷಣೆಯ ಅಡಿಯಲ್ಲಿ ನಮ್ಮ ಪುಲಿಕೇಶಿ ಮಹಾವಿದ್ಯಾಲಯದ ಆಸ್ಪತ್ರೆಯಲ್ಲಿ ಜೂ.18ರಂದು ಗುರುವಾರ ಬೆಳಗ್ಗೆ 10ರಿಂದ ಮಧ್ಯಾಹ್ನ 3ಗಂಟೆವರೆಗೆ ಸಾರ್ವಜನಿಕರಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಸಲುವಾಗಿ ತಮ್ಮ ಸಹಯೋಗದೊಂದಿಗೆ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದ್ದು ಸಾರ್ವಜನಿಕರು ರಕ್ತದಾನ ಮಾಡಿ ಶಿಬಿರ ಯಶಸ್ವಿಯಾಗಿ ನಡೆಸಿಕೊಡಬೇಕು ಎಂದು ತಿಳಿಸಿದ್ದಾರೆ.

ಅಲ್ಪಸಂಖ್ಯಾತ ಸಮುದಾಯದ ಐವರಿಗೆ ಸಚಿವ ಸ್ಥಾನ ನೀಡಿ

ಬಾಗಲಕೋಟೆ: ಅಲ್ಪಸಂಖ್ಯಾತರನ್ನು ಕೇವಲ ಮತಬ್ಯಾಂಕ್ ಆಗಿ ಬಳಸಿಕೊಳ್ಳದೇ ರಾಜಕೀಯ ಸ್ಥಾನ ಮಾನ ನೀಡಲು ಸಹ ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಮುಂದಾಗಬೇಕು. ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಸಮುದಾಯದ ಐದು ಜನ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಟಿಪ್ಪು ಸುಲ್ತಾನ್ ಅಭಿಮಾನಿಗಳ ಮಹಾವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹ್ಮದ್ ಯಾಸೀನ್ ನದಾಫ್ ಒತ್ತಾಯಿಸಿದರು. ನವನಗರದ ಪತ್ರಿಕಾಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅಲ್ಪಸಂಖ್ಯಾತ ಸಮುದಾಯದವರು ಅಧಿಕ ಮತ ನೀಡಿ ಕಾಂಗ್ರೆಸ್ ಸರ್ಕಾರ ರಚನೆಗೆ ಕಾರಣರಾಗಿದ್ದಾರೆ. ಆದರೆ ಈಗ ನಮ್ಮ ಸಮುದಾಯದ ರಾಜಕೀಯ ನಾಯಕರನ್ನು ಕಡೆಗಣಿಸಲಾಗುತ್ತಿದೆ. ಬಾಗಲಕೋಟೆ ಜಿಲ್ಲೆಯಿಂದ ಒಬ್ಬರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡಬೇಕೆಂದು ಅವರು ಒತ್ತಾಯಿಸಿದರು. ಕೇವಲ ಅಲ್ಪಸಂಖ್ಯಾತರನ್ನು ಮತದಾನಕ್ಕೆ ಮಾತ್ರ ಬಳಸಿಕೊಳ್ಳದೇ ಅಧಿಕಾರ ಹಂಚಿಕೆಯಲ್ಲಿಯೂ ಸಮುದಾಯವನ್ನು ಪರಿಗಣಿಸಬೇಕು. ಒಂದು ವೇಳೆ ಇದೇ ರೀತಿ ಒಡೆದಾಳುವ ನೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ನಮ್ಮ ಸಮುದಾಯ ತಕ್ಕ ಪಾಠವನ್ನು ಕಲಿಸಲಿದೆ ಎಂದು ಎಚ್ಚರಿಕೆ ನೀಡಿದರು. ವೇದಿಕೆ ಜಿಲ್ಲಾಧ್ಯಕ್ಷ ಅಮೀರ ಮುಜೆಹಾರ, ಅಬ್ದುಲ್ ಹಾದಿಮನಿ, ಆರೀಫ್ ತುಂಬರಮಟ್ಟಿ ಇದ್ದರು.



91 ಅಕ್ಕಿ ಚೀಲ ವಶ

ಬೀಳಗಿ: ತಾಲೂಕಿನ ಸುನಗ ತಾಂಡಾದಿಂದ ಸುನಗ ಕ್ರಾಸ್ ಕಡೆಗೆ ಅಕ್ಕಿ ಚೀಲ ತುಂಬಿಕೊಂಡು ಹೊರಟಿದ್ದ ಗೂಡ್ಸ್ ವಾಹನವನ್ನು ಆಹಾರ ಇಲಾಖೆ ಅಧಿಕಾರಿಗಳು ದಾಳಿ ಮಾಡಿ ವಶಪಡಿಸಿಕೊಂಡು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವರು. ವಿವಿಧ ಯೋಜನೆ ಅಡಿಯಲ್ಲಿ ಸಾರ್ವಜನಿಕರಿಗೆ ಹಂಚಿಕೆಯಾದ ಅಕ್ಕಿಯನ್ನು ಯಾವುದೇ ದಾಖಲಾತಿ ಇಲ್ಲದೇ ಅನಧಿಕೃತವಾಗಿ ಕೆಎ-29 ಸಿ-3320 ನಂಬರಿನ ಬೊಲೆರೊ ಮ್ಯಾಕ್ಸ್ ವಾಹನದಲ್ಲಿ ಅರ್ಧಮೂರ್ಧ ತುಂಬಿದ 91 ಪ್ಲಾಸ್ಟಿಕ್ ಚೀಲಗಳಲ್ಲಿ ಸಂಗ್ರಹಣೆ ಮಾಡಿದ್ದ ಒಟ್ಟು 4005 ಕೆ.ಜಿ. ಅಂದಾಜು 92,916 ರೂ. ಕಿಮ್ಮತ್ತಿನ ಅಕ್ಕಿಯನ್ನು ವಶಪಡಿಸಿಕೊಂಡಿದ್ದು ವಾಹನದ ಚಾಲಕ ಪರಾರಿಯಾಗಿದ್ದಾನೆ. ಆಹಾರ ಶಿರಸ್ತೇದಾರ ಸಂತೋಷ ಅಶೋಕ ರುಟಕಲ ಮತ್ತು ಆಹಾರ ನಿರೀಕ್ಷಕರಾದ ಶಶಿಧರ ಕೃಷ್ಣಪ್ಪ ಭಜಂತ್ರಿ, ಅನ್ವರ ಲಾಲಸಾಬ ನಸದಿ ದಾಳಿಯಲ್ಲಿದ್ದರು.

ಶಾಸಕ ಜೆಟಿಪಾಗೆ ಸಚಿವ ಸ್ಥಾನ ನೀಡಲು ಒತ್ತಾಯ

ಕಲಾದಗಿ: ಬೀಳಗಿ ಕ್ಷೇತ್ರದ ಶಾಸಕ ಅಭಿವೃದ್ಧಿಯ ಹರಿಕಾರ ಜೆ.ಟಿ.ಪಾಟೀಲರಿಗೆ ಸಚಿವ ಸ್ಥಾನ ನೀಡಬೇಕು ಎಂದು ಕಲಾದಗಿ ಜಿಲ್ಲಾ ಪಂಚಾಯತ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಮುಖಂಡ ಗ್ರಾಮದ ಅಂಜುಮನ ಕಮಿಟಿ ಸದಸ್ಯ ಬಂದೇನವಾಜ ಸೌದಾಗರ ಒತ್ತಾಯಿಸಿದ್ದಾರೆ.



ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಬಾಗಲಕೋಟೆ ಜಿಲ್ಲೆಯ ಹಿರಿಯ ಶಾಸಕರು ಹಾಗೂ ಬೀಳಗಿ ಕ್ಷೇತ್ರದಲ್ಲಿ ತಮ್ಮ ಅಭಿವೃದ್ಧಿ ಕಾರ್ಯದಿಂದಲೇ ಶಾಸಕ ಜೆ.ಟಿ.ಪಾಟೀಲರು 4 ಬಾರಿ ಗೆದ್ದು ಶಾಸಕರಾಗಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷರಾಗಿ ಉತ್ತಮ ಕಾರ್ಯ ನಿರ್ವಹಿಸಿ ನಿಗಮವನ್ನು ಲಾಭದತ್ತ ಕೊಂಡೊಯ್ದಿದ್ದು ಬೀಳಗಿ ಕ್ಷೇತ್ರದ ಜನತೆಗೆ ಸದಾ ಒಳಿತನ್ನು ಮಾಡುತ್ತಾ ಬೀಳಗಿ ಕ್ಷೇತ್ರವನ್ನು ಅಭಿವೃದ್ಧಿಯಲ್ಲಿ ಮಾದರಿಯಾಗಿದ್ದಾರೆ ಎಂದರು.



ಗಂಗಲಿ: ಸ್ಥಳೀಯ ಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ಅಧಿಕ ಮಾಸದ ನಿಮಿತ್ತ ಬುಧವಾರ ಗೌರಿ ದೇವಿಗೆ ವಿಶೇಷ ಪೂಜೆ, ಬೆಳಗ್ಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು. ಗೀತಾ ಕಟ್ಟಿ, ರೂಪ ಠಾಣೆ, ಲಕ್ಷ್ಮೀ ದೇಶಪಾಂಡೆ, ಶಾರದಾ ಅಂಬೇಕರ, ರೂಪ ಕಟ್ಟಿ, ರಾಧಾ ಕುಲಕರ್ಣಿ, ಲಕ್ಷ್ಮೀ ಆಶ್ರಿತ, ವಾಣಿ ಅಂಬೇಕರ, ಪದ್ಮಾವತಿ ಆಶ್ರಿತ, ಭವಾನಿ ಚಕ್ರವರ್ತಿ ಆರಾಧ್ಯ ಅಂಬೇಕರ ಮುಂತಾದವರಿದ್ದರು.

16 ಜನ ಅಗ್ನಿ ವೀರರಾಗಿ ಆಯ್ಕೆ: ಸನ್ಮಾನ

ರನ್ನ ಬೆಳಗಲಿ: ಪಟ್ಟಣದ ಗುರು ಮಹಾಲಿಂಗೇಶ್ವರ ಕಾಲೇಜಿನ ಹೆಮ್ಮೆಯ 16 ವಿದ್ಯಾರ್ಥಿಗಳು ಭಾರತೀಯ ಸಶಸ್ತ್ರ ಪಡೆಯ ಅಗ್ನಿಪಥ ಯೋಜನೆಯಡಿ ಅಗ್ನಿವೀರರಾಗಿ ಆಯ್ಕೆಯಾದ ಕಾರಣ ಕಾಲೇಜು ಆಡಳಿತ ಮಂಡಳಿ, ಸಿಬ್ಬಂದಿ, ಹಳೆಯ ವಿದ್ಯಾರ್ಥಿ ಸಂಘದ ಜಂಟಿ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ನಡೆಯಿತು. ಪ್ರಾಂಶುಪಾಲ ಪಿ.ಎಚ್.ನಾಯಕ ಮಾತನಾಡಿ, ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಕಠಿಣ ದೈಹಿಕ ಮತ್ತು ಲಿಖಿತ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ದೇಶ ಕಾಯುವ ಅಗ್ನಿ ವೀರರಾಗಿ ಆಯ್ಕೆಯಾಗಿರುವುದು ಇಡೀ ಸಂಸ್ಥೆಗೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಶಿಸ್ತು ಮತ್ತು ದೇಶ ಪ್ರೇಮ ಇತರ ವಿದ್ಯಾರ್ಥಿಗಳಿಗೆ ಮಾದರಿಯಾಗಲಿ ಎಂದರು. ಹಳೆಯ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ಮುತ್ತು ಅಂಗಡಿ, ಲಕ್ಷ್ಮಣ ಹಿಕಡಿ, ಶಿವು ಕಂಕಣವಾಡಿ, ಬಾಳಪ್ಪ ಯಡಹಳ್ಳಿ ಮಾತನಾಡಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಅಗ್ನಿ ವೀರ ಆನಂದ ಕಡಪಟ್ಟಿ, ದೇಶ ಸೇವೆ ಮಾಡುವುದು ನನ್ನ ಬಾಲ್ಯದ ಕನಸಾಗಿತ್ತು. ನನ್ನ ಈ ಸಾಧನೆಗೆ ಕಾಲೇಜಿನ ವಾತಾವರಣ, ಉಪನ್ಯಾಸಕರ ಪ್ರೋತ್ಸಾಹ ಹಾಗೂ ಹಳೆಯ ವಿದ್ಯಾರ್ಥಿಗಳ ಬೆಂಬಲವೇ ಕಾರಣ. ಈ ಅವಕಾಶ ಶ್ರದ್ಧೆಯಿಂದ ನಿಭಾಯಿಸುತ್ತೇನೆ ಎಂದರು. ಸಂಸ್ಥೆಯ ಅಧ್ಯಕ್ಷ ಡಿ.ವಿ.ಭರಮನಿ, ಉಪಾಧ್ಯಕ್ಷ ಸಿ.ಜಿ.ನಾಯಕ, ಪಿ.ಬಿ.ಪೂಜಾರ, ಎಸ್.ಐ.ಒಂಟಗೋಡಿ, ಕೆ.ಎಂ.ಗಣಾಚಾರಿ, ಪಿ.ಜಿ.ಸನಹಟ್ಟಿ, ಎಂ.ಡಿ.ಹೊಸಪೇಟೆ ಹಾಗೂ ಹಳೆಯ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು, ಉಪನ್ಯಾಸಕರು, ಸಿಬ್ಬಂದಿ ಇದ್ದರು.



ರನ್ನ ಬೆಳಗಲಿ: ಪಟ್ಟಣದ ಗುರು ಮಹಾಲಿಂಗೇಶ್ವರ ಕಾಲೇಜಿನ 16 ವಿದ್ಯಾರ್ಥಿಗಳು ಭಾರತೀಯ ಸಶಸ್ತ್ರ ಪಡೆಯ ಅಗ್ನಿಪಥ ಯೋಜನೆಯಡಿ ಅಗ್ನಿವೀರರಾಗಿ ಆಯ್ಕೆಯಾದ ಕಾರಣ ಕಾಲೇಜು ಆಡಳಿತ ಮಂಡಳಿ, ಸಿಬ್ಬಂದಿ, ಹಳೆಯ ವಿದ್ಯಾರ್ಥಿ ಸಂಘದ ಜಂಟಿ ಆಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ನಡೆಯಿತು. ಸಂಸ್ಥೆಯ ಅಧ್ಯಕ್ಷ ಡಿ.ವಿ.ಭರಮನಿ, ಉಪಾಧ್ಯಕ್ಷ ಸಿ.ಜಿ.ನಾಯಕ, ಪಿ.ಬಿ.ಪೂಜಾರ, ಎಸ್.ಐ.ಒಂಟಗೋಡಿ, ಕೆ.ಎಂ.ಗಣಾಚಾರಿ, ಪಿ.ಜಿ.ಸನಹಟ್ಟಿ, ಎಂ.ಡಿ.ಹೊಸಪೇಟೆ ಹಾಗೂ ಹಳೆಯ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು, ಉಪನ್ಯಾಸಕರು, ಸಿಬ್ಬಂದಿ ಇದ್ದರು.

ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಹೇಳಿಕೆ

ರಾಜ್ಯ ಸರ್ಕಾರದಿಂದ ರೈತರಿಗೆ ಮೋಸ

ಮಹಾಲಿಂಗಪುರ: ರಾಜ್ಯದಲ್ಲಿ ವಿದ್ಯುತ್ ಕಂಪನಿಗಳನ್ನು ಖಾಸಗೀಕರಣಗೊಳಿಸುವ ಸರ್ಕಾರದ ನಿರ್ಧಾರವು ಜನರಿಗೆ ಮಾಡುತ್ತಿರುವ 'ಮಹಾ ದ್ರೋಹ' ರೈತರಿಗೆ ಮರಣ ಶಾಸನವಾಗಿದೆ ಎಂದು ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಹೇಳಿದರು.

ಜಿಲ್ಲಾಪಂಚಾಯತಿ ಮಾಜಿ ಅಧ್ಯಕ್ಷ ಮಹಾಂತೇಶ ಹಿಟ್ಟಿನಮಠ ಅವರ ನಿವಾಸದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈಗಾಗಲೇ 19 ಜಿಲ್ಲೆಗಳಲ್ಲಿ ವಿದ್ಯುತ್ ಕಂಪನಿಗಳ ಖಾಸಗೀಕರಣ ಪ್ರಕ್ರಿಯೆ ಆರಂಭಿಸಿದೆ, ಈ ಪ್ರಕ್ರಿಯೆಯು ರೈತರ ಬದುಕನ್ನು ಸಂಕಷ್ಟಕ್ಕೆ ತಳ್ಳುತ್ತದೆ. ಮತ್ತು ಎಸ್.ಸಿ ಮತ್ತು ಎಸ್.ಟಿ ಸಮುದಾಯಗಳ ನೌಕರರಿಗೆ ದೊಡ್ಡ ಪ್ರಮಾಣದ ಮೋಸ ಆಗಲಿದೆ. ಒಟ್ಟಾರೆ ರಾಜ್ಯದ ಎಲ್ಲ ವಿದ್ಯುತ್ ಕೇಂದ್ರಗಳಲ್ಲಿ ಸುಮಾರು 87000 ಉದ್ಯೋಗಿಗಳು ಕೆಲಸ ಮಾಡುತ್ತಿದ್ದು ಅವರಿಗೆ ಈಗಾಗಲೇ ಉದ್ಯೋಗ ಕಡಿತದ ಆತಂಕ ಎದುರಾಗಿದೆ. ವಿದ್ಯುತ್ ಕಂಪನಿಗಳಲ್ಲಿ ಸುಮಾರು 25%ನಷ್ಟು ನೌಕರರು ಎಸ್‌ಸಿ ಮತ್ತು ಎಸ್‌ಟಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಖಾಸಗೀಕರಣದಿಂದಾಗಿ ಈ ಸಮುದಾಯದ ಉದ್ಯೋಗಿಗಳಿಗೆ ಕೆಲಸ ಕಳೆದುಕೊಳ್ಳುವ ಭೀತಿ ಎದುರಾಗಿದೆ.

ಈಗಾಗಲೇ 19 ಜಿಲ್ಲೆಗಳಲ್ಲಿ ಟಾಟಾ ಪವರ್ ಕಂಪನಿಗೆ ವಿದ್ಯುತ್ ಪೂರೈಕೆಯ ಜವಾಬ್ದಾರಿ ವಹಿಸಲು ಟೆಂಡರ್ ಕರೆಯಲಾಗಿದೆ. ರೈತರು, ಗ್ರಾಹಕರು ಮತ್ತು ಕೈಗಾರಿಕಾ ಉದ್ಯಮಿಗಳು ಜೂ.26ರೊಳಗೆ ಅರ್ಜಿ ಸಲ್ಲಿಸದಿದ್ದರೆ, ಮುಂದೆ ಸರ್ಕಾರದಿಂದ ವಿದ್ಯುತ್ ಸೌಲಭ್ಯ ಸಿಗುವುದಿಲ್ಲ ಮತ್ತು ಪವರ್ ಕಟ್ ಮಾಡುತ್ತಾರೆ. ರೈತರ ಪಂಪ ಸೆಟ್‌ಗಳಿಗೆ 10 ಎಚ್‌ಪಿ ವರೆಗೆ ಉಚಿತ ವಿದ್ಯುತ್ ಪೂರೈಕೆ ಮುಂದುವರೆಸಬೇಕು ಟಿಸಿ ಸುಟ್ಟರೆ ತಕ್ಷಣ 25000 ರೂ. ತುಂಬಿಸಿಕೊಂಡು ಕೊಡುವ ವ್ಯವಸ್ಥೆ ಹಿಂದಿನ ಬಿಜೆಪಿ ಸರ್ಕಾರ್ ಜಾರಿಗೆ ತಂದು ರೈತರಿಗೆ ಅನುಕೂಲ ಮಾಡಿತ್ತು. ಆದರೆ ಇಂದಿನ ಸರ್ಕಾರ ಒಂದು ಟಿಸಿ ಸುಟ್ಟರೆ ಎರಡೂವರೆಯಿಂದ ಮೂರು ಲಕ್ಷ ಹಣ ತುಂಬಿಸಿಕೊಂಡು ಟಿಸಿ ಕೊಡುವ ವ್ಯವಸ್ಥೆ ಜಾರಿಗೆ ತಂದು ರೈತರನ್ನು ಸಂಕಷ್ಟಕ್ಕೆ ದೂಡಿದೆ ಎಂದರು.



ಶಾಸಕ ಸಿದ್ದು ಸವದಿ ಮಾತನಾಡಿ, ಸರ್ಕಾರದ ವಿದ್ಯುತ್ ಖಾಸಗೀಕರಣ ನೀತಿಯನ್ನು ತೀವ್ರ ಖಂಡಿಸಿದರು. ಖಾಸಗೀಕರಣದಿಂದಾಗಿ ವಿದ್ಯುತ್ ದರಗಳು ಹೆಚ್ಚಾಗಬಹುದು ಮತ್ತು ಇದು ನೇರವಾಗಿ ರೈತರ ಮೇಲೆ ಆರ್ಥಿಕ ಹೊರೆ ಬೀಳುತ್ತದೆ ಎಂದರು.

ಧರೆಪ್ಪ ಸಾಂಗ್ಲಿಕರ್ ಆತ್ಮಹತ್ಯೆ ಮತ್ತು ಸಾಲದ ಸುಳಿ ಬೆಳೆಗಳಿಗೆ ಸರಿಯಾದ ಬೆಲೆ ಸಿಗದಿರುವುದರಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಸರ್ಕಾರದ ವಿದ್ಯುತ್ ಖಾಸಗೀಕರಣದ ನಿರ್ಧಾರವು ರೈತರನ್ನು ಮತ್ತಷ್ಟು ಸಾಲದ ಸುಳಿಗೆ ತಳ್ಳುತ್ತದೆ. ಆಹಾರ ಭದ್ರತೆಯ ಆತಂಕ ಒಂದು ವೇಳೆ ವಿದ್ಯುತ್ ಇಲ್ಲದೆ ಹೋದರೆ ಒಕ್ಕಲುತನ ನಿಂತುಹೋದರೆ, ದೇಶದಲ್ಲಿ ಆಹಾರ ಭದ್ರತೆ ಕಲ್ಪಿಸಲು ಸಾಧ್ಯವಾಗುವುದಿಲ್ಲ, ಕೇವಲ ಮಳೆಯಾಶ್ರಿತ ಬೆಳೆಗಳನ್ನು ಮಾತ್ರ ಬೆಳೆಯುವುದರಿಂದ ಹೆಚ್ಚುತ್ತಿರುವ ಜನಸಂಖ್ಯೆಗೆ ತಕ್ಕಂತೆ ಆಹಾರವನ್ನು ಬೆಳೆಯಲು ಸಾಧ್ಯವಿಲ್ಲ ಎಂದರು.

ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಬಸನಗೌಡ ಪಾಟೀಲ, ಜಿಪಂ ಮಾಜಿ ಅಧ್ಯಕ್ಷ ಮಹಾಂತೇಶ ಹಿಟ್ಟಿನಮಠ, ಮಹಾಲಿಂಗಪ್ಪ ಕೋಳಿಗುಡ್ಡ,ಶಂಕರಗೌಡ ಪಾಟೀಲ, ಅಶೋಕಗೌಡ ಪಾಟೀಲ, ಅನಂತ ಘೋರ್ಪಡೆ, ರಾಜು ಯಡಹಳ್ಳಿ, ಶಿವನಗೌಡ ನಾಡಗೌಡ,ಶೇಖರ ಅಂಗಡಿ, ಶಿವಾನಂದ ಅಂಗಡಿ, ಜಿ.ಎಸ್.ಗೊಂಬಿ, ಮನೋಹರ ಶಿರೋಳ, ಈಶ್ವರ ಮಠಪತಿ ಈರಪ್ಪ ದಿನ್ನಿಮನಿ, ಭೀಮಶಿ ಗೌಂಡಿ, ವಿಜಯ ಸಬಕಾಳೆ, ಶಿವಲಿಂಗ ಘಂಟಿ, ಶಿವಬಸು ಗೌಂಡಿ, ಅರ್ಜುನ ಮೋಪಗಾರ, ಶಂಕರ ಜಂಬಗಿ, ಮಹಾದೇವ ಮೇರಾಪಟ್ಟಿ ಇದ್ದರು.

ಎಚ್.ಕೆ.ಪಾಟೀಲರಿಗೆ ಕಾನೂನು ಸಚಿವ ಸ್ಥಾನ ನೀಡಲು ಆಗ್ರಹ

ಬಾಗಲಕೋಟೆ: ಪಕ್ಷ ನಿಷ್ಠೆ, ಕಾಂಗ್ರೆಸ್ ಪಕ್ಷದ ಹಿರಿಯ ಶಾಸಕರು ಹಾಗೂ ವಹಿಸಿದ ಸಚಿವ ಸ್ಥಾನದ ಖಾತೆಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಿರುವುದರಿಂದ ಮತ್ತೊಮ್ಮೆ ಎಚ್.ಕೆ.ಪಾಟೀಲರಿಗೆ ಕಾನೂನು ಮತ್ತು ಸಂಸದೀಯ ಖಾತೆಯ ಸಚಿವರನ್ನಾಗಿ ಮಾಡಬೇಕು ಎಂದು ನ್ಯಾಯವಾದಿ ಎಸ್.ಎಚ್.ಗೌಡರ ಒತ್ತಾಯಿಸಿದರು.

ನವನಗರದ ಪತ್ರಿಕಾಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಚ್.ಕೆ.ಪಾಟೀಲರ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನ್ಯಾಯಾಂಗ ಇಲಾಖೆಯಲ್ಲಿ ತಿದ್ದುಪಡಿ ತರುವ ಮೂಲಕ ಶೀಘ್ರ ನ್ಯಾಯ ದೊರಕಿಸಿ ಕೊಡಲು ಸರಳೀಕರಣ ಮಾಡಿರುವುದು ಹಾಗೂ ನ್ಯಾಯಾಂಗ ಇಲಾಖೆಗೆ ಮೂಲ ಸೌಲಭ್ಯ ಕಲ್ಪಿಸಿರುವುದು ಮತ್ತು ತಮಗೆ ವಹಿಸಿರುವ ಜವಾಬ್ದಾರಿ ಪ್ರಾಮಾಣಿಕವಾಗಿ ನಿರ್ವಹಿಸಿರುವುದರಿಂದ ಸಚಿವ ಸ್ಥಾನ ನೀಡುವುದು ಸೂಕ್ತ ಎಂದರು. ನ್ಯಾಯವಾದಿ ಪ್ರಮೋದ ಶಿವನಗೌಡ ಮಾತನಾಡಿ, ಎಚ್.ಕೆ.ಪಾಟೀಲರು ಗ್ರಾಮೀಣಾಭಿವೃದ್ಧಿ ಇಲಾಖೆ ಸಚಿವರಾಗಿದ್ದ ಸಂದರ್ಭದಲ್ಲಿ ಪ್ರತಿಯೊಂದು ಹಳ್ಳಿಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಮಾಡುವ ಮೂಲಕ ಜನರಿಗೆ ಶುದ್ಧ ನೀರು ಪೂರೈಕೆಯಾಗುವಂತೆ ಮಾಡಿದರು. ಪ್ರವಾಸೋದ್ಯಮ ಸಚಿವ ರಾಗಿದ್ದಾಗ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿರುವುದು, ಮುಳಗಡೆ ಸಂತ್ರಸ್ತರ ಪರ ಕೆಲಸ ಮಾಡಿದ್ದಾರೆ ಎಂದರು.

ನ್ಯಾಯವಾದಿ, ಕಾಂಗ್ರೆಸ್ ಮುಖಂಡ ರಮೇಶ ಬದ್ನೂರ ಮಾತನಾಡಿ, ಯಾವತ್ತೂ ಗುಂಪುಕಟ್ಟಿಕೊಂಡು ಸಚಿವ ಸ್ಥಾನ ನೀಡಬೇಕು ಎಂದು ಎಚ್.ಕೆ.ಪಾಟೀಲರು ಕೇಳಿಕೊಂಡವರಲ್ಲ, ಪಕ್ಷ ನಿಷ್ಠೆ, ಪಕ್ಷದ ಸಂಘಟನೆಯಲ್ಲಿ ತೊಡಗಿಕೊಳ್ಳುವ ನಾಯಕರಾಗಿದ್ದಾರೆ. ಇತ್ತೀಚಿಗೆ ಪಕ್ಷದ ನಿಷ್ಠೆಗೆ ಆದ್ಯತೆ ನೀಡುತ್ತಿಲ್ಲ, ಇಂತಹ ಹಿರಿಯ ಶಾಸಕರಿಗೆ ಸಚಿವ ಸ್ಥಾನ ನೀಡಿದರೆ ಮಂತ್ರಿ ಮಂಡಲಕ್ಕೂ ಗೌರವ ಹೆಚ್ಚಲಿದೆ ಎಂದು ಹೇಳಿದರು.

ನ್ಯಾಯವಾದಿ ಸುನೀಲ ಕಿರಸೂರ ಮಾತನಾಡಿ, ಎಲ್ಲಿಯೂ ಅವರ ಮೇಲೆ ಕಪ್ಪು ಚುಕ್ಕೆ ಇಲ್ಲ ಇಂತಹ ಹಿರಿಯ ಶಾಸಕರಿಗೆ ಸಚಿವ ಸ್ಥಾನ ನೀಡಬೇಕೆಂದರು. ನಿಂಗಣ್ಣ ಗೌಡರ, ಶಶಿಕಾಂತ ಪಾಟೀಲ, ತಿಪ್ಪಣ್ಣ ಪಿ.ಎಚ್.ಮಡಿವಾಳ ಇದ್ದರು.



ಕೃತಿಗಳ ಲೋಕಾರ್ಪಣೆ: ಪೂರ್ವಭಾವಿ ಬೈಠಕ್

ಮಹಾಲಿಂಗಪುರ: ಸಜ್ಜನ ಶಕ್ತಿಗಳು ಒಂದಾಗಬೇಕು; ಇಲ್ಲದಿದ್ದರೆ ದುರ್ಜನರು ಅಟ್ಟಹಾಸ ಮೆರೆಯುತ್ತಾರೆ. ಆ ನಿಟ್ಟಿನಲ್ಲಿ ಸಜ್ಜನರನ್ನು ಒಗ್ಗೂಡಿಸಿ ಸ್ವಸ್ಥ ಸಮಾಜ, ಸಮೃದ್ಧ ರಾಷ್ಟ್ರ ನಿರ್ಮಾಣಕ್ಕೆ ಡಾ.ಬಾಬು ಕೃಷ್ಣಮೂರ್ತಿ ಹಾಗೂ ಬೇಳೂರು ಸುದರ್ಶನ ಅವರು ಬರೆದ 'ಅವಿಶ್ರಾಂತ ಧ್ಯೇಯಜೀವಿ ವೈ.ಚ.ಜಯದೇವ: ಬದುಕು–ನೆನಪು' ಹಾಗೂ ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ನಾಡೋಜ ಡಾ.ಎಸ್.ಆರ್.ರಾಮಸ್ವಾಮಿ ಅವರು ಬರೆದ 'ಇತಿಹಾಸದ ಸೆರಗು' ಕೃತಿಗಳ ಲೋಕಾರ್ಪಣಾ ಕಾರ್ಯಕ್ರಮ ದಾರಿದೀಪವಾಗಲಿದೆ ಎಂದು ರಾಷ್ಟ್ರೋತ್ಥಾನ ಪರಿಷತ್ ಪ್ರಶಿಕ್ಷಣ ಭಾರತಿ ರಾಜ್ಯ ಸಂಚಾಲಕ ಬಸವರಾಜ ಟಿ.ಎಸ್. ಹೇಳಿದರು.

ರಾಷ್ಟ್ರ ಪ್ರಶಸ್ತಿ ಪುರಸ್ಕೃತೆ, ಪ್ರಶಿಕ್ಷಣ ಭಾರತಿ ಸಂಪನ್ಮೂಲ ವ್ಯಕ್ತಿ ಡಾ.ಸಪನಾ ಅನಿಗೋಳ ಅವರ ನಿವಾಸದಲ್ಲಿ ರಾಷ್ಟ್ರೋತ್ಥಾನ ಪರಿಷತ್ ಬೆಂಗಳೂರು ಪ್ರಶಿಕ್ಷಣ ಭಾರತಿ ಬಾಗಲಕೋಟೆ ಜಿಲ್ಲೆ ವತಿಯಿಂದ ನಡೆದ ಪುಸ್ತಕ ಬಿಡುಗಡೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರು ಹಾಗೂ ರಾಷ್ಟ್ರೋತ್ಥಾನ ಪರಿಷತ್ತನ್ನು ಕಟ್ಟಿ ಬೆಳೆಸಿದವರು, ವ್ಯವಸ್ಥಾಕುಶಲರೂ, ಅಸಾಮಾನ್ಯ ದಕ್ಷರೂ, ಸಂಘಟನೆಯ ರೂವಾರಿಗಳು ಆಗಿ ಒಂದು ಜೀವನ ಒಂದು ಧ್ಯೇಯಾನುಸಂಧಾನ ಎಂಬ ಸೂತ್ರವನ್ನು ಜೀವನದುದ್ದಕ್ಕೂ ಪಾಲಿಸುತ್ತಾ ತಮ್ಮ ದೂರದರ್ಶಿ ಚಿಂತನೆ ಮತ್ತು ರಾಷ್ಟ್ರ ನಿಷ್ಠ ಕರ್ತವ್ಯ ಪ್ರಜ್ಞೆ, ಕಠಿಣ ಪರಿಶ್ರಮದ ಮೂಲಕ ಸ್ವಸ್ಥ ಸಮಾಜ ನಿರ್ಮಾಣದ ವಿವಿಧ ಕ್ಷೇತ್ರಗಳಲ್ಲಿ ರಾಷ್ಟ್ರೋತ್ಥಾನ ಪರಿಷತ್ ಸ್ಥಿರ ಹೆಜ್ಜೆಗಳನ್ನಿಟ್ಟು ಮುನ್ನಡೆಯಲು ಕಾರಣೀಭೂತರಾದವರು ಎಂದರು. ವಿಭಾಗ ಸಂಯೋಜಕ ಶ್ರೀನಿವಾಸ ಪಾಟೀಲ, ಜಿಲ್ಲಾ ಸಂಯೋಜಕ ಹನುಮಂತ ನಾಗರಾಳ, ರಾಷ್ಟ್ರೋತ್ಥಾನ ಪರಿಷತ್ ಜಿಲ್ಲಾ ಸಹ ಸಂಚಾಲಕ ನಾರನಗೌಡ ಉತ್ತಂಗಿ, ಸಂಪನ್ಮೂಲ ವ್ಯಕ್ತಿಗಳಾದ ಡಿ.ವಿ.ಹಿರೇಮಠ, ಡಾ.ಸಪನಾ ಅನಿಗೋಳ, ಪ್ರೊ.ಶಿವಲಿಂಗ ಸಿದ್ನಾಳ, ಪ್ರೀತಿ ಕಲ್ಯಾಣಿ ಮುಖಂಡರಾದ ಶಂಕರಗೌಡ ಪಾಟೀಲ, ಮಲ್ಲು ದಲಾಲ, ರವಿ ಜವಳಗಿ, ಮಹಾಲಿಂಗಪ್ಪ ಕಂಕಣವಾಡಿ, ಆನಂದ ಶಿರಹಟ್ಟಿ, ಶಶಿಧರ ಉಳ್ಳಾಗಡ್ಡಿ, ವೇಮನ ಗಿರೆಡ್ಡಿ, ಅಜ್ಜಪ್ಪ ಕುಲಗೋಡ, ಶಿವಾನಂದ ಹ್ಯಾಗಾಡಿ, ರಾಘು ಗರಗಟ್ಟಿ, ಎಸ್.ಬಿ.ಮಟಗಾರ, ಪೂರ್ಣೇಶ ಮಠಪತಿ, ದಾಕ್ಷಾಯಿಣಿ ಮಂಡಿ, ದಾಕ್ಷಾಯಿಣಿ ಢಪಳಾಪುರ, ಮಹಾದೇವಿ ಹುಕ್ಕೇರಿ, ಸುಜಾತ, ಶಕುಂತಲಾ ತೇರದಾಳ, ಶಶಿಕಲಾ ಅವರಾದಿ, ಸರೋಜಾ ಶಿರೋಳ, ರಂಜನಾ ವಜ್ರಮಟ್ಟಿ ಇತರರಿದ್ದರು.



ಡಾ.ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್ ತಾಲೂಕು ಅಧ್ಯಕ್ಷರಾಗಿ ಕುಲಕರ್ಣಿ ನೇಮಕ

ಮುಧೋಳ: ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ರಾಷ್ಟ್ರೀಯ ಟ್ರಸ್ಟ್‌ನ ಮುಧೋಳ ತಾಲೂಕು ಅಧ್ಯಕ್ಷರಾಗಿ ಹಿರಿಯ ಪತ್ರಕರ್ತ ಅಶೋಕ ಕುಲಕರ್ಣಿ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದೆ. ಟ್ರಸ್ಟ್‌ನ ರಾಜ್ಯ ಗೌರವ ಅಧ್ಯಕ್ಷ ಇಳಕಲ್ ಚಿತ್ತರಗಿಯ ವಿಜಯಮಹಾಂತೇಶ್ವರ ಸಂಸ್ಥಾನಮಠದ ಗುರುಮಹಾಂತ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಟ್ರಸ್ಟ್ ರಾಜ್ಯ ಅಧ್ಯಕ್ಷ ಡಾ.ಬಿ.ಎಂ.ಪಾಟೀಲ ಹಾಗೂ ಜಿಲ್ಲಾ ಅಧ್ಯಕ್ಷ ಮಹಾಂತೇಶ ಗಜೇಂದ್ರಗಡ ಅವರು ವಿತರಿಸಿ ಸನ್ಮಾನಿಸಿದರು.

ನಂತರ ಶ್ರೀಮಠದಲ್ಲಿ ನಡೆದ ಸಭೆಯಲ್ಲಿ ಗುರುಮಹಾಂತ ಸ್ವಾಮಿಗಳು ಮಾತನಾಡಿ, ಬಸವಾದಿ ಶರಣರ ವಚನಗಳು ಪಠನವಾದರೆ ಮನುಷ್ಯನ ಬಾಳು ಬಂಗಾರವಾಗುವುದು. ಯುವಕರು ದುಶ್ಚಟಗಳನ್ನು ತಮ್ಮ ಜೋಳಿಗೆಗೆ ಹಾಕಿ ಸದ್ಗುಣಗಳ ಧೀಕ್ಷೆಯನ್ನು ಪಡೆಯಬೇಕು ತನ್ಮೂಲಕ ವ್ಯಸನಮುಕ್ತ ಜೀವನ ಸಾಗಿಸಿ ಸದೃಢ ಹಾಗೂ ಆರೋಗ್ಯವಂತ ಸಮಾಜ ನಿರ್ಮಿಸಬೇಕೆಂದು ಆಶೀರ್ವಚನ ನೀಡಿದರು. ಟ್ರಸ್ಟ್ ರಾಜ್ಯ ಅಧ್ಯಕ್ಷ ಡಾ.ಬಿ.ಎಂ.ಪಾಟೀಲ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾಧ್ಯಕ್ಷ ಮಹಾಂತೇಶ ಗಜೇಂದ್ರಗಡ ಮಾತನಾಡಿ, ಹಳಕಟ್ಟಿಯವರ ಜನ್ಮದಿನ ಜು.2ರಂದು ವಚನ ಸಾಹಿತ್ಯ ಸಂರಕ್ಷಣಾ ದಿನವನ್ನಾಗಿ ಆಚರಿಸಲು ಸರಕಾರ ಆದೇಶ ಮಾಡಿದೆ. ಆ ದಿನದಂದು ಎಲ್ಲ ತಾಲೂಕುಗಳಲ್ಲಿ ಕಾರ್ಯಕ್ರಮ ಮಾಡಿ ವಚನ ಸಾಧಕರನ್ನು ಗೌರವಿಸಬೇಕೆಂದು ಸೂಚಿಸಿದರು.



ಹುನಗುಂದ ಕ್ಷೇತ್ರದಲ್ಲಿ ಹಿಟ್ಲರ್ ಆಡಳಿತ: ದೊಡ್ಡನಗೌಡ ಆರೋಪ

ಇಳಕಲ್: ನಗರದಲ್ಲಿ ಹಲವಾರು ತಿಂಗಳುಗಳಿಂದ ಕುಡಿಯುವ ನೀರಿನ ಸರಬರಾಜಿನಲ್ಲಿ ತೊಂದರೆ ಆದ ಕಾರಣ ನಗರ ಸಭೆ ಆವರಣದ ಮುಂದೆ ಪ್ರತಿಭಟನೆಗಳು ನಡೆಯುತ್ತಿದ್ದವು. ಅದೇ ರೀತಿ ಲಕ್ಷ್ಮೀ ನಗರದ ಸಾರ್ವಜನಿಕರು ಪ್ರತಿಭಟನೆ ಮಾಡಿದ ಹಿನ್ನೆಲೆಯಲ್ಲಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆಂದು ನಗರಸಭೆ ಅಧಿಕಾರಿಗಳು ಸಾರ್ವಜನಿಕರ ಮೇಲೆ ಪ್ರಕರಣ ದಾಖಲು ಮಾಡಿದ್ದಾರೆ ಎಂದು ಮಾಜಿ ಶಾಸಕ ದೊಡ್ಡನಗೌಡ ಜಿ.ಪಾಟೀಲ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅಧಿಕಾರಿಗಳ ನಡೆ ಖಂಡಿಸಿ ಮಾತನಾಡಿದ ಅವರು,

ಸಾರ್ವಜನಿಕರು ನೀರು ಕೇಳುವುದೇ ತಪ್ಪಾ? ಸಾರ್ವಜನಿಕರ ಪ್ರತಿಭಟನೆಯ ಹಕ್ಕನ್ನು ಕಸಿದುಕೊಳ್ಳುತ್ತಿರುವ ಶಾಸಕರು ಹಾಗೂ ಅಧಿಕಾರಿಗಳಿಗೆ ಏನು ಹೇಳಬೇಕು ತಿಳಿಯದಾಗಿದೆ ಎಂದರು.ಸಾರ್ವಜನಿಕರು ಮತ್ತು ಮಹಿಳೆಯರು ಪೌರಾಕ್ಷರಿಗೆ ಮತ್ತು ಸಿಬ್ಬಂದಿಗಳಿಗೆ ಕ್ಷಮೆ ಕೇಳಿದರು ಕ್ಷಮಿಸದೆ ಶಾಸಕರ ಕುಮ್ಮಕ್ಕನಿಂದ ಪೌರಾಯುಕ್ತರು ಕೇಸ್ ದಾಖಲು ಮಾಡಿರುವುದು ದುರಾಡಳಿತದ ಪರಮಾವಧಿ ಎಂದರು.



ಹುನಗುಂದ ಮತಕ್ಷೇತ್ರದಲ್ಲಿ ಲೋಕಾಯುಕ್ತರು ಮರಳು ಅಡ್ಡಗಳ ಮೇಲೆ ದಾಳಿ ಮಾಡಿದಾಗ ಇದರ ಕುರಿತು ಮಾಧ್ಯಮದವರು ಪ್ರಶ್ನೆ ಮಾಡಿದಾಗ ಕಳ್ಳರು ನೆನೆಯುತ್ತಾರೆ. ಅದಕ್ಕೂ ನಮಗೂ ಸಂಬಂಧವಿಲ್ಲ ಎಂಬಂತೆ ಜಾರಿಕೆ ಉತ್ತರ ನೀಡುತ್ತಾರೆ. ಆದರೆ ಇವರ ಕುಮಕಿನಿಂದಲೇ ನಡೆಯುತ್ತಿವೆ ಹೀಗಾಗಿ ಕ್ಷೇತ್ರದಲ್ಲಿ ಅಭಿವೃದ್ಧಿ ಮರೀಚಿಕೆಯಾಗಿದೆ ಎಂದರು.ನಗರಸಭೆ ಮಾಜಿ ಅಧ್ಯಕ್ಷೆ ಶೋಭಾ ಆಮದಿಹಾಳ, ಮುಖಂಡರಾದ ಗುರಂ ಲಕ್ಷ್ಮಣ,ಇಳಕಲ್ ತಾಲೂಕ ಸಹಕಾರ ಭಾರತಿ ಅಧ್ಯಕ್ಷ ಚಂದ್ರಶೇಖರ ಏಕಕೋಟೆ, ಸೂಳಪ್ಪ ಇಂಡಿ, ನಗರಸಭೆ ಸದಸ್ಯ ಸುಗುರೇಶ ನಾಗಲೋಟಿ,ಸಂತೋಷ ಸಂತೋಷ ಐಲಿ, ಗುರುಧತ್ತಾತ್ರೆಯಗೂಳೆದ,ಉಮೇಶ್‌ಕೊಂಗಾರಿ ಮತ್ತು ಕಪಿಲ ಪವಾರ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಕ್ರೀಡಾಸಕ್ತಿಗೆ ಆದ್ಯತೆ: ಸಜ್ಜನ

ಬಾಗಲಕೋಟೆ: ನಗರದ ಪ್ರತಿಷ್ಠಿತ ಬಿವಿವಿ ಸಂಘದ ಫಿಜಿಯೋಥೆರಪಿ ಕಾಲೇಜಿನ ವಿದ್ಯಾರ್ಥಿಗಳು ಉತ್ತರ ಕರ್ನಾಟಕದ ಅಂತರ್ ಕಾಲೇಜುಗಳ ಕ್ರೀಡಾಕೂಟದಲ್ಲಿ ಭಾಗವಹಿಸಿ ವಿಜೇತರಾಗಿದ್ದು ಹೆಮ್ಮೆಯ ವಿಷಯ. ಕಾರ್ಯಾಧ್ಯಕ್ಷ ಡಾ.ವೀರಣ್ಣ ಸಿ.ಚರಂತಿಮಠ ಅವರು ಶಿಕ್ಷಣ ಸಂಸ್ಥೆಗಳಲ್ಲಿ ಓದಿನ ಜೊತೆಗೆ ಕ್ರೀಡಾ ಚಟುವಟಿಕೆಗಳಿಗೂ ಆದ್ಯತೆ ನೀಡಲು ಅಗತ್ಯ ಸೌಲಭ್ಯಗಳನ್ನು ಒದಗಿಸಿದ ಪರಿಣಾಮ ಕ್ರೀಡಾ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಸಾಧನೆ ಮಾಡಲು ಅನುಕೂಲವಾಗಿದೆ ಎಂದು ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಂ.ಸಜ್ಜನ (ಬೇವೂರ) ಹೇಳಿದರು.

ಕ್ರೀಡಾಕೂಟದಲ್ಲಿ ವಿಜೇತರಾದ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ಅವರು, ಬಿವಿವಿ ಸಂಘದ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಕ್ರೀಡೆಗಳ ಕುರಿತು ತರಬೇತಿ ನೀಡಲು ಅತ್ಯುತ್ತಮ ದೈಹಿಕ ನಿರ್ದೇಶಕರಿದ್ದಾರೆ. ಕ್ರೀಡಾಂಗಣ ವ್ಯವಸ್ಥೆ ಕೂಡ ಇದೆ. ಇಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಈಗಾಗಲೇ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಸಾಧನೆ ಮಾಡಿರುವರು. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಕ್ರೀಡಾ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ಹೇಳಿದರು.

ಮೊ.12, 13ರಂದು ಎಸ್‌ಡಿಎಂ ಫಿಜಿಯೋಥೆರಪಿ ಕಾಲೇಜ್ ಧಾರವಾಡ ಆಯೋಜಿಸಿದ್ದ ಉತ್ತರ ಕರ್ನಾಟಕದ ಫಿಜಿಯೋಥೆರಪಿ ಅಂತರ್ ಕಾಲೇಜುಗಳ ಸೆಟಲ್ ಬ್ಯಾಡ್‌ಮಿಂಟನ್ ಕ್ರೀಡಾಕೂಟದಲ್ಲಿ ಬಿವಿವಿಎಸ್ ಫಿಜಿಯೋಥೆರಪಿ ಕಾಲೇಜಿನ ವಿದ್ಯಾರ್ಥಿಗಳಾದ ಜೆಯೇಶ್, ಶ್ರೈಲಿ, ಯಾಸೀನ್, ಅಭಯ, ಸಿಮ್ರಾನ್ ಭಾಗವಹಿಸಿ ಪುರುಷ ಸಿಂಗಲ್ಸ್ ವಿಭಾಗದಲ್ಲಿ ಜೆಯೇಶ್ ಪ್ರಥಮ ಸ್ಥಾನ ಮತ್ತು ಡಬಲ್ಸ್‌ನಲ್ಲಿ ಜೆಯೇಶ್ ಮತ್ತು ಯಾಸೀನ್ ದ್ವಿತೀಯ ಸ್ಥಾನ ಪಡೆದಿರುವರು.

ಮೆಡಿಕಲ್ ಕಾಲೇಜ್ ಪ್ರಾಚಾರ್ಯ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಉಪಪ್ರಾಚಾರ್ಯ ಡಾ.ಸಿಎಸ್.ಹಿರೇಮಠ, ಫಿಜಿಯೋಥೆರಪಿ ಕಾಲೇಜಿನ ಪ್ರಾಚಾರ್ಯ ಡಾ.ಮಹಾಂತೇಶ ಬಿರಡಿ, ಪ್ರಾಧ್ಯಾಪಕಿ ಡಾ.ಸುಚಿತ್ರಾ ವನಕಿ ಮತ್ತು ದೈಹಿಕ ನಿರ್ದೇಶಕ ಡಾ.ವಿಜಯಕುಮಾರ ಹಿರೇಮಠ ಉಪಸ್ಥಿತರಿದ್ದರು.



ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಮುಧೋಳ: ತಾಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಿ ಸಂಘ ಇದರ ಆಡಳಿತ ಮಂಡಳಿ ಅಧ್ಯಕ್ಷರಾಗಿ ಬಿಜೆಪಿ ವಿವೇಕ ಕಕರೆಡ್ಡಿ ಉಪಾಧ್ಯಕ್ಷರಾಗಿ ದ್ಯಾವಪ್ಪ ನಾಯಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನೂತನ ಅಧ್ಯಕ್ಷ ವಿವೇಕ ಕಕರಡ್ಡಿ ಸನ್ಮಾನ ಸ್ವೀಕರಿಸಿ ಮಾತನಾಡಿ, ನಮ್ಮ ಗೆಲುವಿನಲ್ಲಿ ತಾಲೂಕಿನ ಪ್ರತಿಯೊಬ್ಬ ನಾಯಕರ ಹಾಗೂ ಕಾರ್ಯಕರ್ತರ ಪ್ರಾಮಾಣಿಕ ಪ್ರಯತ್ನದಿಂದಾಗಿ ನಾವು ಗೆಲ್ಲಲು ಸಾಧ್ಯವಾಗಿದೆ ಈ ಗೆಲುವು ಕಾರ್ಯಕರ್ತರಿಗೆ ಅರ್ಪಿಸುತ್ತೇವೆ ಎಂದು ತಿಳಿಸಿದರು. ನೂತನ ಟಿಎಪಿಸಿಎಂಎಸ್ ನಿರ್ದೇಶಕ ಮಂಜುನಾಥ ಆರಳಿಕಟ್ಟಿ ಮಹಾಲಿಂಗಪ್ಪ ಸನದಿ, ಮಾರುತಿ ರಂಗಣ್ಣವರ, ಸಂತೋಷ ಪಾಟೀಲ, ಹನುಮಂತಗೌಡ ಪಾಟೀಲ, ಶ್ರೀಶೈಲ ಗೊರವ, ಅಜಿತ್ ಪಾಟೀಲ, ಆಶಾ ಉದಪುಡಿ, ಹೇಮಾ ಲಕ್ಷಾನಿ, ತಿರುಪತಿ ಬಂಡಿವಡ್ಡರ, ಬಿಜೆಪಿ ಗ್ರಾಮೀಣ ಮಂಡಲದ ಅಧ್ಯಕ್ಷ ಸಂಗನಗೌಡ ಕಾತರಕಿ, ನಗರ ಮಂಡಲ ಅಧ್ಯಕ್ಷ ಕರಬಸಯ್ಯ ಹಿರೇಮಠ, ಬಿಜೆಪಿ ಮುಖಂಡರಾದ ಕಲ್ಲಪ್ಪ ಸಬರದ, ಕೆ.ಆರ್.ಮಾಚಪ್ಪನವರ, ಲಕ್ಷ್ಮಣ ಚಿನ್ನನ್ನವರ, ದರೆಪ್ಪ ಸಾಂಗ್ಲಿಕರ, ಬಸವರಾಜ ಮಳಲಿ, ಡಾ.ರವಿ ನಂದಗಾವ, ಭೀಮನಗೌಡ ಪಾಟೀಲ, ಗಿರೀಶ ಮೋದಿ, ಗುರುಪಾದಪ್ಪ ಕುಳಲಿ, ಶ್ರೀಶೈಗೌಡ ಪಾಟೀಲ, ಪ್ರದೀಪ ನಿಂಬಾಳಕರ, ಹೊಳಬಸು ಕಾಜಗಾರ, ಅರುಣ ಮುಧೋಳ, ಅನುಪ್ ಚೌಹಾನ ಸೇರಿದಂತೆ ಕಾರ್ಯಕರ್ತರು ಇದ್ದರು.



ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ

ಲೋಕಾಪುರ: ಒಬ್ಬ ವ್ಯಕ್ತಿ ದೇಹತ: ನಮ್ಮೊಂದಿಗೆ ಇರದಿದ್ದರೂ, ಅವರ ನೆನಪುಗಳು ಮತ್ತು ಅವರು ಬಿತ್ತಿದ ಮಾನವೀಯತೆಯ ಮೌಲ್ಯಗಳು ಸದಾ ಜೀವಂತವಾಗಿರುತ್ತವೆ ಎಂದು ಶಾಲಾ ಮುಖ್ಯ ಶಿಕ್ಷಕ ವಿ.ಎ.ವರ್ಚಗಲ್ ಹೇಳಿದರು.

ಸಮೀಪದ ಪೆಟ್ಲೂರ ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಅಕಾಲಿಕವಾಗಿ ಅಗಲಿದ ದಿ.ಪೂಜಾ ಬಿಲ್ಲಾರ ಅವರ ದ್ವಿತೀಯ ಪುಣ್ಯಸ್ಮರಣೆಯ ಅಂಗವಾಗಿ ಪೂಜಾ ಬಿಲ್ಲಾರ ಫೌಂಡೇಶನ ವತಿಯಿಂದ 300 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸುಮಾರು ರೂ. 50,000 ಮೌಲ್ಯದ ನೋಟಬುಕ್ ಮತ್ತು ಪೆನ್ನುಗಳನ್ನು ವಿತರಿಸಿ ಮಾತನಾಡಿದರು.ಸಾಮಾಜಿಕ ಹೋರಾಟಗಾರ ಯಲ್ಲಪ್ಪ ಹೆಗಡೆ ಮಾತನಾಡಿ, ಸಮಾಜದಲ್ಲಿ ಸಿರಿವಂತರು ಮತ್ತು ಬಡವರ ನಡುವೆ ಅಂತರ ಹೆಚ್ಚುತ್ತಲೇ ಇದೆ, ಗ್ರಾಮ ರಾಜ್ಯದ ಕನಸು ನನಸಾಗಿಲ್ಲ, ಸರ್ವರಿಗೂ ಸಮಬಾಳು, ಸರ್ವರಿಗೆ ಸಮಪಾಲು ಎಂಬ ಗಾಂಧೀಜಿ ಕಂಡು ಕನಸು ನನಸಾಗಿಲ್ಲ, ಶಿಕ್ಷಣದಿಂದ ಮಾತ್ರ ಸಮಾಜಕ್ಕೆ ಅಂಟಿರುವ ಅಸ್ಪೃಶ್ಯತೆ, ಜಾತೀಯತೆ ಮೌಢ್ಯತೆ ಇತರೆ ಪಿಡುಗುಗಳನ್ನು ತೊಲಗಿಸಲು ಸಾಧ್ಯ. ಬಡ ಮಕ್ಕಳ ಬಾಳಿಗೆ ನೀವು ನೀಡುವ ಸಹಾಯ ದಾರಿದೀಪವಾಗುತ್ತದೆ ಎಂದರು.

ಸಮೂಹ ಸಂಪನ್ಮೂಲ ವ್ಯಕ್ತಿ ಎನ್.ಟಿ.ಬಿರಾದಾರ ಮಾತನಾಡಿ, ಒಬ್ಬ ವ್ಯಕ್ತಿಯ ಜೀವನದ ನಿಜವಾದ ಅರ್ಥ ಅವರು ಬದುಕಿದ ವರ್ಷಗಳಲ್ಲಿ ಅಲ್ಲ, ಅವರು ಬಿಟ್ಟು ಹೋದ ಒಳ್ಳೆಯ ನೆನಪುಗಳು ಮತ್ತು ಸಮಾಜದ ಮೇಲೆ ಬೀರಿದ ಪ್ರಭಾವದಲ್ಲಿದೆ, ದಿಪೂಜಾ ಬಿಲ್ಲಾರ ಅವರ ನೆನಪುಗಳು ಸದಾ ಜನಮನದಲ್ಲಿ ಜೀವಂತವಾಗಿರಲಿ ಎಂದು ಪ್ರಾರ್ಥಿಸಿದರು.

ಪೂಜಾ ಬಿಲ್ಲಾರ ಫೌಂಡೇಶನ್‌ದ ಮುತ್ತು ಬಿಲ್ಲಾರ, ಸಮೂಹ ಸಂಪನ್ಮೂಲ ವ್ಯಕ್ತಿ ಎನ್.ಟಿ.ಬಿರಾದಾರ ಪಾಟೀಲ, ಸಾಮಾಜಿಕ ಹೋರಾಟಗಾರ ಯಲ್ಲಪ್ಪ ಹೆಗಡೆ, ಶಿವು ನಿಂಗನೂರ, ಲಕ್ಷ್ಮಣ ಮಸಗುಪ್ಪಿ, ಭೀಮಶಿ ಕಿಲಾರಿ, ಕೃಷ್ಣಾ ಮುಧೋಳ, ಹಣಮಂತ ಬಿಲ್ಲಾರ, ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರು, ವಿದ್ಯಾರ್ಥಿಗಳು ಇದ್ದರು.



ಕಿರುಸುದ್ದಿ

ಆರ್‌ಎಸ್‌ಎಸ್ ವಿರುದ್ಧ ಹೇಳಿಕೆ ಖಂಡನೀಯ

ಸಿಂದಗಿ: ಆರ್‌ಎಸ್‌ಎಸ್ ದೇಶದ ಸಂಸ್ಕೃತಿ ಮತ್ತು ರಾಷ್ಟ್ರೀಯತೆ ಎತ್ತಿ ಹಿಡಿಯುವ ಶಿಸ್ತಿನ ದೇಶಭಕ್ತ ಸಂಘಟನೆ. ಇಂತಹ ಸಂಘಟನೆಯ ವಿರುದ್ಧ ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರು ಸತತವಾಗಿ ಬೇಜವಾಬ್ದಾರಿ ಹೇಳಿಕೆ ನೀಡುತ್ತಿರುವುದು ಖಂಡನೀಯ ಎಂದು ಸಿಂದಗಿ ಮತಕ್ಷೇತ್ರದ ಬಿಜೆಪಿ ಮುಖಂಡ ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ ಹೇಳಿದರು. ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ಸಚಿವ ಪ್ರಿಯಾಂಕ್ ಖರ್ಗೆ ಅವರೇ ಆರ್‌ಎಸ್‌ಎಸ್ ಎಂದು ದಿನ ಬೆಳಗಾದರೆ ಜಪ ಮಾಡುವುದನ್ನು ಬಿಟ್ಟು, ರಾಜ್ಯದ ಅಭಿವೃದ್ಧಿ ಹಾಗೂ ತಮ್ಮ ಇಲಾಖೆಯ ಕಾರ್ಯಗಳೆಡೆಗೆ ನಿಮ್ಮ ಚಿತ್ತವಿರಲಿ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ಮುಚ್ಚಿಹಾಕಲು ಸಚಿವರು ದಿನಬೆಳಗಾದರೆ ಆರ್‌ಎಸ್‌ಎಸ್ ಜಪ ಮಾಡುತ್ತಿದ್ದಾರೆ. ದೇಶಪ್ರೇಮ ಬಿತ್ತುತ್ತಿರುವ ಸಂಘಟನೆಯನ್ನು ಟೀಕಿಸುವ ಮೊದಲು, ಖರ್ಗೆ ಅವರು ತಮ್ಮ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಲಿ. ಸಚಿವರ ಇಂತಹ ಸಮಾಜ ಒಡೆಯುವ ಹೇಳಿಕೆಗಳನ್ನು ಸಿಂದಗಿ ಕ್ಷೇತ್ರದ ಬಿಜೆಪಿ ತೀವ್ರವಾಗಿ ಖಂಡಿಸುತ್ತದೆ. ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಧೈರ್ಯವಿದ್ದರೆ ತಮ್ಮ ಸರ್ಕಾರದ ಸಾಧನೆಗಳ ಮೇಲೆ ರಾಜಕಾರಣ ಮಾಡಲಿ. ಅದನ್ನು ಬಿಟ್ಟು ಆರ್‌ಎಸ್‌ಎಸ್ ಸಂಘಟನೆಯನ್ನು ಗುರಿಯಾಗಿಸಿಕೊಂಡು ಹೈಕಮಾಂಡ್ ಮನವೊಲಿಸುವ ರಾಜಕಾರಣ ಮಾಡುವುದನ್ನು ಬಿಡಿ. ಆರ್‌ಎಸ್‌ಎಸ್ ಯಾವುದೇ ನೋಂದಣಿ ಇಲ್ಲದ ಸಂಸ್ಥೆ ಎಂದು ಸಚಿವರು ಪತ್ರ ಬರೆಯುತ್ತಿರುವುದು ಅವರ ಅಜ್ಞಾನವನ್ನು ತೋರಿಸುತ್ತದೆ. ಸಂಘಟನೆಯು ದೇಶದ ವಿಪತ್ತುಗಳ ಸಮಯದಲ್ಲಿ ಯಾವುದೇ ಫಲಾಪೇಕ್ಷವಿಲ್ಲದೇ ಅಪಾಯದ ಅಂಚಿನಲ್ಲಿರುವ ಜನರಿಗೆ ನೇರವಾಗಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ಸಚಿವರು ಇಂತಹ ಲಘು ಹೇಳಿಕೆಗಳನ್ನು ನೀಡುವುದನ್ನು ಬಿಟ್ಟು, ಅಭಿವೃದ್ಧಿಯೆಡೆಗೆ ಗಮನ ಹರಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಂತಿ, ಸೌಹಾರ್ದತೆಯಿಂದ ಮೊಹರಂ ಆಚರಿಸಿ

ದೇವರಹಿಪ್ಪರಗಿ: ಮೊಹರಂ ಹಬ್ಬವನ್ನು ಹಿಂದೂ-ಮುಸ್ಲಿಂರು ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸಬೇಕು. ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡಬಾರದು ಎಂದು ಪಿಎಸ್‌ಐ(ಕ್ರೈಂ) ಪ್ರೇಮಾ ಚೌರ ಹೇಳಿದರು. ಪಟ್ಟಣದ ಪೊಲೀಸ್ ಠಾಣೆಯ ಆವರಣದಲ್ಲಿ ಮಂಗಳವಾರ ನಡೆದ ಮೊಹರಂ ಹಬ್ಬದ ಪೂರ್ವಭಾವಿಯಾಗಿ ನಡೆದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ದೇವರಹಿಪ್ಪರಗಿ ಪಟ್ಟಣ ಸೌಹಾರ್ದತೆಗೆ ಹೆಸರು ವಾಸಿಯಾಗಿದೆ, ಕೋಮು ಮನೋಭಾವನೆ ತೋರುವ ಮತ್ತು ವೈಯಕ್ತಿಕ ಜಗಳವನ್ನು ಮೊಹರಂ ಹಬ್ಬದಲ್ಲಿ ತಂದು ಗಲಭೆ ಸೃಷ್ಟಿಸುವರ ಮೇಲೇ ನಿರ್ದಾಕ್ಷಿಣ್ಯ ಕ್ರಮ ಕೈಕೊಳ್ಳಲಾಗುವುದು. ಹಬ್ಬದ ಸಂದರ್ಭದಲ್ಲಿ ಧರ್ಮ ಮತ್ತು ಜಾತಿ ಜಾತಿಗಳ ಮಧ್ಯ ಕಂದಕ ಸೃಷ್ಟಿಸುವ ಪೋಸ್ಟಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿ ಬಿಡುವರು ಮೇಲೂ ಕಠಿಣ ಕ್ರಮ ಜರುಗಿಸಲಾಗುವುದು ಎಂದರು. ಮುಖಂಡರಾದ ಶಂಕರಗೌಡ ಪಾಟೀಲ, ಅಂಜುಮನ್ ಸಂಸ್ಥೆಯ ಅಧ್ಯಕ್ಷ ಮಹಿಬೂಬ ಹುಂಡೇಕಾರ್, ಉಪಾಧ್ಯಕ್ಷ ಎಂ.ಎಚ್.ಪಾನಘರೋಶ ಹಾಗೂ ಪ.ಪಂ ಉಪಾಧ್ಯಕ್ಷ ರಮೇಶ ಮಸಿಬಿನಾಳ ಮಾತನಾಡಿ, ಮೊಹರಂ ಕೊನೆಯ ದಿನದಂದು ಮೆರವಣಿಗೆ ಸಂದರ್ಭದಲ್ಲಿ ಪೊಲೀಸರ ಸಹಕಾರ ಬಹಳ ಅವಶ್ಯ, ಆದ್ದರಿಂದ ಇಲಾಖೆಯ ಜೊತೆ ಸಹಕಾರ ನೀಡಲಾಗುವುದು ಎಂದು ತಿಳಿಸಿದರು. ಪಪಂ ಸದಸ್ಯರಾದ ಕಾಸುಗೌಡ ಜಲಕತ್ತಿ, ಕಾಸಪ್ಪ ಜಮಾದಾರ, ಮುಖಂಡರಾದ ಶಂಕರ ಜಮಾದಾರ, ರಾವೂತ ಎಸ್.ಟಿ, ಜಿ.ಎಂ.ಹಿರೇಮಠ, ಮಹಮ್ಮದ್ ರಫೀಕ್ ಮೋಮಿನ್, ಮಲ್ಲು ಜಮಾದಾರ, ಅಲ್ಲಾಬಕ್ಸ್ ಗರಡಿಮನಿ, ಶಂಕರ ಮಿಂಚನಾಳ, ಯಾಕೂಬ್ ಶಹಾಪುರ ಸೇರಿದಂತೆ ಸಮುದಾಯದ ಮುಖಂಡರು ಹಾಗೂ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಸಮಾರಂಭಕ್ಕೆ ತೆರಳಲು ಸಿದ್ಧತೆ

ವಿಜಯಪುರ: ಕೆಪಿಸಿಸಿ ಅಧ್ಯಕ್ಷರಾಗಿ ಆಯ್ಕೆಗೊಂಡ ಬಿ.ಕೆ. ಹರಿಪ್ರಸಾದ ಅವರ ಅಧಿಕಾರ ಸ್ವೀಕಾರ ಸಮಾರಂಭಕ್ಕೆ ತೆರಳುವ ಕುರಿತಾಗಿ ನಗರದ ಕಾಂಗ್ರೆಸ್ ಜಿಲ್ಲಾ ಕಚೇರಿಯಲ್ಲಿ ಪೂರ್ವಭಾವಿ ಸಭೆ ನಡೆಯಿತು. ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ ಮಾತನಾಡಿ, ಈ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ತೆರಳುವ ನಿಟ್ಟಿನಲ್ಲಿ ವ್ಯವಸ್ಥೆ ಮಾಡಲಾಗುವುದು ಎಂದರು. ಬಳಿಕ ರಾಜ್ಯದಲ್ಲಿ ಎಸ್‌ಐಆರ್ ಕುರಿತು ಚರ್ಚಿಸಿ, ಎಲ್ಲ ಬ್ಲಾಕ್ ಅಧ್ಯಕ್ಷರಿಂದ ಮಾಹಿತಿ ಪಡೆಯಲಾಯಿತು. ಮಹ್ಮದರಫೀಕ್ ಟಪಾಲ್, ಗಂಗಾಧರ ಸಂಬಣ್ಣಿ, ವೈಜನಾಥ ಕರ್ಪೂರಮಠ, ಜಮೀರ್ ಬಕ್ಷಿ, ಆರತಿ ಶಾಹಪೂರ, ಎಸ್. ಎಂ. ಪಾಟೀಲ ಗಣಿಯಾರ, ಆಫ್ತಾಬಕಾದ್ರಿ ಇನಾಮದಾರ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಚಾಂದಸಾಬ ಗಡಗಲಾವ, ಸುಭಾಷ ಛಾಯಾಗೋಳ, ಮಹಾದೇವಿ ಗೋಕಾಕ, ಐ.ಎಂ. ಇಂಡಿಕರ, ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ರಮೀಜಾ ನದಾಫ್, ಶಾಹಜಾನ ಮುಲ್ಲಾ, ಸುರೇಶ ಹಾರಿವಾಳ, ರಫೀಕ್ ಪಕಾಳಿ, ಈರನಗೌಡ ಬಿರಾದಾರ, ಸಿದ್ದು ಗೌಡಣ್ಣವರ ಇದ್ದರು.



ಬೆಳಗಿ: ತಾಲೂಕಿನ ಅಮಲಝರಿ ಗ್ರಾಮದಲ್ಲಿ ರೈತ ಕೇಶುಗೌಡ ನಾಯಕ ಅವರ ಎರಡು ಎಕರೆ ಜಮೀನಿನಲ್ಲಿ ಬೆಳೆದಿರುವ ಫಲವತ್ತಾದ ಸಿಜೆಂಟ್-5531 ತಳಿಯ ಮೆಣಸಿನಕಾಯಿ ಬೆಳೆಯನ್ನು ಮಾಜಿ ಸಚಿವ ಎಸ್.ಆರ್.ಪಾಟೀಲ ಅವರು ಭೇಟಿ ನೀಡಿ ಸೋಂಪಾಗಿ ಬೆಳೆದಿರುವ ಮೆಣಸಿನಕಾಯಿ ಬೆಳೆಯನ್ನು ವೀಕ್ಷಿಸಿ ಪ್ರಶಂಸೆ ವ್ಯಕ್ತಪಡಿಸಿದರು. ಸಿ.ಆರ್.ಸೊರಗಾವಿ, ಎಸ್.ಟಿ.ಪಾಟೀಲ, ಸತ್ಯಪ್ಪ ಮೇಲ್ನಾಡ, ಡಾ.ಎಲ್.ಬಿ.ನಾಯಕ, ಎಸ್.ಎಂ.ದೇಸಾಯಿ, ಎಲ್.ಕೆ.ಬಳಗಾನೂರ, ನವೀನ ಧವಳೇಶ್ವರ ಸೇರಿದಂತೆ ಮತ್ತಿತರಿದ್ದರು.

ಸೈಕಲ್ ಬಳಕೆ ಆರೋಗ್ಯಕ್ಕೆ ಪೂರಕ: ಕೋರಿಶೆಟ್ಟಿ

ವಿಜಯಪುರ: ಸೈಕಲ್ ಸವಾರಿಯಿಂದ ಯುವಜನರು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಜೊತೆಗೆ ಪರಿಸರ ಸಂರಕ್ಷಣೆ ಮತ್ತು ಇಂಧನ ಉಳಿತಾಯಕ್ಕೆ ಸೈಕಲ್ ಬಳಕೆ ಮಹತ್ವದ ಕೊಡುಗೆ ನೀಡುವುದರಿಂದ ಅದು ಸುಸ್ಥಿರ ಅಭಿವೃದ್ಧಿಗೆ ದಾರಿಯಾಗುತ್ತದೆ ಎಂದು ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಹೇಳಿದರು.

ನಗರದ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಅಖಿಲ ಭಾರತ ಅಂತರ್ ವಿಶ್ವವಿದ್ಯಾಲಯ ಸಂಘದ ಮಾರ್ಗಸೂಚಿಯಂತೆ ಹಾಗೂ ಪ್ರತಿ ಭಾನುವಾರ ಸೈಕಲ್‌ನೊಂದಿಗೆ ಎಂಬ ಧ್ಯೇಯದಡಿ ಇತ್ತೀಚೆಗೆ ಹಮ್ಮಿಕೊಂಡ ವಿಶ್ವ ಸೈಕಲ್ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸೈಕಲ್ ಬಳಕೆಯಿಂದ ಪರಿಸರ ಮಾಲಿನ್ಯ ಕಡಿಮೆಯಾಗುವುದರ ಜೊತೆಗೆ ಆರೋಗ್ಯಕರ ಜೀವನಶೈಲಿ ರೂಪಿಸಿಕೊಳ್ಳಲು ಸಾಧ್ಯ ಎಂದರು. ವಿಕಲ್ಪ ಪ್ರಶಸ್ತಿ ಪುರಸ್ಕೃತೆ, ಖ್ಯಾತ ಸೈಕ್ಲಿಸ್ಟ್ ಡಾ.ಸವಿತಾ ಅಣ್ಣಪ್ಪ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸೈಕಲ್ ಬಳಕೆ ಕಡಿಮೆಯಾಗುತ್ತಿರುವುದರಿಂದ ಜನರ ಮೇಲಿನ ಅವಲಂಬನೆ ಹೆಚ್ಚುತ್ತಿದ್ದು, ಆರೋಗ್ಯ ಸಮಸ್ಯೆಗಳೂ ಹೆಚ್ಚಾಗುತ್ತಿವೆ. ಸೈಕಲ್ ಬಳಕೆಯಿಂದ ದೇಹ ಮತ್ತು ಮನಸ್ಸಿಗೆ ಉತ್ತಮ ವ್ಯಾಯಾಮ ದೊರೆಯುತ್ತದೆ ಎಂದರು. ವಿವಿಯ ಕ್ರೀಡಾ ನಿರ್ದೇಶಕ ಪ್ರೊ. ಹನುಮಂತಯ್ಯ ಪೂಜಾರಿ, ಸಹಾಯಕ ನಿರ್ದೇಶಕ ಡಾ. ವಿಶ್ವನಾಥನಡಕಟ್ಟಿ, ಡಾ.ರಾಜಕುಮಾರ ಮಾಲಿಪಾಟೀಲ, ಡಾ.ಶ್ರೀನಿವಾಸ, ಡಾ.ಜ್ಯೋತಿ ಉಪಾಧ್ಯ, ಡಾ.ಜ್ಯೋತಿ ಅವಟಿ ಇದ್ದರು.



ವಿಜಯಪುರ: ನಗರದ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಅಖಿಲ ಭಾರತ ಅಂತರ್ ವಿಶ್ವವಿದ್ಯಾಲಯ ಸಂಘದ ಮಾರ್ಗಸೂಚಿಯಂತೆ ಹಾಗೂ ಪ್ರತಿ ಭಾನುವಾರ ಸೈಕಲ್ ದಿನಾಚರಣೆ ಕಾರ್ಯಕ್ರಮ ನಡೆಯಿತು. ಸೈಕಲ್‌ನೊಂದಿಗೆ ಎಂಬ ಧ್ಯೇಯದಡಿ ಇತ್ತೀಚೆಗೆ ಹಮ್ಮಿಕೊಂಡ ವಿಶ್ವ

ಶೇ.263ರಷ್ಟು ಹೆಚ್ಚಿನ ಪ್ರಮಾಣದ ಹಣ ಬಂದಿದೆ: ಸಂಸದ ಜಿಗಜಿಣಗಿ

ಬಿಜೆಪಿ ಸರ್ಕಾರದಿಂದ ಭರಪೂರ ಅನುದಾನ

ವಿಜಯಪುರ: ಕೇಂದ್ರ ಸರ್ಕಾರದಿಂದ ನಮ್ಮ ಕರ್ನಾಟಕದ ಪಾಲಿನ ಹಣ ಸರಿಯಾಗಿ ಬಂದಿಲ್ಲ ಎಂದು ವಿನಾಕಾರಣ ಕಾಂಗ್ರೆಸ್ ಪಕ್ಷದವರು ಆರೋಪ ಮಾಡುತ್ತಿದ್ದಾರೆ. ಎನ್‌ಡಿಎ ಸರ್ಕಾರ ಯುಪಿಎ ಸರ್ಕಾರಕ್ಕಿಂತ ಶೇ.263ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಹರಿದು ಬಂದಿದೆ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಯುಪಿಎ ಅವಧಿಯಲ್ಲಿ 81,794 ಕೋಟಿ ರೂ. ಹರಿದು ಬಂದರೆ ಎನ್‌ಡಿಎ ಸರ್ಕಾರ ಅವಧಿಯಲ್ಲಿ 2,96,730 ಕೋಟಿ ರೂ. ಪಾಲು ದೊರಕಿದೆ ಈ ಕಾಂಗ್ರೆಸ್‌ನವರು ದಿಕ್ಕು ತಪ್ಪಿಸುವ ಕಾರ್ಯ ಮಾಡುತ್ತಿದ್ದಾರೆ ಎಂದರು.

ಯುಪಿಎ ಸರ್ಕಾರದ ಅವಧಿಯಲ್ಲಿ ರಾಜ್ಯ ಸರ್ಕಾರಕ್ಕೆ 60,779 ಕೋಟಿ ರೂ. ಬಂದಿದ್ದರೆ, ಮೋದಿಜಿ ಅವರ ನೇತೃತ್ವದಲ್ಲಿ 2,38,288 ಕೋಟಿ ರೂ. ಅನುದಾನ ಹರಿದು ಬಂದಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ ಜನಧನ್ ಅಕೌಂಟ್ ಆರಂಭಿಸಿದರು, ಪರಿಣಾಮವಾಗಿ ಕರ್ನಾಟಕದ 2.14 ಕೋಟಿ ಜನರು ಬ್ಯಾಂಕ್ ವ್ಯವಹಾರಕ್ಕೆ ಒಳಪಡುವಂತೆ ಮಾಡಿದ್ದು ಒಂದು ದಾಖಲೆ ಅಲ್ಲವೇ ಎಂದರು.

ಕೋವಿಡ್ ಕಾಲಘಟ್ಟದಲ್ಲಿ ಮೋದಿಜಿ ಅವರು ಬಂಗಾರದಂತಹ ಕೆಲಸ ಮಾಡಿದರು, 280 ಕೋಟಿ ಡೋಸ್ ಲಸಿಕೆ ಉಚಿತವಾಗಿ ಕೊಡುವ ಮೂಲಕ ಜೀವ ಉಳಿಸುವ ಕೆಲಸ ಮಾಡಿದರು, ಆದರೆ ಈ ವೇಳೆ ಕಾಂಗ್ರೆಸ್ ಸರ್ಕಾರ ಇದ್ದರೆ ಬೀದಿ ಬೀದಿಗೆ ಹೆಣಗಳ ರಾಶಿ ಬೀಳುತ್ತಿತ್ತು ಎಂದರು.



ಯುಪಿಎ ಸರ್ಕಾರದ ಅವಧಿಯಲ್ಲಿ ರಾಜ್ಯ ಸರ್ಕಾರಕ್ಕೆ 60,779 ಕೋಟಿ ರೂ. ಬಂದಿದ್ದರೆ, ಮೋದಿಜಿ ಅವರ ನೇತೃತ್ವದಲ್ಲಿ 2,38,288 ಕೋಟಿ ರೂ. ಅನುದಾನ ಹರಿದು ಬಂದಿದೆ.

ಹದ್ದಾರಿ ಎಂಬುದೇ ಕಾಂಗ್ರೆಸ್ ಸರ್ಕಾರಕ್ಕೆ ಗೊತ್ತಿರಲಿಲ್ಲ, ಹೆದ್ದಾರಿಗಳ ನಿರ್ಮಾಣಕ್ಕೆ ದಿ.ಅಟಲ್ ಬಿಹಾರಿ ವಾಜಪೇಯಿ ಅವರು ಮಹೋನ್ನತ ಕೊಡುಗೆ ನೀಡಿದರು.

ವಿಜಯಪುರದಲ್ಲಿಯೇ ಆರು ರಾಷ್ಟ್ರೀಯ ಹೆದ್ದಾರಿಗಳ ಜಾಲ ಇವೆ, ಆರು ರಾಷ್ಟ್ರೀಯ ಹೈವೆಗಳಲ್ಲಿ ಸಂಚರಿಸುವ ವಾಹನಗಳು ನಗರ ಪ್ರವೇಶಿಸದೇ ರಿಂಗ್ ರೋಡ್ ನಿರ್ಮಾಣಕ್ಕೆ ಸಂಬಂಧಿಸಿದಂತೆ 713 ಕೋಟಿ ರೂ. ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಕೆ ಮಾಡಲಾಗಿದ್ದು, ಸಕಾರಾತ್ಮಕ ಸ್ಪಂದನೆ ದೊರಕಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ವಂದೇ ಭಾರತ್ ರೈಲು ಪ್ರಸ್ತುತ ಹಳಿಗಳ ಮೇಲೆ ಸಂಚಾರ ಕಷ್ಟ, ಆದರೆ ಅದನ್ನು ಸಹ ಅಪ್ಡೇಟ್ ಮಾಡುವ ಕೆಲಸ ನಡೆದಿದೆ, ಮುಂದಿನ ದಿನದಲ್ಲಿ ಈ ಕೆಲಸ ಸಹ ಆಗುವ ಸಾಧ್ಯತೆ ಇದೆ ಎಂದರು.

ಜಿಲ್ಲೆಯಲ್ಲಿ ಕೇಂದ್ರ ಸರ್ಕಾರ ಅನುದಾನ ಒದಗಿಸಿದ ಕಾಮಗಾರಿಗಳಿಗೆ ಪ್ರಧಾನಿ ಮೋದಿ ಅವರ ಫೋಟೋ ಹಾಕುತ್ತಿಲ್ಲ, ಇದು ಒಂದರ್ಥದಲ್ಲಿ ಬೇಜಾರಾಗಿದೆ, ಹೀಗಾಗಿ ಭೂಮಿ ಪೂಜೆಗೆ ಹೋಗುವುದನ್ನೇ ಬಿಟ್ಟಿರುವೆ ಎಂದರು.

ಗೋಳಗುಮ್ಮಟವನ್ನು ವಿಶ್ವ ಪಾರಂಪರಿಕ ಸ್ಮಾರಕ ಪಟ್ಟಿಗೆ ಸೇರ್ಪಡೆ ಮಾಡುವ ಪ್ರಯತ್ನ ನಡೆದಿದೆ, ಈ ವಿಷಯವಾಗಿ ಇನ್ನೊಮ್ಮೆ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಮನವರಿಕೆ ಮಾಡಿಕೊಡಲಾಗುವುದು. ಧಾರವಾಡದಲ್ಲಿ ಪುರಾತತ್ವ ಇಲಾಖೆ ಇರುವುದು ಪ್ರಯೋಜನವೇ ಇಲ್ಲ, ಹೀಗಾಗಿ ಇಲ್ಲಿ ಶಿಫ್ಟ್ ಮಾಡುವಂತೆ ಅನೇಕ ಬಾರಿ ಪತ್ರ ಬರೆದಿರುವೆ ಎಂದರು.

ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ, ಮಾಜಿ ಶಾಸಕ ರಮೇಶ ಭೂಸನೂರ, ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಮುಖಂಡರಾದ ಸಂಜೀವ್ ಐಹೊಳಿ, ಸಾಬು ಮಾಶ್ಯಾಳ, ಈರಣ್ಣ ರಾವೂರ, ಸಂದೀಪ ಪಾಟೀಲ ಇದ್ದರು.

ದಿಕ್ಕು ತಪ್ಪಿಸುವ ಕಾರ್ಯ

ಯುಪಿಎ ಅವಧಿಯಲ್ಲಿ 81,794 ಕೋಟಿ ರೂ. ಹರಿದು ಬಂದರೆ ಎನ್‌ಡಿಎ ಸರ್ಕಾರ ಅವಧಿಯಲ್ಲಿ 2,96,730 ಕೋಟಿ ರೂ. ಪಾಲು ದೊರಕಿದೆ ಈ ಕಾಂಗ್ರೆಸ್‌ನವರು ದಿಕ್ಕು ತಪ್ಪಿಸುವ ಕಾರ್ಯ ಮಾಡುತ್ತಿದ್ದಾರೆ

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಿ: ಮಕಾನದಾರ

ಮುದ್ದೇಬಿಹಾಳ: ಮಗುವಿನ ಮೊದಲ ಗುರು ತಾಯಿ. ಅಲ್ಲಿ ಕಲಿಯುವ ಮಗು ಮುಂದೆ ಸಮಾಜಕ್ಕೆ ಆಸ್ತಿಯಾಗಿ ಬದಲಾಗುವಂತೆ ಪಾಲಕರು ಅವರ ಶಿಕ್ಷಣದ ಜವಾಬ್ದಾರಿ ನಿಭಾಯಿಸಬೇಕು ಎಂದು ಮುಸ್ಲಿಂ ಸಮಾಜದ ಹಿರಿಯ ಮುಖಂಡ ಅಬ್ದುಲಗಫೂರ ಮಕಾನದಾರ ಹೇಳಿದರು.

ಮಹೆಬೂಬನಗರದಲ್ಲಿಶಾಹಿದಿಮಹಲ್ ನಲ್ಲಿ ಭಾನುವಾರ ಉಮ್ಮಿದ್ ಫೌಂಡೇಶನ್ ಏರ್ಪಡಿಸಿದ್ದ ಪ್ರತಿಭಾವಂತ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಣದಲ್ಲಿ ಹಿಂದುಳಿಯುತ್ತಿರುವ ಸಮಾಜದ ಮಕ್ಕಳಿಗೆ ಅಗತ್ಯ ಪ್ರೋತ್ಸಾಹ, ಮಾರ್ಗದರ್ಶನ ಮಾಡುವ ಕಾರ್ಯಕ್ರಮಗಳು ಹೆಚ್ಚಬೇಕಿದೆ. ಸಮಾಜದ ಮಕ್ಕಳು ಸಾಧನೆ ತೋರಿದಾಗ ಪ್ರತಿಭೆಗೆ ಪ್ರೋತ್ಸಾಹಿಸುವ ಕಾರ್ಯ ಸಮಾಜದವರಿಂದ ಆಗಬೇಕು ಎಂದರು.

ಸಿಪಿಐ ಮೊಹಮ್ಮದ ಫಸಿಯುದ್ದೀನ ಮಾತನಾಡಿ, ಮುಸ್ಲಿಂ ಸಮಾಜದಲ್ಲಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರಾತಿನಿಧ್ಯ ದೊರೆತಿದೆ. ಆದರೆ ಈ ವಿಷಯದಲ್ಲಿ ಸಮಾಜದ ಗಂಡು ಮಕ್ಕಳು ಕಲಿಕೆಯಲ್ಲಿ ಹಿಂದುಳಿಯುತ್ತಿದ್ದಾರೆ. ಪಾಲಕರು ಮಕ್ಕಳನ್ನು ಸನ್ನಡತೆಯಿಂದ ದುಡಿಯಲು ಕಳಿಸದೇ ಅವರಿಗೆ ಶಿಕ್ಷಣ ಕೊಡಿಸಿ ಅವರ ಭವಿಷ್ಯ ರೂಪಿಸಬೇಕು ಎಂದು ಹೇಳಿದರು.

ಶಿಕ್ಷಣ ಸಂಯೋಜಕ ಪಿ.ಎ.ಬಾಳಿಕಾಯಿ ಮಾತನಾಡಿ, ಮುಸ್ಲಿಂ ಸಮಾಜದ ಜನಸಂಖ್ಯೆ ಹೆಚ್ಚಿದೆ. ಆದರೆ ಸಾಧನೆ ಮಾಡಿದ ಮಕ್ಕಳನ್ನು ಗೌರವಿಸುವ, ಅಭಿನಂದಿಸುವ ಕೈಗಳ ಕೊರತೆ ಕಾಡುತ್ತಿತ್ತು. ಅದೀಗ ಉಮ್ಮಿದ್ ಫೌಂಡೇಶನ್‌ದಿಂದ ಅದನ್ನು ನೀಗಿಸುವ ಕೆಲಸವನ್ನು ಕೈಗೊಂಡಿರುವುದು ಸಹಾಯ ನೀಡುವುದು ಉತ್ತಮ ಬೆಳವಣಿಗೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ.ಎ.ಎಂ.ಮುಲ್ಲಾ ಸಾನ್ನಿಧ್ಯ ವಿಜಯಪುರ ಜಮಿಯತ್ ಎ ಅಲ್ಲಾಯಿ ಕದೀಮ ಉಪಾಧ್ಯಕ್ಷ ಮೌಲಾನಾ ನಿಸಾರ್‌ಅಹ್ಮದ್ ಜಾಮಯಿ, ಜಮಿಯತೆ ಉಲೆಮಾ ಹಿಂದ್ ಸಂಚಾಲಕ ಕಾರಿ ಇಸಾಕ್ ಮಾಗಿ, ಮೌಲಾನಾ ಅಲ್ಲಾಭಕ್ಷ ಖಾಜಿ, ಮೊಹ್ಮದರಫೀಕ ನದಾಫ, ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿ ಹಾಜಿಸಾಬ ರುದ್ರವಾಡಿ, ಪುರಸಭೆ ಮಾಜಿ ಅಧ್ಯಕ್ಷ ಮಹೆಬೂಬ ಗೊಳಸಂಗಿ, ಹೆಸ್ಕಾಂ ನೌಕರರ ಸಂಘದ ನಿರ್ದೇಶಕ ಹುಸೇನ್ ನಾಯ್ಕೋಡಿ, ಲಾಯೆಬ್ಬಸಾಬ್ ಎನ್.ನಾಯ್ಕೋಡಿ, ವಕೀಲರಾದ ಎನ್.ಬಿ.ಮುದ್ನಾಳ, ಪ್ರೊ. ಮುಸ್ತಾಕ್ ಬಾಗವಾನ, ಮೊಹ್ಮದರಫೀಕ ಆಲ್ಲಾಳಕೋಟಿ, ಪ್ರೊ.ರಹೀಂ ಮುಲ್ಲಾ, ಉಮ್ಮಿದ್ ಫೌಂಡೇಶನ್ ಸಂಚಾಲಕ ಗುಲಾಮಮೊಹ್ಮದ ವೈ.ದಫೇದಾರ, ಎನ್.ಆರ್. ಮೊಕಾಶಿ, ಎಂ.ಎ.ಲಿಂಗಸಗೂರ ಇದ್ದರು.



ಎಂಬಿಬಿಎಸ್ ವಿದ್ಯಾರ್ಥಿಗಳ ಸರ್ಜಿಕ್ವಿಜ್ ಕಾರ್ಯಕ್ರಮ

ವಿಜಯಪುರ: ದ್ವಿತೀಯ ರಾಷ್ಟ್ರೀಯ ಶಸ್ತ್ರಚಿಕಿತ್ಸಕರ ದಿನಾಚರಣೆ ನಿಮಿತ್ತ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರ ಚಿಕಿತ್ಸಾ ವಿಭಾಗದ ವತಿಯಿಂದ ಹಾಗೂ ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘದ ಆಶ್ರಯದಲ್ಲಿ ಅಂತಿಮ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಸರ್ಜಿಕ್ವಿಜ್ ರಸಪ್ರಶ್ನೆ ಕಾರ್ಯಕ್ರಮವನ್ನು ಸೋಮವಾರ ಸ್ಕಿಲ್ ಲ್ಯಾಬೊರೇಟರಿ ಕಟ್ಟಡದ ಸಭಾಂಗಣದಲ್ಲಿ ಆಯೋಜಿಸಲಾಯಿತು.

ಶಸ್ತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಮಂಜುನಾಥ ಕೋಟೆಣ್ಣವರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರಾಷ್ಟ್ರೀಯ ಶಸ್ತ್ರ ಚಿಕಿತ್ಸಕರ ದಿನಾಚರಣೆಯ ಉದ್ದೇಶ ಜನಸಾಮಾನ್ಯರಿಗೆ ಶಸ್ತ್ರ ಚಿಕಿತ್ಸಕರ ಮಹತ್ವ ತಿಳಿಸುವುದು, ಸಮಾಜ ಸುಧಾರಣಾ ಕಾರ್ಯಗಳಲ್ಲಿ ಶಸ್ತ್ರ ಚಿಕಿತ್ಸಕರು ಪಾಲ್ಗೊಳ್ಳುವುದು ಮತ್ತು ಸ್ನಾತಕ ವೈದ್ಯಕೀಯ ವಿದ್ಯಾರ್ಥಿಗಳಲ್ಲಿ ಶ್ತ್ರ ಚಿಕಿತ್ಸಾ ವಿಭಾಗದ ಬಗ್ಗೆ ಆಸಕ್ತಿ ಮೂಡಿಸುವುದಾಗಿದೆ ಎಂದು ಹೇಳಿದರು.

ಪೂರ್ವಭಾವಿ ಪರೀಕ್ಷೆಯ ಮೂಲಕ ಅಂತಿಮ ಸುತ್ತಿಗೆ ಆಯ್ಕೆಯಾದ 10 ವಿದ್ಯಾರ್ಥಿಗಳನ್ನು ಐದು ತಂಡಗಳಾಗಿ ವಿಭಾಗಿಸಲಾಗಿತ್ತು. ಪ್ರತಿ ತಂಡಕ್ಕೂ ಬಿಎಲ್‌ಡಿಇ ಆಸ್ಪತ್ರೆಯ ಶಸ್ತ್ರ ಚಿಕಿತ್ಸಾ ವಿಭಾಗದಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ಹಿರಿಯ ವೈದ್ಯರ ಹೆಸರನ್ನು ನಾಮಕರಣ ಮಾಡಲಾಗಿತ್ತು. ಕ್ವಿಜ್ ಮಾಸ್ಟರ್ ಆಗಿ ಡಾ.ದೀಪಕ ಚವ್ಹಾಣ ಕಾರ್ಯಕ್ರಮ ನಿರ್ವಹಿಸಿದರು.

ಡಾ.ಬಿ.ಸಿ.ಉಪ್ಪಿನ ತಂಡದ ಪಾರ್ಥ ಶೇಂದೆ ಮತ್ತು ಸತ್ಯಜಿತ ಪ್ರಥಮ ಸ್ಥಾನ ಪಡೆದರು. ಡಾ.ಪಿ.ಎಲ್.ಕರಿಹೋಳು ತಂಡದ ಆದಿತಿಕುಮಾರ ಮತ್ತು ಪ್ರಜಕ್ತಾ ದ್ವಿತೀಯ ಸ್ಥಾನ, ಡಾ.ವಿ.ಬಿ.ರೆಡ್ಡಿ ತಂಡದ ರೇವತಿ ಮತ್ತು ಸಾನಿಕಾ ಬಾಗ್ವೆ ತೃತೀಯ ಸ್ಥಾನ ಅಲಂಕರಿಸಿದರು.

ಜಿಲ್ಲಾ ಆಸ್ಪತ್ರೆಯ ಶಸ್ತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ರಾಜಕುಮಾರ ಹಿರೇಮಠ, ಪ್ರಾಧ್ಯಾಪಕ ಡಾ.ಎಂ.ಬಿ.ಪಾಟೀಲ, ಡಾ.ವಿಜಯಾ ಪಾಟೀಲ, ಡಾ.ಗಿರೀಶ ಕುಲ್ಲೊಳ್ಳಿ, ಡಾ.ವಿಕ್ರಂ ಸಿಂದಗಿಕರ, ವಿಜಯಪುರ ಜಿಲ್ಲಾ ಶಸ್ತ್ರ ಚಿಕಿತ್ಸಕರ ಸಂಘದ ಕಾರ್ಯದರ್ಶಿ ಡಾ.ರಮಾಕಾಂತ ಬಳೂರಕರ ಪ್ರಮಾಣ ಪತ್ರ ಮತ್ತು ಪ್ರಶಸ್ತಿ ವಿತರಿಸಿದರು.

ಸಹಾಯಕ ಪ್ರಾಧ್ಯಾಪಕ ಡಾ.ಸಂತೋಷ ಮಡಗೊಂಡ, ಡಾ.ವೀಣಾ ಘಂಟೆಪ್ಪಗೋಳ, ಡಾ.ಆನಂದ ಸುಂತನ, ಡಾ.ಅಕ್ಷತಾ ಗೌಡರ, ಡಾ.ಭುವನೇಶ್ವರಿ, ಸಂಯೋಜಕ ಡಾ. ಮಂಜುನಾಥ ಸಾವಂತ ಇದ್ದರು.

ರಾಷ್ಟ್ರೀಯ ಶಸ್ತ್ರಚಿಕಿತ್ಸಕರ ದಿನಾಚರಣೆಯ ಪ್ರಯುಕ್ತ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ತಪಾಸಣಾ ಹಾಗೂ ಚಿಕಿತ್ಸಾ ಸಪ್ತಾಹ ಶಿಬಿರದ ಸಮಾರೋಪವೂ ನಡೆಯಿತು. ಶಿಬಿರದಲ್ಲಿ ಸುಮಾರು 530ಕ್ಕೂ ಅಧಿಕ ರೋಗಿಗಳನ್ನು ತಪಾಸಣೆ ಮಾಡಲಾಗಿದ್ದು, ಅಗತ್ಯವಿದ್ದ ಸುಮಾರು 75 ರೋಗಿಗಳಿಗೆ ಶಸ್ತ್ರಚಿಕಿತ್ಸೆ ನೆರವೇರಿಸಲಾಯಿತು.



ಶಾಸಕ ಯಶವಂತರಾಯಗೌಡ ಪಾಟೀಲಗೆ ಸಚಿವ ಸ್ಥಾನ ನೀಡಲು ಆಗ್ರಹ

ಇಂಡಿ: ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಲು ಆಗ್ರಹಿಸಿ ಪಕ್ಷದ ಸ್ಥಳೀಯ ಕಾರ್ಯಕರ್ತರು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಉಪ ಮುಖ್ಯಮಂತ್ರಿ ಜಿ.ಪರಮೇಶ್ವರ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಜ್ಯ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಿ ಮಂಗಳವಾರ ಪ್ರತಿಭಟನೆ ನಡೆಸಿದರು.

ನಮ್ಮ ಶಾಸಕರಿಗೆ ಸಚಿವ ಸ್ಥಾನ ನೀಡದಿದ್ದರೆ ಪಕ್ಷದ ಎಲ್ಲ ಹುದ್ದೆಗಳಿಗೆ ಹಾಗೂ ನಾಮನಿರ್ದೇಶಿತ ಹುದ್ದೆಗಳಿಗೆ ರಾಜೀನಾಮೆ ನೀಡುವುದಾಗಿ ಘೋಷಿಸಿದ್ದಾರೆ.

ಡಿ.ಕೆ.ಶಿವಕುಮಾರ ಅವರನ್ನು ಭೇಟಿಯಾದ ಕಾರ್ಯಕರ್ತರು ಸುಮಾರು 10 ನಿಮಿಷ ಚರ್ಚಿಸಿ, ಇಂಡಿ ಕ್ಷೇತ್ರಕ್ಕೆ 1957ರಿಂದ ಇಲ್ಲಿವರೆಗೆ ಒಮ್ಮೆಯೂ ಸಚಿವ ಸ್ಥಾನ ದೊರೆತಿಲ್ಲ ಎಂದು ಮನವರಿಕೆ ಮಾಡಿಕೊಟ್ಟರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು, ನೀವು ಕೇಳುತ್ತಿರುವುದು ಸರಿ ಇದೆ. ನಾನು ಹಾಗೂ ಸಿದ್ದರಾಮಯ್ಯ ಸಾಹೇಬರು ನಿಮ್ಮೊಂದಿಗೆ ಇರುತ್ತೇವೆ ಎಂದು ಭರವಸೆ ನೀಡಿದರೆಂದು ಕಾಂಗ್ರೆಸ್ ಪಕ್ಷದ ಇಂಡಿ ಮಹಿಳಾ ಘಟಕದ ಅಧ್ಯಕ್ಷೆ ನಿರ್ಮಲ ತಳಕೇರಿ ದೂರವಾಣಿಯಲ್ಲಿ ತಿಳಿಸಿದ್ದಾರೆ.



ಕಾಂಗ್ರೆಸ್ ಪಕ್ಷದ ಕಾರ್ಯಕರ್ತೆಯರು ಸಹ ಪ್ರತಿಭಟನೆ ನಡೆಸಿ ಇಂಡಿ ಶಾಸಕ ಯಶವಂತರಾಯಗೌಡರಿಗೆ ಸಚಿವ ಸ್ಥಾನಕ್ಕೆ ಆಗ್ರಹಿಸಿ ಬೆಂಗಳೂರಿನ ಕಾಂಗ್ರೆಸ್ ಕಚೇರಿ ಎದುರು ಪಕ್ಷದ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಮುಖ್ಯಮಂತ್ರಿಗಳ ಕಾಲಿಗೆ ಬಿದ್ದು ಇಂಡಿ ಕ್ಷೇತ್ರಕ್ಕೆ ಸ್ವಾತಂತ್ರ್ಯ ನಂತರ ಮಂತ್ರಿ ಸ್ಥಾನ ಸಿಕ್ಕಿಲ್ಲ, ಈ ಬಾರಿ ನೀವು ಸಚಿವ ಸ್ಥಾನ ನೀಡಲೇಬೇಕೆಂದು ಮನವಿ ಮಾಡಿಕೊಂಡರು. ನಂತರ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು, ಯಶವಂತರಾಯಗೌಡರು ನಮಗೂ ಬೇಕಾದವರು ನೋಡೋಣ ಎಂದು ಹೇಳಿ ಕಾರ್ಯಕರ್ತರನ್ನು ಸಮಾಧಾನಪಡಿಸಿದರು.

ಶಿವಯೋಗೆಪ್ಪ ಜೋತಗೊಂಡ, ಪ್ರಶಾಂತ ಕಾಳೆ, ಜಾವೀದ ಮೋಮಿನ್, ಬಿ.ಸಿ.ಸಾಹುಕಾರ, ಶ್ರೀಕಾಂತ ಕೂಡಿಗನೂರ, ಅಜಿತ್ ಧನಶೆಟ್ಟಿ ಹಿರಿಯ ನ್ಯಾಯವಾದಿ ಸಿದ್ದಣ್ಣ ಬೂದಿಹಾಳ, ಡಿ.ಜೆ.ಜೋತಗೊಂಡ, ನೀಲಕಂಠಗೌಡ ಪಾಟೀಲ, ಜಟ್ಟೆಪ್ಪ ರವಳಿ, ಸದಾಶಿವ ಪ್ಯಾಟಿ, ರಂಜಾನ್ ವಾಲೀಕಾರ, ಎಸ್.ಜೆ.ಮಾಡ್ಯಾಳ, ಸಂತೋಷ ಪರಸೇನವರ, ಸುನಂದಾ ಪಾಟೀಲ, ಜಯಶ್ರೀ ಕಾಲೇಬಾಗ, ನಿರ್ಮಲಾ ತಳಕೇರಿ, ಶೈಲಜಾ ಜಾಧವ, ರಾಧಾ ಎಂಟಮನ್, ಚಂದ್ರಕಲಾ ಹೋರ್ತಿ, ಲಕ್ಷ್ಮೀ ಶಿವಶರಣ, ಸುಮಂಗಲಾ ಕ್ಷತ್ರಿ ಸೇರಿದಂತೆ ಅನೇಕರು ಇದ್ದರು.

ಮೃತರ ಕುಟುಂಬಕ್ಕೆ ಆರ್ಥಿಕ ಸಹಾಯ

ದೇವರಹಿಪ್ಪರಗಿ: ಸಮೀಪದ ಯಲಗೋಡ ಗ್ರಾಮ ಪಂಚಾಯತಿಯಲ್ಲಿ ವಾಟರ್ ಮ್ಯಾನ್ ತಿಪ್ಪಣ್ಣ ಮಾದರ ಅವರ ಅಕಾಲಿಕ ಮರಣದಿಂದ ಅವರ ಕುಟುಂಬಕ್ಕೆ ತೊಂದರೆಯಾಗಿರುವುದನ್ನು ಗಮನಿಸಿ ಆರ್‌ಡಿಪಿಆರ್ ಹಾಗೂ ಸಿಐಟಿಯು ಸಂಘದ ವತಿಯಿಂದ ಕುಟುಂಬ ವರ್ಗಕ್ಕೆ 2ಲಕ್ಷರೂ. ಆರ್ಥಿಕ ಸಹಾಯ ನೀಡಿ ಮಾನವೀಯತೆ ಮೆರೆದಿದ್ದಾರೆ.

ಬುಧವಾರ ಮೃತ ವಾಟರ್ ಮ್ಯಾನ್ ತಿಪ್ಪಣ್ಣ ಮಾದರ ಅವರ ಮನೆಗೆ ತೆರಳಿ ಸಂಘವು ಬೆಂಬಲವಾಗಿ ನಿಂತು ದೇವರು ಹಿಪ್ಪರಗಿತಾಲೂಕಿನ ಪಂಚಾಯತಿ ಅಧಿಕಾರಿಗಳು ಹಾಗೂ ಸಿಬ್ಬಂಧಿಯವರಿಂದ ಅವರಿಗೆ ಆರ್ಥಿಕ ಸಹಾಯವಾಗಿ 2ಲಕ್ಷರೂ. ಸಂಗ್ರಹಣೆ ಮಾಡಿ ಅವರ ಕುಟುಂಬಕ್ಕೆ ಇಂದು ನೀಡಲಾಯಿತು. ಪಿಡಿ ಸಂಘದ ಜಿಲ್ಲಾಧ್ಯಕ್ಷ ಎಸ್ ಆರ್ ಕಟ್ಟಿ ಮಾತನಾಡಿ, ಗ್ರಾಮಪಂಚಾಯತಿಯಲ್ಲಿ ವಾಟರ್‌ಮ್ಯಾನ್ ಆಗಿದ್ದ ತಿಪ್ಪಣ್ಣ ಮಾದರ ಕುಟುಂಬ ಅತ್ಯಂತ ಬಡತನದಿಂದ ಕೂಡಿದ್ದು, ಕುಟುಂಬ ನಿರ್ವಹಣೆ ತೊಂದರೆಯಾಗಿತ್ತು. ಎಲ್ಲ ಪಂಚಾಯತಿಯ ಅಧಿಕಾರಿಗಳು ಸಿಬ್ಬಂಧಿ ಸೇರಿಕೊಂಡು ಒಂದಿಷ್ಟು ಸಹಾಯ ಮಾಡಬೇಕೆಂಬ ಹಂಬಲದಿಂದ ಮೃತರ ಮನೆಗೆ ಬಂದು ಸಾಂತ್ವನ ಹೇಳಿದ್ದೇವೆ ಎಂದರು.



ನರೇಗಾ ಉದ್ಯೋಗ ಖಾತ್ರಿ ಯೋಜನೆ ನಿರ್ದೇಶಕ ಎಸ್.ಎಂ.ನ್ಯಾಮಣ್ಣವರ, ತಾಪಂ ಯೋಜನಾ ನಿರ್ದೇಶಕ ಶಿವಾನಂದ ಮುಲಿಮನಿ ಹಾಗೂ ಶಿವಾನಂದ ಹಡಪದ ಪಿಡಿಒ ಕಾಶೀನಾಥ ಕಡಭಾವಿ, ಅಮಿತ್ ಘತಾಟೆ, ಮಹೇಶ್ ಬಗಲಿ, ಗೊಲ್ಲಾಳ ರೂಡಗಿ, ಪ್ರಾಪಂ ನೌಕರರ ಸಂಘದ ಅಧ್ಯಕ್ಷ ಶಿವಾನಂದ ಬಿರಾದಾರ ಪ್ರಧಾನಕಾರ್ಯದರ್ಶಿ. ಬಾಪೂಸಾಬ್ ಖಜಾಂಚಿ. ಸಂತೋಷ ಹಿರೇಮಠ, ಮಲ್ಲು ಜವಾಡಗಿ. ಬುಡ್ಡೇಸಾಬ ಕನಮೇಶ್ವರ ಸೇರಿದಂತೆ ಕುಟುಂಬಸ್ಥರು ಉಪಸ್ಥಿತರಿದ್ದರು.

ಶಾಸಕ ಸಿ.ಎಸ್.ನಾಡಗೌಡಗೆ ಸಚಿವ ಸ್ಥಾನ ನೀಡಲು ಒತ್ತಾಯ

ನಾಲತವಾಡ: ಮುದ್ದೇಬಿಹಾಳ ಮತಕ್ಷೇತ್ರದ ಶಾಸಕ ಸಿ.ಎಸ್ .ನಾಡಗೌಡ ಅಪ್ಪಾಜಿ ಅವರಿಗೆ ರಾಜ್ಯ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಎಸ್ಸಿ, ಎಸ್ಟಿ ಮುಖಂಡರು ಒತ್ತಾಯಿಸಿದ್ದಾರೆ.

ಪಟ್ಟಣದ ಹಳ್ಳೂರ ಪ್ಯಾಲೇಸ್ ನಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ದಲಿತ ಮುಖಂಡ ಸಿದ್ದಣ್ಣ ಕಟ್ಟಿಮನಿ, ಸಿ.ಎಸ್.ನಾಡಗೌಡ ಅಪ್ಪಾಜಿ ಅವರು ರಾಜ್ಯದ ಹಿರಿಯ ರಾಜಕಾರಣಿಗಳಲ್ಲಿ ಒಬ್ಬರು. ಸುಮಾರು ಆರು ಬಾರಿ ಶಾಸಕರಾಗಿ ಆಯ್ಕೆಯಾಗುವ ಮೂಲಕ ಉತ್ತರ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆಗೆ ಅಪಾರ ಕೊಡುಗೆ ನೀಡಿದ್ದಾರೆ. ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮೂಲಕ ಜನಪರ ರಾಜಕಾರಣ ನಡೆಸಿಕೊಂಡು ಬಂದಿದ್ದಾರೆ ಎಂದು ಹೇಳಿದರು.

ಮಾಜಿ ಪಟ್ಟಣ ಪಂಚಾಯತಿ ಸದಸ್ಯ ಭೀಮಣ್ಣ ಗುರಿಕಾರ ಮಾತನಾಡಿ, ಮುದ್ದೇಬಿಹಾಳ ಕ್ಷೇತ್ರದ ಅಭಿವೃದ್ಧಿಗೆ ನಾಡಗೌಡ ಅಪ್ಪಾಜಿ ಅವರಿಗೆ ಸಚಿವ ಸ್ಥಾನ ಅವಶ್ಯಕವಾಗಿದೆ. ಕ್ಷೇತ್ರದ ಜನರು ಕೂಡ ಈ ಬಾರಿ ಅವರಿಗೆ ಸಚಿವ ಸ್ಥಾನ ದೊರೆಯಲಿದೆ ಎಂಬ ವಿಶ್ವಾಸದಿಂದ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಿದ್ದಾರೆ. ಜನರ ನಿರೀಕ್ಷೆಯನ್ನು ಸರ್ಕಾರ ಈಡೇರಿಸಬೇಕು ಎಂದರು.

ಪಟ್ಟಣ ಪಂಚಾಯಿತಿ ಸದಸ್ಯ ರಮೇಶ ಆಲಕೊಪ್ಪರ, ಕಮಲಾ ಭಜಂತ್ರಿ, ಮಂಜುನಾಥ ಕಟ್ಟಿಮನಿ ಮಾತನಾಡಿ, ಸೌಮ್ಯ ಸ್ವಭಾವದ ರಾಜಕಾರಣಿ ಎಂಬ ಕಾರಣಕ್ಕೆ ಹಿರಿಯ ನಾಯಕರನ್ನು ಕಡೆಗಣಿಸುವುದು ಸರಿಯಲ್ಲ. ತಮ್ಮ ರಾಜಕೀಯ ಜೀವನದಲ್ಲಿ ಯಾವುದೇ ಕಳಂಕವಿಲ್ಲದೆ ಪಕ್ಷಕ್ಕಾಗಿ ದುಡಿದಿರುವ ಶಾಸಕರಿಗೆ ಮುಂದಿನ ಸಂಪುಟದಲ್ಲಿ ಸ್ಥಾನ ನೀಡಬೇಕು. ಇಲ್ಲವಾದರೆ ತಾಲೂಕಿನಲ್ಲಿ ಹೋರಾಟ ನಡೆಸಲಾಗುವುದು'' ಎಂದು ಎಚ್ಚರಿಸಿದರು.



ಸುದ್ದಿಗೋಷ್ಠಿಯಲ್ಲಿ ಸಿದ್ದಣ್ಣ ಕಟ್ಟಿಮನಿ, ಭೀಮಣ್ಣ ಗುರಿಕಾರ, ರಮೇಶ್ ಆಲಕೊಪ್ಪರ, ಮಂಜುನಾಥ ಕಟ್ಟಿಮನಿ, ಕಮಲಾ ಭಜಂತ್ರಿ, ಪ್ರಭು ಮಡಿಕೇಶ್ವರ, ಹಣಮಂತ ಕೇಶಾಪೂರ, ಭೀಮಣ್ಣ ಲೋಟಗೇರಿ, ಸಂಗಣ್ಣ ವಂದಾಲ, ಬೈಲಪ್ಪ ಮಣ್ಣುವಡ್ಡರ, ಬಾಳಪ್ಪ ಯರಗುಂಟಿ, ಹುಲುಗಪ್ಪ ಭೋವಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸರ್ಕಾರದ ಸೌಲಭ್ಯದ ಅರಿವು ಅಗತ್ಯ

ಸಿಂದಗಿ: ಸರ್ಕಾರವು ವಿಶಿಷ್ಟಚೇತನರಿಗಾಗಿ ಜಾರಿಗೆ ತಂದಿರುವ ವಿವಿಧ ಯೋಜನೆಗಳು ಮತ್ತು ಸೌಲಭ್ಯಗಳ ಬಗ್ಗೆ ಅರಿವು ಹೊಂದಿದರೆ ಜೀವನ ಮಟ್ಟವನ್ನು ಉತ್ತಮ ಗೊಳಿಸಿಕೊಳ್ಳಬಹುದು ಎಂದು ಸಿಂದಗಿ ಹೆಸ್ಕಾಂ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಜಿ.ಎಂ.ಬಿರಾದಾರ ಹೇಳಿದರು.

ನಗರದ ಬಸವ ನಗರದಲ್ಲಿರುವ ಸಂಗಮ ಸಮಗ್ರ ಗ್ರಾಮೀಣ ಅಭಿವೃದ್ಧಿ ಕೇಂದ್ರದಲ್ಲಿ ವಿಶೇಷ ಚೇತನರ ಹಕ್ಕುಗಳು ಹಾಗೂ ಸರ್ಕಾರಿ ಸೌಲಭ್ಯಗಳ ಕುರಿತು ಹಮ್ಮಿಕೊಂಡ ತರಬೇತಿ ಕಾರ್ಯಕ್ರಮಕ್ಕೆ ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ವಿಶಿಷ್ಟಚೇತನರು ಸಮಾಜದ ಮುಖ್ಯ ವಾಹಿನಿಯಲ್ಲಿ ಆತ್ಮ ವಿಶ್ವಾಸದಿಂದ ಬದುಕಲು ಶಿಕ್ಷಣ, ಸ್ವಾವಲಂಬನೆ ಹಾಗೂ ಜಾಗೃತಿ ಅತ್ಯಂತ ಅಗತ್ಯವೆಂದು ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಗಮ ಸಂಸ್ಥೆಯ ಸಹ ನಿರ್ದೇಶಕಿ ಸಿಸ್ಟರ ಪ್ರಿಯಾಂಕಾ ಅವರು ಮಾತನಾಡಿದರು. ಶಂಕರಗೌಡ ಹನುಮಗೊಂಡ, ಸಂಗಮ ಸಂಸ್ಥೆಯ ನಿರ್ದೇಶಕ ಫಾದರ್ ಸಂತೋಷ, ಮಹೇಶ ಚವ್ಹಾಣ ಸೇರಿದಂತೆ ಸಿಂದಗಿ, ಬಬಲೇಶ್ವರ, ಮನ್ನಾಪುರ, ಬಂಟನೂರಇದ್ದರು.



ಕುಡಿಯುವ ನೀರು ಸಮರ್ಪಕವಾಗಿ ಪೂರೈಸಿ: ವಂದಾಲ

ಬಸವನಬಾಗೇವಾಡಿ: ಸಂಪೂರ್ಣ ಮಳೆಯಾಗುವರಿಗೂ ಕುಡಿಯುವ ನೀರಿನ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ತಾಲೂಕು ಪಂಚಾಯತಿ ಕಾರ್ಯನಿರ್ವಾಹಣಾಧಿಕಾರಿ ವೆಂಕಟೇಶ ವಂದಾಲ ಅವರು ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಸ್ಥಳೀಯ ತಾಪಂ ಸಭಾ ಭವನದಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು ಜನರಿಗೆ ಮೂರ್ನಾಲ್ಕು ದಿನಗಳಿಗೊಮ್ಮೆ ಕುಡಿಯುವ ನೀರು ಪೂರೈಕೆ ಮಾಡುವುದ್ದರಿಂದ ಸಮಸ್ಯೆಯಾಗುತ್ತದೆ. ಸಂಪೂರ್ಣ ಮಳೆಯಾಗುವರಿಗೂ ನೀರಿನ ತೊಂದರೆಯಗಬಾರದು ಎಂದು ಹೇಳಿದರು.

ಆರೋಗ್ಯ ಇಲಾಖೆಯ ರಾಜಶೇಖರ ಚಿಂಚೋಳಿ ಮಾತನಾಡಿ, ಈಗಾಗಲೇ ಕೆಮ್ಮು,ಜ್ವರ, ಬಿಪಿ, ಶುಗರ್ ಕುರಿತು ತಪಾಸಣೆ ನಡೆದಿವೆ 8ನೂರು ಜನರಲ್ಲಿ 12ಜನರಿಗೆ ಹಾಗೂ ನಿಡಗುಂದಿಯಲ್ಲಿ ಇಬ್ಬರಿಗೆ ಕ್ಷಯ ರೋಗದಂತ ಕಾಯಿಲೆ ಕಂಡು ಬರುತ್ತಿದೆ ಎಂದು ಹೇಳಿದರು. ಶಾಲೆ, ಅಂಗನವಾಡಿ ಕೇಂದ್ರಗಳ ಮಕ್ಕಳನ್ನು ಶಿಥಿಲಗೊಂಡ ಶಾಲೆ, ಅಂಗನವಾಡಿ ಕಟ್ಟಡಗಳಲ್ಲಿ ಕೂಡಿಸಬೇಡಿ, ತಕ್ಷಣ ಹಾಗೇ ಏನ್ನಾದರೂ ಕಂಡು ಬಂದರೆ ನಮ್ಮ ಗಮನಕ್ಕೆ ತರಬೇಕು, ಹಾಗೇ ಏನ್ನಾದರೂ ಕಂಡು ಬಂದರೆ ಆದೇಶ ಪತ್ರಕ್ಕೆ ಕಾಯದೆ ಶಿಥಿಲಗೊಂಡ ಕಟ್ಟಡ ಧ್ವಂಸ ಮಾಡಿ ಎಂದು ಇಒ ಹೇಳಿದರು.



ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎ.ಪಿ.ಬಿರಾದಾರ ಮಾತನಾಡಿ, ನಿಡಗುಂದಿ ಒಂದನ್ನು ಬಿಟ್ಟರೆ ಬಸವನಬಾಗೇವಾಡಿ, ಕೊಲ್ಹಾರ ತಾಲೂಕುಗಳಲ್ಲಿ ಉತ್ತಮ ಮಳೆಯಾಗಿದೆ ತೊಗರಿ ಬೆಳೆಯನ್ನು ಕಡಿಮೆ ಹತ್ತಿ ಬೆಳೆಯನ್ನು ಬೆಳೆಯುತ್ತಿದ್ದಾರೆ ಈಗ ಮಳೆ ಬೇಕಾಗಿದೆ ಮಳೆ ಬಂದರೆ ಫಸಲು ಚನ್ನಾಗಿ ಬರುತ್ತದೆ. ಬೆಳೆ ವಿಮೆ ಎಷ್ಟು ರೈತರಿಗೆ ಬಂದಿದೆ ಎಂದು ಇಒ ಅವರು ಪ್ರಶ್ನಿಸಿದಾಗ ಬಸವನಬಾಗೇವಾಡಿ ತಾಲೂಕಿಗೆ 13216 ಫಲಾನುಭವಿ ರೈತರಿಗೆ 220906272.8ರಷ್ಟು, ಕೊಲ್ಹಾರ ತಾಲೂಕಿಗೆ 2054 ಫಲಾನುಭವಿ ರೈತರಿಗೆ 44869750.29ರಷ್ಟು, ನಿಡಗುಂದಿ ತಾಲೂಕಿಗೆ 730 ಫಲಾನುಭವಿ ರೈತರಿಗೆ 4412725.8ರಷ್ಟು ಇನ್ಸೂರೆನ್ಸ್ ಕ್ಲೆಮ್ ಆಗಿದೆ ಎಂದರು.

ಕೊಲ್ಹಾರ ತಾಪಂ ಇಒ ಸುನೀಲ ಮದ್ದಿನ, ಪಶು ಸಂಗೋಪನೆ, ಸಿಡಿಪಿಒ, ಕೆಆರ್‌ಡಿಎಲ್, ಸಮಾಜ ಕಲ್ಯಾಣ, ಕಾರ್ಮಿಕ, ಒಬಿಸಿ, ಅರಣ್ಯ, ತೋಟಗಾರಿಕೆ, ರೇಷ್ಮೆ, ಶಿಕ್ಷಣ, ಅಕ್ಷರ ದಾಸೋಹ, ಪುರಸಭೆ, ಹೆಸ್ಕಾಂ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿ, ಸಿಬ್ಬಂದಿಗಳು ಇದ್ದರು.

ಕಿರುಸುದ್ದಿ

ಭಾರತ ಭಗವಾನ್ ಬುದ್ಧಶ್ರೀ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ

◆**ಕುಷ್ಟಗಿ:** ಕರ್ನಾಟಕ ಜನತಾ ಸೇನಾ ದಳ ಬೆಂಗಳೂರು ಅವರು ಕೊಡಮಾಡುವ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಸಂಗಮ ಸಮಾವೇಶದಲ್ಲಿ ಬೆಂಗಳೂರಿನ ಕನ್ನಡ ಭವನ ನಯನ ಸಂಭಾಗಣ ಜೆ.ಸಿ.ರಸ್ತೆ ಬೆಂಗಳೂರಿನಲ್ಲಿ ಭಾರತ ಭಗವಾನ್ ಬುದ್ಧಶ್ರೀ ರಾಷ್ಟ್ರೀಯ ಪ್ರಶಸ್ತಿಗೆ ಕುಷ್ಟಗಿ



ಪಟ್ಟಣದ ಸಮಾಜ ಸೇವಕ ಮೊಹನಲಾಲ್ ಜೈನ್ ಅವರು ಆಯ್ಕೆಯಾಗಿದ್ದಾರೆ. ಅವರ ಸಮಾಜದ ಸೇವೆಯನ್ನು ಗುರುತಿಸಿ ಭಾರತ ಭಗವಾನ್ ಬುದ್ಧಶ್ರೀ ರಾಷ್ಟ್ರೀಯ ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಲಾಗುತ್ತದೆ ಎಂದು ಮೊಹನಲಾಲ್ ಜೈನ್ ತಿಳಿಸಿದ್ದಾರೆ. ಇವರನ್ನು ಆಯ್ಕೆ ಮಾಡಿದಕ್ಕೆ ಕುಷ್ಟಗಿ ತಾಲೂಕಿನ ಸ್ನೇಹಿತರ ಬಳಗ, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ಹಲವರು ಅಂಭಿನಂದಿಸಿ ಶುಭ ಹಾರೈಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

◆**ಸುರಪುರ:** ಸುರಪುರ ಹಾಗೂ ದೇವಾಪುರ 110 ಕೆವಿ ವಿದ್ಯುತ್ ವಿತರಣಾ ಕೇಂದ್ರಗಳ ಹಾಗೂ 110 ಕೆವಿ ಹಟ್ಟಿಗೂಡೂರು-ದೇವಾಪುರ ಮಾರ್ಗದ ಮೊದಲ ತ್ರೈಮಾಸಿಕ ನಿರ್ವಹಣೆಯ ಕಾಮಗಾರಿ ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಜೂ.18 ರಂದು 110 ಸುರಪುರ ಹಾಗೂ ದೇವಾಪುರ ವಿದ್ಯುತ್ ಮಾರ್ಗದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಜೆಸ್ಕಾಂ ವಿಭಾಗೀಯ ಕಾರ್ಯನಿರ್ವಾಹಕ ಅಧಿಕಾರಿ ರಾಜಶೇಖರ ಬಿಳವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 110 ಕೆವಿ ವಿದ್ಯುತ್ ಕೇಂದ್ರದಿಂದ ಹೊರ ಹೋಗುವ ಎಲ್ಲಾ 11/33 ಕೆವಿ ಮಾರ್ಗಗಳು ಹಾಗೂ ಐಪಿಪಿ ಮಾರ್ಗಗಳ ವಿದ್ಯುತ್ ಸಂಪರ್ಕವನ್ನು ಜೂನ್ 18 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಕಡಿತಗೊಳಿಸಲಾಗುವುದು. ಸಾರ್ವಜನಿಕರು ಹಾಗೂ ಗ್ರಾಹಕರು ಜೆಸ್ಕಾಂ ಇಲಾಖೆಗೆ ಸಹಕರಿಸಬೇಕೆಂದು ಬಿಳವಾರ ಮನವಿ ಮಾಡಿದ್ದಾರೆ.

ಶಿವರಾಜ್ ತಂಗಡಗಿಗೆ ಸಚಿವ ಸ್ಥಾನ ನಿಶ್ಚಿತ: ಮಂಜುನಾಥ

◆**ಶ್ರೀರಾಮನಗರ:** ಸಿಎಂ ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಶಿವರಾಜ್ ಎಸ್.ತಂಗಡಗಿ ಅವರಿಗೆ ಸಚಿವ ಸ್ಥಾನ ಸಿಗುವುದು ಪಕ್ಕ ಎಂದು ಶ್ರೀರಾಮನಗರದ ಕಾಂಗ್ರೆಸ್ ಮುಂಖಡರು, ತಂಗಡಗಿ ಅಭಿಮಾನಿ ಹಾಗೂ ಯುವ ಉದ್ಯಮಿಗಳಾದ ಮಂಜುನಾಥ ಜೇರಾಳ ಅವರು ಪತ್ರಿಕೆಗೆ ಹೇಳಿಕೆ ನೀಡಿದ್ದಾರೆ. ಮೊದಲನೇ ಪಟ್ಟಿಯಲ್ಲಿ ಹಿರಿಯರಿಗೆ ಆದ್ಯತೆ ನೀಡಿದ್ದು, ಎರಡನೇ ಪಟ್ಟಿಯಲ್ಲಿ ನೂರಕ್ಕೆ ನೂರರಷ್ಟು ಗ್ಯಾರಂಟಿಯಾಗಿ ತಂಗಡಗಿ ಅವರಿಗೆ ಸಚಿವ ಸ್ಥಾನ ಸಿಕ್ಕೇ ಸಿಗುತ್ತದೆ. ಕೊಪ್ಪಳ ಜಿಲ್ಲೆಗೆ ಒಟ್ಟು ಎರಡು ಸಚಿವ ಸ್ಥಾನ ಸಿಗುವ ಭರವಸೆ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ತಂಗಡಗಿ ಅವರಿಗೆ ಸಚಿವ ಸ್ಥಾನ ಸಿಕ್ಕ ಪ್ರತಿ ಬರಿಯೂ ಕೊಟ್ಟಂತ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆ-ಪ್ರಾಮಾಣಿಕವಾಗಿ ನಿಭಾಯಿಸಿದ್ದಾರೆ. ತಮ್ಮ ಅವಧಿಯಲ್ಲಿ ಕ್ಷೇತ್ರಕ್ಕೆ ಹಾಗೂ ರಾಜ್ಯಕ್ಕೆ ವಿಶೇಷ ಕೊಡುಗೆ ನೀಡಿ ಅಭಿವೃದ್ಧಿಯ ಮುನ್ನುಡಿ ಬರೆದಿದ್ದಾರೆ. ತಂಗಡಗಿ ಅವರಿಗೆ ಸಾಕಷ್ಟು ಅನುಭವ ಇರುವ ಕಾರಣ ಸಚಿವ ಸ್ಥಾನ ಸಿಕ್ಕೆ-ಸಿಗುತ್ತದೆ ಎಂದರು.

ಸಾಲ ಬಾಧೆ: ಯುವ ರೈತ ಆತ್ಮಹತ್ಯೆ

◆**ಕಲಬುರಗಿ:** ಸಾಲದ ಹೊರೆ ಮತ್ತು ಸಾಲಗಾರರ ಕಾಟಕ್ಕೆ ಬೇಸತ್ತು ಯುವ ರೈತನೊಬ್ಬ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ದುರ್ಘಟನೆ ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಜೈನಾಪುರ ತಾಂಡಾದಲ್ಲಿ ನಡೆದಿದೆ. ಆತ್ಮಹತ್ಯೆ ಮಾಡಿಕೊಂಡ ರೈತನನ್ನು ಆನಂದ್ ರಾಠೋಡ್ (27) ಎಂದು ಗುರುತಿಸಲಾಗಿದೆ.



ಕೃಷಿ ಚಟುವಟಿಕೆಗಳಿಗಾಗಿ ಬ್ಯಾಂಕ್ ಹಾಗೂ ಖಾಸಗಿ ವ್ಯಕ್ತಿಗಳಿಂದ ಒಟ್ಟು ಸುಮಾರು 15 ಲಕ್ಷ ಸಾಲ ಪಡೆದಿದ್ದ ಅವರು, ಸಾಲ ಮರುಪಾವತಿಯ ಒತ್ತಡದಿಂದ ಮಾನಸಿಕವಾಗಿ ನೊಂದಿದ್ದರು ಎಂದು ತಿಳಿದುಬಂದಿದೆ. ಸಾಲಗಾರರ ಕಾಟ ಮತ್ತು ಆರ್ಥಿಕ ಸಂಕಷ್ಟದಿಂದ ಬೇಸತ್ತ ಆನಂದ್ ರಾಠೋಡ್ ಅವರು ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಾರೆ ಎನ್ನಲಾಗಿದೆ. ಕುಟುಂಬಸ್ಥರು ಹಾಗೂ ಗ್ರಾಮಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಘಟನೆ ಗ್ರಾಮದಲ್ಲಿ ಶೋಕದ ವಾತಾವರಣ ನಿರ್ಮಿಸಿದೆ. ಮಾಹಿತಿ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪರಿಶೀಲನೆ ನಡೆಸಿದ್ದು, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ.

ಈ ಕುರಿತು ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹೆಚ್ಚಿನ ತನಿಖೆ ಮುಂದುವರಿದಿದೆ.



ಕಲಬುರಗಿ: ನಗರದ ಕೃಷಿ ವಿಜ್ಞಾನಿಗಳ ವಿಶ್ವವಿದ್ಯಾಲಯ ರಾಯಚೂರು, ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ರೈತ ಮೋರ್ಚಾ ಕಲಬುರಗಿ ಗ್ರಾಮಾಂತರ ವತಿಯಿಂದ ಕೃಷಿ ಭೂಮಿ ಉಳಿಸಿ ಅಭಿಯಾನದಡಿ ಸಾವಯವ ಕೃಷಿ ಕಾರ್ಯಾಗಾರದಲ್ಲಿ ಮಾಜಿ ಸಚಿವ ಸಿಟಿ ರವಿ ಭಾಗವಹಿಸಿದ್ದರು. ಜಿಲ್ಲಾಧ್ಯಕ್ಷ ಅಶೋಕ್ ಬಗಲಿ, ಮಾಜಿ ಸಂಸದ ಉಮೇಶ್ ಜಾದವ್, ಎಂಎಲ್ಸಿ ಶಶಿಲ್ ನಮೋಶಿ, ಬಿ.ಜಿ ಪಾಟೀಲ, ಒಬಿಸಿ ಮೋರ್ಚಾ ರಾಜ್ಯ ಕಾರ್ಯದರ್ಶಿ ಅವ್ವಣ್ಣ ಮ್ಯಾಕೇರಿ, ಮಾಜಿ ಶಾಸಕ ಸುಭಾಷ್ ಗುತ್ತೇದಾರ್ ಇತರರಿದ್ದರು.

ಜೆ.ಎನ್.ಗಣೇಶಗೆ ಸಚಿವ ಸ್ಥಾನ ನೀಡಲು ರಾಘವೇಂದ್ರ ಮನವಿ

◆**ಕುರುಗೋಡು:** ಶಾಸಕ ಜೆ.ಎನ್.ಗಣೇಶ ಅವರಿಗೆ ಈ ಬಾರಿಯ ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಎರಡನೇ ಸಂಪುಟ ಪುನಾರಚನೆಯಲ್ಲಿ ಪಕ್ಷ ಅವರ ಕಾರ್ಯಕ್ಷಮತೆ ನೋಡಿ ಸಚಿವ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ಯುವ ಮುಖಂಡ ಎಳ್ಳಾರ್ತಿ ವೈ.ರಾಘವೇಂದ್ರ ರೆಡ್ಡಿ ನಾಯಕರಿಗೆ ಮನವಿ ಮಾಡಿದರು. ಸಮೀಪದ ಎಮ್ಮಿಗನೂರಿನಲ್ಲಿ ಮಾತನಾಡಿ, ರಾಜಕೀಯ ಜೀವನದಲ್ಲಿ ಬಹಳಷ್ಟು ಜನಪರವಾದ ಆಡಳಿತವನ್ನು ನೀಡಿದ ಶಾಸಕ ಜೆ.ಎನ್.ಗಣೇಶ ಅವರು ಇನ್ನೂ ಯುವಕರಾಗಿದ್ದು, ರೈತರಿಗೆ ಹಲವಾರು ಮಹಾತ್ವಾಕಾಂಕ್ಷಿ ಉಳ್ಳವರು ಕ್ಷೇತ್ರದಲ್ಲಿ ಆಗಿದ್ದಾರೆ. ಅಂತವರಿಗೆ ಅವಕಾಶ ಕಲ್ಪಿಸಿದರೆ ಒಂದು ಬಾರಿಯಾದರೂ ಸಚಿವರಾಗಿ ಅಖಂಡ ಕರ್ನಾಟಕ ರಾಜ್ಯದ ಜನರ ಸೇವೆ ಮಾಡಬೇಕು ಎಂದು ನಮ್ಮೆಲ್ಲರ ಮಹದಾಸೆ. ಅವರಿಗೆ ತಾಲೂಕಿನ ಮತದಾರರು ಮತ ನೀಡಿ ಶಾಸಕರಾಗಿ ಸತತ 2 ಅವಧಿಯಲ್ಲಿ ಆಯ್ಕೆ ಮಾಲಾಗಿದ್ದು ಕ್ಷೇತ್ರದಲ್ಲಿ ಎರಡು ತಾಲೂಕು ಅಭಿವೃದ್ಧಿ ಮತ್ತು ಜನರಿಗೆ ಕೊಟ್ಟ ಭರವಸೆಗಳನ್ನು ಈಡೇರಿಸುವ ಕೆಲಸ ಮಾಡುತ್ತಿದ್ದಾರೆ. ಆ ಕಾರಣದಿಂದ ಪುನರ್ ಸಚಿವ ಸಂಪುಟದಲ್ಲಿ ಈ ಭಾಗದಲ್ಲಿ ಹೆಚ್ಚು ಕ್ರಿಯಾಶೀಲರು ಆಗಿದ್ದಾರೆ ಎಂದು ಅವರು ಆಗ್ರಹಿಸಿದರು. ಈ ವೇಳೆ ಕಾರ್ಯಕರ್ತರಿದ್ದರು.



ಯಲಬುರ್ಗಾ: ಪಟ್ಟಣದ ಶ್ರೀಧರ ಮುರುಡಿ ಹಿರೇಮಠದಲ್ಲಿ ಎಸ್‌ಬಿಐ ಫೌಂಡೇಶನ್ ಹಿಂದೂ ಸೇವಾ ಪ್ರತಿಷ್ಠಾನ ಸಹಯೋಗದಲ್ಲಿ ನಡೆದ ಜೀವನೋಪಾಯ ಮತ್ತು ಉದ್ಯಮಶೀಲತೆ ವೇಗವರ್ಧಕ ಲೀಪ್ ಯೋಜನೆಯಡಿ ಫಲಾನುಭವಿ ಕುಟುಂಬಗಳಿಗೆ ಮೇಕೆಗಳನ್ನು ವಿತರಿಸಲಾಯಿತು.

ಪ್ರಗತಿ ಪರಿಶೀಲನಾ ಸಭೆ | ಜಿಪಂ ಯೋಜನಾ ನಿರ್ದೇಶಕರ ಸಲಹೆ

ಪ್ಲಾಸ್ಟಿಕ್ ನಿರ್ಮೂಲನೆಗೆ ಆದ್ಯತೆ ನೀಡಿ

◆**ಯಲಬುರ್ಗಾ:** ಪ್ಲಾಸ್ಟಿಕ್ ನಿರ್ಮೂಲನೆಗೆ ಹೆಚ್ಚಿನ ಆದ್ಯತೆ ನೀಡಿ ಪಿಡಿಒಗಳು ಗ್ರಾಮಗಳಲ್ಲಿ ನೈರ್ಮಲ್ಯ ಕಾಪಾಡುವ ಹಣ ತೊಡಗಿಸಬೇಕು ಅಂದಾಗ ಇಂತಹ ಅಭಿಯಾನಕ್ಕೆ ಹೆಚ್ಚು ಅರ್ಥ ಬರುತ್ತದೆ ಎಂದು ಜಿಪಂ ಯೋಜನಾ ನಿರ್ದೇಶಕ ಎಸ್.ಎಂ ಕಾಂಬ್ಳೆ ಹೇಳಿದರು.



ಪಟ್ಟಣದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಬುಧವಾರ ತಾಲೂಕಿನ ಎಲ್ಲ ಗ್ರಾಮ ಪಂಚಾಯತಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ಮಾತನಾಡಿದ ಅವರು, ತಾಲೂಕಿನ ಯಾವುದೇ ಗ್ರಾಮದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಪ್ಲಾಸ್ಟಿಕ್ ಬೀಳದಂತೆ ನೋಡಿಕೊಳ್ಳುವ ಮೂಲಕ ಸಂಗ್ರಹ ಮಾಡಿಕೊಂಡ ಪ್ಲಾಸ್ಟಿಕ್‌ನ್ನು 15 ದಿನಗಳಿಗೊಮ್ಮೆ ವಿಲೇವಾರಿ ಮಾಡಬೇಕು ಎಂದರು.

ಈಗ ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಮುಕ್ತ ಮಾಡಲು ವಿಶೇಷ ಸ್ವಚ್ಛತಾ ಅಭಿಯಾನದಡಿ ಎಲ್ಲ ಗ್ರಾಪಂಗಳಲ್ಲಿ ಪ್ರತಿದಿನ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು. ಗ್ರಾಪಂ ಸ್ವಚ್ಛತಾಗಾರರು, ಪಿಡಿಒ, ಸಿಬ್ಬಂದಿ ಇತರರು ಸೇರಿ ನಿರಂತರವಾಗಿ ಅಭಿಯಾನ ಕೈಗೊಳ್ಳಬೇಕು. ಸುಪ್ರಿಂಕೋರ್ಟ್‌ನ ನಿರ್ದೇಶನದಂತೆ ಈಗಾಗಲೇ ಹಸಿ ಕಸ, ಒಣ ಕಸ ಪ್ರತ್ಯೇಕವಾಗಿ ವಿಂಗಡಿಸಿ ಗ್ರಾಮ ಪಂಚಾಯತಿಗಳಲ್ಲಿ ಸಂಗ್ರಹಣೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ವೈಯಕ್ತಿಕ ಶೌಚಾಲಯ, ಎನ್‌ಆರ್‌ಎಲ್‌ಎಂ ಘಟಕ ನಿರ್ವಹಣೆ ಹಾಗೂ ಮನೆಗಳ ಪ್ರಗತಿ, ನರೇಗಾ ಯೋಜನೆ ಕುರಿತು ಪ್ರಗತಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ತಾಪಂ ಇಒ ನೀಲಗಂಗಾ ಬಬಲಾದ, ಸಹಾಯಕ ನಿರ್ದೇಶಕರಾದ ಫಕೀರಪ್ಪ ಕಟ್ಟಿಮನಿ, ಜಿಪಂನ ಎಡಿಪಿಸಿ ಮಹಾಂತಸ್ವಾಮಿ, ಡಿಬಿಇಸಿ ಶ್ರೀನಿವಾಸ ಚಿತ್ರಗಾರ, ಎಸ್ಬಿಎಂ ಅಧಿಕಾರಿಗಳಾದ ಮಾರುತಿ, ತಾಪಂ ವಿಷಯ ನಿರ್ವಾಹಕರು, ನರೇಗಾ ಸಿಬ್ಬಂದಿ, ಎನ್‌ಆರ್ ಎಲ್‌ಎಂ ಸಿಬ್ಬಂದಿ, ಎಲ್ಲ ಗ್ರಾಪಂ ಪಿಡಿಒಗಳು, ಟಿಐಇ, ಬಿಎಫ್‌ಟಿ, ಜಿಕೆಎಂ ಮತ್ತಿತರರು ಇದ್ದರು.

ಸ್ವಉದ್ಯೋಗಕ್ಕೆ ಸೌಲಭ್ಯ ಕಲ್ಪಿಸಿ

◆**ಕೊಪ್ಪಳ:** ಎಸ್‌ಬಿಐ ಆರ್‌ಸೆಟ್‌ಇ ಸಂಸ್ಥೆಯಲ್ಲಿ ತರಬೇತಿ ಪೂರ್ಣಗೊಳಿಸಿದ ಅರ್ಹ ಫಲಾನುಭವಿಗಳಿಗೆ ಸ್ವ-ಉದ್ಯೋಗ ಪ್ರಾರಂಭಿಸಲು ಅಗತ್ಯ ಸಾಲ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಜಿಪಂ ಸಿಇಒ ವರ್ಣಿತ್ ನೇಗಿ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಪಂ ಸಮಿತಿ ಸಭಾಂಗಣದಲ್ಲಿ ಬುಧವಾರ ಎಸ್‌ಬಿಐ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿವಿಧ ಇಲಾಖೆಗಳ ಬೇರೆ-ಬೇರೆ ಯೋಜನೆಗಳಡಿ ಹೊಸ ತರಬೇತಿ ಕಾರ್ಯಾಗಾರಗಳನ್ನು ಆರ್‌ಸೆಟ್‌ಇ ಸಂಸ್ಥೆಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲು ಕ್ರಮ ವಹಿಸಿ. ನಮ್ಮ ಜಿಲ್ಲೆಯ ಅವಶ್ಯಕತೆ ಹಾಗೂ ಸಾರ್ವಜನಿಕರ ಆಸಕ್ತಿಗೆ ಅನುಗುಣವಾಗಿ ತರಬೇತಿ ವಿಷಯಗಳನ್ನು ಆಯ್ಕೆ ಮಾಡಿಕೊಂಡು ತರಬೇತಿಯನ್ನು ನೀಡಬೇಕು. ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೋಂದಾಯಿಸಿದ ನಿರುದ್ಯೋಗಿ ಅಭ್ಯರ್ಥಿಗಳ ಪಟ್ಟಿ ಪಡೆದು, ಅಭ್ಯರ್ಥಿಗಳನ್ನು ಸಂಪರ್ಕಿಸಿ ಅವರಿಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ತರಬೇತಿ ನೀಡಿ, ಸ್ವಯಂ ಉದ್ಯೋಗ ಕೈಗೊಳ್ಳಲು ಸಂಸ್ಥೆ ಹಾಗೂ ಲೀಡ್ ಬ್ಯಾಂಕ್ ನಿಂದ ಅಗತ್ಯ ಅನುಕೂಲ ಮಾಡಿಕೊಡಬೇಕು. ಇದರ ಜೊತೆ ವಿವಿಧ ಇಲಾಖೆಗಳ ಮೂಲಕ ದೊರೆಯುವ ಸಹಾಯಧನ, ಸಾಲ ಸೌಲಭ್ಯಗಳ ಬಗ್ಗೆಯೂ ಮಾಹಿತಿ ನೀಡಬೇಕು ಎಂದರು.

ತರಬೇತಿ ಕೇಂದ್ರದಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿ. ಅಭ್ಯರ್ಥಿಗಳಿಗೆ ಉತ್ತಮ ಗುಣಮಟ್ಟದ ಆಹಾರವನ್ನು ನೀಡಬೇಕು ಎಂದು ಹೇಳಿದರು.

ಲೀಡ್ ಬ್ಯಾಂಕ್‌ನ ವ್ಯವಸ್ಥಾಪಕ ಮಾರುತಿ ಕೆ., ಆರ್‌ಸೆಟಿ ನಿರ್ದೇಶಕ ರಾಯೇಶ್ವರ ಪೈ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರಾದ ತಾರಕೇಶ್ವರ, ಜಿಲ್ಲಾ ಖಾದಿ ಮತ್ತು ಗ್ರಾಮೋದ್ಯೋಗಾಧಿಕಾರಿ ವಿರೇಶ್, ನಬಾರ್ಡ್ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರಾದ ಮಹಾದೇವ ಕೀರ್ತಿ ಸೇರಿದಂತೆ ಎಸ್‌ಬಿಐ ಆರ್‌ಸೆಟ್‌ಇ ಜಿಲ್ಲಾ ಮಟ್ಟದ ಸಲಹಾ ಸಮಿತಿಯ ಸದಸ್ಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ಸೇವೆ ಪರಿಗಣಿಸದ ಪಕ್ಷ: ಬಸನಗೌಡ

◆**ಮಸ್ಕಿ:** ಶಾಸಕ ಬಸನಗೌಡ ತುರ್ವಿಹಾಳ ಅವರ ನಡೆ-ನುಡಿಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಕಾಂಗ್ರೆಸ್ ಮುಖಂಡ ಬಸನಗೌಡ ಮುದಬಾಳ, ನಾನು ಕಳೆದ ಎರಡು ಚುನಾವಣೆಗಳಲ್ಲಿ ಪಕ್ಷದ ಗೆಲುವಿಗಾಗಿ ಶ್ರಮಿಸಿದ್ದರೂ ಸೂಕ್ತ ಗೌರವ ಮತ್ತು ಅವಕಾಶ ದೊರೆಯುತ್ತಿಲ್ಲ ಎಂದು ಅಸಮಾಧಾನ ಹೊರ ಹಾಕಿದರು. ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಎರಡು ಚುನಾವಣೆಗಳಲ್ಲಿ ಹಗಲಿರುಳು ದುಡಿದಿದ್ದೇನೆ,ಪಕ್ಷ ಸಂಘಟನೆ ಬಲಪಡಿಸಲು ಸಾಕಷ್ಟು ಶ್ರಮಿಸಿದ್ದೇನೆ. ಆದರೆ ನನ್ನ ಸೇವೆಯನ್ನು ಪರಿಗಣಿಸದೆ ಕಡೆಗಣಿಸಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇನ್ನೂ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಗೌರವ ಮತ್ತು ಅವಕಾಶ ನೀಡಬೇಕು ಇಲ್ಲವಾದಲ್ಲಿ ಕಾರ್ಯಕರ್ತರಲ್ಲಿ ನಿರುತ್ಸಾಹ ಉಂಟಾಗುವ ಸಾಧ್ಯತೆ ಇದೆ ಎಂದು ಅವರು ಎಚ್ಚರಿಸಿದರು. ಮಹಾಂತೇಶ ಜಾಲವಾಡಗಿ, ದೇವಣ್ಣ ನಾಯಕ, ಭೀರಪ್ಪ ನಾಯಕ, ಮಹಾಲಿಂಗಪ್ಪ ಗ್ರಾಪಂ ಮಾಜಿ ಅಧ್ಯಕ್ಷ ಗೌಡನ ಭಾವಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ರೈತರ ಖಾತೆಗೆ ಹಣ ಬರದಿದ್ದರೆ ಸಿಂಧನೂರು ಬಂದ್

◆**ಸಿಂಧನೂರು:** ರೈತರ ಖಾತೆಗೆ ಜೋಳದ ಹಣ ಜಮಾ ಮಾಡಲು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ಸೋಮವಾರ ಬೆಳಿಗ್ಗೆ ಪೋತ್ನಾಳ್‌ನ ಬಳಗಾನೂರು ಕ್ರಾಸ್‌ನಲ್ಲಿ ರಸ್ತಾರೋಖೋ ಚಳವಳಿ ನಡೆಸಿದ್ದಲ್ಲದೇ ಎಂಟು ದಿನದೊಳಗಾಗಿ ಹಣ ಜಮಾ ಮಾಡದಿದ್ದರೆ ಸಿಂಧನೂರು ಬಂದ್ ಮಾಡುವುದಾಗಿ ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

ಈ ಪ್ರತಿಭಟನಾಕಾರರನ್ನು ಉದ್ದೇಶಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಅಮೀನಪಾಶಾ ದಿದ್ದಿಗಿ ಮಾತನಾಡಿ,ಮುಂಗಾರು ಹಂಗಾಮಿನಲ್ಲಿ ಜೋಳ ಮಾರಾಟ ಮಾಡಿ ಮೂರು ತಿಂಗಳಾದರೂ ಇಲ್ಲಿಯವರೆಗೂ ರೈತರ ಖಾತೆಗೆ ಹಣ ಜಮಾ ಆಗಿಲ್ಲ.ಪ್ರಸ್ತುತ ಬಿತ್ತನೆ ಕಾರ್ಯ ಆರಂಭವಾಗಿದ್ದು ರೈತರು ಕೃಷಿ ಚಟುವಟಿಕೆ ಕೈಗೊಳ್ಳಲು ಹಣಕಾಸಿನ ತೊಂದರೆ ಅನುಭವಿಸುತ್ತಿದ್ದಾರೆ ಈ ಕೂಡಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನಂತರ ರೈತ ಮುಖಂಡ ಬಸವರಾಜ ಹಂಚಿನಾಳ ಮಾತನಾಡಿ, ರೈತರು ಅತ್ಯಂತ ಸಂಕಷ್ಟದಲ್ಲಿ ಬೇಸಾಯ ಮಾಡುತ್ತಿದ್ದಾರೆ. ಕಳೆದ ಬಾರಿಯೂ ಖರೀದಿ ಕೇಂದ್ರದ ಮೂಲಕ ಜೋಳ ಖರೀದಿಗೆ ಹಲವು ನಿಬಂಧನೆಗಳನ್ನು ಹೇರಲಾಗಿತ್ತು. ಮಾರಾಟ ಮಾಡಿದ ನಂತರ ವಿಳಂಬವಾಗಿ ಹಣ ಜಮಾ ಮಾಡಲಾಯಿತು. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೈತರನ್ನು ಸಂಪೂರ್ಣ ಕಡೆಗಣಿಸಿದ್ದು,ಈ ಕೂಡಲೇ ಕ್ರಮಕ್ಕೆ ಮುಂದಾಗಬೇಕು. ಇಲ್ಲದೇ ಹೋದರೆ ಹಣ ಪಾವತಿ ಮಾಡುವವರೆಗೂ ಸಂಘಟನೆಯ ವತಿಯಿಂದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ತಹಶೀಲ್ದಾರ್ ಅರುಣ್ ಎಚ್.ದೇಸಾಯಿ ಅವರಿಗೆ ಮನವಿಪತ್ರವನ್ನು ಸಲ್ಲಿಸಲಾಯಿತು.ಈ ಮನವಿ ಪತ್ರವನ್ನು ಸ್ವೀಕರಿಸಿದ ತಹಶೀಲ್ದಾರ್ ಅವರು ಈ ಕುರಿತು ಮೇಲಾಧಿಕಾರಿಗಳಿಗೆ ಹಾಗೂ ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು. ಅಲ್ಲದೇ ಈ ವೇಳೆ ರೈತ ಮುಖಂಡರು ಜಿಲ್ಲಾಧಿಕಾರಿ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದರು.

ಚನ್ನನಗೌಡ,ಯೂಸೂಫ್, ತಿಮ್ಮಣ್ಣ ರಾಮತ್ನಾಳ, ರಾಗಲಪರ್ವಿ ಚನ್ನಬಸಪ್ಪ, ಪುಲದಿನ್ನಿ ಬಸಣ್ಣ, ದುಮತಿ ಅಯ್ಯಪ್ಪ, ಹೆಡಗಿನಾಳ ಮಲ್ಲಿಕಾರ್ಜುನ ಸೇರಿದಂತೆ 400ಕ್ಕೂ ಹೆಚ್ಚು ಭಾಗವಹಿಸಿದ್ದರು.



ಮರಿಯಪ್ಪಗೆ ರಾಜ್ಯ ಮಟ್ಟದ 'ಸರ್ ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ'

◆**ಕುಷ್ಟಗಿ:** ತಾಲೂಕಿನ ಹಿರೇಮನ್ನಾಪುರ ಗ್ರಾಮದ ಯುವ ಚಿತ್ರಕಲಾವಿದ ಮರಿಯಪ್ಪ ಮುಳ್ಳೂರು ಅವರಿಗೆ ಚಿತ್ರಕಲೆ ಕ್ಷೇತ್ರದಲ್ಲಿನ ಗಣನೀಯ ಸಾಧನೆ ಹಾಗೂ ಕಲಾಸೇವೆಯನ್ನು ಗುರುತಿಸಿ ರಾಜ್ಯ ಮಟ್ಟದ ಪ್ರತಿಷ್ಠಿತ 'ಸರ್ ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು.

ಹಿರೇಮನ್ನಾಪುರದ ಸೌರಭ ಸಾಂಸ್ಕೃತಿಕ ಕಲಾ ಬಳಗ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ಸಾಧಕರಿಗೆ ನೀಡಲಾಗುವ ಆರು ಗಣ್ಯ ವ್ಯಕ್ತಿಗಳ ಹೆಸರಿನ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭ ಇತ್ತೀಚೆಗೆ ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಅದ್ದೂರಿಯಾಗಿ ನಡೆಯಿತು.



ಚಿತ್ರಕಲೆ ಕ್ಷೇತ್ರದಲ್ಲಿ ಮರಿಯಪ್ಪ ಮುಳ್ಳೂರು ಅವರು ಸಲ್ಲಿಸಿರುವ ವಿಶಿಷ್ಟ ಕೊಡುಗೆ ಹಾಗೂ ಸಾಧನೆಯನ್ನು ಪರಿಗಣಿಸಿ, ಗಣ್ಯರ ಸಮ್ಮುಖದಲ್ಲಿ ಅವರಿಗೆ ಶಾಲು ಹೊದಿಸಿ, ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರ ನೀಡಿ ರಾಜ್ಯ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಯಿತು. ಸೌರಭ ಸಾಂಸ್ಕೃತಿಕ ಕಲಾ ಬಳಗದ ಅಧ್ಯಕ್ಷ ರೆಹಮಾನ್ ಸಾಬ್ ಎಚ್. ಕೊಳೂರ ಹಾಗೂ ಗೌರವಾಧ್ಯಕ್ಷ ಕೆ.ಹುಸೇನಸಾಬ ಎಚ್.ಕೊಳೂರ ರಂಗಭೂಮಿ ಕಲಾವಿದರು ಹಾಗೂ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು ಅವರ ನೇತೃತ್ವದಲ್ಲಿ ಜರುಗಿತು. ಬಳಗದ ಪದಾಧಿಕಾರಿಗಳು, ಸಾಂಸ್ಕೃತಿಕ ವಲಯದ ಪ್ರಮುಖರು ಹಾಗೂ ಹಲವಾರು ಗಣ್ಯರು ಉಪಸ್ಥಿತರಿದ್ದು, ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು.

ಲೀಪ್ ಯೋಜನೆ ನೂರಾರು ರೈತರ ಬಾಳಲ್ಲಿ ಆಶಾಕಿರಣ: ಗೋಕಲೆ

◆**ಯಲಬುರ್ಗಾ:** ಸುಸ್ಥಿರ ಕೃಷಿ, ಜಾನುವಾರು ಆಧಾರಿತ ಜೀವನೋಪಾಯ ಮತ್ತು ಪರಿಸರ ಸಂರಕ್ಷಣೆಯ ಮೇಲೆ ಗಮನ ಕೇಂದ್ರೀಕರಿಸಿರುವ ಈ ಯೋಜನೆಯು ಗ್ರಾಮೀಣ ಭಾಗದ ಹಲವಾರು ಗ್ರಾಮಗಳ ಸುಮಾರು 100ಕ್ಕೂ ಹೆಚ್ಚು ಫಲಾನುಭವಿ ಕುಟುಂಬಗಳಿಗೆ 300ಕ್ಕೂ ಅಧಿಕ ಮೇಕೆಗಳನ್ನು ವಿತರಿಸಲಾಗಿದೆ ಎಂದು ಹಿಂದೂ ಸೇವಾ ಪ್ರತಿಷ್ಠಾನದ ಟ್ರಸ್ಟಿ ಮುಖ್ಯಸ್ಥರಾದ ಮಿಲಿಂದ್ ಗೋಕಲೆ ಹೇಳಿದರು.

ಪಟ್ಟಣದ ಶ್ರೀಧರ ಮುರುಡಿ ಹಿರೇಮಠದಲ್ಲಿ ಎಸ್‌ಬಿಐ ಫೌಂಡೇಶನ್ ಹಿಂದೂ ಸೇವಾ ಪ್ರತಿಷ್ಠಾನ ಸಹಯೋಗದಲ್ಲಿ ನಡೆದ ಜೀವನೋಪಾಯ ಮತ್ತು ಉದ್ಯಮಶೀಲತೆ ವೇಗವರ್ಧಕ ಲೀಪ್ ಯೋಜನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಗ್ರಾಮೀಣ ಭಾಗದ ಕುಟುಂಬಗಳಿಗೆ ಹೆಚ್ಚುವರಿ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಗಳ ಜತೆಗೆ ವಿಶ್ವಾಸಾರ್ಹ ಆದಾಯದ ಮೂಲವನ್ನು ಸೃಷ್ಟಿಸುವ ಲೀಪ್ ಯೋಜನೆ ಇದಾಗಿದೆ ಎಂದರು.

ಅಧಿಕ ಜೀವನೋಪಾಕ್ಕೆ ಪೂರಕವಾಗುವಂತೆ ಈ ಯೋಜನೆಯು ವ್ಯಾಪಕವಾದ ಮಣ್ಣು ಪರೀಕ್ಷೆ ಮತ್ತು ರೈತರ ತರಬೇತಿ ಕಾರ್ಯಕ್ರಮಗಳನ್ನು ಕೈಗೊಂಡಿದೆ. ವಿವರವಾದ ಮಣ್ಣಿನ ವಿಶ್ಲೇಷಣೆಯು ರೈತರಿಗೆ ತಮ್ಮ ಜಮೀನಿನ ಮಣ್ಣಿನ ಸಂಯೋಜನೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಇಳುವರಿ ಸುಧಾರಿಸಲು ಅಗತ್ಯವಾದ ಕ್ರಮಗಳನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗುತ್ತದೆ. ಫಲಾನುಭವಿಗಳಿಗೆ ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಪದ್ಧತಿಗಳು, ಮಣ್ಣಿನ ಆರೋಗ್ಯ ನಿರ್ವಹಣೆ, ಜಲ ಸಂರಕ್ಷಣೆ ಮತ್ತು ವೈಜ್ಞಾನಿಕ ಬೆಳೆ ಯೋಜನೆ ಕುರಿತು ತರಬೇತಿ ನೀಡಲಾಗುತ್ತಿದೆ ರೈತರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಯೋಜನಾ ವ್ಯಾಪ್ತಿಯ ಫಲಾನುಭವಿ ರೈತ ಬಸವರಾಜ್ ಮಾತನಾಡಿ, ಬೃಹತ್ ಮಟ್ಟದ ಪರಿಸರ ಸಂರಕ್ಷಣಾ ಪ್ರಯತ್ನದ ಭಾಗವಾಗಿ ಫಲಾನುಭವಿಗಳಿಗೆ ಸುಮಾರು 8500 ಸಸಿಗಳನ್ನು ವಿತರಿಸಲು ಯೋಜಿಸಲಾಗಿದೆ. ರೈತ ಕುಟುಂಬಗಳಿಗೆ ದೀರ್ಘಕಾಲೀನ ಆರ್ಥಿಕ ಮೌಲ್ಯವನ್ನು ಸೃಷ್ಟಿಸುವ ಗುರಿಯನ್ನು ಹೊಂದುವ ಮೂಲಕ ಈ ಯೋಜನೆಯು ದೊಡ್ಡ ಶಕ್ತಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಲೀಪ್ ಪ್ರೊಜೆಕ್ಟ್ ಲೀಡರ್ ಗುರುರಾಜ ಮಾತನಾಡಿ, ತಾಲೂಕುಗಳ ರೈತ ಸಮುದಾಯಗಳಲ್ಲಿ ಲೀಪ್ ಯೋಜನೆ ಹೊಸ ಆಶಾಭಾವನೆ ಮೂಡಿಸುತ್ತಿದೆ ಇದರಿಂದ ಗ್ರಾಮೀಣ ಕುಟುಂಬಗಳು ಸಂಕಷ್ಟದಿಂದ ಪಾರಾಗಿ ಸ್ವಾವಲಂಬನೆ ಮತ್ತು ಸಮೃದ್ಧಿಯತ್ತ ಸಾಗಲು ನೆರವಾಗುತ್ತಿದೆ ಎಂದರು. ಸಂಪನ್ಮೂಲ ವ್ಯಕ್ತಿ ಪ್ರಕಾಶ ಪೂಜಾರ ಸೇರಿದಂತೆ ಅನೇಕ ರೈತರು ಇದ್ದರು.

ಕಾಂಗ್ರೆಸ್ ಸರ್ಕಾರದಲ್ಲಿ ಮಿತಿಮೀರಿದ ಅಕ್ರಮ ದಂಧೆ: ಆರೋಪ

◆**ಕನಕಗಿರಿ:** ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಕ್ಷೇತ್ರದಲ್ಲಿ ಅಕ್ರಮ ಮರಳು ದಂಧೆ,ಇಸ್ಪೀಟ್, ಮಟ್ಕಾ ದಂಧೆಗಳು ಮಿತಿ ಮೀರಿದ್ದು, ಇದರಿಂದ ಸಣ್ಣಪುಟ್ಟ ಜನರು ಬಲಿಯಾಗುತ್ತಿದ್ದಾರೆ ಎಂದು ಬಿಜೆಪಿ ಮಂಡಲ ಅಧ್ಯಕ್ಷ ಸಣ್ಣ ಕನಕಪ್ಪ ಚಲುವಾದಿ ಆರೋಪಿಸಿದರು.

ನವಲಿ ರಸ್ತೆಯಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕ್ಷೇತ್ರದ ಸಮಸ್ಯೆಗಳ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಬಸ್ ನಿಲ್ದಾಣ ಇದ್ದರೂ ಸರಿಯಾದ ಸಮಯಕ್ಕೆ ಬಸ್ ವ್ಯವಸ್ಥೆ ಇಲ್ಲ, ಇದರಿಂದ ದಿನನಿತ್ಯ ಶಾಲಾ-ಕಾಲೇಜು ವಿದ್ಯಾರ್ಥಿಗಳು ಬಸ್ಸನ ಬಾಗಿಲಲ್ಲಿ ನೇತಾಡಿಕೊಂಡು ಅಪಾಯಕಾರಿಯಾಗಿ ಪ್ರಯಾಣಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ಥಳೀಯ

ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಸಮಸ್ಯೆ ತೀವ್ರವಾಗಿದ್ದು, ರೋಗಿಗಳು ಚಿಕಿತ್ಸೆಗಾಗಿ ದೂರದ ಗಂಗಾವತಿಗೆ ತೆರಳುವಂತಾಗಿದೆ. ಬಡವರು ಹಣ ಖರ್ಚು ಮಾಡಿಕೊಂಡು ಬಸ್ ಹಾಗೂ ಖಾಸಗಿ ಆಂಬ್ಯುಲೇನ್ಸ್ ಮೂಲಕ ತೆರಳಬೇಕಾದ ಅನಿವಾರ್ಯತೆ ಇದೆ.



ವೆಂಕಟಾಚಲಪತಿ ಬಾವಿ ಅಭಿವೃದ್ಧಿಗೆ ಕೆಕೆಆರ್‌ಡಿಬಿ ಅನುದಾನದಡಿ ಬಂದ ಕೋಟ್ಯಾಂತರ ರುಪಾಯಿ ಹಣ. ನುಂಗಿ ಹಾಕಲಾಗಿದೆ ಎಂದು ಆರೋಪಿಸಿದರು ನಂತರ

ವಾರ್ಡ್‌ಗಳ ಅಭಿವೃದ್ಧಿಗೆ ಪ.ಪಂ. ಅನುದಾನ ಇಲ್ಲ, ಕಾಂಗ್ರೆಸ್ ಕಚೇರಿಯ ಮುಂದೆಯೇ ರಸ್ತೆ ಅಬಿವೃದ್ಧಿ ಪಡಿಸಿಲ್ಲ, ಕನಕಾಚಲಪತಿ ದೇವಸ್ಥಾನಕ್ಕೆ ಬರುವ ಭಕ್ತರಿಗೆ ಶೌಚಾಲಯ ವ್ಯವಸ್ಥೆಯೂ ಇಲ್ಲ ಎಂದರು

ಬಳಿಕ ಮಂಡಲ ಉಪಾಧ್ಯಕ್ಷ ನಿಂಗಪ್ಪ ನಾಯಕ, ಮಾತನಾಡಿ ಮಾಜಿ ಸಚಿವ ಶಿವರಾಜ ತಂಗಡಗಿ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಕಾರ್ಯಕರ್ತರ ಬಗ್ಗೆ ಮಾತನಾಡಲು ನೈತಿಕತೆ ಇಲ್ಲ, ಬಿಜೆಪಿ ಪಕ್ಷದಿಂದಲೇ ಬೆಳೆದಿರುವುದನ್ನು ಅವರು ಮರೆಯಬಾರದು. ಯಲಬುರ್ಗಾ ಶಾಸಕ ಬಸವರಾಜ ರಾಯರೆಡ್ಡಿ ಅವರ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಕಲಿಯಲಿ ಎಂದು ಹೇಳಿದರು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ವಾಗೇಶ ಹಿರೇಮಠ, ತಾಲೂಕು ಪ್ರಧಾನ ಕಾರ್ಯದರ್ಶಿ ಪ್ರಕಾಶ ಹಾದಿಮನಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹುಲಿಗೆಮ್ಮ ನಾಯಕ, ಮಂಡಲ ಉಪಾಧ್ಯಕ್ಷ ರಂಗಪ್ಪ ಕೊರಟಗಿ, ಬಸವನಗೌಡ, ಪ.ಪಂ. ಸದಸ್ಯ ಸುರೇಶ ಗುಗ್ಗಳಶೆಟ್ಟಿ, ಶೇಷಪ್ಪ ಪೂಜಾರ, ಹನುಮಂತ ಬಸರಿಗಿಡದ, ತಾಲೂಕು ಮಹಾಶಕ್ತಿ ಕೇಂದ್ರ ಅಧ್ಯಕ್ಷ ಶಿವಕುಮಾರ ಕೋರಿ, ಸೇರಿದಂತೆ ಇತರರು ಇದ್ದರು.

ಮಾಜಿ ಶಾಸಕ ರೇವೂರ್ ವಿರುದ್ಧ ಸಿದ್ದಲಿಂಗ ಸ್ವಾಮೀಜಿ ವಾಗ್ದಾಳಿ

ಸ್ವಾರ್ಥಕ್ಕಾಗಿ ಪ್ರಧಾನಿ ಮೋದಿ-ಶಾ ಹೆಸರು ಬಳಕೆ

◆**ಕಲಬುರಗಿ:** ಮಾಜಿ ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ್ ಅವರು ಸ್ವಾರ್ಥದ ರಾಜಕೀಯ ಹಾಗೂ ಚುನಾವಣಾ ಲಾಭಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೆಸರನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಶಿವಸೇನಾ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೇವೂರ್ ಅವರ ರಾಜಕೀಯ ನಡೆ, ಜಿಲ್ಲೆಯ ಕೆಲವು ಸಮಾಜ ಸಂಘಟನೆಗಳ ದ್ವಂದ್ವ ನಿಲುವು ಹಾಗೂ ವೀರಶೈವ ಮಹಾಸಭೆಗಳ ಕಾರ್ಯವೈಖರಿಯನ್ನು ತೀವ್ರವಾಗಿ ಟೀಕಿಸಿದರು. ಕಾಂಗ್ರೆಸ್ ಹಾಗೂ ಬಿಜೆಪಿಗೆ ಪ್ರತ್ಯೇಕ ವೀರಶೈವ ಮಹಾಸಭೆಗಳಿದ್ದು, ಅವು ಶರಣರ ತತ್ವಗಳನ್ನು ಮರೆತು ಕೇವಲ ಪ್ರಭಾವಿ ವ್ಯಕ್ತಿಗಳ ಪರವಾಗಿ ಮಾತ್ರ ಧ್ವನಿ ಎತ್ತುತ್ತಿವೆ ಎಂದು ಆರೋಪಿಸಿದರು. ಬಡವರು ಮತ್ತು ಸಾಮಾನ್ಯ ಜನರಿಗೆ ಅನ್ಯಾಯವಾದಾಗ ಮೌನ ವಹಿಸುವ ಈ ಸಂಘಟನೆಗಳು,ಪ್ರಭಾವಿವ್ಯಕ್ತಿಗಳಿಗೆಸಮಸ್ಯೆಯಾದಾಗ ಮಾತ್ರ ಹೋರಾಟ ನಡೆಸುತ್ತಿರುವುದು ವಿಷಾದನೀಯ ಎಂದು ಹೇಳಿದರು.



ಜಂಗಮ ಸಮಾಜಕ್ಕೆ ಅನ್ಯಾಯವಾದ ಸಂದರ್ಭಗಳಲ್ಲಿ ಧ್ವನಿ ಎತ್ತದವರು, ಈಗ ಮಾಜಿ ಶಾಸಕರ ಪರವಾಗಿ ಹೋರಾಟ ನಡೆಸುತ್ತಿರುವುದು ದ್ವಂದ್ವ ನಿಲುವಿನ ಪ್ರತೀಕವಾಗಿದೆ ಎಂದು ಟೀಕಿಸಿದ ಅವರು, ಒಂದೆಡೆ ಎಫ್‌ಐಆರ್ ರದ್ದುಪಡಿಸುವಂತೆ ಆಗ್ರಹಿಸಲಾಗುತ್ತಿದೆ. ಮತ್ತೊಂದೆಡೆ '100 ಎಫ್‌ಐಆರ್ ಆದರೂ ನಾನು ಬಗ್ಗಲ್ಲ' ಎಂಬ ಹೇಳಿಕೆ ನೀಡಲಾಗುತ್ತಿದೆ ಎಂದು ಹೇಳಿದರು.

ಲಕ್ಷ್ಮಿಕಾಂತ ಸಿಂಗೆ ಅಶ್ಲೀಲ ಫೋಟೋ ಹರಿಬಿಟ್ಟ ಪ್ರಕರಣ, ಪಾಳ ಮಠದ 46 ಎಕರೆ ಜಮೀನು ಹಾಗೂ ದಂಡಗುಂಡ ಸಂಗಮೇಶ್ವರ ಮಠದ ವಿಚಾರಗಳಲ್ಲಿ ಮೌನ ವಹಿಸಿದವರು ಈಗ ರಾಜಕೀಯ ಕಾರಣಕ್ಕಾಗಿ ಸಕ್ರಿಯರಾಗಿದ್ದಾರೆ ಎಂದು ಆರೋಪಿಸಿದರು. ಜಿಲ್ಲೆಯ ವಿವಿಧ ಸ್ವಾಮೀಜಿಗಳಿಂದ ತಮ್ಮ ಪರವಾಗಿ ಹೇಳಿಕೆ ಕೊಡಿಸಿರುವ ಮಾಜಿ ಶಾಸಕರು, ಶಾಕತ್ತಿದ್ದರೆ ಸುಲಫಲ ಶ್ರೀಗಳಿಂದಲೂ ಹೇಳಿಕೆ ಪಡೆಯಲಿ ಎಂದು ಸವಾಲು ಹಾಕಿದರು.

> ಸ್ವಾರ್ಥದ ಚುನಾವಣೆಗಾಗಿ ಮೋದಿ ಮತ್ತು ಅಮಿತ್ ಶಾ ಅವರ ಹೆಸರನ್ನು ಬಳಸುವುದು ಸರಿಯಲ್ಲ. ಸಮಾಜದ ನೈಜ ಸಮಸ್ಯೆಗಳ ಬಗ್ಗೆ ಹೋರಾಟ ನಡೆಸುವ ಬದಲು ರಾಜಕೀಯ ಲಾಭಕ್ಕಾಗಿ ರಾಷ್ಟ್ರೀಯ ನಾಯಕರ ಹೆಸರನ್ನು ಬಳಸುತ್ತಿರುವವರ ಬಗ್ಗೆ ಜನರು ಎಚ್ಚರಿಕೆಯಿಂದಿರಬೇಕು. ದ್ವಂದ್ವ ನಿಲುವುಗಳು ಸಮಾಜಕ್ಕೆ ಯಾವುದೇ ಪ್ರಯೋಜನ ತರುವುದಿಲ್ಲ.
>
> ■ ಸಿದ್ದಲಿಂಗ ಸ್ವಾಮೀಜಿ, ಶಿವಸೇನಾ ರಾಜ್ಯಾಧ್ಯಕ್ಷ

ಕಿರುಸುದ್ದಿ

ಬಸ್ ಪಲ್ಟಿ: ಪ್ರಯಾಣಿಕರಿಗೆ ಗಾಯ



• **ಕೆಂಭಾವಿ:** ಸಮೀಪದ ಅಲ್ಲಾಳ ಗ್ರಾಮದ ಬಳಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಸ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಪಲ್ಟಿಯಾದ ಘಟನೆ ಬುಧವಾರ ನಡೆದಿದೆ.

ಅದೃಷ್ಟವಶಾತ್ ಭಾರಿ ಅನಾಹುತವೊಂದು ತಪ್ಪಿದ್ದು, ಅಪಘಾತದಲ್ಲಿ ಹಲವು ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಅಪಾಯದಿಂದ ಪಾರಾಗಿದ್ದಾರೆ. ಬೆಳಿಗ್ಗೆ ಕೆಂಭಾವಿಯಿಂದ ಪೀರಾಪುರ ಮಾರ್ಗವಾಗಿ ತಾಳಿಕೋಟಿ ಕಡೆ ಚಲಿಸುತ್ತಿದ್ದ ಬಸ್, ಅಲ್ಲಾಳ ಗ್ರಾಮದ ಹತ್ತಿರ ಬರುತ್ತಿದ್ದಂತೆ ಚಾಲಕನ ನಿಯಂತ್ರಣ ಕಳೆದುಕೊಂಡು ಪಲ್ಟಿಯಾಗಿದೆ. ಘಟನೆಯ ವೇಳೆ ಕೆಲ ಪ್ರಯಾಣಿಕರು ಆತಂಕಗೊಂಡಿದ್ದರೂ ಯಾವುದೇ ಪ್ರಾಣಹಾನಿ ಅಥವಾ ಗಂಭೀರ ಗಾಯಗಳಾಗಿಲ್ಲ ಎಂದು ತಿಳಿದುಬಂದಿದೆ. ಘಟನೆ ಸಂಭವಿಸುತ್ತಿದ್ದಂತೆ ತಕ್ಷಣ ಕಾರ್ಯಪ್ರವೃತ್ತರಾದ ಸ್ಥಳೀಯರು, ಬಸ್ಸಿನ ಒಳಗಿದ್ದ ಪ್ರಯಾಣಿಕರನ್ನು ಸುರಕ್ಷಿತವಾಗಿ ಹೊರಗೆ ತರಲು ನೆರವಾದರು. ಗಾಯಗೊಂಡ ಪ್ರಯಾಣಿಕರನ್ನು ತಕ್ಷಣವೇ ಚಿಕಿತ್ಸೆಗಾಗಿ ಕೆಂಭಾವಿಯ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿದೆ. ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ ಎಂದು ತಿಳಿದುಬಂದಿದೆ. ಗಾಯಾಳುಗಳಿಗೆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಹಾಗೂ ಸೂಕ್ತ ಆರೈಕೆ ನೀಡಲಾಯಿತು. ಹಾಗೂ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಹಾಗೂ ತಾಲೂಕು ಆಸ್ಪತ್ರೆಗೆ ಮಕ್ಕಳು ಹಾಗೂ ಪ್ರಯಾಣಿಕರನ್ನು ಕಳುಹಿಸಿ ಕೊಡಲಾಯಿತು ಎಂದು ವೈದ್ಯರು ತಿಳಿಸಿದರು. ಪುರಸಭೆ ಸದಸ್ಯ ಅರಿಫ್ ಹುಸೇನ್ ಖಾಜಿ, ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಸರ್ಕಾರಿ ಬಸ್ಸುಗಳೇ ಜೀವನಾಡಿಯಾಗಿವೆ. ಅವುಗಳನ್ನೇ ಅವಲಂಬಿಸಿದ್ದಾರೆ. ಆದರೆ ಸಂಸ್ಥೆಯ ಹಳೆಯ ಡಕೋಟಾ ಬಸ್ಸುಗಳನ್ನು ರಸ್ತೆಗಿಳಿಸಿ ಪ್ರಯಾಣಿಕರ ಜೀವದ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಹೇಳಿದರು.

ಹಿಂದು ಸಮಾವೇಶಕ್ಕೆ ಅನುಮತಿ ನಿರಾಕರಣೆ: ನ್ಯಾಯಾಂಗ ತನಿಖೆಗೆ ಆಗ್ರಹ

• **ಬೀದರ:** ಜಿಲ್ಲೆಯ ಬಸವಕಲ್ಯಾಣದಲ್ಲಿ ಜೂ.28ರಂದು ನಡೆಯಬೇಕಿದ್ದ ಬಸವಾದಿ ಶಿವಶರಣರ ಬೃಹತ್ ಹಿಂದು ಸಮಾವೇಶಕ್ಕೆ ತಾಲೂಕು ಆಡಳಿತ ಅನುಮತಿ ನಿರಾಕರಿಸಿರುವುದನ್ನು ಖಂಡಿಸಿ, ಈ ಕುರಿತು ನ್ಯಾಯಾಂಗ ತನಿಖೆ ನಡೆಸುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಸಮಾಜ ಸೇವಕ ಗುರುನಾಥ ವಡ್ಡೆ ಅವರು ಸಲ್ಲಿಸಿರುವ ಮನವಿಯಲ್ಲಿ, ಸಮಾವೇಶಕ್ಕೆ ಅನುಮತಿ ನಿರಾಕರಿಸಿರುವುದು ಭಾರತೀಯ ಸಂವಿಧಾನದ ಅನುಚ್ಛೇದ 19(1)(ಎ), 19(1)(ಬಿ) ಹಾಗೂ 25(1) ರಡಿ ನಾಗರಿಕರಿಗೆ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯ, ಶಾಂತಿಯುತ ಸಭೆ ನಡೆಸುವ ಹಕ್ಕು ಹಾಗೂ ಧಾರ್ಮಿಕ ಸ್ವಾತಂತ್ರ್ಯದ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಆರೋಪಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಗರಿಕರಿಗೆ ದೊರೆತಿರುವ ಮೂಲಭೂತ ಹಕ್ಕುಗಳನ್ನು ನಿರಾಕರಿಸುವುದು ಸಂವಿಧಾನ ವಿರೋಧಿ ಕ್ರಮವಾಗಿದ್ದು, ಇದರಲ್ಲಿ ತಾಲ್ಲೂಕು ಆಡಳಿತದ ದುರುದ್ದೇಶ ಅಡಗಿದೆ ಎಂದು ಅವರು ಮನವಿಯಲ್ಲಿ ತಿಳಿಸಿದ್ದಾರೆ. ಸಮಾವೇಶಕ್ಕೆ ಅನುಮತಿ ನಿರಾಕರಿಸಿರುವ ಕ್ರಮದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ, ಸಂವಿಧಾನಬದ್ಧ ಹಕ್ಕುಗಳ ಉಲ್ಲಂಘನೆ ಆಗಿದೆಯೇ ಎಂಬುದನ್ನು ಪರಿಶೀಲಿಸಬೇಕು ಎಂದು ಗುರುನಾಥ ವಡ್ಡೆ ಜಿಲ್ಲಾಧಿಕಾರಿಗಳನ್ನು ಆಗ್ರಹಿಸಿದ್ದಾರೆ.

ನಿಧನಸುದ್ದಿ

ಪ್ರಕಾಶರಾವ್ ಕುಲಕರ್ಣಿ



• **ಯಾದಗಿರಿ:** ವಡಗೇರಾ ತಾಲೂಕಿನ ಕೊಂಗಂಡಿ ಗ್ರಾಮದ ಹಿರಿಯ ನಿವಾಸಿ ಪ್ರಕಾಶರಾವ್ ಕುಲಕರ್ಣಿ (73) ಮಂಗಳವಾರ ರಾತ್ರಿ ನಿಧನ ಹೊಂದಿದರು. ಮೃತರು ಪತ್ನಿ ಸೇರಿ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ರಾಯಚೂರು ಸಮೀಪದ ಯರಮರಸ್ ಕ್ಯಾಂಪ್ ನ ಮುಕ್ತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಹುಣಸಗಿ: ಪಟ್ಟಣದಲ್ಲಿ ಇಂದು ಇಲ್ಲಿನ ಸುಪ್ರಸಿದ್ಧ ಸೂಫಿ ಸಂತ ಹಜರತ್ ಸೈಯದ್ ಶಹಾ ಹಬೀಬುಲ್ಲಾ ಖಾದರಿಯವರ ಉರುಸ್ ಎಲ್ಲ ಧರ್ಮೀಯ ನೂರಾರು ಭಕ್ತರ ಭಾಗವಹಿಸುವಿಕೆಯೊಂದಿಗೆ ಅತ್ಯಂತ ಸಂಭ್ರಮ ಸಡಗರದಿಂದ ನಡೆಯಿತು. ಸಜ್ಜಾದ್ ಹಜರತ್ ಸೈಯದ ಶಹಾ ಸುಲ್ತಾನ ಅಹ್ಮದ ಖಾದರಿ ಕಲಕಲ್, ಜಾಯ ನಶೀನ್ ಸೈಯದ ಅಬ್ದುಲ್ ಖಾದರ, ಸೈಯದ ಬಂದೆ ಅಲಿ ಮೊಯಿನುದ್ದೀನ್ ಖಾದರಿ, ದಸ್ತಗೀರ್ ಶಾನಿ ಇತರರಿದ್ದರು.

ಟಾಟಾ ಪವರ್ ಅರ್ಜಿ ತಿರಸ್ಕರಿಸಲು ಆಗ್ರಹ

• **ಕುರುಗೋಡು:** ಟಾಟಾ ಪವರ್ ಕಂಪನಿಯವರು ರಾಜ್ಯ 19 ಜಿಲ್ಲೆಗಳ ವಿದ್ಯುತ್ ವಿತರಣೆಯನ್ನು ಪಡೆಯಲು ಸಲ್ಲಿಸಿರುವ ಅರ್ಜಿಯನ್ನು ಕೆಇಆರ್‌ಸಿ ಕೂಡಲೇ ತಿರಸ್ಕಾರ ಮಾಡಲು ಆಗ್ರಹಿಸಿ ರಾಜ್ಯದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಎಐಕೆಕೆಎಂಎಸ್ ರೈತ ಸಂಘಟನೆ ವತಿಯಿಂದ ಜೆಸ್ಕಾಂನ ಎಇಇಗೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಸಂಘದ ಜಿಲ್ಲಾ ಅಧ್ಯಕ್ಷ ಗೋವಿಂದ್‌ಮಾತನಾಡಿ, ಟಾಟಾ ಪವರ್ ಕಂಪನಿಯವರು ರಾಜ್ಯ 19 ಜಿಲ್ಲೆಗಳ ವಿದ್ಯುತ್ ವಿತರಣೆಯನ್ನು ಪಡೆಯಲು ಸಲ್ಲಿಸಿರುವ ಅರ್ಜಿಯನ್ನು ಕೆಇಆರ್‌ಸಿ ಕೂಡಲೇ ತಿರಸ್ಕಾರ ಮಾಡಲು ಆಗ್ರಹಿಸಿ ರಾಜ್ಯದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಎಐಕೆಕೆಎಂಎಸ್ ರೈತ ಸಂಘಟನೆ ವತಿಯಿಂದ ಕುರುಗೋಡು ಜೆಸ್ಕಾಂನ ಎಇಇ ಅವರ ಮೂಲಕ ಮನವಿ ಸಲ್ಲಿಸಲಾಯಿತು.

ಸಂಘದ ಜಿಲ್ಲಾ ಅಧ್ಯಕ್ಷ ಗೋವಿಂದ್, ಜಿಲ್ಲಾ ಕಾರ್ಯದರ್ಶಿ ಗುರಳ್ಳಿ ರಾಜ, ಎಐಡಿವೈಒ, ಯುವಜನ ಸಂಘದ ಜಿಲ್ಲಾ ಅಧ್ಯಕ್ಷ ಕೋಳೂರು ಪಂಪಾಪತಿ, ನರೇಗಾ ಉಳಿಸಿ ಸಮಿತಿಯ ತಾಲ್ಲೂಕು ಅಧ್ಯಕ್ಷ ಕಲ್ಲುಕಂಭ ಪಂಪಾಪತಿ, ತಾಲೂಕು ಕಾರ್ಯದರ್ಶಿ ಬಸವರಾಜ್, ಜಿಲ್ಲಾ ಸಮಿತಿ ಸದಸ್ಯರಾದ ಕಾಸಿಂ ಸಾಬ್ ರೈತರಾದ ವೆಂಕಟೇಶ್, ಶ್ರೀನಿವಾಸ್, ಪಾಂಡು ಸೇರಿದಂತೆ ಇತರರು ಉಪಸ್ಥಿತರಿದ್ದರು.



ಕುರುಗೋಡು: ಟಾಟಾ ಪವರ್ ಕಂಪನಿಯವರು ರಾಜ್ಯ 19 ಜಿಲ್ಲೆಗಳ ವಿದ್ಯುತ್ ವಿತರಣೆಯನ್ನು ಪಡೆಯಲು ಸಲ್ಲಿಸಿರುವ ಅರ್ಜಿಯನ್ನು ಕೆಇಆರ್‌ಸಿ ಕೂಡಲೇ ತಿರಸ್ಕಾರ ಮಾಡಲು ಆಗ್ರಹಿಸಿ ರಾಜ್ಯದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಎಐಕೆಕೆಎಂಎಸ್ ರೈತ ಸಂಘಟನೆ ವತಿಯಿಂದ ಜೆಸ್ಕಾಂನ ಎಇಇಗೆ ಮನವಿ ಸಲ್ಲಿಸಲಾಯಿತು.

ಪ್ರಗತಿ ಪರಿಶೀಲನಾ ಸಭೆ | ಕವಿತಾ ಮನ್ನಿಕೇರಿ ಮನವಿ

ಡ್ರಗ್ ಮುಕ್ತ ಜಿಲ್ಲೆಗೆ ಕೈಜೋಡಿಸಿ

• **ವಿಜಯನಗರ:** ಯುವ ಪೀಳಿಗೆಯ ಭವಿಷ್ಯವನ್ನೇ ಕಸಿದುಕೊಳ್ಳುತ್ತಿರುವ ಡ್ರಗ್ಸ್ ಜಾಲದ ವಿರುದ್ಧ ಅಧಿಕಾರಿಗಳು ಅತ್ಯಂತ ಜಾಗೃತಿಯಿಂದ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಬೇಕು. ವಿವಿಧ ಇಲಾಖೆಗಳೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಿ ಡ್ರಗ್ ಮುಕ್ತ ಜಿಲ್ಲೆಗೆ ಶ್ರಮಿಸಬೇಕು ಎಂದು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ನಾರ್ಕೋಟಿಕ್ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಶಾಲಾ-ಕಾಲೇಜುಗಳ ಹಾಗೂ ಹಾಸ್ಟೆಲ್‌ಗಳ ಆಸುಪಾಸಿನಲ್ಲಿರುವ ಅಂಗಡಿ ಮುಂಗಟ್ಟುಗಳು ಮಾದಕ ದ್ರವ್ಯ ಜಾಲದ ಕೇಂದ್ರಗಳಾಗುತ್ತಿವೆ. ಶಿಕ್ಷಣ ಸಂಸ್ಥೆಗಳ 100 ಮೀಟರ್ ವ್ಯಾಪ್ತಿಯಲ್ಲಿ ತಂಬಾಕು ಮತ್ತು ಯಾವುದೇ ಮಾದಕ ವಸ್ತುಗಳ ಮಾರಾಟ ಕಂಡುಬಂದರೆ ತಕ್ಷಣವೇ ಅಂಗಡಿಗಳ ಪರವಾನಗಿ ರದ್ದುಪಡಿಸಿ, ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕ್ರಮಕೈಗೊಳ್ಳಬೇಕು ಎಂದು ಹೇಳಿದರು.

ಪೊಲೀಸ್ ಮತ್ತು ಅಬಕಾರಿ ಇಲಾಖೆಗಳು ಜಂಟಿಯಾಗಿ ಶಾಲಾ-ಕಾಲೇಜುಗಳ ಸುತ್ತಮುತ್ತ ನಿರಂತರ ದಾಳಿ ನಡೆಸಬೇಕು. ಈ ವೇಳೆ ಅಂತಹ ಪ್ರಕರಣ ಅಥವಾ ಅನುಮಾನಾಸ್ಪದ ಘಟನೆ ಕಂಡುಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ವಹಿಸಬೇಕು. ಕೆಲವು ಫಾರ್ಮಸಿಗಳಲ್ಲಿ ವೈದ್ಯರ ಚೀಟಿ ಇಲ್ಲದೆಯೂ ನಿಷೇಧಿತ ಮಾತ್ರೆಗಳು ಮತ್ತು ನೋವು ನಿವಾರಕ ಡ್ರಗ್ಸ್‌ಗಳನ್ನು ಯುವಕರಿಗೆ ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಔಷಧಿ ನಿಯಂತ್ರಣ ಇಲಾಖೆಯ ಅಧಿಕಾರಿಗಳು ಜಿಲ್ಲೆಯ ಎಲ್ಲಾ ಮೆಡಿಕಲ್ ಸ್ಟೋರ್‌ಗಳ



> **ಕೇವಲ ಕಾನೂನು ಕ್ರಮಗಳಿಂದಲ್ಲದೆ ಜನದಟ್ಟಣೆ ಹೆಚ್ಚಿರುವ ಸಾರ್ವಜನಿಕ ಸ್ಥಳ, ಶಾಲಾ ಕಾಲೇಜು, ಹಾಸ್ಟೆಲ್‌ಗಳಲ್ಲಿ ಮಾದಕ ವಸ್ತುಗಳ ಬಳಕೆಯಿಂದಾಗುವ ದುಷ್ಪರಿಣಾಮದ ಕುರಿತು ವ್ಯಾಪಕ ಜಾಗೃತಿ ಮೂಡಿಸಬೇಕು.**
> ■ **ಕವಿತಾ ಎಸ್.ಮನ್ನಿಕೇರಿ, ಜಿಲ್ಲಾಧಿಕಾರಿ**

ಮೇಲೆ ನಿಯಮಿತವಾಗಿ ದಾಳಿ ನಡೆಸಬೇಕು. ಅನಧಿಕೃತವಾಗಿ ಅಥವಾ ನಿಯಮ ಬಾಹಿರವಾಗಿ ಇಂತಹ ಮಾತ್ರೆಗಳನ್ನು ಮಾರಾಟ ಮಾಡುವ ಅಂಗಡಿಗಳ ಲೈಸೆನ್ಸ್ ಅನ್ನು ತಕ್ಷಣವೇ ರದ್ದುಗೊಳಿಸಬೇಕು ಎಂದು ಸೂಚನೆ ನೀಡಿದರು.

ಗ್ರಾಮ ಪಂಚಾಯತ್ ಹಾಗೂ ವಾರ್ಡ್ ಮಟ್ಟದಲ್ಲಿ ನಾಗರಿಕರ ಸಮಿತಿಗಳನ್ನು ರಚಿಸುವ ಮೂಲಕ ತಳಮಟ್ಟದಲ್ಲಿಯೇ ಕಡಿವಾಣ ಹಾಕಬೇಕು. ಡ್ರಗ್ಸ್ ದಂಧೆಯಲ್ಲಿ ತೊಡಗಿರುವವರು ಎಷ್ಟೇ ಪ್ರಭಾವಿಯಾಗಿದ್ದರೂ, ಪ್ರಭಾವಿಗಳ ಸೂಚನೆಗಳಿಗೆ ಮಣಿಯದೆ ಕಾನೂನು ಕ್ರಮ ಜರುಗಿಸಿ. ಮಾದಕ ವ್ಯಸನಕ್ಕೆ ಬಲಿಯಾಗುತ್ತಿರುವ ಯುವಕರನ್ನು ಪತ್ತೆಹಚ್ಚಿ, ಅವರಿಗೆ ಸೂಕ್ತ ಪುನರ್ವಸತಿ ಕೇಂದ್ರಗಳ ಮೂಲಕ ಮರುಜೀವ ನೀಡುವ ಕೆಲಸ ಮಾಡಬೇಕಿದೆ ಎಂದರು.

ಈ ವೇಳೆ ಔಷಧಿ ನಿಯಂತ್ರಣ ಇಲಾಖೆಯ ಅಧಿಕಾರಿಗಳು ಪ್ರತಿಕ್ರಿಯಿಸಿ, ನಿರಂತರವಾಗಿ ದಾಳಿ ನಡೆಸಿ ಪರಿಶೀಲನೆ ನಡೆಸಲಾಗುತ್ತಿದೆ. ಸಾರ್ವಜನಿಕರಿಂದಲೂ ದೂರಗಳು ಬಂದಲ್ಲಿ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಕ್ರಮ ಕೈಗೊಳ್ಳಲಾಗುವುದು. ಅದರಂತೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ನಿಷೇಧಿತ ಔಷಧ ವಿತರಣೆಗೆ ಸಂಬಂಧಿಸಿದಂತೆ ದೂರು ದಾಖಲಾಗಿದೆ. ಅದರಂತೆ ಬೇಟಿ ನೀಡಿ ಪರಿಶೀಲನೆ ವೇಳೆ ದೃಡಪಟ್ಟಿದೆ. ಅಧಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಫಾರ್ಮಸಿಗೆ ಈಗಾಗಲೇ ನೋಟಿಸ್ ನೀಡಲಾಗಿದ್ದು, ಪರವಾನಗಿ ಸಹ ರದ್ದುಪಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಎಸ್ಪಿ ಎಸ್.ಜಾಹ್ನವಿ, ಎಎಸ್ಪಿ ಮಂಜುನಾಥ್, ಡಿವೈಎಸ್ಪಿ ಮುರುಳಿಧರ ರಾವ್, ಆರ್‌ಟಿಓ ದಾಮೋದರ್, ನಗರಸಭೆ ಪೌರಾಯುಕ್ತ ಶಿವಕುಮಾರ್ ಸೇರಿದಂತೆ ವಿವಿಧ ಇಲಾಖೆ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ಭಾರತಕ್ಕೆ ಗೌರವ ಸಿಗಲು ಮೋದಿ ಸಾಧನೆಯೇ ಕಾರಣ: ಶ್ರೀರಾಮುಲು

• **ಕೊಟ್ಟೂರು:** ಆರ್ಥಿಕವಾಗಿ ಹಿಂದುಳಿದಿದ್ದ ಭಾರತ ದೇಶವನ್ನು ಕಡೆಗಣಿಸುತ್ತಿದ್ದ ವಿಶ್ವದ ಅನೇಕ ರಾಷ್ಟಗಳು ಇಂದು ಭಾರೀ ಮನ್ನಣೆ ನೀಡುತ್ತಿರುವುದಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ 12 ವರ್ಷಗಳ ಆಡಳಿತದಲ್ಲಿನ ಸಾಧನೆಗಳೇ ಮುಖ್ಯ ಕಾರಣ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಹೇಳಿದರು.



ತಾಲೂಕಿನ ಉಜ್ಜಯಿನಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮೋದಿಯವರ 12ವರ್ಷಗಳ ಆಡಳಿತ ಸಾಧನೆ ಕುರಿತು ಅವರು ಬುಧವಾರ ಮಾತನಾಡಿದರು.

ಸ್ವಾತಂತ್ರ್ಯ ನಂತರದಲ್ಲಿ ಕಾಂಗ್ರೆಸ್ ಹಾಗೂ ಯುಪಿಎ ಸರ್ಕಾರದ ಅವಧಿಯಲ್ಲಿ ಅನೇಕ ಸರಣಿ ಹಗರಣಗಳು ನಡೆದಿದ್ದವು. ದುಷ್ಟ ಆಡಳಿತದಿಂದ ತೀರಾ ಹಿಂದುಳಿದಿದ್ದ ಭಾರತ ದೇಶದ ಪ್ರಧಾನಿಗಳಿಗೆ ಅನೇಕ ರಾಷ್ಟಗಳು ಕೊನೆ ಸ್ಥಾನ ನೀಡುತ್ತಿದ್ದವು. ರಾಷ್ಟದಲ್ಲಿ ಬದಲಾವಣೆ ಬಯಸಿದ ಜನರು ನರೇಂದ್ರ ಮೋದಿಯವರನ್ನು ಪ್ರಧಾನ ಮಂತ್ರಿಯನ್ನಾಗಿಸಿದ ಫಲವಾಗಿ, ಸತತ 12 ವರ್ಷಗಳ ನಿರಂತರವಾಗಿ ನಡೆಸಿದ ಆಡಳಿತದಿಂದ ದೇಶ ಆರ್ಥಿಕವಾಗಿ ಬಲ ಹೊಂದಿತ್ತು. ಯಾವುದೇ ಹಗರಣ, ಭ್ರಷ್ಟಾಚಾರಗಳಿಲ್ಲದೇ ದೇಶವನ್ನು ಆರ್ಥಿಕವಾಗಿ ಪ್ರಬಲಗೊಳಿಸಿದ್ದಾರೆ. ಇದೆಲ್ಲದರ ಪರಿಣಾಮವಾಗಿ ಇಂದು ಜಗತ್ತಿನ ಎಲ್ಲ ರಾಷ್ಟಗಳಲ್ಲಿ ನಮ್ಮ ಪ್ರಧಾನಿಯವರಿಗೆ ಮೊದಲ ಸ್ಥಾನ ನೀಡಿ ಗೌರವಿಸುತ್ತಿದ್ದಾರೆ ಎಂದರು.

ಸರ್ಕಾರಕ್ಕೆ ವಿವಿಧ ರೀತಿಯ ಸಲಹೆ ಸೂಚನೆ ನೀಡಬೇಕಾದ ವಿಪಕ್ಷದವರಿಗೆ, ಭ್ರಷ್ಟಾಚಾರ ರಹಿತ ಆಡಳಿತ ನೀಡುತ್ತಿರುವ ಎನ್‌ಡಿಎ ವಿರುದ್ಧ ದೂರಲು ಯಾವುದೇ ವಿಷಯಂಗಳಿಲ್ಲವಾಗಿದೆ. ವಿದೇಶಗಳಿಗೆ ತೆರಳುವ ವಿಪಕ್ಷ ನಾಯಕರು, ದೇಶದಲ್ಲಿ ಪರಿಸ್ಥಿತಿ ಹೀನಾಯವಾಗಿದೆ ಎಂದು ಪೊಳ್ಳು ಭಾಷಣ ಮಾಡಿ ದೇಶದ ಮಾನವನ್ನು ಹರಾಜು ಹಾಕುವ ಕೆಲಸಕ್ಕೆ ಮುಂದಾಗಿದ್ದಾರೆ. ಮೂರು ಅವಧಿ ಚುನಾವಣೆಯಲ್ಲಿ ವಿಪಕ್ಷದವರಿಗೆ ಜನರು ಪಾಠ ಕಲಿಸಿದ್ದರೂ ಇವರಿಗೆ ಇನ್ನೂ ಬುದ್ಧಿ ಬಂದಿಲ್ಲ ಎಂದು ವ್ಯಂಗ್ಯವಾಡಿದರು.

ಸಾಮಾನ್ಯ ಜನರಿಗೆ ಗ್ಯಾಸ್, ಡಿಜಿಟಲ್ ಪೇಮೇಂಟ್ ಸೌಲಭ್ಯ, ಮುಸ್ಲಿಮರ ಮಹಿಳೆಯರಿಗೆ ತಲಾಖ್ ರದ್ದು, ಕೋಟಾ ನೋಟು ನಿಯಂತ್ರಣ, 370 ಆರ್ಟಿಕಲ್ ರದ್ದು, ರೈಲ್ವೆ ಮಾರ್ಗ ವಿಸ್ತರಣೆ, ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ಸೌಲಭ್ಯ, ಜಲಜೀವನ್ ಮಿಶನ್, ಉಚಿತ ಆರೋಗ್ಯ ಚಿಕಿತ್ಸೆ, ಜನೌಷಧಿ ಕೇಂದ್ರಗಳ ಸ್ಥಾಪನೆ ಮೂಲಕ ಸಾಮಾನ್ಯ ಜನರಿಗೆ ಅನುಕೂಲ ಕಲ್ಪಿಸಿದ ಪ್ರಧಾನಿಗಳು, ದೇಶದ ಮಾಹಿತಿ, ತಂತ್ರಜ್ಞಾನ ಹಾಗೂ ರಕ್ಷಣಾ ಕ್ಷೇತ್ರಕ್ಕೆ ಸಾಕಷ್ಟು ಆರ್ಥಿಕ ಸೌಲಭ್ಯ ಕಲ್ಪಿಸಿ ಪ್ರಬಲಗೊಳಿಸಿದ್ದಾರೆ ಎಂದರು.

ಕೂಡ್ಲಿಗಿ ಮಂಡಲ ಅಧ್ಯಕ್ಷ ನಾಗರಾಜ ಕಾಮಶೆಟ್ಟಿ, ಮುಖಂಡರಾದ ಸೂರ್ಯಪಾಪಣ್ಣ, ಕೊಟ್ರೇಶ್, ಸಿದ್ದೇಶ, ಮರುಳಸಿದ್ದಪ್ಪ, ದುರುಗೇಶ, ಲೋಕೇಶ ಇತರರು ಇದ್ದರು.

ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಹಕರಿಸಿ

• **ಸುರಪುರ:** ಶಾಲಾ ಮಕ್ಕಳಾಗಲಿ ಪೋಷಕರಾಗಲಿ ಎಲ್ಲಿಯಾದರೂ ಬಾಲಕಾರ್ಮಿಕರು ಕಂಡಲ್ಲಿ ತಕ್ಷಣ ಸಂಬಂಧಿಸಿರುವ ಇಲಾಖೆಗೆ ಮಾಹಿತಿ ನೀಡುವಂತೆ ಎರಡನೆ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಸುರಪುರ ಪೀಠ ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರಾದ ಯಮನಪ್ಪ ಬಮ್ಮಣಗಿ ತಿಳಿಸಿದರು.

ತಾಲೂಕು ಕಾನೂನು ಸೇವೆಗಳ ಸಮಿತಿ ತಾಲೂಕ ಆಡಳಿತ ತಾಲೂಕ ಹಿಂದುಳಿದ ವರ್ಗಗಳ ಇಲಾಖೆ, ತಾಲೂಕ ಪಂಚಾಯಿತಿ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ, ಪೊಲೀಸ್ ಇಲಾಖೆ, ಹಾಗೂ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಪಟ್ಟಣದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದ ಸಭಾಂಗಣದಲ್ಲಿ ನಡೆದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ 2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ, ಅವರು ಬಾಲಕಾರ್ಮಿಕ ಮಕ್ಕಳ ಸರ್ವೆ ನಡೆಸಬೇಕು. ಪೋಷಕರಲ್ಲಿ ನಿರಂತರ ಜಾಗೃತಿ ಮೂಡಿಸಬೇಕು. ನಾನು ಕೂಡ ಹೋಟೆಲ್ ನಲ್ಲಿ ಬಾಲ ಕಾರ್ಮಿಕರನ್ನು ಕಂಡಿದ್ದೇನೆ ಎಂದರು.

ಶಾಲೆಯ ಉಪ ಪ್ರಾಂಶುಪಾಲ ಯಲ್ಲಪ್ಪ ಕಾಡ್ಲೂರ ಅಧ್ಯಕ್ಷತೆಯ ವಹಿಸಿದ್ದರು.

ವಕೀಲೆ ಸವಿತಾ ಮಾಲಿ ಪಾಟೀಲ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಯೋಜನಾ ನಿರ್ದೇಶಕ ರಿಯಾಜ್ ಪಟೇಲ್ ವರ್ಕನಹಳ್ಳಿ, ವಕೀಲರ ಸಂಘದ ತಾಲೂಕ ಅಧ್ಯಕ್ಷ ಬಸವರಾಜ ಅನಸೂರ ಮಾತನಾಡಿದರು.

ನಂತರ ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಪ್ರಮಾಣ ವಚನ ಬೋಧನೆಯು ವಕೀಲ ಮಲ್ಲಿಕಾರ್ಜುನ ಹಿರೇಮಠ ನಡೆಸಿಕೊಟ್ಟರು. ಗ್ರೇಡ್ 2 ತಹಸಿಲ್ದಾರ್ ಮಲ್ಲಯ್ಯ ದಂಡು, ವಕೀಲರ ಸಂಘದ ಉಪಾಧ್ಯಕ್ಷ ಸಂಗಣ್ಣ ಬಡಿಗೇರ, ಪ್ರಧಾನ ಕಾರ್ಯದರ್ಶಿ ಬಲಭೀಮ ನಾಯಕ ದೇವಪುರ, ಕಾರ್ಮಿಕ ನಿರೀಕ್ಷಕ ಶಿವಪ್ಪ ಜಮಾದಾರ್, ವಕೀಲರಾದ ಯಂಕಮ್ಮ ವೆಂಕಟೇಶ , ನ್ಯಾಯಾಂಗ ಇಲಾಖೆಯ ಭೀಮಣ್ಣ ಬನಸೋಡೆ ಉಪಸ್ಥಿತರಿದ್ದರು.



ರೈತರಿಗೆ ಅನ್ಯಾಯ ಖಂಡಿಸಿ ಇಂದು ಬಳ್ಳಾರಿ ಬಂದ್‌ಗೆ ಕರೆ

• **ಬಳ್ಳಾರಿ:** ಜಿಲ್ಲೆಯ ಕುಡುತಿನಿ ಪ್ರದೇಶ ವ್ಯಾಪ್ತಿಯ ಒಟ್ಟು 7 ಗ್ರಾಮಗಳ ಸುಮಾರು 12,875 ಎಕರೆ ಜಮೀನನ್ನು ಕೈಗಾರಿಕೆ ಘಟಕಗಳ ನಿರ್ಮಾಣಕ್ಕೆ ಭೂಸ್ವಾಧೀನ ಮಾಡಿಕೊಂಡಿದ್ದು, ಇಲ್ಲಿವರೆಗೆ ಕೈಗಾರಿಕಾ ಘಟಕಗಳು ನಿರ್ಮಿಸಿಲ್ಲ, ನಮ್ಮ ಜಮೀನು ನಮಗೆ ಕೊಡಿ, ಸೂಕ್ತ ಪರಿಹಾರ ವಿತರಿಸಬೇಕು ಎಂದು ಒತ್ತಾಯಿಸಿ ಭೂ ಸಂತ್ರಸ್ತರ ಹೋರಾಟ ಸಮಿತಿ, ರೈತಪರ ಸಂಘಟನೆಗಳು ಜೂ.18 ರಂದು ಬಳ್ಳಾರಿ ಬಂದ್ ಗೆ ಕರೆ ನೀಡಿವೆ.

ಕೆಐಎಡಿಬಿ ಅವರು ರೈತರ ಭೂಮಿಯನ್ನು ವಶಪಡಿಸಿಕೊಂಡು

16 ವರ್ಷ ಕಳೆದರೂ ಇಲ್ಲಿವರೆಗೆ ನ್ಯಾಯಯುತ ಭೂ ಬೆಲೆ ನಿಗಧಿ ಮಾಡಿಲ್ಲ, ಘಟಕಗಳ ಸ್ಥಾಪನೆ ಮಾಡಿಲ್ಲ, ಕುಟುಂಬಕ್ಕೊಂದೂ ಉದ್ಯೋಗ ಕಲ್ಪಿಸಿಲ್ಲ, ನಮ್ಮ ಭೂಮಿ ನಮ್ಮ ಹಕ್ಕು, ನಮ್ಮ ಭೂಮಿಯನ್ನು ವಾಪಸ್ಸು ನೀಡಿ ಎಂದು ಭೂಸಂತ್ರಸ್ಥರು, ರೈತಪರ ವಿವಿಧ ಸಂಘಟನೆಗಳ ಮೂಲಕ ಕಳೆದ ಸುಮಾರು ವರ್ಷಗಳಿಂದ ಕುಡುತಿನಿಯಲ್ಲಿ ಅಹೋರಾತ್ರಿ ಧರಣಿ ನಡೆಸಿದರೂ ಇಲ್ಲಿವರೆಗೆ ಕ್ರಮವಿಲ್ಲ. ಈ ಹಿನ್ನೆಲೆ ಸರಕಾರದ ವಿರುದ್ಧ ಸಿಡಿದೆದ್ದ ಅನ್ನದಾತರು, ರೈತ ಸಂಘಟನೆಗಳು, ಭೂಸಂತ್ರಸ್ಥ ಹೋರಾಟ ಸಮಿತಿ ಮುಖಂಡರು ಬಳ್ಳಾರಿ ಬಂದ್‌ಗೆ ಕರೆ ನೀಡಿದ್ದು, ಎಷ್ಟರ ಮಟ್ಟಿಗೆ ಯಶಸ್ಸು



ಕಾಣಲಿದೆ ಕಾದುನೋಡಬೇಕಿದೆ. ಜೊತೆಗೆ ಜಿಲ್ಲೆಯ ಎಲ್ಲ ತಾಲೂಕುಗಳು ಬಂದ್‌ಗೆ ಕರೆ ನೀಡಿದೆ. ಜಿಲ್ಲೆಯ ಎಲ್ಲ ಗ್ರಾಮಗಳ ರೈತರು, ಮುಖಂಡರು, ಮಹಿಳೆಯರು, ಯುವಕರು, ಕಾರ್ಮಿಕರು, ಭೂಮಿ ಕಳೆದುಕೊಂಡ ರೈತರು, ಈ ಹೋರಾಟದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಭೂಸಂತ್ರಸ್ಥರ ಹೋರಾಟ ವೇದಿಕೆ ಮುಖಸ್ಥರು ಮನವಿ ಮಾಡಿದ್ದಾರೆ.

ಸರ್ಕಾರಿ ಹಾಸ್ಟೆಲ್ ಹೊರಗುತ್ತಿಗೆ ನೌಕರರ ಕನಿಷ್ಠ ವೇತನ ಜಾರಿಗೆ ಆಗ್ರಹ

• **ಕೂಡ್ಲಿಗಿ:** ಪ್ರಸ್ತುತ ಜೂನ್ ತಿಂಗಳಿಂದ ಡಿ ಗ್ರೂಪ್ ನೌಕರರಿಗೆ ಕನಿಷ್ಠ ವೇತನ ಜಾರಿಗೊಳಿಸಿ ಎಂದು ಹೊರಗುತ್ತಿಗೆ ನೌಕರದ ತಾಲೂಕು ಅಧ್ಯಕ್ಷರಾದ ತಿಮ್ಮಪ್ಪ ಜಿ. ಅವರು ಮನವಿಯಲ್ಲಿ ತಿಳಿಸಿದರು.

ಈ ವೇಳೆ ಮಾತನಾಡಿದ ಅವರು, ನಾವು ಸುಮಾರು 10 ವರ್ಷಕ್ಕೂ ಹೆಚ್ಚು ಕಾಲ ಕಡಿಮೆ ಸಂಬಳದಿಂದ ನಿಲಯದಲ್ಲಿ ಕೆಲಸ ಮಾಡುತ್ತಿದ್ದು ಇದರಿಂದ ನಮ್ಮ ಕುಟುಂಬ ಹಾಗೂ ನಿರ್ವಹಣೆಗೆ ತೊಂದರೆಯಾಗುತ್ತಿದೆ ಇದರಿಂದ ದೈನಂದಿನ ಬದುಕು ನಿರ್ವಹಣೆಗೆ, ದಿನಸಿ ವಸ್ತುಗಳು ಸೇರಿದಂತೆ ಎಲ್ಲ ಆಹಾರ ಪದಾರ್ಥಗಳ ಸಾಮಗ್ರಿಗಳ ಬೆಲೆ ಹೆಚ್ಚಾಗಿದ್ದು ಕಡಿಮೆ ಸಂಬಳಕ್ಕೆ ಜೀವನ ನಿರ್ವಹಿಸಲು ತುಂಬಾ ಅನಾನುಕೂಲವಾಗಿದೆ ಆದ್ದರಿಂದ ಜೂನ್ ತಿಂಗಳಿದಲೇ ಕನಿಷ್ಠ ವೇತನ ಜಾರಿಗೊಳಿಸಿ ಎಂದು ತಿಳಿಸಿದರು.

ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣಸಂಸ್ಥೆಗಳಸಂಘದಡಿ ಬರುವ ವಸತಿ ನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಕನಿಷ್ಠ ವೇತನದ ಅಧಿಸೂಚನೆಯನ್ನು ತಕ್ಷಣವೇ ಜಾರಿಗೆ ತರಬೇಕೆಂದು ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲೆಯ



ಹೊರಗುತ್ತಿಗೆ ನೌಕರರ ಸಂಘ ಮಂಗಳವಾರ ರಂದು ಒತ್ತಾಯಿಸಿದೆ.

ಹಿಂದುಳಿದ ವರ್ಗಗಳ ತಾಲೂಕು ಕಲ್ಯಾಣ ಅಧಿಕಾರಿಗಳು ಶಾಮಪ್ಪ, ತಾಲೂಕು ವಿಸ್ತರಣಾಧಿಕಾರಿಗಳು ಅಹಮದ್ ಸಾಹೇಬ್, ಸಂಘದ ತಾಲೂಕು ಹಿರಿಯ ಅಧ್ಯಕ್ಷ ರಾಘವೇಂದ್ರ ಸಿರಿಬಿ, ತಾಲೂಕು ಅಧ್ಯಕ್ಷರಾದ ತಿಮ್ಮಪ್ಪ ಜೆ., ತಾಲೂಕು ಉಪಾಧ್ಯಕ್ಷರಾದ ಪ್ರದೀಪ್ ಕುಮಾರ್ ಎಂ.ಬಿ., ತಾಲೂಕು ಸಂಘಟನಾ ಕಾರ್ಯದರ್ಶಿ ಎಚ್.ಜಿ.ದುರ್ಗೇಶ್ ಹಾಗೂ ಕಾರ್ಯದರ್ಶಿ ಮಹಮ್ಮದ್ ರಫಿ ಉಪಸ್ಥಿತರಿದ್ದರು.

ಎಸ್‌ಐಆರ್ ವಿರೋಧಿಸಿ ವಿವಿಧ ಸಂಘಟನೆಗಳಿಂದ ಪ್ರತಿಭಟನೆ

• **ಹಗರಿಬೊಮ್ಮನಹಳ್ಳಿ:** ಎಸ್ ಐಆರ್ ವಿರೋಧಿಸಿ ವಿವಿಧ ಸಂಘಟನೆಗಳಿಂದ ಪ್ರತಿಭಟನೆ ನಡೆಸಲಾಯಿತು.

ಬುಧವಾರ ಪಟ್ಟಣದ ಶ್ರೀಈಶ್ವರ ದೇವಸ್ಥಾನದಿಂದ ಹಗರಿ ಆಂಜನೇಯ ದೇವಸ್ಥಾನದವರೆಗೆ ಎಸ್‌ಐಆರ್ ವಿರೋಧಿಸಿ ಜನ ಜಾಗೃತಿ ಜಾಥಾ ನಡೆಸಲಾಯಿತು.

ಬಳಿಕ ನಡೆದ ಕಾರ್ಯಕ್ರಮದಲ್ಲಿ ಸಂವಿಧಾನದ ಪೂರ್ವ ಪೀಠಿಕೆ ಭೋಧಿಸಲಾಯಿತು.

ರೈತ ಸಂಘದ ಕಾರ್ಯಾಧ್ಯಕ್ಷ ಜೆ.ಎಂ.ವೀರಸಂಗಯ್ಯ ಮಾತನಾಡಿ, ಎಸ್‌ಐಆರ್ ಹೆಸರಿನಲ್ಲಿ ಜನರನ್ನು ಸಂಕಷ್ಟಕ್ಕೆ ದೂಡುವ ಕೆಲಸ ಮಾಡುತ್ತಿದ್ದು ಮತದಾರ ಪರಿಷ್ಕರಣೆ ಹೆಸರಿನಲ್ಲಿ ಅವೈಜ್ಞಾನಿಕ ಮತ್ತು ಜನ ವಿರೋಧಿ ಪ್ರಕ್ರಿಯೆಗೆ ಚುನಾವಣೆ ಆಯೋಗಆದೇಶಿಸಿದೆಇದುಬಿಹಾರ, ಬಂಗಾಳ ಉತ್ತರ ಪ್ರದೇಶಗಳಲ್ಲಿ ಕಂಡು ಬಂದ ಅನುಭವದಂತೆ ಈ ಪ್ರಕ್ರಿಯೆಯು ಸಮಾಜದ ದೊಡ್ಡ



ಸಂಖ್ಯೆಯಲ್ಲಿರುವ ದುರ್ಬಲ ವರ್ಗದವರನ್ನು ಮತದಾನದ ಹಕ್ಕಿನಿಂದ ವಂಚಿಸುವ ಕೆಲಸವಾಗಿದೆ ಎಂದರು.

ಜಿಪಂ ಮಾಜಿ ಸದಸ್ಯ ಅಕ್ಕಿ ತೋಟೇಶ್ ಮಾತನಾಡಿ, ಎಸ್‌ಐಆರ್ ಕುರಿತಂತೆ ರಾಜ್ಯ ಸರ್ಕಾರ ವಿಶೇಷ ಅಧಿವೇಶನ ಕರೆದು ಮುಕ್ತವಾಗಿ ಚರ್ಚೆ ನಡೆಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಬೇಕು. ಸರಳ ವಿಧಾನ ಬಳಸಿ ಮತದಾರರ ಪಟ್ಟಿಯನ್ನು ಪರಿಷ್ಕರಿಸಿ ಚೆಕ್ಲಿಸ್ಟ್ ರೀತಿ ಕೆಲಸ ಮಾಡುವ ರಾಜ್ಯದ ಸ್ವಾವಲಂಬಿ ಅರ್ಹ ಮತದಾರರ ಪಟ್ಟಿಯನ್ನು ತಯಾರಿಸಬೇಕು. ಮತದಾರರಿಗೆ ಮಹಾ ಗ್ಯಾರಂಟಿಯಾಗಿ ಸ್ಮಾರ್ಟ್ ಕಾರ್ಡ್ ವಿತರಿಸಬೇಕು. ಎಸ್‌ಐಆರ್ ಕೇಳುವ ದಾಖಲೆಗಳಿಲ್ಲದ ಅರ್ಹ ಮತದಾರರಿಗೆ ಸ್ಥಳದಲ್ಲೇ ಅಗತ್ಯ ದಾಖಲಾತಿಗಳನ್ನು ಒದಗಿಸಬೇಕೆಂದು ಒತ್ತಾಯಿಸಿದರು ಎಂದರು.

ಪುರಸಭೆ ನಿಕಟ ಪೂರ್ವ ಅಧ್ಯಕ್ಷ ಎಂ.ಮರಿರಾಮಣ್ಣ ಮಾತನಾಡಿ, ದೇಶದ ಪಶ್ಚಿಮ ಬಂಗಾಳ, ಬಿಹಾರ ಉತ್ತರ ಪ್ರದೇಶ ಇತರ ಹದಿಮೂರು ರಾಜ್ಯಗಳಲ್ಲಿ ಎಸ್‌ಐಆರ್ ನಡೆಸಿ ಆರೂವರೆ ಕೋಟಿ ಜನ ಜನರನ್ನು ಮತದಾನ ಪಟ್ಟಿಯಿಂದ ತೆಗೆಯಲಾಗಿದೆ ಎಂದರು.

ಹಿರಿಯ ಮುಖಂಡರಾದ ಹೆಗ್ಡಾಳು ರಾಮಣ್ಣ, ಗ್ಯಾರಂಟಿ ಅನುಷ್ಠಾನ ಸಮಿತಿಯ ಜಂದಿ ಸಾಬ್, ಸೊನ್ನದ ಗುರುಬಸವರಾಜ, ಕಾಂಗ್ರೆಸ್ ಪಕ್ಷದ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಸಾಹೀರಾ ಭಾನು, ತಾಲೂಕ ಅಧ್ಯಕ್ಷೆ ಯಶೋಧಾ ಮಂಜುನಾಥ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಗೋಣಿ ಬಸಪ್ಪ, ಕೃಷಿಕ ಸಮಾಜದ ಕೆ.ಪಿ.ದೇವರಾಜ, ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಯು.ಮಂಜುನಾಥ, ರೈತ ಸಂಘದ ಜಿಲ್ಲಾ ಯುವ ಘಟಕದ ಅಧ್ಯಕ್ಷ ರವಿಕುಮಾರ್ ತಂಬ್ರಹಳ್ಳಿ, ಜಯಸೂರ್ಯ, ಶ್ಯಾಬುದ್ದಿನ್, ರೋಷನ್, ರಾಜಭಕ್ಷಿ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಕಾರ್ಯಕರ್ತರು ಪಾಲ್ಗೊಂಡಿದ್ದರು.

5 ವರ್ಷದೊಳಗಿನ ಪ್ರತಿ ಮಗುವಿಗೂ ಲಸಿಕೆ ಹಾಕಿಸಿ

• **ಯಾದಗಿರಿ:** ಜಿಲ್ಲೆಯಾದ್ಯಂತ ಇದೇ ಜೂ.28ರಿಂದ ಜು.1ರವರೆಗೆ ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ಐದು ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸುವಂತೆ ಜಿಲ್ಲಾಧಿಕಾರಿ ರಾಹುಲ್ ತುಕಾರಾಮ ಪಾಂಡ್ವೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳುವ ಕುರಿತಂತೆ ನಡೆದ ಜಿಲ್ಲಾ ಟಾಸ್ಕ್ ಫೋರ್ಸ್ ಸಭೆ-2 ರ ಅಧ್ಯಕ್ಷತೆವಹಿಸಿ ಅವರು ಮಾತನಾಡಿ, ಜಿಲ್ಲೆಯಲ್ಲಿರುವ ಐದು ವರ್ಷದೊಳಗಿನ ಪ್ರತಿ ಮಗುವಿಗೆ ಪೋಲಿಯೋ ಲಸಿಕೆ ದೊರೆಯುವಂತೆ ನೋಡಿಕೊಳ್ಳಲು ತಿಳಿಸಿದ ಅವರು, ಜೂನ್ 28 ರಂದು ಬೆಳಿಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಬೂತ್ ಮಟ್ಟದಲ್ಲಿ ಹಾಗೂ ಮುಂದಿನ 2-3 ದಿನಗಳಿಗೆ(ಜೂನ್ 29 ರಿಂದ ಜುಲೈ 1 ರವರೆಗೆ)ಮನೆ ಮನೆಗೆ ತೆರಳಿ ಪೋಲಿಯೋ ಲಸಿಕೆ ಯಶಸ್ವಿಯಾಗಿ ಹಾಕಿಸಬೇಕೆಂದು ಸೂಚಿಸಿದರು.

ಜಿಲ್ಲಾ ಆರ್ ಸಿ ಹೆಚ್ ಅಧಿಕಾರಿ ಮಲ್ಲಪ್ಪ ಅವರು ,ಈ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಅಂಗವಾಗಿ ಜಿಲ್ಲೆಯ



ಐದು ವರ್ಷದೊಳಗಿನ 1,66,928 ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ. ಇದಕ್ಕಾಗಿ 665 ಲಸಿಕಾ ಬೂತ್ಗಳನ್ನು ಸ್ಥಾಪಿಸಲಾಗುತ್ತಿದ್ದು,ಐದು ಮೋಬೈಲ್ ತಂಡಗಳು, ಸಮಸ್ಯಾತ್ಮಕ ಪ್ರದೇಶಗಳಲ್ಲಿ 34 ತಂಡಗಳನ್ನು ನಿಯೋಜಿಸಲಾಗುತ್ತಿದ್ದು,134 ಮೇಲ್ವಿಚಾರಕರನ್ನು ನೇಮಿಸಲಾಗುತ್ತಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಮಳೆಗಾಲ ಆರಂಭವಾಗುತ್ತಿದ್ದು, ಎಲ್ಲ ಶಾಲಾ, ಕಾಲೇಜು, ವಸತಿ ನಿಲಯಗಳು, ಅಂಗನವಾಡಿ, ಆಸ್ಪತ್ರೆಗಳ ವ್ಯಾಪ್ತಿಯಲ್ಲಿ ಸ್ವಚ್ಛತೆಯನ್ನು ಕಾಪಾಡಿ, ಸೊಳ್ಳೆ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳುವಂತೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಡೆಂಗ್ಯೂ, ಚಿಕೂನ್ ಗುನ್ಯಾ,ಆನೆಕಾಲು ರೋಗ ಹಾಗೂ ಮೆದುಳು ಜ್ವರ (ಎಇ) ಕುರಿತು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಈ ರೋಗ ಈ ಹಿಂದೆ ಹೆಚ್ಚಿರುವ ಕಡೆಗಳಲ್ಲಿ ವಿಶೇಷ ನಿಗಾವಹಿಸಬೇಕು. ಡೆಂಗ್ಯೂ ಪ್ರಕರಣಗಳು ಕಂಡು ಬಂದ ತಕ್ಷಣ ತುರ್ತು ಚಿಕಿತ್ಸಾ ಕ್ರಮಗಳನ್ನು ಕೈಗೊಳ್ಳಬೇಕು. ಖಾಸಗಿ ಆಸ್ಪತ್ರೆಗಳ ವ್ಯಾಪ್ತಿಯಲ್ಲಿಯೂ ಸೂಕ್ತ ಜಾಗೃತಿ ಮೂಡಿಸಿ, ಚಿಕಿತ್ಸಾ ಕ್ರಮಗಳನ್ನು ಕೈಗೊಳ್ಳುವಂತೆ ಅವರು ಸೂಚಿಸಿದರು.

ಜಿಪಂಐ ಸಿಇಓ ಲವೀಶ್ ಒರಡಿಯಾ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮಹೇಶ್ ಬಿರಾದಾರ, ಜಿಲ್ಲಾ ಮಲೇರಿಯಾ ಅಧಿಕಾರಿಗಳಾದ ಡಾ. ಸಾಜಿದ್ ಉಪಸ್ಥಿತರಿದ್ದರು.